" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

---

# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತಾರನೆಯ ಅಧಿವೇಶನ

17ನೇ ಮಾರ್ಚ್ 2022
ಗುರುವಾರ

## ವಿಷಯಾನುಕ್ರಮಣಿಕೆ (INDEX)

01. ಪ್ರಕಟಣೆ

ಆಯವ್ಯಯದ ಮೇಲೆ ಯಾವ ಯಾವ ಸದಸ್ಯರು ಎಷ್ಟೆಷ್ಟು ಸಮಯ ಮಾತನಾಡಿದ್ದಾರೆ ಎನ್ನುವ ಬಗ್ಗೆ

02. ಪ್ರಶ್ನೋತ್ತರ

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

2024 – ಐ.ಪಿ.ಎಸ್. ಅಧಿಕಾರಿಗಳ ಭ್ರಷ್ಟಾಚಾರದ ಬಗ್ಗೆ

– ಶ್ರೀ ಎನ್.ರವಿಕುಮಾರ್

– ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು)

03. ಮಾನ್ಯ ಸಭಾಪತಿಯವರ ವಿರುದ್ಧ ಎಫ್.ಐ.ಆರ್. ದಾಖಲಾಗಿರುವ ಬಗ್ಗೆ

– ಶ್ರೀ ಎಸ್.ಎಲ್.ಭೋಜೇಗೌಡ

– ಶ್ರೀ ಎನ್.ರವಿಕುಮಾರ್

– ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು)

**೦4. ಪ್ರಶ್ನೋತ್ತರ**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**2065– ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ದಂಡ ವಸೂಲಿ ಮಾಡುತ್ತಿರುವ ಬಗ್ಗೆ**

– ಶ್ರೀ ಗೋವಿಂದ ರಾಜು

– ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು)

**2072 – ತುಂಗಭದ್ರಾ ಜಲಾಶಯದಲ್ಲಿ ಹೂಳು ತುಂಬಿರುವ ಕಾರಣ ಮಳೆಗಾಲದಲ್ಲಿ ನೀರು ಸಂಗ್ರಹ ಕುರಿತು**

– ಶ್ರೀ ಅಲ್ಲಂ ವೀರಭದ್ರಪ್ಪ

– ಶ್ರೀ ಗೋವಿಂದ ಎಂ.ಕಾರಜೋಳ (ಜಲಸಂಪನ್ಮೂಲ ಸಚಿವರು)

**2109 – ಬೆಂಗಳೂರು ನಗರದಲ್ಲಿರುವ ಹುಕ್ಕಾ ಬಾರ್, ಡಾನ್ಸ್ ಬಾರ್, ಕ್ಯಾಸಿನೋ ಕಾರ್ಯವೈಖರಿ ಕುರಿತು**

– ಶ್ರೀ ಪಿ.ಆರ್.ರಮೇಶ್

– ಶ್ರೀ ಅರಗ ಜ್ಞಾನೇಂದ್ರ (ಗೃಹ ಸಚಿವರು)

**2063 – ರಾಜ್ಯದ ಸರ್ಕಾರಿ ನೌಕರರಿಗೆ ನೀಡಲಾಗುವ ವೈದ್ಯಕೀಯ ಸೌಲಭ್ಯ ಬಗ್ಗೆ**

– ಶ್ರೀಮತಿ ಭಾರತಿ ಶೆಟ್ಟಿ

– ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು)

**2054 – ತಂಬಹಳ್ಳಿ 2ನೇ ಹಂತದ ಏತ ನೀರಾವರಿ ಯೋಜನೆ ಪೂರ್ಣಗೊಳಿಸುವ ಬಗ್ಗೆ**

– ಶ್ರೀ ವೈ.ಎಂ.ಸತೀಶ್

– ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು)

**2062 – ಸರ್ಕಾರಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ**

– ಶ್ರೀ ಕೆ.ಟಿ.ಶ್ರೀಕಂಠೇಗೌಡ

– ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು)

**2038 – ಕೆರೆ ಅಭಿವೃದ್ಧಿಪಡಿಸಲು ಬಿಡುಗಡೆಯಾಗಿರುವ ಅನುದಾನದ ಬಗ್ಗೆ**

– ಶ್ರೀ ಎಂ.ಎಲ್.ಅನಿಲ್ ಕುಮಾರ್

– ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು)

**2019 – ಬೆಂಗಳೂರು ನಗರದ ಇಂದಿರಾ ನಗರದ ಬಿ.ಡಿ.ಎ ವಾಣಿಜ್ಯ ಸಂಕೀರ್ಣ ಕುರಿತು**

– ಶ್ರೀ ಯು.ಬಿ.ವೆಂಕಟೇಶ್

– ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**೦5. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಂಬಂಧಪಟ್ಟ ಸಚಿವರ ಹೇಳಿಕೆಗಳು**

**ಅ) ದಿನಾಂಕ 14-03-2022ರಂದು ಶ್ರೀ ಕೆ.ಹರೀಶ್ ಕುಮಾರ್‌ರವರು ರಾಜ್ಯದಲ್ಲಿ ಕ್ಯಾನ್ಸರ್ ಪೀಡಿತರ ಸಂಖ್ಯೆ ಹೆಚ್ಚಳವಾಗುತ್ತಿರುವ ಬಗ್ಗೆ ಪ್ರಸ್ತಾಪಿಸಿರುವ ವಿಷಯ**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)
(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರ ಪರವಾಗಿ)

**ಆ) ದಿನಾಂಕ 16-03-2022ರಂದು ಶ್ರೀ ಗೋವಿಂದರಾಜುರವರು ಕೋಲಾರ ಜಿಲ್ಲಾ ನ್ಯಾಯಾಲಯದ ಕಟ್ಟಡ ಶಿಥಿಲಗೊಂಡು ನೂತನ ಕಟ್ಟಡ ನಿರ್ಮಾಣಕ್ಕೆ ರೂ.25.00 ಕೋಟಿ ಮಂಜೂರಾಗಿದ್ದರೂ, ಕಟ್ಟಡ ಕಾಮಗಾರಿ ಪ್ರಾರಂಭಗೊಳ್ಳದಿರುವ ಬಗ್ಗೆ ಪ್ರಸ್ತಾಪಿಸಿರುವ ವಿಷಯ**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)
– (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರ ಪರವಾಗಿ)

**೦6. ಮಾನ್ಯ ಸಭಾಪತಿಯವರ ವಿರುದ್ಧ ಎಫ್.ಐ.ಆರ್. ದಾಖಲಾಗಿರುವ ಬಗ್ಗೆ (ಮುಂದುವರೆದ ಚರ್ಚೆ)**

– ಶ್ರೀ ಎಸ್.ಎಲ್.ಭೋಜೇಗೌಡ

– ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು)

– ಶ್ರೀ ಯು.ಬಿ.ವೆಂಕಟೇಶ್

– ಶ್ರೀ ಅರಗ ಜ್ಞಾನೇಂದ್ರ (ಗೃಹ ಸಚಿವರು)

– ಶ್ರೀ ಸಲೀಂ ಅಹಮದ್

– ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು)

– ಶ್ರೀ ಮರಿತಿಬ್ಬೇಗೌಡ

– ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು)

**೦7. ಪ್ರಕಟಣೆ**

**ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಸಚಿವರ ಕುರಿತು**

**೦8. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ) ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಹಾಗೂ ಅನುದಾನಿತ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಸ್.ಸಿ/ಎಸ್.ಟಿ/ಓಬಿಸಿ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ಹಣ ಬಿಡುಗಡೆಯಾಗದಿರುವ ಬಗ್ಗೆ.**

– ಶ್ರೀ ಮರಿತಿಬ್ಬೇಗೌಡ

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

**ಆ) ಕೊಡಗು ಜಿಲ್ಲೆಯ ಕಾಫಿ ಬೆಳೆಗಾರರಿಗೆ 10 ಹೆಚ್.ಪಿ. ವರೆಗೆ ಉಚಿತ ವಿದ್ಯುತ್ ನೀಡುವ ಬಗ್ಗೆ**

– ಶ್ರೀ ಎಂ.ಪಿ. ಸುಜಾ ಕುಶಾಲಪ್ಪ

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಇ) ಕುವೆಂಪು ವಿಶ್ವವಿದ್ಯಾಲಯದಲ್ಲಿ ದೂರ ಶಿಕ್ಷಣ ಕೇಂದ್ರದಲ್ಲಿ ಪರೀಕ್ಷೆ ನಡೆಯದಿರುವ ಬಗ್ಗೆ.**

– ಡಾ: ತಳವಾರ ಸಾಬಣ್ಣ

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಈ) ಕರ್ನಾಟಕ ಆರ್ಥಿಕ ಸಮೀಕ್ಷೆಯಲ್ಲಿ ತಂತ್ರಜ್ಞಾನ ಬಳಕೆ ಕಡಿಮೆಯಾಗಿರುವ ಬಗ್ಗೆ**

– ಶ್ರೀ ಯು.ಬಿ.ವೆಂಕಟೇಶ್

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಉ) 5 ಜಿ ನೆಟ್‌ವರ್ಕ್‌ಗಳ ಹೆಸರಿನಲ್ಲಿ ಸೈಬರ್ ಕೇಂದ್ರಗಳು ಸಾರ್ವಜನಿಕರಿಂದ ಹಣ ದೋಚುತ್ತಿರುವ ಬಗ್ಗೆ**

– ಶ್ರೀ ಎಸ್.ರವಿ

– ಶ್ರೀ ಅರಗ ಜ್ಞಾನೇಂದ್ರ (ಗೃಹ ಸಚಿವರು)

**ಊ) ಗುಂಡ್ಲುಪೇಟೆ ತಾಲ್ಲೂಕು ಬಂಡೀಪುರ ರಾಷ್ಟ್ರೀಯ ಉದ್ಯಾನವನದಲ್ಲಿ ಬೆಂಕಿ ಕಾಣಿಸಿಕೊಂಡಿರುವ ಬಗ್ಗೆ.**

– ಶ್ರೀ ಸಿ.ಎನ್.ಮಂಜೇಗೌಡ

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**೦9. ವಿತ್ತೀಯ ಕಾರ್ಯಕಲಾಪಗಳು**

2022-23ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ

– ಶ್ರೀ ನವೀನ್ ಕೆ.ಎಸ್

– ಶ್ರೀ ಸಲೀಂ ಅಹಮದ್

– ಶ್ರೀ ಕೋಟ ಶ್ರೀನೀವಾಸ ಪೂಜಾರಿ (ಸಭಾನಾಯಕರು)

– ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು)

– ಶ್ರೀ ಶಂಕರ ಬಿ.ಪಾಟೀಲ ಮುನೇನಕೊಪ್ಪ
(ಜವಳಿ ಮತ್ತು ಸಕ್ಕರೆ ಸಚಿವರು)

– ಶ್ರೀ ಲಹರ್ ಸಿಂಗ್ ಸಿರೋಯಾ

– ಶ್ರೀಮತಿ ಭಾರತಿ ಶೆಟ್ಟಿ

– ಶ್ರೀ ಪಿ.ಆರ್.ರಮೇಶ್

– ಶ್ರೀ ಪ್ರತಾಪಸಿಂಹ ನಾಯಕ್ ಕೆ.

– ಶ್ರೀ ಅರವಿಂದ ಕುಮಾರ್ ಅರಳಿ

– ಶ್ರೀ ಎಸ್.ವ್ಹಿ.ಸಂಕನೂರ

(403) 17-03-2022 (10.40) ಎಂ.ವಿ-ವಿಕೆ

## ಕರ್ನಾಟಕ ವಿಧಾನ ಪರಿಷತ್ತು

ಗುರುವಾರ, 17ನೇ ಮಾರ್ಚ್, 2022

ಸದನವು ವಿಧಾನ ಸೌಧದಲ್ಲಿರುವ

ವಿಧಾನ ಪರಿಷತ್ತಿನ ಸಭಾಂಗಣದಲ್ಲಿ

ಪೂರ್ವಾಹ್ನ 10 ಗಂಟೆ 42 ನಿಮಿಷಕ್ಕೆ ಸಮಾವೇಶಗೊಂಡಿತು.

ಮಾನ್ಯ ಸಭಾಪತಿಯವರಾದ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಯವರು

ಪೀಠವನ್ನು ಅಲಂಕರಿಸಿದರು.

**೦1. ಪ್ರಕಟಣೆ**

**ವಿಷಯ: ಆಯವ್ಯಯದ ಮೇಲೆ ಯಾವ ಯಾವ ಸದಸ್ಯರು ಎಷ್ಟೆಷ್ಟು ಸಮಯ ಮಾತನಾಡಿದ್ದಾರೆ ಎನ್ನುವ ಬಗ್ಗೆ.**

----

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಸದನದಲ್ಲಿ ಯಾರೂ ಮಂತ್ರಿಗಳೇ ಇಲ್ಲ. ಆದುದರಿಂದ ಸದನವನ್ನು ಹತ್ತು ನಿಮಿಷ adjourn ಮಾಡಿ, ಆಗ ಅವರಿಗೆ ಗೊತ್ತಾಗುತ್ತದೆ. ಅವರುಗಳು ಏನಾದರೂ ರಾಜೀನಾಮೆಯನ್ನು ನೀಡಿದ್ದಾರೆಯೇ?

**ಸಭಾಪತಿಯವರು:-** ಆಯಿತು, ಅವರನ್ನು ಕೇಳೋಣ.

**ಡಾ॥ ಕೆ.ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಸದನದಲ್ಲಿ ಆಡಳಿತ ಪಕ್ಷದವರು ಯಾರೂ ಸಹ ಹಾಜರಿಲ್ಲ.

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸದನದಲ್ಲಿ ಸರ್ಕಾರದ ಮುಖ್ಯ ಸಚೇತಕರು ಮತ್ತು ಮಂತ್ರಿಗಳು ಇಲ್ಲ.

**ಡಾ॥ ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಸದನವನ್ನು ಹತ್ತು ನಿಮಿಷ adjourn ಮಾಡಿಬಿಡಿ.

**ಸಭಾಪತಿಯವರು:-** ಇರಲಿ ಬಿಡಿ. ನಾನು ಪ್ರತಿದಿನ ನೀವು ಹೇಳಿದ ಹಾಗೆ ಕೇಳಬೇಕೆ?

**ಡಾ॥ ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಏಕೆಂದರೆ, ಸದನದಲ್ಲಿ ಯಾರೂ ಸಹ ಇಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಪ್ರಶ್ನೆಗಳಿಗೆ ಉತ್ತರ ಯಾರು ನೀಡುತ್ತಾರೆ?

**ಸಭಾಪತಿಯವರು:–** ಆಯಿತು, ಒಂದು ನಿಮಿಷ ನಾನು ತಮಗೆ ಒಂದು ಮಾಹಿತಿಯನ್ನು ನೀಡುತ್ತೇನೆ. ಅದನ್ನಾದರೂ ಕೇಳಿ.

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ನಾವು ಐದು ನಿಮಿಷ ತಡವಾಗಿ ಬಂದರೆ ತಾವು ನಮ್ಮ ಮೇಲೆ ರೇಗಾಡುತ್ತೀರಿ. ಅದಕ್ಕೆ ನಾವು ಓಡೋಡಿ ಬಂದಿದ್ದೇವೆ. ಆದರೆ, ತಾವು ಈಗ ಅವರುಗಳಿಗೆ ಹೇಗೆ ರೇಗಾಡುತ್ತೀರಿ ಎಂದು ನೋಡುತ್ತೇವೆ.

**ಸಭಾಪತಿಯವರು:–** ಈಗ ಬಜೆಟ್ ಮೇಲೆ ಎಷ್ಟು ಜನ ಸದಸ್ಯರು ಎಷ್ಟೆಷ್ಟು ಸಮಯ ಮಾತನಾಡಿದ್ದಾರೆ ಎಂಬುದನ್ನು ತಮಗೆ ತಿಳಿಸುತ್ತೇನೆ.

| | | | |
|---|---|---|---|
| 1. | ಶ್ರೀ ಪ್ರಾಣೇಶ್ ಎಂ.ಕೆ | : | 25 ನಿಮಿಷ. |
| 2. | ಡಾ॥ ತೇಜಸ್ವಿನಿ ಗೌಡ | : | 35 ನಿಮಿಷ. |
| 3. | ಶ್ರೀ ಅ.ದೇವೇಗೌಡ | : | 17 ನಿಮಿಷ. |
| 4. | ಶ್ರೀ ಎಸ್.ರುದ್ರೇಗೌಡ | : | 25 ನಿಮಿಷ. |
| 5. | ಶ್ರೀ ಆಯನೂರು ಮಂಜುನಾಥ್ | : | 1 ಗಂಟೆ 35 ನಿಮಿಷ. |
| 6. | ಶ್ರೀ ಅಡಗೂರು ಹೆಚ್.ವಿಶ್ವನಾಥ್ | : | 31 ನಿಮಿಷ. |
| 7. | ಶ್ರೀ ಡಿ.ಎಸ್.ಅರುಣ್ | : | 31 ನಿಮಿಷ. |
| 8. | ಶ್ರೀ ಮುನಿರಾಜು ಗೌಡ ಪಿ.ಎಂ. | : | 18 ನಿಮಿಷ. |
| 9. | ಶ್ರೀ ಯು.ಬಿ.ವೆಂಕಟೇಶ್ | : | 70 ನಿಮಿಷ. |
| 10. | ಶ್ರೀ ಅಲ್ಲಂ ವೀರಭದ್ರಪ್ಪ | : | 16 ನಿಮಿಷ. |
| 11. | ಶ್ರೀ ಎಸ್.ರವಿ | : | 1 ಗಂಟೆ 5 ನಿಮಿಷ. |
| 12. | ಶ್ರೀ ಗೋವಿಂದ ರಾಜು | : | 55 ನಿಮಿಷ. |
| 13. | ಶ್ರೀ ನಸೀರ್ ಅಹ್ಮದ್ | : | 55 ನಿಮಿಷ. |
| 14. | ಶ್ರೀ ಮಂಜುನಾಥ್ ಭಂಡಾರಿ | : | 30 ನಿಮಿಷ. |
| 15. | ಶ್ರೀಮತಿ ಎಸ್.ವೀಣಾ ಅಚ್ಚಯ್ಯ | : | 21 ನಿಮಿಷ. |

| | | | |
|---|---|---|---|
| 16. | ಶ್ರೀ ಆರ್.ಬಿ.ತಿಮ್ಮಾಪೂರ | : | 1 ಗಂಟೆ 12 ನಿಮಿಷ. |
| 17. | ಶ್ರೀ ಶರಣಗೌಡ ಬಯ್ಯಾಪುರ | : | 25 ನಿಮಿಷ. |
| 18. | ಶ್ರೀ ಸಿ.ಎಂ.ಲಿಂಗಪ್ಪ | : | 33 ನಿಮಿಷ. |
| 19. | ಶ್ರೀ ಎಸ್.ಎಲ್.ಭೋಜೇಗೌಡ | : | 1 ಗಂಟೆ 40 ನಿಮಿಷ. |
| 20. | ಶ್ರೀ ಹೆಚ್.ಎಂ.ರಮೇಶ್ ಗೌಡ | : | 30 ನಿಮಿಷ. |
| 21. | ಶ್ರೀ ಸಿ.ಎನ್.ಮಂಜೇಗೌಡ | : | 19 ನಿಮಿಷ. |
| 22. | ಶ್ರೀ ಕೆ.ಎ.ತಿಪ್ಪೇಸ್ವಾಮಿ | : | 32 ನಿಮಿಷ. |
| 23. | ಶ್ರೀ ಸೂರಜ್ ರೇವಣ್ಣ | : | 33 ನಿಮಿಷ. |
| 24. | ಶ್ರೀ ಕೆ.ಟಿ.ಶ್ರೀಕಂಠೇಗೌಡ | : | 1 ಗಂಟೆ 5 ನಿಮಿಷ. |
| 25. | ಶ್ರೀ ಮರಿತಿಬ್ಬೇಗೌಡ | : | 1 ಗಂಟೆ 35 ನಿಮಿಷ. |
| 26. | ಡಾ.ಕೆ.ಗೋವಿಂದರಾಜ್ | : | 50 ನಿಮಿಷ. |
| 27. | ಶ್ರೀ ಬಿ.ಎಂ.ಫಾರೂಖ್ | : | 52 ನಿಮಿಷ. |

ನಾನು ಎಲ್ಲರಿಗೂ ಸಹ 20 ನಿಮಿಷವೆಂದು ತಿಳಿಸಿದ್ದೇನೆ. ಆದರೆ, ಎಲ್ಲರೂ ಸಹ ಈ ರೀತಿ ಮಾತನಾಡಿದರೆ ನಾನು ಏನು ಮಾಡುವುದು? ನಾನು ಬೆಲ್ ಹೊಡೆದರೂ ಸಹ ಯಾರೂ ಕೇಳುವುದಿಲ್ಲ. ಅದಕ್ಕೆ ನಾನು ಹೇಳುವುದೇನೆಂದರೆ, ಬೆಲ್ ಹೊಡೆದಾಗ ಯಾವುದೇ ಸದಸ್ಯರಾದರೂ ಸಹ ತಾವು ಮಾತನಾಡುವುದನ್ನು ನಿಲ್ಲಿಸಬೇಕು. ಈ ರೀತಿಯಾದರೆ ನಾನು ಸದನವನ್ನು ಹೇಗೆ ನಡೆಸುವುದೆಂದು ತಾವುಗಳೇ ಹೇಳಿ.

## 02. ಪ್ರಶ್ನೋತ್ತರಗಳು

### ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.

**ಪ್ರಶ್ನೆ ಸಂಖ್ಯೆ: 2024**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಒದಗಿಸಿದ್ದಾರೆ. ನಾನು ಲಂಚಾವತಾರ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪ್ರಶ್ನೆಯನ್ನು ಕೇಳಿದ್ದೆ. ಈಗ ಒಂದು ಕ್ರಷರ್ ಪ್ರಾರಂಭ ಮಾಡುವಂತಹ ವಿಷಯಕ್ಕೆ ಸಂಬಂಧಿಸಿದಂತೆ ಶ್ರೀ ಮಂಜುನಾಥ್ ಎನ್ನುವಂತಹ ವ್ಯಕ್ತಿ ಹಣವನ್ನು ನೀಡುತ್ತಾರೆ. ಆದರೆ, ತಿಂಗಳಾನುಗಟ್ಟಲೆಯಾದರೂ ಸಹ ಆ ಕ್ರಷರ್ ಪ್ರಾರಂಭವಾಗುವುದಿಲ್ಲ. ಈ ವಿಷಯಕ್ಕೆ ಸಂಬಂಧಿಸಿದಂತೆ ಐಪಿಎಸ್ ಅಧಿಕಾರಿಗಳು ಅವರನ್ನು ಕರೆಯಿಸಿ ಮಾತನಾಡುವಂತಹ ಸಂದರ್ಭದಲ್ಲಿ ಲಕ್ಷಗಳಲ್ಲಿ ಈ ಲಂಚಾವತಾರ ಪ್ರಾರಂಭವಾಗುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಕೆಳಮಟ್ಟದ ಇಬ್ಬರು ಅಧಿಕಾರಿಗಳ ಮೇಲೆ ಕ್ರಮವನ್ನು ತೆಗೆದುಕೊಂಡಿದ್ದಾರೆ. ಆದರೆ, ಮುಖ್ಯ ವ್ಯಕ್ತಿಯಾದ ಐ.ಪಿ.ಎಸ್. ಅಧಿಕಾರಿಯ ಮೇಲೆ ಕ್ರಮವನ್ನು ಕೈಗೊಂಡಿಲ್ಲವೇಕೆ ಎಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ವಿವರವಾದ ಉತ್ತರವನ್ನು ಈಗಾಗಲೇ ಒದಗಿಸಿದ್ದೇವೆ. ಇದಕ್ಕೆ ಸಂಬಂಧಪಟ್ಟಂತೆ ಕ್ರಷರ್ ಮಾಲೀಕರೊಬ್ಬರು ದೂರು ನೀಡಿದ್ದರು. ಆ ದೂರಿನಲ್ಲಿ ಸಿ.ಪಿ.ಐ. ಮತ್ತು ಎ.ಎಸ್.ಐ.ಗಳ ಹೆಸರನ್ನು ನಮೂದಿಸಿದ್ದಾರೆ. ಅವರು ಯಾರ ಹೆಸರನ್ನು ನಮೂದಿಸಿದ್ದರು ಅವರ ಮೇಲೆ ಕ್ರಮ ತೆಗೆದುಕೊಂಡು, ಅಮಾನತು ಮಾಡಿದ್ದೇವೆ. ಇಲ್ಲಿ ಆರೋಪ ಇರುವುದು ಐ.ಪಿ.ಎಸ್. ಅಧಿಕಾರಿಯೊಬ್ಬರು ಇದ್ದಾರೆಂದು. ಆದರೆ, ದೂರುದಾರರು ನೀಡಿರುವ ದೂರಿನಲ್ಲಿ ಐ.ಪಿ.ಎಸ್. ಅಧಿಕಾರಿಯ ಹೆಸರು ಇಲ್ಲ. ಎರಡನೆಯದಾಗಿ, ಅದಾಗ್ಯೂ ಕೂಡ ಆಮೇಲೆ ಐ.ಜಿ.ಯವರು ವಿಚಾರಣೆ ಮಾಡಿದರು. ಅವರು ವಿಚಾರಣೆ ಮಾಡಿದಾಗ, ಯಾವುದೇ ರೀತಿಯ prima facie ಇಲ್ಲ. ಹೀಗಾಗಿ, ಯಾರ ಮೇಲೆ ದೂರು ಇತ್ತು ಅವರ ಮೇಲೆ ಕ್ರಮ ಕೈಗೊಂಡಿದ್ದೇವೆ. ಆ

ನಂತರ preliminary enquiry ಮಾಡಿ, ಅವರ ಮೇಲೆ ಏನೂ ಇಲ್ಲವೆಂದಾಗ, ಅವರ ಮೇಲೆ ಕ್ರಮ ಕೈಗೊಳ್ಳುವ ಪ್ರಶ್ನೆಯೇ ಉದ್ಭವಿಸಿರುವುದಿಲ್ಲ.

**೦೩. ಮಾನ್ಯ ಸಭಾಪತಿಯವರ ವಿರುದ್ಧ ಎಫ್.ಐ.ಆರ್. ದಾಖಲಾಗಿರುವ ಬಗ್ಗೆ.**

---

**ಶ್ರೀ ಎಸ್.ಎಲ್.ಭೋಜೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತಮ್ಮಲ್ಲಿ ಒಂದು ವಿನಂತಿ ಮತ್ತು ಮಾನ್ಯ ಗೃಹಮಂತ್ರಿಗಳಿಗೆ ತಿಳಿಸುವುದು ಏನೆಂದರೆ, ಈಗ ಮಾನ್ಯ ಸಭಾಪತಿಯವರ ಮೇಲೆ atrocity case ಗೆ ಸಂಬಂಧಿಸಿದಂತೆ ಒಂದು ಪ್ರಕರಣದಲ್ಲಿ ಎಫ್.ಐ.ಆರ್. ದಾಖಲಾಗಿತ್ತು.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಅದು ಯಾವುದಕ್ಕೆ ಸಂಬಂಧಿಸಿದೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಈಗ concerned ಮೇಲೆ ಮಾಡಬೇಕು ಎಂಬ ವಿಚಾರಕ್ಕೆ ಸಂಬಂಧಿಸಿದಂತೆ ಮಾತನಾಡುತ್ತಿದ್ದೇನೆ.

**ಸಭಾಪತಿಯವರು:–** ಈಗ ಅದು ಬೇಡ ಅದನ್ನು ಆಮೇಲೆ ಮಾತನಾಡೋಣ. ಈಗ ಸದಸ್ಯರು ಪ್ರಶ್ನೆ ಕೇಳುತ್ತಿದ್ದಾರೆ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಈ ವಿಷಯ ಸಾಕಷ್ಟು ಸುದ್ದಿ ಕೂಡ ಆಗಿತ್ತು. ಈಗ ಏನು ಆ ಐ.ಪಿ.ಎಸ್. ಅಧಿಕಾರಿ ಇದ್ದಾರೆ, ಅವರ ಮೇಲೂ ಸಹ ಸಾಕಷ್ಟು ಆರೋಪಗಳಿವೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ತನಿಖೆಯಲ್ಲಿ ಐ.ಪಿ.ಎಸ್. ಅಧಿಕಾರಿಯ ಮೇಲೆ ಆ ರೀತಿಯ ಗುರುತರವಾದಂತಹ ಆರೋಪಗಳು ಬಂದಿಲ್ಲವೆಂದು. ಈಗ ದೂರಿನಲ್ಲಿ ಯಾರ ಹೆಸರು ಇದೆ, ಅವರ ಮೇಲೆ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

**ಸಭಾಪತಿಯವರು:–** ಈಗ ತಪ್ಪು ಮಾಡಿರುವವರ ಮೇಲೆ ಕ್ರಮ ಕೈಗೊಳ್ಳಲಾಗಿದೆ ಎಂದು ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದ್ದಾರೆ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಆದರೆ, ಐ.ಪಿ.ಎಸ್. ಅಧಿಕಾರಿ ಕೂಡ ತಪ್ಪು ಮಾಡಿದ್ದಾರೆ. ಅದಕ್ಕೆ ಸಂಬಂಧಪಟ್ಟಂತೆ ಸಾಕಷ್ಟು ಸಾಕ್ಷ್ಯಗಳು ಇವೆ. ಈ ವಿಷಯವಾಗಿ ಇನ್ನು ಉನ್ನತ ಮಟ್ಟದಲ್ಲಿ ತನಿಖೆಯನ್ನು ಮಾಡಿಸಿ, ಇದಕ್ಕೆ ಸಂಬಂಧಪಟ್ಟಂತೆ ಕ್ರಮವನ್ನು ಕೈಗೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಎಸ್.ಎಲ್.ಭೋಜೆಗೌಡ:–** ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:–** ಆಯಿತು, ಮಾನ್ಯ ಎಸ್.ಎಲ್.ಭೋಜೇಗೌಡರೆ ತಾವು ಏನೆಂದು ಮಾತನಾಡಿ.

**ಶ್ರೀ ಎಸ್.ಎಲ್.ಭೋಜೆಗೌಡ:–** ಮಾನ್ಯ ಸಭಾಪತಿಯವರೇ, ಈಗ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು, ಕಾನೂನು ಮಂತ್ರಿಗಳು ಮತ್ತು ಗೃಹ ಮಂತ್ರಿಗಳು ಇದ್ದಾರೆ. ಮೊನ್ನೆಯ ದಿವಸ ಸದನದಲ್ಲಿ ಎಲ್ಲಾ ಸದಸ್ಯರು ಒಕ್ಕೊರಲಿನಿಂದ ಒಂದೇ ಧ್ವನಿಯಲ್ಲಿ ಮಾತನಾಡಿರುವಂಥದ್ದು ಏನೆಂದರೆ, ಮಾನ್ಯ ಸಭಾಪತಿಯವರು ಊರಿನಲ್ಲಿ ಇಲ್ಲದೇ ಇರತಕ್ಕಂಥ ಸಂದರ್ಭದಲ್ಲಿ ಅವರ ಮೇಲೆ ಒಂದು atrocity case ದಾಖಲಾಗಿದೆ. ಈ ವಿಷಯ ಎಲ್ಲಾ ದಿನಪತ್ರಿಕೆಗಳಲ್ಲಿ ಮತ್ತು ಟಿ.ವಿ.ಯಲ್ಲಿ ಪ್ರಸಾರವಾಯಿತು. ತದನಂತರದಲ್ಲಿ ತಾವು ಪೀಠದಲ್ಲಿ ಇಲ್ಲದೇ ಇರತಕ್ಕಂಥ ಸಂದರ್ಭದಲ್ಲಿ ಹಾಗೂ ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಪೀಠದಲ್ಲಿ ಇದ್ದಂತಹ ಸಂದರ್ಭದಲ್ಲಿ ನಾವು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇವೆ.

**(ಮುಂದು)**

(404) 17.03.2022 10.50 LL-BNS **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಎಲ್. ಭೋಜೇಗೌಡ(ಮುಂದು)**

ಆಗ ಮಾನ್ಯ ಗೃಹ ಮಂತ್ರಿಗಳು, "ಖಂಡಿತ ಸಂಬಂಧಪಟ್ಟವರ ವಿರುದ್ಧ 3 ದಿನಗಳಲ್ಲಿ ಕ್ರಮ ಮಾಡುತ್ತೇವೆಂದು" ಸದನಕ್ಕೆ ಒಂದು ಆಶ್ವಾಸನೆಯನ್ನು ನೀಡಿದರು. ಅದಕ್ಕೆ ನಾವೆಲ್ಲರೂ ಒಪ್ಪಿರುತ್ತೇವೆ. ಈ ಸದನದಲ್ಲಿ ಮಾನ್ಯ ಕಾನೂನು ಮಂತ್ರಿಗಳು ಇದ್ದಾರೆ. In respect of atrocity, who is

I.O. (Investigating Officer). I.O. is above the rank of Dy.S.P. ಅಲ್ಲ ಯಾರೋ ಒಬ್ಬ ಅಮಾಯಕ ಸಬ್ ಇನ್ಸ್‌ಪೆಕ್ಟರ್ ಅನ್ನು ಸಸ್ಪೆಂಡ್ ಮಾಡುತ್ತಾರೆಂದರೆ ಅದು ಎಷ್ಟರಮಟ್ಟಿಗೆ ಸರಿ? ಈ ಬಗ್ಗೆ ಅವರಿಗೂ ಗೊತ್ತಿದೆ ಹಾಗೂ ನನಗೂ ಗೊತ್ತಿದೆ. ಆ ಎಫ್.ಐ.ಆರ್. ಬರೆಯುವವರೇ ಸಂಬಂಧಪಟ್ಟ ಪೊಲೀಸ್ ಠಾಣೆಯ ರೈಟರ್ ಆಗಿರುತ್ತಾರೆ. ಈ ವಿಚಾರದಲ್ಲಿ ನ್ಯಾಯವಾಗಿ ನೋಡಬೇಕಾದರೆ ಆ ರೈಟರ್ ಅನ್ನು ಸಸ್ಪೆಂಡ್ ಮಾಡಬೇಕು. ಈ ಪ್ರಕರಣದಲ್ಲಿ ವಿಚಾರಣಾಧಿಕಾರಿ(ಐ.ಓ.) ಮೇಲೆ ಆಕ್ಷನ್ ಮಾಡದೇ, ಆ ಪಾಪಿ ಪರದೇಶಿ ಸಬ್‌ಇನ್ಸ್‌ಪೆಕ್ಟರ್ ಮೇಲೆ ಆಕ್ಷನ್ ಮಾಡಿದರೆ ಏನು ಪ್ರಯೋಜನ? ಹಾಗಾಗಿ, ಈ ವಿಷಯ ಎಸ್.ಪಿ.ಗೆ ಗೊತ್ತಿರುತ್ತದೆ ಮತ್ತು above his rank, Dy.S.P. ಇದ್ದಾರೆ ಅವರ ಮೇಲೆ ಆಕ್ಷನ್ ಮಾಡಿದರೆ ಅದನ್ನು ನಾನು ಒಪ್ಪುತ್ತಿದ್ದೆನು. ಈ ವಿಚಾರದಲ್ಲಿ ಕಣ್ಣು ಒರೆಸುವ ತಂತ್ರ ಆಗಬಾರದು.

**ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ಈ ವಿಚಾರವನ್ನು ತದನಂತರ ಪ್ರಸ್ತಾಪ ಮಾಡಲಿ.

**ಸಭಾಪತಿಯವರು:–** ಆಯಿತು.

## ೦4. ಪ್ರಶ್ನೋತ್ತರಗಳು

### ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.

**ಪ್ರಶ್ನೆ ಸಂಖ್ಯೆ: ೨೦೬೫**

**(ಉತ್ತರವನ್ನು ಒದಗಸಿಲಾಗಿದೆ)**

**ಶ್ರೀ ಗೋವಿಂದ ರಾಜು:–** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಗಳು ವಿವರವಾದ ಉತ್ತರವನ್ನು ಕೊಟ್ಟಿದ್ದಾರೆ. O.C. (Occupancy Certificate) ಅನ್ನು ಬಿ.ಬಿ.ಎಂ.ಪಿ. ಲಿಮಿಟ್‌ಗೆ ಬಂದ ನಂತರ, ಸದರಿ ಬಿ.ಬಿ.ಎಂ.ಪಿ.ಯವರು ಆ O.C. ಅನ್ನು ಕೊಡುವಂಥದ್ದು. ಆ ಬಿ.ಬಿ.ಎಂ.ಪಿ. ಆಗುವುದಕ್ಕೂ ಮೊದಲು ವಾಣಿಜ್ಯ ಕಟ್ಟಡಗಳನ್ನು ಕಟ್ಟಿದ್ದಾರೆ, ಆ ಕಟ್ಟಡಗಳಿಗೆ ಓ.ಸಿ. ಕೇಳಿ, ನೀರಿನ ದರದ ಎರಡರಷ್ಟು ಹಣ ಬಿಲ್ಲಿಂಗ್ ಮಾಡುತ್ತಿದ್ದಾರೆ. ಹಾಗಾಗಿ, ಇದರಲ್ಲಿ ನನ್ನ ಪ್ರಶ್ನೆ ಏನೆಂದರೆ, ಬಿ.ಬಿ.ಎಂ.ಪಿ. ಮಿತಿಗೆ ಬರುವುದಕ್ಕೆ ಮೊದಲೇ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕಟ್ಟಿದಂತಹ ಕಟ್ಟಡಗಳಿಗೆ ದಂಡವನ್ನು ಹಾಕಬಾರದು. ಅದಲ್ಲದೇ, ಈ ವಿಚಾರ ಉತ್ತರದಲ್ಲಿ ಉಲ್ಲೇಖ ಆಗಿರುವುದಿಲ್ಲ. ಅದನ್ನು ಮಾನ್ಯ ಮುಖ್ಯಮಂತ್ರಿಗಳು ಪುರಸ್ಕರಿಸಬೇಕು.

ಅದಲ್ಲದೇ, ಬಿ.ಡಬ್ಲ್ಯೂ.ಎಸ್.ಎಸ್.ಬಿ. ವೆಬ್‌ಸೈಟ್‌ನಲ್ಲಿ ಹೊಸ ನೀರಿನ ಸಂಪರ್ಕ ತೆಗೆದುಕೊಳ್ಳುವುದಕ್ಕೆ ಏನೆಲ್ಲಾ ಇರಬೇಕೆಂದು ಮಾಹಿತಿ ನೀಡಿದ್ದಾರೆ. ಅದರಲ್ಲಿ, ಹೊಸ ನೀರಿನ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಅರ್ಜಿದಾರರು ಒದಗಿಸಬೇಕಾದ ದಾಖಲೆಗಳು: (ನೀರಿನ ಕೊಳವೆ ವ್ಯಾಸ ಹೆಚ್ಚಿಸುವುದು ಸೇರಿ) ಮಂಜೂರಾದ ಕಟ್ಟಡ ಪ್ಲಾನ್, ತೆರಿಗೆ ಪಾವತಿಸಿದ ರಸೀದಿಗಳು, ಖಾತಾ ಉದ್ದದ ಪ್ರತಿಗಳು. ಮಾರಾಟ ಒಪ್ಪಂದಗಳು, ಖಾತಾ ಪ್ರಮಾಣ ಪತ್ರ ಇತ್ಯಾದಿ, ರಸ್ತೆ ಅಗೆಯಲು ಪರವಾನಗಿ, ಕಟ್ಟಡದಲ್ಲಿ ಮಾಡಲಾದ ಮಳೆ ನೀರಿನ ಸಂಗ್ರಹ ವ್ಯವಸ್ಥೆ ಇದು ಯಾವುದರಲ್ಲಿಯೂ ಸಹ ಓ.ಸಿ. ಇರಬೇಕೆಂದು ಎಲ್ಲಿಯೂ ಕೇಳಿರುವುದಿಲ್ಲ. ಆ ಕಟ್ಟಡಕ್ಕೆ ನೀರಿನ ಸಂಪರ್ಕ ಕೊಟ್ಟ ನಂತರ, ಓ.ಸಿ. ಇಲ್ಲವೆಂದು ಎರಡು ಪಟ್ಟು ನೀರಿನ ದರವನ್ನು ವಸೂಲು ಮಾಡುತ್ತಿದ್ದಾರೆ. ಇದು ಅನ್ಯಾಯ. ಹಾಗಾಗಿ, ಆ ಆದೇಶವನ್ನು ವಾಪಸ್ಸು ತೆಗೆದುಕೊಳ್ಳಬೇಕು.

ಅದಲ್ಲದೇ, ಬಿ.ಬಿ.ಎಂ.ಪಿ. ಆಗುವುದಕ್ಕೆ ಮೊದಲೇ ಕಟ್ಟಡ ಕಟ್ಟಿರುವವರಿಗೆ ಈ ರೀತಿ ಮಾಡಬಾರದು. ಒಂದು ಪ್ರಕರಣದಲ್ಲಿ 2020 ನೇ ಇಸವಿಯಲ್ಲಿ ಸ್ಯಾನಿಟರಿ ಚಾರ್ಜಸ್ ಎಂದು ಸುಮಾರು 22 ಲಕ್ಷದ 45 ಸಾವಿರ ರೂಪಾಯಿ ಹಣ ಕಟ್ಟಿಸಿಕೊಂಡಿರುತ್ತಾರೆ. ಆದರೆ, ಇದುವರೆವಿಗೂ ಸ್ಯಾನಿಟರಿ ಕನೆಕ್ಷನ್ ಕೊಟ್ಟಿರುವುದಿಲ್ಲ. ಅಲ್ಲಿ ಈಗ ಪೈಪ್‌ಗಳನ್ನು ಹಾಕುತ್ತಿದ್ದಾರೆ. ಆದರೂ 2020ನೇ ಇಸವಿಯಲ್ಲಿಯೇ ಸುಮಾರು 22 ಲಕ್ಷದಷ್ಟು ಹಣವನ್ನು ಕಟ್ಟಿಸಿಕೊಂಡಿದ್ದರೂ ಸಹ, ನೀರಿನ ದರದ ಜೊತೆಗೆ, ಸ್ಯಾನಿಟರಿ ದರವನ್ನು ವಸೂಲು ಮಾಡುತ್ತಿದ್ದಾರೆ. ಈ ಬಗ್ಗೆ ಸಂಬಂಧಪಟ್ಟ ಎ.ಇ.ಇ.ಯವರನ್ನು ಕೇಳಿದರೆ, "ಇದು ಮುಖ್ಯಮಂತ್ರಿಗಳ ಸುಪರ್ದಿಗೆ ಬರುತ್ತದೆ. ಹಾಗಾಗಿ, ತಾವು ಅಲ್ಲಿಗೆ ಹೋಗಿ ಆದೇಶವನ್ನು ಮಾಡಿಸಿ" ಎಂದು ಹಾರಿಕೆಯ ಮತ್ತು ಉದ್ಧಟತನದ ಉತ್ತರ ನೀಡುತ್ತಾರೆ. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಪರಿಹಾರ ಹೇಳಬೇಕೆಂದು ತಮ್ಮ ಮೂಲಕ ಅವರನ್ನು ಕೋರುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಮೊದಲನೆ ಪ್ರಶ್ನೆ ಏನೆಂದರೆ, 110 ಹಳ್ಳಿಗಳು ಬಿ.ಬಿ.ಎಂ.ಪಿ. ಗೆ ಸೇರುವುದಕ್ಕೆ ಮೊದಲು ಯಾವ ಕಟ್ಟಡ ನಿರ್ಮಾಣ ಆಗಿರುತ್ತದೆ, ಅಲ್ಲಿ ಓ.ಸಿ.ಗಳನ್ನು ಕೇಳಿ ನೀರಿನ ಕರವನ್ನು ಎರಡು ಪಟ್ಟು ಹೆಚ್ಚಿಗೆ ಮಾಡಿರುವಂಥದ್ದಾಗಿದೆ. ಇದರಲ್ಲಿ ಏನಾಗಿದೆಯೆಂದರೆ, 2016ರಲ್ಲಿ ಓ.ಸಿ.ಗಳನ್ನು ಕಡ್ಡಾಯ ಮಾಡಬೇಕೆಂದು ಒಂದು ನೋಟಿಫಿಕೇಷನ್ ಆಗಿರುತ್ತದೆ. ಏಕೆಂದರೆ, ಬಹಳಷ್ಟು violation of rules, norms and plans ಮಾಡುತ್ತಿರುವುದರಿಂದ ಅದನ್ನು ತಡೆಗಟ್ಟುವ ಸಲುವಾಗಿ ಓ.ಸಿ.ಗಳನ್ನು insist ಮಾಡಲಾಗಿರುತ್ತದೆ. ಅದು 2016ರಿಂದಲೂ ಕಡ್ಡಾಯವಾಗಿರುತ್ತದೆ. ಇನ್ನು ಕೆಲವು ಕಟ್ಟಡಗಳು ಈ ಹಿಂದೆ ಕಟ್ಟಿದ್ದು, ಆ ಕಟ್ಟಡಗಳಿಗೆ ಓ.ಸಿ. ಸಿಗುತ್ತಿಲ್ಲ. ಆದರೂ ಕೂಡ ಅಲ್ಲಿ ವಸತಿಗಳು ಆಗುತ್ತಿದೆ. ಅದಕ್ಕೆ, G+2 110 villages ನಲ್ಲಿ, G+4 ಗಳಲ್ಲಿ ಅಂದರೆ, ದೊಡ್ಡ ಕಟ್ಟಡಗಳಾದರೂ ಸಹ ಜನವಸತಿಗೆ ತೊಂದರೆಯಾಗಬಾರದೆಂಬ ಕಾರಣಕ್ಕಾಗಿ ಹೆಚ್ಚಿಗೆ ದರ ನಿಗದಿಗೊಳಿಸದೇ ನೀರಿನ ಸಂಪರ್ಕವನ್ನು ನೀಡಬೇಕೆಂದು 2016ರಿಂದ ಓ.ಸಿ. ಪಡೆಯುವ ವ್ಯವಸ್ಥೆ ನಡೆದುಕೊಂಡು ಬಂದಿರುತ್ತದೆ. ಆ ಕಟ್ಟಡಗಳಿಗೆ ವಿದ್ಯುತ್ ಮತ್ತು ನೀರಿನ ದರ ಕೂಡ ಅದೇ ರೀತಿ ಇರುತ್ತದೆ. ಈಗ ಅವುಗಳನ್ನೆಲ್ಲಾ

ಪುನರ್ ಪರಿಶೀಲನೆ ಮಾಡುತ್ತಿದ್ದೇವೆ. ಏಕೆಂದರೆ, ಬಹಳಷ್ಟು ಜನರಿಗೆ ಆ ದರವನ್ನು ಕಟ್ಟುವುದು ಕಷ್ಟ ಇದೆಯೆನ್ನುವುದು ನಮಗೆ ಮನವರಿಕೆಯಾಗಿರುತ್ತದೆ. ಅದಕ್ಕಾಗಿ ಅದನ್ನು ಪುನರ್ ಪರಿಶೀಲನೆ ಮಾಡುತ್ತಿದ್ದೇವೆ. ಇನ್ನು ಕೆಲವೇ ದಿನಗಳಲ್ಲಿ ಅದಕ್ಕೆ ಒಂದು ಅಂತಿಮ ತೀರ್ಮಾನ ಮಾಡುತ್ತೇವೆ. ಏಕೆಂದರೆ, ವಿದ್ಯುತ್ ಬಿಲ್‌ಗೆ ಸಂಬಂಧಪಟ್ಟಂತೆ ನಾವು ಈಗಾಗಲೇ ಕೆ.ಇ.ಆರ್.ಸಿ.ಗೆ ಪತ್ರ ಬರೆದಿರುತ್ತೇವೆ. ಸದರಿ ಕೆ.ಇ.ಆರ್.ಸಿ.ಯಿಂದ ನಿರ್ದೇಶನ ಬಂದ ತಕ್ಷಣವೇ ಅದನ್ನು ನಾವು ಮಾಡುತ್ತೇವೆ.

ಅದರ ಜೊತೆಗೆ, ಬಿ.ಡಬ್ಲ್ಯೂ.ಎಸ್.ಎಸ್.ಬಿ. ವಿಚಾರ ಏನಿದೆ, ಅದನ್ನು ಸಹ ನಾವು ತೀರ್ಮಾನ ಮಾಡುತ್ತೇವೆ. ಆದರೆ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆ ಏನೆಂದರೆ, 2007ರಲ್ಲಿ ಸುಮಾರು 110 ಹಳ್ಳಿಗಳು ಸೇರಿರುತ್ತವೆ. ಆದರೆ, ಓ.ಸಿ. ಪಡೆಯುವುದು ಕಡ್ಡಾಯ ಎಂದು ಮಾಡಿರುವ ನೋಟಿಫಿಕೇಷನ್ ಬಂದಿರುವುದು 2016ರಲ್ಲಿ. ಅಂದರೆ, ಸುಮಾರು 10 ವರ್ಷಗಳ ನಂತರ ಈ ನೋಟಿಫಿಕೇಷನ್ ಬಂದಿರುತ್ತದೆ. ಅಂದರೆ, ಹೆಚ್ಚು ಕಡಿಮೆ 2007ರ ನಂತರ ಇರುವಂತಹ ಕಟ್ಟಡಗಳು ಎನ್ನುವುದು ಗೊತ್ತಾಗುತ್ತದೆ. ಆದರೆ, ಕೆಲವು ಕಟ್ಟಡಗಳು 2007ಕ್ಕೆ ಮೊದಲು ನಿರ್ಮಾಣ ಆಗಿರುತ್ತವೆ ಎಂದು ಏನು ಅನಿಸಿಕೆ ಮಾನ್ಯ ಸದಸ್ಯರಿಗೆ ಇದೆ, ಆ ರೀತಿ ಏನಾದರೂ ಇದ್ದರೆ ಬಿ.ಬಿ.ಎಂ.ಪಿ. ಗೆ ಸೇರುವುದಕ್ಕೆ ಮೊದಲು ಕಟ್ಟಡ ಆಗಿದ್ದರೆ, ಆ ಕಟ್ಟಡಗಳಿಗೆ ಎರಡು ಪಟ್ಟು ದರ ನಿಗದಿಗೊಳಿಸುವುದು ಸರಿಯಲ್ಲ ಎಂದು ಮಾನ್ಯ ಸದಸ್ಯರು ಏನು ಹೇಳಿದ್ದಾರೆ. ಅದನ್ನು ಪರಿಶೀಲನೆ ಮಾಡಿ, ಅದಕ್ಕೆ ಸೂಕ್ತವಾದಂತಹ ಆದೇಶ ಮಾಡುತ್ತೇನೆ. ಅಂದರೆ, 2007ಕ್ಕಿಂತಲೂ ಮೊದಲು ನಿರ್ಮಾಣ ಮಾಡಿರುವಂತಹ ಕಟ್ಟಡಗಳು ಮಾತ್ರ. 2007ರ ನಂತರ ನಿರ್ಮಾಣ ಆಗಿರುವಂತಹ ಕಟ್ಟಡಗಳಿಗೆ ಸದರಿ ನೋಟಿಫಿಕೇಷನ್ ಜಾರಿಯಲ್ಲಿರುತ್ತದೆ, unless and until we take review and further concession ಮಾಡುವಂಥದ್ದು.

ಆ ನಂತರ, ಸ್ಯಾನಿಟರಿಗೆ ಸಂಬಂಧಪಟ್ಟಂತೆ ಮಾನ್ಯ ಸದಸ್ಯರು ಒಂದು ಪ್ರಕರಣ ಹೇಳಿದ್ದು, ದಯಮಾಡಿ ಆ ಪ್ರಕರಣದ ವಿವರವನ್ನು ನನಗೆ ನೀಡಬೇಕೆಂದು ಕೋರುತ್ತೇನೆ. ಆ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ಸೂಚನೆ ನೀಡುತ್ತೇನೆ. ಇನ್ನೊಂದು ವಿಚಾರವೆಂದರೆ ಯಾರೋ ಒಬ್ಬ

ಇಂಜಿನಿಯರ್, "ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಹೋಗಿ ಆದೇಶ ಮಾಡಿಸಿಕೊಳ್ಳಬೇಕೆಂದು ಹೇಳಿದರು" ಎಂದು ಮಾನ್ಯ ಸದಸ್ಯರು ಹೇಳಿರುತ್ತಾರೆ. ದಯಮಾಡಿ, ಆ ಪುಣ್ಯಾತ್ಮನ ಹೆಸರು ಕೊಡಿ. ಅವರ ವಿರುದ್ಧ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕೆಂದು ನನಗೆ ಗೊತ್ತಿದೆ.

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೇ, ಆತನ ಹೆಸರು ಶ್ರೀ ದಿನೇಶ್ ಎಂದು.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ದಯಮಾಡಿ ಆ ಹೆಸರನ್ನು ಬರೆದುಕೊಡಲಿ.

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೇ, ಆಯಿತು ಬರೆದುಕೊಡುತ್ತೇನೆ. ಇಷ್ಟು ಹಣ ಡೆಪಾಸಿಟ್ ಎಂದು ಕಟ್ಟಿಸಿಕೊಳ್ಳುತ್ತಾರೆ ಹಾಗೂ ನೀರಿನ ದರ ಸಹ ಅವರು ಕಟ್ಟುತ್ತಾರೆ. ಆದರೆ, ವಾರದಲ್ಲಿ ಕೇವಲ 2 ದಿನ ಮಾತ್ರ ನೀರು ಕೊಡುತ್ತಾರೆ. ಇನ್ನು 5 ದಿವಸ ನೀರು ಇರುವುದಿಲ್ಲ. ಇದರಿಂದಾಗಿ, ಬೇರೆ ಕಡೆ ನೀರನ್ನು ಅವರು procure ಮಾಡುವುದಕ್ಕೆ ಆಗುವುದಿಲ್ಲ ಹಾಗೂ ಈ ನೀರಿನ ಮೇಲೆ ಅವಲಂಬಿತರಾಗುವುದಕ್ಕೆ ಸಹ ಆಗುವುದಿಲ್ಲ. ಹಾಗಾಗಿ, ಅದಕ್ಕೆ ಪೂರ್ಣ ವಿರಾಮ ಹಾಕಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸಹ ಅಲ್ಲಿಯೇ ಇರುವುದರಿಂದ ಅವರಿಗೆ ಈ ಬಗ್ಗೆ ಚೆನ್ನಾಗಿ ಗೊತ್ತಿರುತ್ತದೆ. ಅದೇನೆಂದರೆ, ಕಾವೇರಿ 5ನೇ ಹಂತದ ಕೆಲಸ ಈಗ ನಡೆಯುತ್ತಿರುತ್ತದೆ. ಆ ಕೆಲಸ ಪೂರ್ಣವಾದರೆ ನೀರಿನ ಸಮಸ್ಯೆ ಪರಿಹಾರವಾಗುತ್ತದೆ. ಪ್ರತಿನಿತ್ಯ ನೀರು ಕೊಡುವ ಸಲುವಾಗಿಯೇ ಸುಮಾರು 5,500 ಕೋಟಿ ರೂಪಾಯಿ ವೆಚ್ಚದಲ್ಲಿ ಯೋಜನೆ ಮಾಡುತ್ತಿದ್ದು, ಅದು ಪ್ರಗತಿಯಲ್ಲಿದೆ. ಆ ಕಾಮಗಾರಿಯನ್ನು 2023ರಲ್ಲಿ ಪೂರ್ಣಗೊಳಿಸಬೇಕೆಂದು ನಮ್ಮ ಉದ್ದೇಶ ಇರುತ್ತದೆ. ಆ ಯೋಜನೆ ಪೂರ್ಣಗೊಂಡ ನಂತರ ನೀರಿನ ವ್ಯವಸ್ಥೆ ಆಗುತ್ತದೆ.

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೇ, ಧನ್ಯವಾದಗಳು.

## ಪ್ರಶ್ನೆ ಸಂಖ್ಯೆ:2072

## (ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಅಲ್ಲಂ ವೀರಭದ್ರಪ್ಪ:–** ಮಾನ್ಯ ಸಭಾಪತಿಯವರೇ, ಮೊಟ್ಟಮೊದಲನೆಯದಾಗಿ ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಹಾಜರಿರುವುದರಿಂದ ಬಳ್ಳಾರಿ ಜಿಲ್ಲೆಯ ರೈತರ ಪರವಾಗಿ ತುಂಗಭದ್ರ ಜಲಾಶಯದ ಸಂಗ್ರಹಣಾ ಸಾಮರ್ಥ್ಯಕ್ಕೆ ಸಂಬಂಧಪಟ್ಟ ಕಾಮಗಾರಿಗೆ 1 ಸಾವಿರ ಕೋಟಿ ರೂಪಾಯಿ ಅನುದಾನ ನೀಡಿರುವುದಕ್ಕೆ ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಮಾನ್ಯರೇ, ಇವೊತ್ತಿನ ದಿವಸ ಈ ಯೋಜನಗೆ 1 ಸಾವಿರ ಕೋಟಿ ರೂಪಾಯಿ ಅನುದಾನವನ್ನು ಬಜೆಟ್‌ನಲ್ಲಿ ಇಡಲಾಗಿದೆ. 2020ರಲ್ಲಿ ಡಿ.ಪಿ.ಆರ್. ಮಾಡುವುದಕ್ಕೆ 14.30 ಕೋಟಿ ರೂಪಾಯಿ ಹಣ ಕೊಟ್ಟಿದ್ದೇವೆಂದು ಹೇಳಿರುತ್ತಾರೆ. ಇಲ್ಲಿಗೆ 2 ವರ್ಷ ಸಮಯ ಆಗಿರುತ್ತದೆ. ಆದರೆ, ಈ ಯೋಜನೆ ಪ್ರಸ್ತುತ ಯಾವ ರೀತಿ ಇದೆ, ಯಾವ ಹಂತದಲ್ಲಿದೆ ಎನ್ನುವುದು ಗೊತ್ತಿರುವುದಿಲ್ಲ. ಇದು ಏನಾಗಿದೆಯೆಂದರೆ, ಮದುವೆಯಾಗುವ ಗಂಡು ಹೆಣ್ಣನ್ನು ನೋಡಿರುವುದಿಲ್ಲ ಹಾಗೂ ಹೆಣ್ಣು ಸಹ ಗಂಡನನ್ನು ನೋಡಿರುವುದಿಲ್ಲ. ಆದರೆ, ಹುಟ್ಟುವಂತಹ ಮಗುವಿಗೆ ರೊಕ್ಕ ಇಡುತ್ತೇವೆಂದು ಹೇಳುವ ರೀತಿ ಇರುತ್ತದೆ. ಏಕೆಂದರೆ, ಈ ಯೋಜನೆಗೆ ಡಿ.ಪಿ.ಆರ್. ಆಗಿರುವುದಿಲ್ಲ. ಆ ಡಿ.ಪಿ.ಆರ್. ಆದ ನಂತರ 1 ಸಾವಿರ ಕೋಟಿ ರೂಪಾಯಿ ಹಣವನ್ನು ಯಾವ ಕಾಮಗಾರಿಗೆ ಕೊಡುತ್ತಾರೆ ಅಥವಾ ಯಾವ ಕಾಮಗಾರಿಗೆ ಹಣ ಮೀಸಲಿಡಲಾಗಿದೆ. ಏಕೆಂದರೆ, ಇದು ರಾಜ್ಯ ಸರ್ಕಾರದ ಆಸ್ತಿಯಾಗಿರುವುದಿಲ್ಲ. It is the property of three States. It comes under Board. ಹಾಗಾಗಿ, ಈ ಯೋಜನೆಗೆ ನಾವೇ ಹಣ ಖರ್ಚು ಮಾಡುತ್ತೇವೆಂದು ಹೇಳಿದರೆ, ಯಾವ ರೀತಿ ಹಣ ಖರ್ಚು ಮಾಡುತ್ತಾರೆ. ಈ ಹಣವನ್ನು ಯಾವ ಉದ್ದೇಶಕ್ಕಾಗಿ ಮತ್ತು ಯಾವ ಕಾಮಗಾರಿಗಾಗಿ ಮೀಸಲಿಟ್ಟಿದ್ದಾರೆ ಹಾಗೂ ಡಿ.ಪಿ.ಆರ್. ಯಾವಾಗ ಆಗುತ್ತದೆ. ಡಿ.ಪಿ.ಆರ್. ಆದ ನಂತರ ಕಾಡಾ ಮೀಟಿಂಗ್‌ನಲ್ಲಿ ಈ ಯೋಜನೆಗೆ ಅನುಮೋದನೆ ಪಡೆಯಬೇಕು. ಎಲ್ಲಾ ಸರ್ಕಾರಗಳ ಅನುಮೋದನೆ ಸಹ ಪಡೆಯಬೇಕಾಗಿರುತ್ತದೆ. ಸದರಿ ಅನುಮೋದನೆ ಪಡೆದ ನಂತರವೇ ಕಾಮಗಾರಿ ಪ್ರಾರಂಭ ಮಾಡಬೇಕು. ದಯಮಾಡಿ ಈ ಬಗ್ಗೆ ಮಾನ್ಯ ಸಚಿವರು ಬೆಳಕು ಚೆಲ್ಲಬೇಕೆಂದು ಕೋರುತ್ತೇನೆ.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಅಲ್ಲಂ ವೀರಭದ್ರಪ್ಪನವರು ಅತ್ಯಂತ ಹಿರಿಯರು ಹಾಗೂ ಅನುಭವಿಗಳು. ಅವರು, ಗಂಡು ಹೆಣ್ಣಿನ ಮುಖ ನೋಡಿರುವುದಿಲ್ಲ ಹಾಗೂ ಹೆಣ್ಣು ಗಂಡಿನ ಮುಖ ನೋಡಿರುವುದಿಲ್ಲ" ಎಂದು ಹೇಳಿದರು.

(ಮುಂದು)

(405) 17.03.2022 11.00 ವೈಎಲ್-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಗೋವಿಂದ ಎಂ.ಕಾರಜೋಳ (ಮುಂದು):-**

ನಾನು ಮಾನ್ಯ ಸದಸ್ಯರಿಗೆ ಹೇಳಬಯಸುವುದೇನೆಂದರೆ, ನಾವು ಈ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕೆಂಬ ಬದ್ಧತೆಯಿಂದ ರೂ.14.30 ಕೋಟಿ ನೀಡಿ ಟೆಂಡರ್ ಕರೆದು, ಡಿ.ಪಿ.ಆರ್. ಮಾಡಲು entrust ಮಾಡಲಾಗಿದ್ದು, ಈಗಾಗಲೇ ನಿಶ್ಚಿತಾರ್ಥವಾಗಿ ಬಿಟ್ಟಿದೆ. ಹಾಗಾಗಿ ಮತ್ತೆ ನೋಡುವ ಪ್ರಶ್ನೆ ಬರುವುದಿಲ್ಲ. ಮುಂದೆ ಹೋಗಿದ್ದೇವೆ. ಈಗಾಗಲೇ ಡಿ.ಪಿ.ಆರ್. ಅಂತಿಮ ಹಂತದಲ್ಲಿದೆ. ಈ ಹಿಂದೆ ಅಣೆಕಟ್ಟು ನಿರ್ಮಿಸುವಾಗಲೂ ಯೋಜನಾ ವ್ಯಾಪ್ತಿಯು ಮೂರು ರಾಜ್ಯಗಳಲ್ಲಿಯೇ ಇತ್ತು. ಆ ಸಂದರ್ಭದಲ್ಲಿ ಅದರ ಯೋಜನಾ ವ್ಯಾಪ್ತಿಯಲ್ಲಿ ನಿಜಾಮರ ಸರ್ಕಾರ, ಮದ್ರಾಸ್ ಪ್ರೆಸಿಡೆನ್ಸಿ, ಮೈಸೂರು ಅರಸರ ಸರ್ಕಾರ ಈ ಮೂರು ಸರ್ಕಾರಗಳಿತ್ತು. ಅದರಂತೆ ಈಗಲೂ ಸಹ ಕರ್ನಾಟಕ, ತೆಲಂಗಾಣ, ಆಂಧ್ರಪ್ರದೇಶ ರಾಜ್ಯಗಳದ್ದಾಗಿದೆ. ಈ ಅಣೆಕಟ್ಟೆ ವಿಚಾರವು ಬೋರ್ಡ್ ವ್ಯಾಪ್ತಿಯಲ್ಲಿದ್ದು, ಅಲ್ಲಿ ಮೂರು ರಾಜ್ಯಗಳು ಒಪ್ಪಂದ ಮಾಡಿಕೊಳ್ಳಬೇಕೆಂದು ಎಲ್ಲಾ ರೀತಿಯ ಪ್ರಯತ್ನವನ್ನು ಮಾಡುತ್ತಿದ್ದೇವೆ. ಕರ್ನಾಟಕ ರಾಜ್ಯದಿಂದ ಶೇಕಡ 65 ರಷ್ಟು ಪಾಲನ್ನು ನೀಡಬೇಕಾಗುತ್ತದೆ. ಹಾಗೆಯೇ ತೆಲಂಗಾಣ ಮತ್ತು ಆಂಧ್ರಪ್ರದೇಶವು ಶೇಕಡ 35 ರಷ್ಟು ಪಾಲನ್ನು ನೀಡಬೇಕಾಗುತ್ತದೆ. ಆ ಹಂತದಲ್ಲಿ ಎಲ್ಲಾ ರೀತಿಯ ಪ್ರಯತ್ನವನ್ನು ಮಾಡುತ್ತಿದ್ದು, ಡಿ.ಪಿ.ಆರ್. ಅಂತಿಮ ಹಂತದಲ್ಲಿದೆ. ಈಗಾಗಲೇ ಒಂದು ಸಾವಿರ ಕೋಟಿ ರೂಪಾಯಿ ಮೀಸಲಿಟ್ಟು ನಮ್ಮ ಬದ್ಧತೆಯನ್ನು ತೋರಿಸಿದ್ದೇವೆ. ಖಂಡಿತವಾಗಿ ನಾವು ಈ ಯೋಜನೆಯನ್ನು ಕೈಗೆತ್ತಿಕೊಳ್ಳುತ್ತೇವೆ. ನವಿಲೆ ಸಮೀಪ ಸಮತೋಲನ ಅಣೆಕಟ್ಟೆಯನ್ನು ನಿರ್ಮಿಸಿ 30 ಟಿ.ಎಂ.ಸಿ. ನೀರನ್ನು

ಹಿಡಿದಿಟ್ಟುಕೊಳ್ಳುವಂಥ ಕೆಲಸಕ್ಕೆ ಖಂಡಿತ ಸರ್ಕಾರ ಮುಂದೆ ಹೆಜ್ಜೆ ಇಡುತ್ತದೆ. ಹಿಂದೆ ಹೆಜ್ಜೆ ಇಡುವ ಪ್ರಶ್ನೆಯೇ ಇಲ್ಲ ಎಂದು ಭರವಸೆ ನೀಡುತ್ತೇನೆ.

**ಶ್ರೀ ಅಲ್ಲಂ ವೀರಭದ್ರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈಗಾಗಲೇ ಹೇಳಿದಂತೆ ಈ ಮೊದಲು ಕೇವಲ ಮೈಸೂರು ಸರ್ಕಾರ ಮತ್ತು ಆಂಧ್ರ ಸರ್ಕಾರದ ವ್ಯಾಪ್ತಿಯಲ್ಲಿತ್ತು, ತೆಲಂಗಾಣ ಸರ್ಕಾರವು ನಂತರದಲ್ಲಿ ಆಗಿರುತ್ತದೆ. ಆ ಸಂದರ್ಭದಲ್ಲಿ ಬಳ್ಳಾರಿ ಜಿಲ್ಲೆಯು ಆಂಧ್ರ ಪ್ರದೇಶ ಸರ್ಕಾರದ ಕೋಟಾದಲ್ಲಿತ್ತು. ಈ ವಿಚಾರವನ್ನು ತಮ್ಮ ಮಾಹಿತಿಗಾಗಿ ಹೇಳುತ್ತಿದ್ದೇನೆ. ಆದರೆ, ನಂತರ ಬಳ್ಳಾರಿ ಜಿಲ್ಲೆಯು ಮೈಸೂರು ಸರ್ಕಾರದ ವ್ಯಾಪ್ತಿಗೆ ಬಂದ ಮೇಲೆ ನಾವು ಅದನ್ನು ಕ್ಲೇಮ್ ಮಾಡಿರುವುದಿಲ್ಲ. ನಂತರ ತೆಲಂಗಾಣ ಸರ್ಕಾರವು ರಚನೆಯಾದ ಮೇಲೆ ತೆಲಂಗಾಣದವರು ಹೊಸದಾಗಿ ನಮ್ಮ ಪಾಲು ಇಷ್ಟಿದೆ ಎಂದು ಕ್ಲೇಮ್ ಮಾಡಿತು. ಆದರೆ, ನಾವು ಕ್ಲೇಮ್ ಮಾಡಿರುವುದಿಲ್ಲ. ಹಾಗಾಗಿ, ಯಾವ ರೀತಿ ಕಾನೂನು ಮಾಡಿ, ಆ ಪಾಲನ್ನು ನಮ್ಮ ಕರ್ನಾಟಕದ ವ್ಯಾಪ್ತಿಗೆ ತರಬೇಕೆಂದು ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ.

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ಖಂಡಿತವಾಗಿ ನಮ್ಮ ಪಾಲನ್ನು ನಾವು ಪಡೆದುಕೊಂಡೇ ಪಡೆದುಕೊಳ್ಳುತ್ತೇವೆ. ಆ ವಿಚಾರದಲ್ಲಿ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ.

**ಶ್ರೀ ಅಲ್ಲಂ ವೀರಭದ್ರಪ್ಪ:–** ಮಾನ್ಯ ಸಭಾಪತಿಯವರೇ, ಆ ರೀತಿ ಹೇಳಅಲ್ಲ. He is not catching my point. ನಮ್ಮ ರಾಜ್ಯದ ಪಾಲು ಶೇ.65 ರಷ್ಟು ಇದೆ. We are eligible to take the share of 65%. I am not disputing this issue. The issue is that Bellary district was in Andhra Pradesh when the quota was fixed. Proportionate quota was fixed between then Mysore Government and then Andhra Government. When Bellary was merged with Mysore ಆ ಪಾಲನ್ನು ನಾವು ತೆಗೆದುಕೊಂಡಿಲ್ಲ. ಆದರೆ, ಆಂಧ್ರ ಪ್ರದೇಶದ ಸರ್ಕಾರವು ತನ್ನ ಪಾಲನ್ನು ತೆಗೆದುಕೊಂಡಿತ್ತು. ನಂತರ ತೆಲಂಗಾಣ ಸರ್ಕಾರವು ರಚನೆಯಾದಾಗ ಅದು ತನ್ನ ಪಾಲನ್ನು ತೆಗೆದುಕೊಂಡಿತು.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, before re-organisation of States ನೀರಿನ ಹಂಚಿಕೆಯಾಗಿರುವುದರಿಂದ ಒಂದು ರಾಜ್ಯದಿಂದ ಎರಡು ರಾಜ್ಯಗಳಾಯಿತೋ, ನಾಲ್ಕು ರಾಜ್ಯಗಳಾದವೋ, ಅದು ನಮಗೆ ಸಂಬಂಧಪಟ್ಟ ವಿಷಯವಲ್ಲ.

**ಶ್ರೀ ಅಲ್ಲಂ ವೀರಭದ್ರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಸಂಬಂಧಿಸಿರುವುದಿಲ್ಲ. ಆದರೆ, ಅದು ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿರುವುದಾಗಿದೆ. ಇದರಲ್ಲಿ ಬಿ.ಜೆ.ಪಿ. ಮತ್ತು ಕಾಂಗ್ರೆಸ್ ಸರ್ಕಾರದ ಪ್ರಶ್ನೆ ಬರುವುದಿಲ್ಲ.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ಮಾತನಾಡುತ್ತೇನೆ. ಮಾನ್ಯ ಸದಸ್ಯರು ಬಳ್ಳಾರಿ ಜಿಲ್ಲೆಗೆ proportionately ನೀರು ಹಂಚಿಕೆಯಾಗಿಲ್ಲವೆಂದು ಹೇಳುತ್ತಿದ್ದಾರೆಯೇ ಅಥವಾ ಆ ನೀರು ಸಿಕ್ಕಿಲ್ಲವೆಂದು ಹೇಳುತ್ತಿದ್ದಾರೆ?

**ಶ್ರೀ ಅಲ್ಲಂ ವೀರಭದ್ರಪ್ಪ:-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದ ಪಾಲಿನಲ್ಲಿ ಬಚಾವತ್ ತೀರ್ಪಿನ ಪ್ರಕಾರ ನಮಗೆ ಸೀಗಬೇಕಾದ ನೀರಿನ ಕೋಟಾ ಸಿಕ್ಕಿದೆ. ಆದರೆ, ಈ ಹಿಂದೆ ಆಂಧ್ರ ಪ್ರದೇಶದ ಕೋಟಾದಲ್ಲಿ ಬಳ್ಳಾರಿ ಜಿಲ್ಲೆ ಇತ್ತು, ಆ ನೀರಿನ ಪಾಲು ಹೆಚ್ಚುವರಿಯಾಗಿ ಬರುತ್ತದೆ.

**ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ನಾನು ಅದರ ಬಗ್ಗೆ ಮಾತನಾಡುತ್ತೇನೆ. ಮಾನ್ಯ ಹಿರಿಯ ಸದಸ್ಯರಾದ ಶ್ರೀ ಅಲ್ಲಂ ವೀರಭದ್ರಪ್ಪನವರು ಸಹ ಈ ಹಿಂದೆ ನೀರಾವರಿ ಸಚಿವರಾಗಿದ್ದರು. ಹಾಗೆಯೇ ನಾನು ಸಹ ನೀರಾವರಿ ಸಚಿವನಾಗಿ ಸೇವೆ ಸಲ್ಲಿಸಿದ್ದೇನೆ. ಬಳ್ಳಾರಿ ಜಿಲ್ಲೆಯು ಮೊದಲು ಆಂಧ್ರ ಪ್ರದೇಶದ ಕೋಟಾದಲ್ಲಿದ್ದು, ಆಗ ಈ ನೀರಿನ ಹಂಚಿಕೆಯಾಗಿದೆ, ನಂತರ reorganisation ಆಗಿದೆ, ಹಾಗಾಗಿ ಈಗ ನಾವು ನೀರು ಕೊಡಬೇಕಾಗಿದ್ದು, ಈ ಹಿಂದೆ ತೆಗೆದುಕೊಳ್ಳದ ನೀರಿನ ಪಾಲನ್ನು ಪಡೆದುಕೊಳ್ಳಬೇಕೆಂದು ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ ಅದರ ಬಗ್ಗೆ ದಾಖಲೆ ತೆಗೆಸಿ ನೋಡುತ್ತೇನೆ. ಆಗ ಸತ್ಯಾಸತ್ಯತೆ ಗೊತ್ತಾಗುತ್ತದೆ. ಏಕೆಂದರೆ, ಬಹಳ ಹಳೆಯ ನಡವಳಿಯಾಗಿದ್ದು, ಅದನ್ನು ತೆಗೆಸಿ ನೋಡಿ ಪರಿಶೀಲನೆ ಮಾಡುತ್ತೇನೆ. ಇದು ಬಹಳ ಸೂಕ್ಷ್ಮವಾದಂಥ ವಿಚಾರ. ಏಕೆಂದರೆ, ಆಂಧ್ರ ಪ್ರದೇಶ ಮತ್ತು

ತೆಲಂಗಾಣ ರಾಜ್ಯವು bifurcation ಆಗಿದ್ದು, Parliament ನಲ್ಲಿ bifurcation Act ಆಗಿದೆ. ತೆಲಂಗಾಣ ರಾಜ್ಯವು ನ್ಯಾಯಾಲಯದ ಮೊರೆ ಹೋಗಿ "entire Krishna water dispute ಅನ್ನು ಮತ್ತೊಮ್ಮೆ revisit ಮಾಡಬೇಕೆಂದು ಕೇಳಿದ್ದಾರೆ. ಅದು ಎಲ್ಲಿಯಾದರೂ ಸಾಧ್ಯವೇ? ಈಗಾಗಲೇ ಎರಡು ನ್ಯಾಯಮಂಡಳಿಗಳಿಂದ ಹಂಚಿಕೆಯಾಗಿದೆ. ಆದ್ದರಿಂದ ನಾವು ಮತ್ತೆ ಸರ್ವೋಚ್ಛ ನ್ಯಾಯಾಲಯದ ಮೊರೆ ಹೋಗಿ, ಆ ರೀತಿ ನೀಡಲು ಸಾಧ್ಯವಿಲ್ಲವೆಂದು ತೀರ್ಪು ತೆಗೆದುಕೊಂಡು ಬಂದಿದ್ದೇವೆ. ಈಗಲೂ ಸಹ ತೆಲಂಗಾಣ ರಾಜ್ಯದ contention ಇದೆ. ಆದರೆ, State reorganisation Act Parliament ನಲ್ಲಿ pass ಆಗಿದ್ದು very clear ಇದೆ. Section 15 of State reorganisation Act very clear ಇದೆ; any dispute either land, water or anything between two bifurcated states, ಮಧ್ಯದಲ್ಲಿರುವುದಕ್ಕೆ Tribunal ಮಾಡಿ set right ಮಾಡಿಕೊಳ್ಳಬೇಕೆಂದು ಬಹಳ ಸ್ಪಷ್ಟವಾಗಿ ತಿಳಿಸಿದ್ದರೂ ಸಹ they want to claim. ಹಾಗಾಗಿ once pandora box open ಮಾಡಿದರೆ, ಎಲ್ಲೆಲ್ಲಿ ಹೋಗುತ್ತದೆ ಎಂಬುದನ್ನು ನೋಡಬೇಕಾಗುತ್ತದೆ. Legal consultation ಮಾಡಬೇಕಾಗುತ್ತದೆ. We will take a call. ಇದಕ್ಕಿಂತ ಹೆಚ್ಚಾಗಿ ನಾನು ಏನು ಹೇಳುವುದಕ್ಕಾಗುವುದಿಲ್ಲ.

**Sri ALLUM VEERABHADRAPPA:-** I really understand it.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಎರಡನೆಯದಾಗಿ, ತುಂಗಭದ್ರಾ ಅಣೆಕಟ್ಟನ್ನು ಬಹಳ ಯೋಚನೆ ಮಾಡಿ ಮಾಡಲಾಗಿದೆ. ಪ್ರತಿ ವರ್ಷ ಆ ಅಣೆಕಟ್ಟಿನಲ್ಲಿ ತುಂಬುವಂಥ ಹೂಳನ್ನು ತೆಗೆಯಲು ಸುಮಾರು 10 ವರ್ಷ, 15 ವರ್ಷಗಳಿಂದ ಹಲವಾರು ರೀತಿಯಲ್ಲಿ ಪ್ರಯತ್ನ ಮಾಡಲಾಗಿದೆ. ನಾನು ನೀರಾವರಿ ಸಚಿವನಾಗಿದ್ದ ಸಂದರ್ಭದಲ್ಲಿ ಸಹ ಇಟಲಿಯಿಂದ special machinery ತರಸಿ cutters ಹಾಕಿ ತೆಗೆಯಲು ಹೋದಾಗ ಅದು sediment, ಕಲ್ಲಾಗಿಬಿಟ್ಟಿತ್ತು. ಇದರಿಂದಾಗಿ ಆ ಹೂಳನ್ನು ತೆಗೆಯಲು ಸಾಧ್ಯವಿಲ್ಲವೆಂದು ಗೊತ್ತಾದ ಮೇಲೆ, ಇವತ್ತು balancing reservoir ಮಾಡಬೇಕೆಂದು ಮಾಡಲಾಗಿದೆ. ಈಗ ಡಿ.ಪಿ.ಆರ್. ಅಂತಿಮ ಹಂತದಲ್ಲಿದ್ದು ಕೆಲವೇ ತಿಂಗಳಿನಲ್ಲಿ ಡಿ.ಪಿ.ಆರ್. ಬರುತ್ತದೆ. ಅದಕ್ಕೆ ಎಷ್ಟು ವೆಚ್ಚ ಅನ್ವಯಿಸುತ್ತದೆ

ಎಂಬುದು ತಿಳಿದಿದೆ. ಈ ಮಧ್ಯೆ ನಾನು ಆಂಧ್ರ ಪ್ರದೇಶದ ಮುಖ್ಯಮಂತ್ರಿಯವರೊಂದಿಗೂ ಮಾತನಾಡಿದ್ದು, ಅವರು ನಮ್ಮ ಅಧಿಕಾರಿಗಳ ತಂಡವನ್ನು ಕಳುಹಿಸಿಕೊಡುತ್ತೇನೆ, ನಿಮ್ಮ ಅಧಿಕಾರಿಗಳೊಂದಿಗೆ ಕುಳಿತು ಚರ್ಚೆ ಮಾಡಿ ಎರಡು ರಾಜ್ಯಕ್ಕೆ ಅನುಕೂಲವಾಗುತ್ತದೆಯೋ, ಏನಾಗುತ್ತದೆ ಎಂಬುದನ್ನು ನೋಡೋಣ ಎಂದು ಹೇಳಿದ್ದಾರೆ. ಅದೇ ರೀತಿ ತೆಲಂಗಾಣ ರಾಜ್ಯದ ಮುಖ್ಯಮಂತ್ರಿಯವರೊಂದಿಗೆ ಮಾತನಾಡಬೇಕೆಂಬ ಉದ್ದೇಶ ಇದೆ. ಅವೆಲ್ಲದರ preparatory ಮಾಡಿಕೊಂಡಿರುವುದರಿಂದ , ಈ ವರ್ಷದಲ್ಲಿಯೇ ಒಂದು conscious decision ಆದಾಗ, we should not fall short of money ಎನ್ನುವ ಸದ್ದುದೇಶದಿಂದ forward looking ಆಗಿ ಇಟ್ಟಿದ್ದೇವೆ. ನಮ್ಮ ಪ್ರಯತ್ನಗಳನ್ನು ಮುಂದುವರೆಸಿದ್ದು, ಖಂಡಿತವಾಗಿ ಡಿ.ಪಿ.ಆರ್. ಬಂದ ತಕ್ಷಣ ಆಂಧ್ರ ಪ್ರದೇಶ ಮತ್ತು ತೆಲಂಗಾಣದವರೊಂದಿಗೆ ಮಾತನಾಡುತ್ತೇನೆ. ಏಕೆಂದರೆ, ಒಂದು ಸಲ Board ನಲ್ಲಿ resolution ಮಾಡಿಕೊಂಡರೆ, ಮುಂದೆ ಯಾವುದೇ ಸಮಸ್ಯೆ ಇರುವುದಿಲ್ಲ. ಅಂತಹ ಒಂದು ಪ್ರಯತ್ನವನ್ನು ಮಾಡುತ್ತಿದ್ದೇವೆ.

**ಶ್ರೀ ಅಲ್ಲಂ ವೀರಭದ್ರಪ್ಪ:–** ಮಾನ್ಯ ಸಭಾಪತಿಯವರೇ, I appreciate their concern. My only doubt is without this balancing reservoir hundreds of TMC of water without anything goes to Andhra Pradesh. ಜಲಾಶಯ ಮಾಡಲು ಆ ರಾಜ್ಯಗಳು ಒಪ್ಪುತ್ತದೆಯೋ, ಇಲ್ಲವೋ ಎನ್ನುವಂಥ ಅನುಮಾನ ಇದೆ. This is my doubt and the Hon'ble Chief Minister has to clear my doubt.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹಿರಿಯರಾಗಿದ್ದು, ಆ ಪ್ರದೇಶಗಳ ಬಗ್ಗೆ ತಿಳಿದುಕೊಂಡಿದ್ದಾರೆ. Andhra Pradesh also wants something there. ಕೆಲವು ವಿಷಯಗಳ ಬಗ್ಗೆ ಇಲ್ಲಿ ಹೇಳುವುದಕ್ಕೆ ಸಾಧ್ಯವಿಲ್ಲವೆಂದು ಈಗಾಗಲೇ ಹೇಳಿದ್ದೇನೆ. ಆ ರಾಜ್ಯಗಳು ಒಪ್ಪುತ್ತಾರೆಯೋ, ಇಲ್ಲವೋ ಎಂದು ಮಾನ್ಯ ಸದಸ್ಯರೆ ಮುನ್ನುಡಿ ಬರೆದರೆ ಆಗುವ ಕೆಲಸವು ಆಗುವುದಿಲ್ಲ. Let us be positive.

**ಶ್ರೀ ಅಲ್ಲಂ ವೀರಭದ್ರಪ್ಪ:-** ಮಾನ್ಯ ಸಭಾಪತಿಯವರೇ, let us be positive but be prepared for the alternative ಎಂದು ಹೇಳಬಯಸುತ್ತೇನೆ. I am just suggesting.

**ಪ್ರಶ್ನೆ ಸಂಖ್ಯೆ 2014**

**ಸಭಾಪತಿಯವರು:-** ಮಾನ್ಯ ತಿಪ್ಪೇಸ್ವಾಮಿಯವರೆ ತಮ್ಮ ಪ್ರಶ್ನೆ ಸಂಖ್ಯೆಯನ್ನು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಗೆ ವರ್ಗಾವಣೆಗೊಳ್ಳಿಸಲಾಗಿದೆ.

## ಪ್ರಶ್ನೆ ಸಂಖ್ಯೆ 2109

## (ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರದಲ್ಲಿ ಇರುವ ಹುಕ್ಕಾ ಬಾರ್, ಡ್ಯಾನ್ಸ್, ಬಾರ್, ಕ್ಯಾಸಿನೋ, ರಿಕ್ರಿಯೇಷನ್ ಕ್ಲಬ್‌ಗಳ ಸಂಖ್ಯೆ ಎಷ್ಟು? ಎಂದು ಪ್ರಶ್ನೆಯನ್ನು ಕೇಳಿದ್ದೇನೆ. ನಮ್ಮ ಯುವ ಪೀಳಿಗೆ, ಮಕ್ಕಳು ಸಾಮಾಜಿಕವಾಗಿ ಯಾವ ರೀತಿ ಹಾಳಾಗಬಹುದು ಅಂತಹ ಎಲ್ಲಾ ಕೇಂದ್ರಗಳು ಈ ಬೆಂಗಳೂರಿನಲ್ಲಿದೆ. ಆದರೆ, ಮಾನ್ಯ ಸಚಿವರು ಬೆಂಗಳೂರು ಪೊಲೀಸ್ ವತಿಯಿಂದ ಹುಕ್ಕಾ ಬಾರ್ ನಡೆಸಲು ಪರವಾನಗಿ ವ್ಯವಸ್ಥೆ ಇರುವುದಿಲ್ಲ ಬಿ.ಬಿ.ಎಂ.ಪಿ. ಯಿಂದ ಟ್ರೇಡ್ ಲೈಸನ್ಸ್ ನೀಡುತ್ತದೆ, 'we have no control' ಎಂದು ಹೇಳಿದ್ದಾರೆ. ಹಾಗಾದರೆ, ಅವರ ಮೇಲೆ ನಿಯಂತ್ರಣ ಇಲ್ಲದೇ ಇರುವಂಥ ಯಾರಾದರೂ ಒಬ್ಬರು ಪೊಲೀಸರನ್ನು ತೋರಿಸಿ ನೋಡೋಣ? ಅವರಿಗೆ ಪೊಲೀಸ್‌ನವರು ಎಷ್ಟರ ಮಟ್ಟಿಗೆ ಹಿಂಸೆ ನೀಡುತ್ತಾರೆ ಎಂದರೆ, ಹೇಳುವುದಕ್ಕೆ ಆಗುವುದಿಲ್ಲ. ಜೊತೆಗೆ ಹುಕ್ಕಾ ಬಾರ್‌ನಲ್ಲಿ ಎಲ್ಲಾ ರೀತಿಯ ಚಟುವಟಿಕೆಯು ನಡೆಯುತ್ತದೆ. ಹುಕ್ಕಾ ಬಾರ್ ಎಂದರೆ, ಹರ್ಬಲ್ ತೆಗೆದುಕೊಳ್ಳುವಂಥದಾಗಿದೆ ಎಂದು ಮಾನ್ಯ ಉಚ್ಛ ನ್ಯಾಯಾಲಯವು ಹೇಳುತ್ತದೆ. ಆದರೆ, ಅಲ್ಲಿ ಹರ್ಬಲ್ ಬಿಟ್ಟು ಗಾಂಜಾ ಮತ್ತು ಇನ್ನಿತರೆ ಎಲ್ಲಾ ಚಟುವಟಿಕೆಯು ನಡೆಯುತ್ತಿವೆ. ಇದನ್ನು ಪೊಲೀಸ್ ಇಲಾಖೆಯವರ ವ್ಯಾಪ್ತಿಗೆ ತೆಗೆದುಕೊಳ್ಳದೇ ಬೇರೆ ಯಾರ ವ್ಯಾಪ್ತಿಗೆ ಬರುತ್ತದೆ. ಬಿ.ಬಿ.ಎಂ.ಪಿ. ಯವರಿಗೆ ವರ್ಗಾವಣೆ ಮಾಡಿದ್ದೀರಿ. ಆದರೆ, ಅಲ್ಲಿ ನಡೆಯುತ್ತಿರುವುದಕ್ಕೆ ಪೂರ್ಣ ಪ್ರಮಾಣದ ಜವಾಬ್ದಾರಿ ಪೊಲೀಸ್ ಇಲಾಖೆಯದಾಗಿದೆ. ಜೊತೆಗೆ ಈಗಾಗಲೇ ಪೊಲೀಸ್ ಕಮೀಷನರ್‌ರವರ ಮುಂದೆಯೇ ಅಕ್ಟೋಬರ್ ಮಾಹೆಯಲ್ಲಿ ಸಮಿತಿ ಮಾಡಿ, ಅವರ ಬಗ್ಗೆ indoor meeting ಮಾಡಿದ್ದೀರಿ.

(ಮುಂದು)

(406) 17.03.2022/11.10/ಎಸ್‌ಕೆ-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪಿ. ಆರ್ ರಮೇಶ್ (ಮುಂದು):-**
ಅವ್ರೊತ್ತಿನ ದಿನ ಹುಕ್ಕಾ ಬಾರ್, ಡ್ಯಾನ್ಸ್ ಬಾರ್ ಬಗ್ಗೆಯೂ ಕೂಡ ಮಾತನಾಡಿದ್ದೀರಿ. ಇದರ ಬಗ್ಗೆ ಕ್ರಮ ಕೂಡ ತೆಗೆದುಕೊಂಡಿಲ್ಲ. ಡ್ಯಾನ್ಸ್ ಬಾರ್ ಇಲ್ಲವೆಂದು ತಾವು ಹೇಳಿದ್ದೀರಿ. ನಾನು ತಮ್ಮನ್ನು ಸಾಯಂಕಾಲ ಕರೆದುಕೊಂಡು ಹೋಗುತ್ತೇನೆ. ಆದರೆ ಈಗ ಅಲ್ಲ.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ಸಚಿವರನ್ನು ಎಲ್ಲಿಗೆ ಕರೆದುಕೊಂಡು ಹೋಗುತ್ತೀರಿ?

**ಶ್ರೀ ಪಿ. ಆರ್ ರಮೇಶ್:-** ಮಾನ್ಯ ಸಚಿವರು ನೀಡಿರುವ ಉತ್ತರದಲ್ಲಿ ಬೆಂಗಳೂರಿನಲ್ಲಿ ಡ್ಯಾನ್ಸ್ ಬಾರ್ ಇಲ್ಲವೆಂದು ಹೇಳಿದ್ದಾರೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ಸಚಿವರಿಗೆ ಬೆಂಗಳೂರು ಬಿಟ್ಟು ಬೇರೆ ಎಲ್ಲಿಗಾದರೂ ಕರೆದುಕೊಂಡು ಹೋಗಿ ಬಿಟ್ಟೀರಿ! ಏಕೆಂದರೆ, ಅವರನ್ನು ನಂಬಿಕೊಂಡಿರುವ ಕುಟುಂಬವಿದೆ.

**ಶ್ರೀ ಪಿ. ಆರ್ ರಮೇಶ್:-** ಅದರ ಬಗ್ಗೆ ಮಾನ್ಯ ಸಚಿವರಿಗೆ concern ಇದೆ. ಅದನ್ನು ನಾನು appreciate ಮಾಡುತ್ತೇನೆ. ಆದರೆ ಇವರು cooperate ಮಾಡುತ್ತಿಲ್ಲ. "ಕಾಸು ಕೊಟ್ಟರಷ್ಟೇ ಪೊಲೀಸ್ ಬಾಸ್" ಒಂದು ವಾರದ ಹಿಂದೆ ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿರುವಂತಹದ್ದು. ಯಾವುದೋ ಒಂದು ಪೊಲೀಸ್ ಸ್ಟೇಷನ್‌ಗೆ posting ಗೆ ಎರಡು ಕೋಟಿ ರೂಪಾಯಿಗಳನ್ನು ಕೊಡಬೇಕಂತೆ. ಅದರ ಬಗ್ಗೆ ನಮಗೆ ಗೊತ್ತಿಲ್ಲ. ಅದರ ಬಗ್ಗೆ ಮಾನ್ಯ ಸಚಿವರಿಗೆ ಗೊತ್ತಿರುತ್ತದೆ. ಅದರ ಬಗ್ಗೆ ನನ್ನ ಕಿವಿಗೆ ಬಿದ್ದಿರುವುದನ್ನು ನಾನು ಹೇಳುತ್ತಿದ್ದೇನೆ. ಈ ಪೊಲೀಸ್ ವ್ಯವಸ್ಥೆಯಲ್ಲಿ ಈ ತರಹ ಕೆಟ್ಟು ಹೋದರೆ, ನಮ್ಮ ಜನರಿಗೆ ಯಾರು ನ್ಯಾಯ ಕೊಡುತ್ತಾರೆಂಬ ಬಗ್ಗೆ ದಯವಿಟ್ಟು, ಹೇಳಿ. ಇಲ್ಲಿ ದಂಧೆಗಳು ನಡೆಯುತ್ತಿದೆ. ಇದರ ಬಗ್ಗೆ ಮಾನ್ಯ ನ್ಯಾಯಾಲಯದಲ್ಲಿ ಕೂಡ ಇದೆ. ಈ ದಂಧೆ ಅಥವಾ real estate ದಂಧೆ ಈ ರೀತಿಯ ದಂಧೆಗಳು ನಡೆಯುತ್ತಿವೆ. ಇದನ್ನು ಯಾರು ಕಡೆಗಣಿಸುತ್ತಿದ್ದಾರೆ? ಅದನ್ನು ನಾವು ಮತ್ತು ನೀವು ಮಾಡಬೇಕು. ಇದನ್ನು ನಾವು ಮಾಡುತ್ತಿಲ್ಲವಲ್ಲ. ಇದು

ಸಂಪೂರ್ಣವಾಗಿ ಹೋಗಬೇಕು. ಈ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಅರಗ ಜ್ಞಾನೇಂದ್ರ:–** ಮಾನ್ಯ ಸಭಾಪತಿಯವರೇ, ಮಾನ್ಯ ಹಿರಿಯ ಸದಸ್ಯರಾದ ಶ್ರೀ ಪಿ.ಆರ್. ರಮೇಶ್‌ರವರ ಕಾಳಜಿಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಹುಕ್ಕಾ ಬಾರ್‌ಗಳಿಗೆ trade license ಅನ್ನು ಬಿ.ಬಿ.ಎಂ.ಪಿ.ಯವರು ಕೊಡುತ್ತಾರೆ. ಅಲ್ಲಿ ಮಾನ್ಯ ನ್ಯಾಯಾಲಯದ ಕೆಲವು ಆದೇಶಗಳು ಕೂಡ ಇವೆ. ಆ ಬಾರ್‌ಗಳಿಗೆ ಪದೇ ಪದೇ ಕಿರುಕುಳ ಕೊಡಬಾರದು ಎನ್ನುವಂತಹ ರೀತಿಯಲ್ಲಿ ಮಾನ್ಯ ನ್ಯಾಯಾಲಯದ ಕೆಲವು ಆದೇಶಗಳಿವೆ. ಇದು ತಮಗೆ ಗೊತ್ತಿದೆ. ಅದು ಬೇರೆ ಎಲ್ಲಕ್ಕಿಂತ Smoking Zone ಎಂದು ಮಾನ್ಯ ನ್ಯಾಯಲಯ ಪರಿಗಣಿಸಿದೆ. ಹಾಗಾಗಿ, ಎಲ್ಲೆಲ್ಲಿ ಹುಕ್ಕಾ ಬಾರ್‌ಗಳನ್ನು raid ಮಾಡಿದ್ದೇವೆಂದು ಉತ್ತರದಲ್ಲಿ ತಿಳಿಸಿದ್ದೇವೆ, ಅದನ್ನು raid ಮಾಡಿದ್ದು, ಏಕೆ ಎಂದು ಹೇಳಿದರೆ, smoking zone ಪ್ರತ್ಯೇಕವಾಗಿಲ್ಲದಿರುವುದಲ್ಲದೆ, ಮಿಶ್ರಣ ಮಾಡಿದ್ದನ್ನು ಮಾರಾಟ ಮಾಡುತ್ತಿರುವ ಬಗ್ಗೆ ಮಾತ್ರ ಪ್ರಕರಣವನ್ನು ದಾಖಲಿಸಿದ್ದೇವೆ. ಇನ್ನೊಂದು ತಾವು ಹೇಳಿರುವಂತೆ, ಹುಕ್ಕಾ ಬಾರ್‌ಗಳನ್ನು ನಡೆಸುವುದರ ಬಗ್ಗೆ ನನಗೆ ಕೆಲವು ಅನುಮಾನಗಳಿವೆ. ಕಳೆದ ತಿಂಗಳು ಮೂರು–ನಾಲ್ಕು ಕಡೆಗಳಲ್ಲಿ CCB (Central Crime Branch) ಯಿಂದ raid ಮಾಡಿರುವ ಬಗ್ಗೆ ಈಗಾಗಲೇ ಹೇಳಿದ್ದೇನೆ. ಇದರಲ್ಲಿ ಏನೇನು ingredients ಇವೆ ಎಂಬ ಬಗ್ಗೆ seize ಮಾಡಿದ್ದೇವೆ. ಅದನ್ನು FSL (Forensic Science Laboratory) ಗೆ ಕೊಟ್ಟಿದ್ದೇವೆ. ಅದರ ವರದಿಯ ಆಧಾರದ ಮೇಲೆ ಅದರೊಳಗೆ ಏನು ಮಿಕ್ಸ್ ಮಾಡುತ್ತಾರೆಂಬುದು ಗೊತ್ತಾಗುತ್ತದೆ. ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಈ ಹುಕ್ಕಾ ಬಾರ್‌ನಲ್ಲಿ ಸಿಗರೇಟ್ ಸೇದುವ ತರಹ ಇರುವಂತಹದ್ದು. ಅದಕ್ಕಿಂತ ಜಾಸ್ತಿ ಏನೂ ಇಲ್ಲ. ಅದಕ್ಕೆ ತೊಂದರೆ ಕೊಡಬಾರದು ಎಂದು ಮಾನ್ಯ ನ್ಯಾಯಾಲಯದ ಆದೇಶಗಳು ಕೂಡ ಇವೆ. ಈಗಾಗಲೇ ಮಾನ್ಯ ಸದಸ್ಯರು ಕೇಳಿರುವಂತೆ, ಸುಮಾರು ೬೮ ಹುಕ್ಕಾ ಬಾರ್‌ಗಳು ಕಾರ್ಯನಿರ್ವಹಿಸುತ್ತಿವೆ. ಸುಮಾರು ೪೯ recreation club ಗಳಿವೆ. Recreation club ಗಳಲ್ಲಿ ಏನೆಂದರೆ, rummy ಆಡಬಹುದು. Snooker ಈ ತರಹದ ಆಟಗಳು ಆಡಬಹುದು ಎಂಬುದು ಇದೆ. ಪೊಲೀಸ್‌ನವರು ಪದೇ ಪದೇ enter ಆಗಬಾರದು ಎಂಬ ಬಗ್ಗೆ ಮಾನ್ಯ ನ್ಯಾಯಾಲಯದ

ಆದೇಶವಿದೆ. ಮಾನ್ಯ ನ್ಯಾಯಾಲಯದ ಆದೇಶಗಳ ಪ್ರಕಾರ ಪೋಲೀಸ್‌ನವರಿಗೆ ನಿರ್ಬಂಧಗಳಿವೆ. ಇವೆಲ್ಲಾ ಇದ್ದಾಗಿಯೂ ಕೂಡ ಪೋಲೀಸ್‌ನವರು risk ತೆಗೆದುಕೊಂಡು, control ಮಾಡುತ್ತಿದ್ದಾರೆ. ಇದರ ಮೇಲೆಯೂ ಕೂಡ ಕಂಟ್ರೋಲ್ ಮಾಡುತ್ತಿದ್ದಾರೆ. ಈ ರೀತಿಯ ಕ್ಲಬ್‌ಗಳಿಂದಾಗಿ ಯುವ ಜನತೆ ಹಾಳಾಗುತ್ತಿದ್ದಾರೆ. ಇವು ಕಾಲೇಜು ಪಕ್ಕದಲ್ಲಿ ಕೂಡ ಇದೆ ಎಂದು ಮಾನ್ಯ ಸದಸ್ಯರು ವಿಶೇಷವಾಗಿ ಹೇಳುತ್ತಿದ್ದಾರೆ. ಆ ಹುಕ್ಕಾ ಬಾರ್‌ಗೆ ವಿದ್ಯಾರ್ಥಿಗಳು ಆಗಾಗ ಹೋಗುತ್ತಿರುತ್ತಾರೆ. ಹೆಣ್ಣು ಮಕ್ಕಳು ಕೂಡ ಹುಕ್ಕಾ ಬಾರ್‌ನಲ್ಲಿ ಕೂರುವಂತಹದ್ದನ್ನು ನೋಡುತ್ತಿದ್ದೇವೆ. ಇದು ನಮಗೆ ಆಶ್ಚರ್ಯವನ್ನು ಕೊಟ್ಟಿದೆ. ಮಾನ್ಯ ಸದಸ್ಯರು  ವಿಶೇಷವಾಗಿ ಹೇಳಿರುವುದರ ಬಗ್ಗೆ ನಾವು ನಿಗಾ ಕೂಡ ಇಟ್ಟಿದ್ದೇವೆ. ಇದರ ಬಗ್ಗೆ ಪೋಲೀಸ್ ಅಧಿಕಾರಿಗಳಿಗೆ ಕರೆದು ಹೇಳಿದ್ದೇವೆ. ಅದರ ಜೊತೆಗೆ Casino ಮತ್ತು Cabaret dance ಬಾರ್‌ಗಳು ಇಲ್ಲ.

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಚಿವರೇ, Casino ಮತ್ತು Cabaret dance ಬಾರ್‌ಗಳಿರುವುದನ್ನು  ತಾವು ಬಂದರೆ, ನಾನು ತೋರಿಸುತ್ತೇನೆ.

**ಶ್ರೀ ಅರಗ ಜ್ಞಾನೇಂದ್ರ:-** ಮಾನ್ಯ ಸದಸ್ಯರೇ, ತಾವು ಅದನ್ನು ತೋರಿಸಿ.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ಸದಸ್ಯರೇ, ಮಾನ್ಯ ಸಚಿವರನ್ನು ಅಲ್ಲಿಗೆ ಏತಕ್ಕೆ ಕರೆದುಕೊಂಡು ಹೋಗುತ್ತೀರಾ?

**ಶ್ರೀ ಪಿ.ಆರ್. ರಮೇಶ್:-** ಇವು ಇರುವ ಬಗ್ಗೆ ನಾನು ತೋರಿಸುತ್ತೇನೆಂದು ಹೇಳಿದ್ದೇನೆಯೇ ಹೊರತು ಕರೆದುಕೊಂಡು ಹೋಗುತ್ತೇನೆ ಎಂದು ಹೇಳಿಲ್ಲ.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ಪಿ.ಆರ್. ರಮೇಶ್‌ರವರು ತುಂಬಾ ಒಳ್ಳೆಯ ಮನುಷ್ಯ ಎಂದು ನಾನು ಮಾನ್ಯ ಬಿ.ಕೆ. ಹರಿಪ್ರಸಾದ್‌ರವರಿಗೆ ಹೇಳಿದ್ದೇನೆ.  Cabaret ಡ್ಯಾನ್ಸ್ ಬಾರ್‌ಗೆ ಮಾನ್ಯ ಸಚಿವರನ್ನು ಕರೆದುಕೊಂಡು ಹೋಗುತ್ತೇನೆಂದು ಹೇಳುತ್ತೀರಲ್ಲ!

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಚಿವರೇ, ಅವರು ಮಹಾಪೌರರಾಗಿದ್ದರು.

**ಶ್ರೀ ಬಿ.ಕೆ. ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):–** ಅದರ ಬಗ್ಗೆ ಪೊಲೀಸ್ ಇಲಾಖೆಯವರು ಪರವಾನಿಗೆಯನ್ನು ಕೊಡುವುದಿಲ್ಲ. ಅದಕ್ಕೆ ಪರವಾನಿಗೆಯನ್ನು ಕಾರ್ಪೋರೇಷನ್‌ನವರು ಕೊಡುತ್ತಾರೆ. ಅದಕ್ಕೆ ಅದರಲ್ಲಿ ಇಲ್ಲ ಎಂದು ಹೇಳುತ್ತಿದ್ದಾರೆ. ಮಾನ್ಯ ಪಿ.ಆರ್. ರಮೇಶ್‌ರವರು ಮಹಾಪೌರರು. ಬೆಂಗಳೂರಿನ ಗಲ್ಲಿ–ಗಲ್ಲಿಯಲ್ಲಿ ಏನು ನಡೆಯುತ್ತಿದೆ ಎಂಬುದರ ಬಗ್ಗೆ ಸಂಪೂರ್ಣವಾವ ಮಾಹಿತಿ ಮಾನ್ಯ ಸದಸ್ಯರಿಗೆ ಗೊತ್ತಿರುತ್ತದೆ.

**ಶ್ರೀ ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾನ್ಯ ಸಚಿವರೇ, ಅದಕ್ಕೆ ನನ್ನದೊಂದು addition ಇದೆ. ಈ ಹುಕ್ಕಾ ಬಾರ್‌ಗಳ ಬಗ್ಗೆ ದಯವಿಟ್ಟು, ಗಮನಿಸಬೇಕು. ಕೆಲವು ಹುಕ್ಕಾ ಬಾರ್‌ಗಳಲ್ಲಿ ಡ್ರಗ್ಸ್‌ಗಳು ಕೂಡ supply ಆಗುತ್ತಿದೆ ಎಂಬ ಮಾಹಿತಿ ಕೂಡ ಇದೆ. ದಯವಿಟ್ಟು, ವಿದ್ಯಾರ್ಥಿಗಳು ಅಲ್ಲಿಗೆ ಹೋಗದೇ ಇರುವಂತೆ ನಿಯಮವನ್ನು ಕಟ್ಟುನಿಟ್ಟಾಗಿ ಜಾರಿ ಮಾಡುವಂತೆ ನಿರ್ದಾಕ್ಷಿಣ್ಯವಾದ ಕ್ರಮಗಳನ್ನು ಮಾನ್ಯ ಸಚಿವರು ತೆಗೆದುಕೊಳ್ಳಬೇಕು.

**ಸಭಾಪತಿಯವರು:–** ಮಾನ್ಯ ಪಿ.ಆರ್. ರಮೇಶ್‌ರವರೇ, ತಾವು ಮಾನ್ಯ ಸಚಿವರಿಗೆ ಕೇಳಬಿಡಿ.

**ಶ್ರೀ ಪಿ.ಆರ್. ರಮೇಶ್:–** ಮಾನ್ಯ ಸಭಾಪತಿಯವರೇ, Recreation ಎಂದರೆ ಮನೋರಂಜನೆ ಮಾಡುವಂತಹ ಆಟಗಳು. ಅಲ್ಲಿ Carrom board or rummy or billiards ನ್ನು ಆಡುತ್ತಾರೆ. ಇವು ಒಳ್ಳೆಯ ಆಟಗಳು. ಅದರಲ್ಲಿ ಜೂಜಿನ ವ್ಯವಹಾರವಾಗಿದೆ. ನಾನು ಅದನ್ನು ನೋಡಿಲ್ಲ. ನನಗೆ ಇಸ್ಪೀಟು ಆಡುವುದಕ್ಕೆ ಬರುವುದಿಲ್ಲ ಎಂದು ನಾನು frank ಆಗಿ ಹೇಳಬೇಕಲ್ಲ. ಉಪ್ಪಾರಪೇಟೆ ಪೊಲೀಸ್ ಸ್ಟೇಷನ್ ವ್ಯಾಪ್ತಿಯಲ್ಲಿ ನನಗೆ ಬಂದಿರುವ ಮಾಹಿತಿ ಪ್ರಕಾರ ಒಂದು ದಿನಕ್ಕೆ "ಕಿಟ್ಟಿ" ಎಂದು ಸುಮಾರು ಐದು ಲಕ್ಷ ರೂಪಾಯಿಗಳಷ್ಟು ಹಣ ಅವರಿಗೆ ಕಲೆಕ್ಟ್ ಆಗುತ್ತದೆ. ಇದರಲ್ಲಿ ಎಷ್ಟು ಪ್ರಮಾಣದಲ್ಲಿ ಜೂಜು ಮತ್ತಿತರ ವ್ಯವಹಾರಗಳು ನಡೆಯುತ್ತವೆ ಎನ್ನುವುದನ್ನು ತಾವು ವಿಚಾರ ಮಾಡಬೇಕು. ಇಲ್ಲಿಗೆ ಬೇರೆ ಬೇರೆ ರಾಜ್ಯಗಳಿಂದ ಬಂದು ಆಡುತ್ತಾರೆ. ಇಲ್ಲಿ recreation ಎನ್ನುವುದಕ್ಕಿಂತ, ಇದು ಸಂಪೂರ್ಣವಾಗಿ ಜೂಜು ಆಟದ ವ್ಯವಹಾರವೆನಿಸಿಕೊಳ್ಳುತ್ತದೆ.

**ಸಭಾಪತಿಯವರು:–** ಮಾನ್ಯ ರಮೇಶ್‌ರವರೇ, ಅದರ ಬಗ್ಗೆ ತಾವು ಬರೆದುಕೊಡಿ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಎಲ್ಲಾ ಅಕ್ರಮಗಳೆಲ್ಲಾ, ನೂರು ವರ್ಷ ದಾಟಿ...

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ತಮ್ಮ ಮಾತನ್ನು ಸಾಕು ಮಾಡಿ.

**ಶ್ರೀ ಅರಗ ಜ್ಞಾನೇಂದ್ರ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಇಂತಹ ಕಡೆ ಡ್ಯಾನ್ಸ್ ಬಾರ್, ಕ್ಯಾಸಿನೋ ಇದೆ ಎಂಬ ಬಗ್ಗೆ ಮಾನ್ಯ ಸದಸ್ಯರು ಮಾಹಿತಿಯನ್ನು ಕೊಟ್ಟರೆ, ಅದನ್ನು ಖಂಡಿತವಾಗಿಯೂ ನಾನು ಪರಿಶೀಲನೆ ಮಾಡುತ್ತೇನೆ, ಎಲ್ಲಾ ಕಡೆಗಳಲ್ಲಿ ಸ್ಟಾಪ್ ಆಗಿದೆ. ತಾವು ಹೇಳಿದ ಪ್ರಕಾರ ಮತ್ತು ನನ್ನ ಮಾಹಿತಿಯ ಪ್ರಕಾರ ಉಪ್ಪಾರಪೇಟೆ ಪೋಲೀಸ್ ಸ್ಟೇಷನ್ ವ್ಯಾಪ್ತಿಯಲ್ಲಿ ಒಂದೆರಡು ಬಾರ್‌ಗಳಲ್ಲಿ ಡ್ಯಾನ್ಸ್ ಬಾರ್ ಇತ್ತು. ಅದನ್ನು ಕೂಡ raid ಮಾಡಿಸಿದ್ದೇವೆ. ಕೆಲವು ಜನರನ್ನು ಬಂಧಿಸಿ, ಪೋಲೀಸ್ ಸ್ಟೇಷನ್‌ನಲ್ಲಿಟ್ಟಿದ್ದಾರೆ. ಅಲ್ಲಿದ್ದಂತಹ ಪೋಲೀಸ್ ಅಧಿಕಾರಿಗಳನ್ನು ಎತ್ತಂಗಡಿ ಮಾಡಿದ್ದೇವೆ. ಇದೆಲ್ಲವೂ ಕೂಡ ಮಾಡುತ್ತಿದ್ದೇವೆ. ನನ್ನ ಗಮನಕ್ಕೆ ಏನಾದರೂ ಮಾಹಿತಿ ಬಂದರೆ, ಅವರನ್ನು ಬಿಡುವುದಿಲ್ಲ. ಈ ವಿಚಾರದಲ್ಲಿ ಯಾವುದೇ ರಾಜಿಯೂ ಕೂಡ ಇಲ್ಲ.

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಪ್ರಶ್ನೆ ಸಂಖ್ಯೆ 2063**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ನಗದು ರಹಿತ ಚಿಕಿತ್ಸೆಯನ್ನು ರಾಜ್ಯ ಸರ್ಕಾರಿ ನೌಕರರಿಗೆ ಕೊಡುವಂತಹ "ಜ್ಯೋತಿ ಸಂಜೀವಿನಿ" ಯೋಜನೆಯಡಿಯಲ್ಲಿ ಯಾವ ಕಾಯಿಲೆಗೆ ಕೊಡಬೇಕೆಂಬ ಬಗ್ಗೆ ಉತ್ತರದಲ್ಲಿ ನಮೂದಿಸಿದ್ದಾರೆ. ಇವತ್ತು ನಿವೃತ್ತಿ ಹೊಂದಿದಂತಹ ನೌಕರರಿಗೆ ಈ "ಜ್ಯೋತಿ ಸಂಜೀವಿನಿ" ಯೋಜನೆಯನ್ನು ಮುಂದುವರೆಸುವುದಿಲ್ಲ ಎಂದು ಉತ್ತರದಲ್ಲಿ ನಮೂದಿಸಿದ್ದಾರೆ. ಆರವತ್ತು ವರ್ಷ ಹೊಂದಿದಂತಹ ನೌಕರರಿಗೆ ಆರೋಗ್ಯದ ವಿಮೆ ಬೇಕು ಎನ್ನುವುದಾದರೆ, ಅವರು ವಿಮೆಯನ್ನು ತೆಗೆದುಕೊಳ್ಳುವುದಕ್ಕೆ ಕಷ್ಟವಾಗುತ್ತದೆ. ವಿಮೆಯ premium ಬಹಳ ದೊಡ್ಡ ಪ್ರಮಾಣದಲ್ಲಿರುತ್ತದೆ. ಅವರಿಗೆ ಆ ವಿಮೆ ಸಿಕ್ಕಿದರೂ waiting period ಇರುತ್ತದೆ. ರಾಜ್ಯ ಸರ್ಕಾರಿ ನೌಕರರಿಗೆ ಯಾವ ವಯಸ್ಸಿನಲ್ಲಿದ್ದರೂ ಕಾಯಿಲೆಗೆ ಚಿಕಿತ್ಸೆ ಕೊಡುವಂತಹ ಈ ವಿಮೆಯ ಅವಶ್ಯಕತೆ ಯಾವ ಸಮಯದಲ್ಲಿ ಇದೆಯೋ, ಆ ಸಮಯದಲ್ಲಿ ಅವರಿಗೆ ವಿಮೆ ಇಲ್ಲದಂತೆ ಆಗುತ್ತದೆ. ಅವರ ಸರ್ಕಾರಿ ಸಂಬಳದಲ್ಲಿ ಶೇ.1 ರಷ್ಟನ್ನು ಈ ಒಂದು ವಿಮೆಯ premium ನಂತೆ ಕೊಡುತ್ತಿದ್ದಾರೆ. ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ವಿನಂತಿ ಮಾಡುವುದೇನೆಂದರೆ, ಇದು ಸರ್ಕಾರಕ್ಕೆ ಹೊರೆಯಾಗುವುದಿಲ್ಲ. ಏಕೆಂದರೆ ಅವರ ಮಕ್ಕಳೆಲ್ಲಾ ಐಟಿ-ಬಿಟಿ ನಲ್ಲಿ ಇರುತ್ತಾರೆ. ಅವರಿಗೆ ಅವರ ಕಂಪನಿಯಿಂದಲೇ insurance ಅನ್ನು claim ಮಾಡಿ, ತಂದೆ-ತಾಯಿಗೆ ಕೊಡುತ್ತಾರೆ. ಯಾರಿಗೆ ಅಂತಹದ್ದು ಇಲ್ಲ, at least, ಅವರ ಪಿಂಚಣಿಯಿಂದ ಶೇಕಡ 1 ರಷ್ಟು ತೆಗೆದುಕೊಂಡು ಹೋದರೆ, ಅವರಿಗೆ ಆರವತ್ತರ ನಂತರ ಇದರ ಅವಶ್ಯಕತೆ ಬಹಳವಾಗಿ ಇರುತ್ತದೆ. ನಾನು ವಿನಂತಿ ಮಾಡುವುದೇನೆಂದರೆ, ನಿವೃತ್ತಿ ನಂತರ ಅವರ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವಂತಹ ನಿಲುವಿನ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ವಿವರಣೆ ನೀಡಬೇಕೆಂದು ನಾನು ತಮ್ಮ ಮೂಲಕ ವಿನಂತಿಯನ್ನು ಮಾಡುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಸರ್ಕಾರಿ ನೌಕರರ ಸಲುವಾಗಿ "ಜ್ಯೋತಿ ಸಂಜೀವಿನಿ" ಎನ್ನುವಂತಹ ಕಾರ್ಯಕ್ರಮ ಎನ್ನುವಂತಹದ್ದು ಇದೆ. ಇದು ಅವರ ನೌಕರರ

ಅವಲಂಬಿತ ಕುಟುಂಬದ ಸದಸ್ಯರಿಗೆ ಕೆಲವು ಮಾರಣಾಂತಿಕ ಕಾಯಿಲೆಗೆ ಇದೆ. ಅಂದರೆ ಹೃದಯ ರೋಗ, ನರರೋಗ, ಕ್ಯಾನ್ಸರ್, ಮೂತ್ರಪಿಂಡ ರೋಗ, ಸುಟ್ಟಗಾಯ ಇಂತಹವುಗಳಿಗೆ ಮಾತ್ರ ಇದೆ. ಮಿಕ್ಕಿದ್ದೆಲ್ಲವೂ ಕೂಡ regular ಆಗಿ ನಿವೃತ್ತಿ ಹೊಂದಿದವರು ಹೇಗೆ ತೆಗೆದುಕೊಳ್ಳುತ್ತಾರೋ, ಹಾಗೆಯೇ ತೆಗೆದುಕೊಳ್ಳುತ್ತಾರೆ. ಎಲ್ಲಾ ತರಹದ ರೋಗಗಳಿಗೆ ಅನ್ವಯವಾಗುವಂತೆ ಈ ಯೋಜನೆಯನ್ನು ಮಾಡಬೇಕೋ ಅಥವಾ ಬೇಡವೋ ಎನ್ನುವಂತಹ ಚಿಂತನೆಯಲ್ಲಿ ನಾವಿದ್ದೇವೆ.

(ಮುಂದು)

(407) 17-03-2022 11.20 ಟಿಸಿಹೆಚ್-ಕೆಎಸ್ (ಸಭಾಪತಿಯರವರ ಉಪಸ್ಥಿತಿ)

**ಶ್ರೀ ಬಸವರಾಜ ಬೊಮ್ಮಾಯಿ (ಮುಂದು)**:-

ಏಕೆಂದರೆ ಕೆಲವು ಸೀರಿಯಸ್ ರೋಗಗಳಿಗೆ concentrate ಮಾಡಿ, ಅವರಿಗೆ ಯಾವುದೇ ತೊಂದರೆಯಾಗದಂತೆ ಹಾಗೂ without making any payment to hospitals. Cashless transaction ನೇರವಾಗಿ ಆಸ್ಪತ್ರೆಗೆ ಜಮಾ ಮಾಡಿ ಅದರಿಂದ ಅನುಕೂಲವಾಗಲಿ ಎಂದು ಮಾಡಿದ್ದೇವೆ. ಏಕೆಂದರೆ ಅದು ದೊಡ್ಡ payment. ಇನ್ನು ಮಾಮೂಲಿಯಾಗಿರುವ ಕಾಯಿಲೆಗಳಿಗೆ ಅವರೇ ಕ್ಲೈಂ ಮಾಡುವುದೆಲ್ಲಾ ಇದೆ. ಇದನ್ನು ಎಲ್ಲಾ ರೋಗಗಳಿಗೂ ವಿಸ್ತರಣೆ ಮಾಡಬೇಕೋ, ಬೇಡವೋ ಎಂದು ಚಿಂತನೆಯಲ್ಲಿದ್ದೇವೆ. ಆ ಸಂದರ್ಭದಲ್ಲಿ ಇದನ್ನು ನಿವೃತ್ತ ಅಧಿಕಾರಿ/ನೌಕರರಿಗೂ ಕೂಡ ವಿಸ್ತರಿಸಬೇಕು ಎನ್ನುವಂಥ ತೀರ್ಮಾನವನ್ನು ನಾವು ಮಾಡುತ್ತೇವೆ.

**ಡಾ.ಕೆ.ಗೋವಿಂದರಾಜು:-** ಮಾನ್ಯ ಸಭಾಪತಿಯವರೇ, ನನ್ನ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ.2049ನ್ನು ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುವುದಕ್ಕೆ ಬಯಸುತ್ತಿದ್ದೇನೆ. ನನಗೆ ಉತ್ತರ ಬಂದಿಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ನಾನು ಈ ಪ್ರಶ್ನೆಗೆ ಕಾಲಾವಕಾಶ ಕೇಳಿದ್ದೇನೆ.

**ಸಭಾಪತಿಯವರು:–** ಡಾ.ಕೆ.ಗೋವಿಂದರಾಜ್ ರವರೇ, ಮಾನ್ಯ ಮುಖ್ಯಮಂತ್ರಿಗಳು ನಿಮ್ಮ ಪ್ರಶ್ನೆಗೆ ಸಮಯ ಕೇಳಿದ್ದಾರೆ. ಮುಂದಿನ ವಾರ ಉತ್ತರ ಕೊಡುತ್ತಾರೆ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಡಾ.ಕೆ.ಗೋವಿಂದರಾಜ್ ರವರ ಪ್ರಶ್ನೆಗೆ ಮುಂದಿನವಾರ ಉತ್ತರ ಕೊಡಲಾಗುವುದು.

**ಪ್ರಶ್ನೆ ಸಂಖ್ಯೆ.2054**

**(ಉತ್ತರ ಲಗತ್ತಿಸಿದೆ)**

**ಶ್ರೀ ವೈ.ಎಂ.ಸತೀಶ್:-** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಸಚಿವರಿಗೆ ಮನವಿ ಮಾಡುತ್ತಿದ್ದೇನೆ. ಅವರಿಗೂ ಈ ಸಂಬಂಧ ಲೆಟರ್ ಕೊಟ್ಟಿದ್ದೆನು. ಸನ್ಮಾನ್ಯ ಮುಖ್ಯಮಂತ್ರಿಯವರಿಗೂ ಕೂಡ ಲೆಟರ್ ಕೊಟ್ಟಿದ್ದೆನು. ತಂಬ್ರಹಳ್ಳಿ Phase-1 project execute ಆಗಿದೆ. ತಂಬ್ರಹಳ್ಳಿ Phase-2 project ಗೆ 1400 ಎಕರೆ ಲಿಫ್ಟ್ ಇರಿಗೇಷನ್‌ಗೆ DPR (Detailed Project Report) ರೆಡಿಯಾಗಿದೆ. ಆದರೆ ಅದಕ್ಕೆ financial approval ಕೊಟ್ಟಿಲ್ಲ. ಮತ್ತೆ ಇದರ ಜೊತೆಗೆ ಇದರ ಪಕ್ಕದ ತಾಲ್ಲೂಕು ಹಡಗಲಿಯಲ್ಲೂ ಕೂಡ ತಲಗಲ್ ಕರೆಗೂ ನೀರು ತುಂಬಿಸುವಂಥ ಯೋಜನೆ ಇದೆ. ಅದು ಕೂಡ DPR ರೆಡಿಯಾಗಿದೆ. ಅದಕ್ಕೂ ಕೂಡ ಮಾನ್ಯ ಸಚಿವರಿಗೆ ಹಾಗೂ ಸನ್ಮಾನ್ಯ ಮುಖ್ಯಮಂತ್ರಿಯವರಿಗೂ ಕೂಡ ಮನವಿ ಕೊಟ್ಟಿದ್ದೆನು. ಈಗ ನನ್ನ ರಿಕ್ವೆಸ್ಟ್ ಏನೆಂದರೆ, ತಾವು ಇದಕ್ಕೆ financial approval ಇಲ್ಲವೆಂದು ಹೇಳಿದ್ದೀರಿ. ತಾವು ನಮಗೆ ಒಂದು ಅನುಮತಿ ಕೊಟ್ಟರೆ, ಅಲ್ಲಿಂದ DMF (District Mineral Foundation) fund ಹಾಗೂ KKRDB (Kalyana Karnataka Regional Development Board) ನಿಂದ ಈ ಪ್ರಾಜೆಕ್ಟ್ execute ಮಾಡುವುದಕ್ಕೆ ಫಂಡ್ಸ್ ಇದೆಯೋ, ಇಲ್ಲವೋ ಎಂದು ನಾನು ಡಿ.ಸಿ.ಯವರ ಹತ್ತಿರ ಚರ್ಚೆ ಮಾಡಿ ಇದನ್ನು execute ಮಾಡುವುದಕ್ಕೆ ಪ್ರಯತ್ನಪಡುತ್ತೇವೆ. ಏಕೆಂದರೆ ಇದು 1976ರಿಂದ ಪೆಂಡಿಂಗ್ ಇದೆ. ಆಮೇಲೆ ವಿಶೇಷಗಾಗಿ ತಂಬ್ರಹಳ್ಳಿ ಇಶ್ಯೂನಲ್ಲಿ ಜನ ಒಂದು ಹೋರಾಟ ಸಮಿತಿಯನ್ನು ಮಾಡಿಕೊಂಡು, ಅಲ್ಲಿ ಹಲವಾರು ಬಾರಿ ಪ್ರತಿಭಟನೆಗಳನ್ನೂ ಕೂಡ ಮಾಡಿದ್ದಾರೆ. ಆಮೇಲೆ ತಲಗಲ್ ಕರೆಯಲ್ಲೂ ಕೂಡ ಪ್ರತಿಭಟನೆಗಳನ್ನು ಮಾಡಿದ್ದಾರೆ. ಆದ್ದರಿಂದ ಈಗ ನನ್ನ ಮನವಿ ಏನೆಂದರೆ, ಸಾಧ್ಯವಾದರೆ ಮುಂದಿನ financial year ನಲ್ಲಿ ಈ ಎರಡೂ ಪ್ರಾಜೆಕ್ಟ್‌ಗೆ ತಾವು ಅಪ್ರೂವಲ್ ಕೊಡಿಸಿ, ಅದನ್ನು complete ಮಾಡಿ ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ಮನವಿ ಮಾಡುತ್ತಿದ್ದೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಇಲ್ಲಿ ಎರಡು issue involve ಆಗಿದೆ. ಮೊದಲನೆಯದಾಗಿ financial approval ಕೊಡುವುದು. ಎರಡನೆಯದು ಟೆಕ್ನಿಕಲ್ ಸಮಸ್ಯೆ ಇದೆ. ನಾವು ಹಳೆಯ

ಪ್ರಾಜೆಕ್ಟ್ 3000 ಎಕರೆಗೆ ನೀರಾವರಿ ಮಾಡುತ್ತೇವೆಂದು ಪ್ರಾಜೆಕ್ಟ್ ಮಾಡಿಕೊಂಡು ನೀರು ಕೊಟ್ಟುಬಿಟ್ಟೆವು. ಅದರಲ್ಲಿ 1600 ಎಕರೆಗೆ ಮಾತ್ರ ನೀರು ಹೋಗುತ್ತಿದೆ. ಇನ್ನು 1400 ಎಕರೆಗೆ habitation ಆಗಿದೆ, ಎಪಿಎಂಸಿ ಎಲ್ಲಾ ಆಗಿದೆ. ಅದನ್ನು ಅಲ್ಲಿಂದ ಡಿಲೀಟ್ ಮಾಡಿಬಿಟ್ಟು, another area ಗೆ ನೀರು ಕೊಡಬೇಕೆಂದು ಪ್ರಪೋಸಲ್ ತಂದಿದ್ದರು. 1400 ಎಕರೆ ಅಚ್ಚುಕಟ್ಟು ಪ್ರದೇಶವನ್ನು ಏಕಾಏಕಿ ರದ್ದುಪಡಿಸುವುದಕ್ಕೆ ನಮಗೆ ಯಾರಪ್ಪಾ ಅಧಿಕಾರ ಕೊಟ್ಟಿದ್ದಾರೆ, ತಹಸೀಲ್ದಾರ್‌ರವರಿಂದ consent, ಲೆಟರ್ ಎಲ್ಲಾ ಬರೆಸಿಕೊಂಡು ಬನ್ನಿ. ನಾಳೆ ದಿವಸ ಆ ಏರಿಯಾದವರು, it is our right, ನಮ್ಮನ್ನು ಆ ಪ್ರಾಜೆಕ್ಟ್‌ನಲ್ಲಿ ಸೇರಿಸಿಕೊಂಡಿದ್ದಾರೆ, ಏಕೆ ನೀರು ನಿಲ್ಲಿಸಿದ್ದೀರಿ ಎಂದರೆ ಅದಕ್ಕೆ ನಾನು ಉತ್ತರ ಹೇಳಬೇಕಾಗುತ್ತದೆ ಎಂದು ಹೇಳಿದೆನು. ಮಾನ್ಯ ವೈ.ಎಂ.ಸತೀಶ್‌ರವರೇ, ಮತ್ತೊಂದು ಬಾರಿ ಪರಿಶೀಲನೆ ಮಾಡುವುದಕ್ಕೆ ಹೇಳಿರುವುದು ನಿಜ. We are deleting 1400 acres of land area from the sanctioned achkut. ಅದು ಅಷ್ಟು ಸುಲಭ ಇಲ್ಲ. ನಾಳೆ ದಿವಸ ಅವರು ಕೋರ್ಟ್‌ಗೆ ಹೋದರೆ, they may approach the Court claiming their right to water. Because it is their established right. ಅದನ್ನು ಹೇಗೆ ಬಿಟ್ಟಿದ್ದೀರಿ? ಯಾವುದಾದರೂ ಒಂದು ತಾಲ್ಲೂಕಿನಲ್ಲಿ 1400 ಎಕರೆ habitation ಬರುವುದಕ್ಕೆ ಸಾಧ್ಯವೇ? ಇಂತಹವುಗಳನ್ನೆಲ್ಲಾ ನನ್ನ ಹತ್ತಿರ ತರಬೇಡಿ. ಏಕೆಂದರೆ ನನ್ನ ಹತ್ತಿರ ಲಾ ಖಾತೆ ಕೂಡ ಇದೆ. ಇಂತಹವುಗಳನ್ನೆಲ್ಲಾ ಮಾಡುವುದಕ್ಕೆ ಆಗುವುದಿಲ್ಲ ಎಂದಿದ್ದಕ್ಕೆ ಸ್ವಲ್ಪ delay ಆಗಿದೆ. ನಾವು availability of water ನ್ನು ನೋಡುತ್ತೇವೆ. ಆ 1400 ಎಕರೆ ಪ್ರದೇಶಕ್ಕೆ ನೀರು ಕೊಡುವುದು ತಪ್ಪಿದರೆ, ಅಲ್ಲಿಗೆ ನೀರು ಕೊಡುವ ಅಗತ್ಯತೆ ಇಲ್ಲದಿದ್ದರೆ ನಾವು ಹೊಸ ಪ್ರಾಜೆಕ್ಟ್‌ನ್ನು ಅಪ್ರೂವ್ ಮಾಡುತ್ತೇವೆ. ಇಲ್ಲದಿದ್ದರೆ ನಮ್ಮ ಹತ್ತಿರ ಇರುವಂಥ ನೀರು ಆ 1400 ಎಕರೆ ಪ್ರದೇಶಕ್ಕೆ ಸಾಕಾಗುವುದಿಲ್ಲ. ಹೊಸ ಏರಿಯಾವನ್ನು DPR ಸಿದ್ಧಪಡಿಸಿ, ಅಲ್ಲೂ ಕೂಡ ಕಮಿಟ್ ಆಗುವುದು ನಮಗೆ ಅಷ್ಟು ಸುಲಭ ಇಲ್ಲ. For these two reasons, ಇದನ್ನು ನಾನೇ hold ಮಾಡಿದ್ದೇನೆ. ಮಾಹಿತಿ ಬಂದ ಮೇಲೆ, if it is because of finance, certainly financial approval will be given in this regard. ಈ ಟೆಕ್ನಿಕಲ್ ಪ್ರಾಬ್ಲಮ್ಸ್ solve ಆಗಬೇಕು.

**ಪ್ರಶ್ನೆ ಸಂಖ್ಯೆ.2062**

**(ಉತ್ತರ ಲಗತ್ತಿಸಿದೆ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಕೊಟ್ಟಿರತಕ್ಕಂಥ ಉತ್ತರ ಸಿಕ್ಕಿದೆ. ಕರ್ನಾಟಕ ರಾಜ್ಯ ಸರ್ಕಾರದ 38 ಇಲಾಖೆಗಳಲ್ಲಿ 7,68,975 ಹುದ್ದೆಗಳಿವೆ. ಈ ಬಾಬ್ತು 2,52,902 ಹುದ್ದೆಗಳು ಖಾಲಿ ಇವೆ. ಬಹಳಷ್ಟು ನೌಕರರು ಸುಮಾರು 2 ರಿಂದ 3 ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅದರಲ್ಲೂ ಗ್ರಾಮ ಪಂಚಾಯಿತಿ ಪಿಡಿಓಗಳ ಪರಿಸ್ಥಿತಿಯಂತು ಹೇಳತೀರದು. ಒಬ್ಬೊಬ್ಬ ಪಿಡಿಓಗೆ 2 ರಿಂದ 3 ಗ್ರಾಮ ಪಂಚಾಯಿತಿಗಳ ಚಾರ್ಜ್ ಕೊಟ್ಟಿರತಕ್ಕಂಥ ಪರಿಸ್ಥಿತಿ ಇದೆ. ಇನ್ನು ವಿಶೇಷವಾಗಿ ನಮ್ಮ ಅನುದಾನಿತ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ದಿನಾಂಕ 31.12.2015ಕ್ಕೆ ನಿಂತುಹೋಗಿದೆ. ಈ ಮುಂಚೆ ನಿವೃತ್ತಿಯಾದ ಕೂಡಲೇ ಆ ಹುದ್ದೆಗಳನ್ನು ತುಂಬಿಕೊಳ್ಳುವುದಕ್ಕೆ ಅನುಮತಿ ಕೊಟ್ಟು, ಪಾಠ ಮಾಡುವುದಕ್ಕೆ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುತ್ತಿದ್ದರು. ಮುಂಚೆ ಆಯಾ ಹುದ್ದೆಗಳು ಖಾಲಿಯಾದ ತಕ್ಷಣವೇ ಆರ್ಥಿಕ ಇಲಾಖೆಯಿಂದ ಅನುಮತಿಯನ್ನು ಪಡೆದುಕೊಳ್ಳುತ್ತಿದ್ದೆವು. ಆದರೆ ಈಗ 7 ವರ್ಷಗಳು ಕಳೆದಿದೆ. ನಾವು ಈಗ 2022ನೇ ಸಾಲಿನಲ್ಲಿದ್ದೇವೆ. ದಿನಾಂಕ 31.12.2015ರ ನಂತರ ನಿವೃತ್ತಿಯಾದಂಥ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳುವುದಕ್ಕೆ ಅನುಮತಿಯೇ ನೀಡಿಲ್ಲ. ಸರ್ಕಾರ ಮುಂದಿನ ವರ್ಷದಿಂದ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣಕ್ಕೆ ಹೊಸ ಶಿಕ್ಷಣ ನೀತಿಯನ್ನು ಜಾರಿಗೆ ತರುತ್ತಿದೆ. ನಾವು ಶಿಕ್ಷಕರಿಂದ ಆ ಮಕ್ಕಳಿಗೆ ಪಾಠ ಮಾಡಿಸಬೇಕಲ್ಲವೇ? ಆದ್ದರಿಂದ ದಯಮಾಡಿ ಶಿಕ್ಷಣ ಇಲಾಖೆ ಮೇಲೆ ಇರತಕ್ಕಂಥ ಆರ್ಥಿಕ ಮಿತಿಯನ್ನು ತಾವು ತೆಗೆಯಬೇಕು. ಈಗ ನಾವು ಕಾಲಕಾಲಕ್ಕೆ ಗಣಿತ ವಿಷಯದ ಪಾಠವು ಹೇಳಬೇಕು, ವಿಜ್ಞಾನ ವಿಷಯದ ಬಗ್ಗೆಯೂ ಕೂಡ ಪಾಠ ಹೇಳಬೇಕು. ಆ ಮಕ್ಕಳು ಸರಿಯಾಗಿ ಓದಿಕೊಂಡು ಪಿಯುಸಿ, ಇಂಜಿನಿಯರಿಂಗ್ ಮತ್ತು ಮೆಡಿಕಲ್‌ಗೆ ಹೋಗಬೇಕು. ತಾವು ದಯಮಾಡಿ ಈ ಶಿಕ್ಷಣ ಇಲಾಖೆಯ ಮೇಲಿನ ನಿರ್ಬಂಧವನ್ನು ತೆಗೆದು, ಆರ್ಥಿಕ ಮಿತವ್ಯಯಕ್ಕೆ ಆದೇಶ ಮಾಡಿರುವುದು ಏನಿದೆ ಅದನ್ನು lift ಮಾಡುವಂಥ ಘೋಷಣೆಯನ್ನು ಇವತ್ತು ಮಾಡಿದರೆ, ಬಹುಶಃ ಶಿಕ್ಷಣ ಇಲಾಖೆಯಲ್ಲಿ ಸುಧಾರಣೆ ಮಾಡಿಕೊಂಡು ಹೊಸ ಶಿಕ್ಷಣ ನೀತಿಯನ್ನು ಜಾರಿಗೆ ತರಲು ಅನುಕೂಲವಾಗುತ್ತದೆಂದು ತಮ್ಮ ಮೂಲಕ ಮಾನ್ಯ ಮುಖ್ಯಂತ್ರಿಗಳಲ್ಲಿ ಆಗ್ರಹ ಮಾಡುತ್ತಿದ್ದೇನೆ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರು ಈ ಪ್ರಶ್ನೆ ಕೇಳಿದಾಗಲೇ ನನಗೆ ಗೊತ್ತಾಗಿದ್ದು. ಏನಪ್ಪಾ, ಶ್ರೀ ಕೆ.ಟಿ.ಶ್ರೀಕಂಠೇಗೌಡರವರಿಗೆ ಇಡೀ ಕರ್ನಾಟಕ ನೌಕರರ ಬಗ್ಗೆ ಬಹಳ ಪ್ರೀತಿ ಬಂದಿದೆ. ಇದರ ಒಳಹೊಡೆತ ಏನೆಂದು ನನಗೆ ಗೊತ್ತು. Hon'ble member is fighting for a good cause. ಅವರು ಮುಂದೆ ಚುನಾವಣೆಗೆ ನಿಲ್ಲಲಿ ಅಥವಾ ನಿಲ್ಲದೇ ಇರಲಿ. ಅವರು ಇದೇ ಉದ್ದೇಶಕ್ಕೆ ಕೇಳುತ್ತಿದ್ದಾರೆ ಎಂದು ನನಗೆ ಗೊತ್ತಿತ್ತು. ಮಾನ್ಯ ಸಭಾಪತಿಯವರೇ, 2,58,709 ಹುದ್ದೆಗಳು ಖಾಲಿ ಇದೆ. ಅದರಲ್ಲಿ ಗುತ್ತಿಗೆ ಆಧಾರದ ಮೇಲೆ 91,043 ಹುದ್ದೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. 91,043 ಹುದ್ದೆಗಳಲ್ಲಿ, 57000 ಹುದ್ದೆಗಳಿಗೆ unskilled candidates ಗ್ರೂಫ್–ಡಿ, ಚಾಲಕರು ಮತ್ತು ಟೈಪಿಸ್ಟ್ ಸೇರಿಕೊಂಡಿದ್ದಾರೆ. ಹಾಗಾಗಿ, ಕೊನೆಪಕ್ಷ ಶೇ.30 ರಿಂದ ಶೇ.40 ಏನು ಮೈನ್ ಕೆಲಸ ಆಗಬೇಕಿದೆಯೋ, decision making ಅದು ಯಾವುದೂ ಕೂಡ ಏನೂ ಮೇಜರ್ ತೊಂದರೆಯಾಗುವುದಿಲ್ಲ, ಏಕೆಂದರೆ ಅಡಿಷನಲ್ ಆಗಿ ಕೆಲಸವನ್ನು ಮಾಡುತ್ತಿದ್ದಾರೆ. ಮೊನ್ನೆದಿವಸ ರಾಜ್ಯ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳು ಬಂದಾಗಲೂ ಕೂಡ ನಾನು ಹೇಳಿದೆನು. ನೋಡಪ್ಪಾ, ನೀವು Pay Commission ಮಾಡಿ ಎಂದು ಹೇಳುತ್ತಿದ್ದೀರಿ. ಆದರೆ ಸರ್ಕಾರ ಆರ್ಥಿಕ ಪರಿಸ್ಥಿತಿ ಈ ರೀತಿ ಇದೆ. ಈಗ ನೀವು ಒಳ್ಳೆಯ ಕೆಲಸ ಮಾಡುತ್ತಿದ್ದೀರಿ. ಸ್ವಲ್ಪ ಹೆಚ್ಚುವರಿ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು ಎಂದು ಹೇಳಿದಾಗ, ಅವರು ನಾವು ಜವಾಬ್ದಾರಿ ತೆಗೆದುಕೊಂಡು ಅದನ್ನು ಸರಿಯಾಗಿ ನಿಭಾಯಿಸುತ್ತೇವೆ ಎನ್ನತಕ್ಕಂಥ ಮಾತನ್ನು ಕೂಡ ಹೇಳಿದ್ದಾರೆ. ಆದಾಗ್ಯೂ ಕೂಡ essential services ಏನಿದೆ, ಅವುಗಳನ್ನು ನಾವು ಮಾಡಲೇಬೇಕಾಗುತ್ತದೆ. ಅದು ಶಿಕ್ಷಕರ ಹುದ್ದೆಗಳು ಇರಬಹುದು, ಪೋಲೀಸ್ ಹುದ್ದೆಗಳು ಇರಬಹುದು, ಈ ರೀತಿ essential services ಗಳಿಗೆ ನಾವು ಆಗಾಗ ಅನುಮತಿ ಕೊಟ್ಟಿದ್ದೇವೆ. ಈ ವರ್ಷ 15,000 ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳುವುದಕ್ಕೆ ಈಗಾಗಲೇ ನಾವು ಪರ್ಮಿಷನ್ ಕೊಟ್ಟಿದ್ದೇವೆ.

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಯವರೇ, 15,000 ಸರ್ಕಾರಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಪರ್ಮಿಷನ್ ಕೊಟ್ಟಿದ್ದೀರಿ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನನಗೆ ಗೊತ್ತಿದೆ. ನಾನು ಅವರ ವಿಷಯಕ್ಕೂ ಬರುತ್ತೇನೆ. ನೀವೂ ಕೂಡ ಅದಕ್ಕೆ ಸೇರಿದವರು. ನೀವೇ ಅವರ ಕೈಯಲ್ಲಿ ಪ್ರಶ್ನೆಯನ್ನು ಹಾಕಿಸಿರಬಹುದು.

**(ಈ ಹಂತದಲ್ಲಿ ಸದನದಲ್ಲಿ ನಗು)**

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಈಗ 6 ವರ್ಷಕ್ಕೊಮ್ಮೆ ಜೂನ್ ತಿಂಗಳು ಬಂದಾಗ ಮಾರ್ಚ್‌ನಲ್ಲಿ ಈ ಪ್ರಶ್ನೆಗಳು ಬರುತ್ತವೆ. ಈಗ ಏನಾಗುತ್ತದೆಂದರೆ, ಸರ್ಕಾರಿ ನೌಕರರ ವರ್ಗಾವಣೆ ಬಂದಾಗ ಡಿಸೆಂಬರ್ ಮತ್ತು ಜನವರಿ ತಿಂಗಳಿನಲ್ಲೇ `ನಮ್ಮ ತಂದೆ-ತಾಯಿಗಳಿಗೆ ಹುಷಾರು ಇಲ್ಲ, ಅವರನ್ನು ಯಾರು ನೋಡಿಕೊಳ್ಳುವವರು ಇಲ್ಲ' ಎಂದು ಮನವಿಗಳು ಬರುತ್ತವೆ. ಆಗ ನಾನು ಆಯಿತಪ್ಪಾ, ಮಾಡೋಣ ಎಂದು ಹೇಳುತ್ತೇನೆ. ಆದರೆ ಜನವರಿ ತಿಂಗಳಿನಲ್ಲೇ ಏಕೆ ಹುಷಾರು ತಪ್ಪುತ್ತಾರೆ. ಮತ್ತೆ ಮೇ ತಿಂಗಳಾದ ನಂತರ ಅವರು ಹುಷಾರಾಗುತ್ತಾರೆಯೇ? ಆ ರೀತಿ ಕೆಲವು norms ಗಳೆಲ್ಲಾ ಬಂದಿವೆ. ಮಾನ್ಯ ಸಭಾಪತಿಯವರೇ, ಅನುದಾನಿತ ಶಿಕ್ಷಕರ ಹುದ್ದೆಗಳನ್ನು ತುಂಬಿಕೊಳ್ಳುವುದಕ್ಕೆ ತಾವೇನು ಹೇಳಿದ್ದೀರಿ, ಅದನ್ನು ನಮ್ಮ ಆರ್ಥಿಕ ಇತಿಮಿತಿಗಳಲ್ಲಿ ಮತ್ತು ಆರ್ಥಿಕ ಸ್ಥಿಗಳಿಗೆ ಅನುಗುಣವಾಗಿ ಯಾವಾಗ ಸಹಾಯ ಮಾಡಬೇಕೋ ಆ ಸಂಸ್ಥೆಗಳಿಗೆ ಶಿಕ್ಷಕರ ಹುದ್ದೆಗಳನ್ನು ತುಂಬುವುದಕ್ಕೆ ಸೂಕ್ತ ಸಮಯದಲ್ಲಿ ಸೂಕ್ತ ನಿರ್ಧಾರವನ್ನು ಮಾಡಲಾಗುವುದು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಒಂದೇ ಒಂದು ಉಪ ಪ್ರಶ್ನೆ ಇದೆ. ಕೋವಿಡ್-1 9ನಿಂದಾಗಿ ಎರಡು ವರ್ಷಗಳ ಅವಧಿಗೆ ನೇಮಕಾತಿ ಮಾಡಲು ಕೆಲವು ಇಲಾಖೆಗಳಿಗೆ ರಿಯಾಯಿತಿ ಕೊಟ್ಟಿದ್ದಾರೆ. ಇನ್ನೂ ಕೆಲವು ಇಲಾಖೆಗಳಿಗೆ ರಿಯಾಯಿತಿ ಕೊಟ್ಟಿಲ್ಲ.

**(ಮುಂದು)**

(408)17.3.2022/11.30/ಎಂ.ಎಂ-ಜಿ.ಆರ್

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಟಿ. ಶ್ರೀಕಂಠೇಗೌಡ(ಮುಂದು):-**

ಇನ್ನು ಕೆಲವು ಇಲಾಖೆಗಳಿಗೆ ರಿಯಾಯಿತಿ ಕೊಟ್ಟಿಲ್ಲ. ಸಾರಾಸಗಟಾಗಿ ಆ ಎರಡು ವರ್ಷದ ರಿಯಾಯಿತಿಯನ್ನು ತಾವು ಎಲ್ಲರಿಗೂ ವಿಸ್ತರಣೆ ಮಾಡಿದರೆ ಅನುಕೂಲವಾಗುತ್ತದೆ. ನಮ್ಮಲ್ಲಿಯೇ Secondary Education Department ನಲ್ಲಿ ಕೊಟ್ಟಿದ್ದಿರಿ. Higher Education Department ಗೆ ಮತ್ತು ಪ್ರೈಮರಿಗೆ ಕೊಟ್ಟಿಲ್ಲ. Its relaxation for two years.

**ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿ):-** ಮಾನ್ಯ ಸಭಾಪತಿಯವರೇ, ಈಗಾಗಲೇ ಕೋವಿಡ್-19 ಮುಗಿದು ಹೋಗಿದೆ ಇನ್ನಾವ relaxation ?

**ಪ್ರಶ್ನೆ ಸಂಖ್ಯೆ: 2051**

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ದಿನೇಶ್ ಗೂಳಿಗೌಡರು ಸದನದಲ್ಲಿ ಗೈರು ಹಾಜರಾಗಿದ್ದರು)

**ಪ್ರಶ್ನೆ ಸಂಖ್ಯೆ: 2035**

**ಸಭಾಪತಿಯವರು:–** ಮಾನ್ಯ ಎಸ್. ರವಿಯವರೇ, ತಮ್ಮ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಗಳು ಎರಡು ವಾರ ಸಮಯ ಕೇಳಿದ್ದಾರೆ.

**ಶ್ರೀ ಎಸ್. ರವಿ:–** ಮಾನ್ಯ ಸಭಾಪತಿಯವರೇ, ಅದು ಬಹಳ ಮಹತ್ತರವಾದಂತಹ ಪ್ರಶ್ನೆಯಾಗಿದೆ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್. ರವಿಯವರು ಕೇಳಿದ ಪ್ರಶ್ನೆಯನ್ನು ನಾನು ಕೂಡ ಒಪ್ಪಿಕೊಳ್ಳುತ್ತೇನೆ. ಹಲವಾರು ವಿಷಯಗಳು ಇದರಲ್ಲಿದೆ. ಮೊದಲನೆಯದಾಗಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ನೌಕರರೆಷ್ಟು ಎಂಬ ಬಗ್ಗೆ ಇಲಾಖಾವಾರು ಮಾಹಿತಿ ಕೇಳಿದ್ದಾರೆ. ಅದನ್ನು ಕೆ.ಪಿ.ಎಸ್.ಸಿ., ಇಂದ ಕೇಳಿದ್ದೇವೆ. ಸರ್ಕಾರ ಕೆ.ಪಿ.ಎಸ್.ಸಿ., ಗೆ ಎಷ್ಟು ನೋಟಿಫೈ ಮಾಡಿದೆ, ಅವರಿಂದ ಎಷ್ಟು ನೇಮಕಾತಿಗಳನ್ನು ಮಾಡಿದ್ದಾರೆ ಎಂದು ಪ್ರಶ್ನೆ ಕೇಳಿದ್ದಾರೆ, ನಾವು ಕೆ.ಪಿ.ಎಸ್.ಸಿ., ಅವರನ್ನು ಕೇಳಿದ್ದೇವೆ. ಅವರಿಂದ ಉತ್ತರ ಬಂದ ತಕ್ಷಣವೇ ಮುಂದಿನ ವಾರ ಈ ಪ್ರಶ್ನೆಗೆ ಉತ್ತರ ಕೊಡುತ್ತೇನೆ.

**ಶ್ರೀ ಎಸ್. ರವಿ:–** ಮಾನ್ಯ ಮುಖ್ಯಮಂತ್ರಿಯವರೇ, ದಯವಿಟ್ಟು ಮುಂದಿನ ವಾರ ಉತ್ತರ ಕೊಡಿ. ಕೆ.ಪಿ.ಎಸ್.ಸಿ., ಗೆ ಗ್ರಹಣ ಹಿಡಿದುಬಿಟ್ಟಿದೆ. ನಿಮ್ಮ ಅವಧಿಯಲ್ಲಾದರೂ ತುಕ್ಕು ಹಿಡಿದಿರುವ, ಗ್ರಹಣ ಹಿಡಿದಿರುವುದನ್ನು ಬಿಡಿಸಿ.

**ಶ್ರೀ ಬಸವರಾಜ ಬೊಮ್ಮಾಯಿ:–** ಅದು ಚರ್ಚೆಯಾಗಬೇಕು, ಖಂಡಿತವಾಗಿಯೂ ಅದಕ್ಕೆ ಉತ್ತರ ಕೊಡುತ್ತೇವೆ ಬೇಕಾದರೆ ವಿಶೇಷವಾದ ಚರ್ಚೆಗೂ ನಾವು ಸಿದ್ಧವಿದ್ದೇವೆ.

**ಶ್ರೀ ಎಸ್. ರವಿ:–** ಮಾನ್ಯ ಮುಖ್ಯಮಂತ್ರಿಯವರಿಗೆ ಧನ್ಯವಾದಗಳು.

**ಪ್ರಶ್ನೆ ಸಂಖ್ಯೆ: 2038**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಎಂ.ಎಲ್. ಅನಿಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನನ್ನ ಪ್ರಶ್ನೆಯೇನೆಂದರೆ, ಕೋಲಾರ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದ ಕೆರೆ ಅಭಿವೃದ್ಧಿಗಾಗಿ ಬಿಡುಗಡೆಯಾಗಿರುವ ಅನುದಾನವೆಷ್ಟು, ಯಾವ ಯಾವ ಕಾಮಗಾರಿಗಳು ಯಾವ ಹಂತದಲ್ಲಿವೆ, ಬಾಕಿ ಉಳಿದಿರುವ ಕಾಮಗಾರಿಗಳಾವುವು ಮತ್ತು ಯಾವ ಕಾರಣದಿಂದ ಬಾಕಿ ಉಳಿದಿವೆ ಎಂದು ಪ್ರಶ್ನೆ ಕೇಳಿದ್ದೆ. ಮಾನ್ಯ ಸಚಿವರು ಅನುಬಂಧ-1ರಲ್ಲಿ ಬಹಳ ಸವಿವರವಾದ ಉತ್ತರವನ್ನು ಕೊಟ್ಟಿದ್ದಾರೆ. 2018-19ರಲ್ಲಿ ಸುಮಾರು ಆರು ಕಾಮಗಾರಿಗಳು ಕೋಲಾರ ಜಿಲ್ಲೆಗೆ ಸಂಬಂಧಪಟ್ಟಂತೆ ಬೇರೆ ಬೇರೆ ತಾಲ್ಲೂಕುಗಳಲ್ಲಿ ಸದರಿ ಕಾಮಗಾರಿಗಳನ್ನು ಅಂತಿಮಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಹೇಳಿದ್ದಾರೆ. ಈಗ ನಾವು 2022-23ಕ್ಕೆ ಹೋಗುತ್ತಿದ್ದೇವೆ. ಸುಮಾರು ಐದು ವರ್ಷಗಳಿಂದ ಕೆರೆ ಅಭಿವೃದ್ಧಿ ಕಾಮಗಾರಿಗಳನ್ನು ತೆಗೆದುಕೊಳ್ಳದಿದ್ದರೆ ತೊಂದರೆಯಾಗುತ್ತದೆ. ಪ್ರತಿ ವರ್ಷ ಕೂಡ ಮಳೆಯಾಗುತ್ತಿದೆ. ಇವರು ಕಾಮಗಾರಿಗಳು ಪೂರ್ಣಗೊಂಡಿವೆ ಎಂದು ತೋರಿಸುತ್ತಾರೆ. ಆದರೆ ಐದು ವರ್ಷಗಳಾದರೂ ಇನ್ನೂ ಅದಕ್ಕೆ ಕ್ರಮ ತೆಗೆದುಕೊಂಡಿಲ್ಲ ಎಂದರೆ ತಾವು ಇದರ ಬಗ್ಗೆ ಉತ್ತರ ಕೊಡಬೇಕಾಗುತ್ತದೆ. ಕೋಲಾರ ತಾಲ್ಲೂಕಿನಲ್ಲಿ ಸುಮಾರು ಐದು ಕೆರೆಗಳು ಕೋಡಿಕಣ್ಣೂರು ಕೆರೆ ಅಭಿವೃದ್ಧಿ ಕಾಮಗಾರಿ, ಕೂತಾಂಡಹಳ್ಳಿ ಕೆರೆ ಅಭಿವೃದ್ಧಿ ಕಾಮಗಾರಿ, ಈಕಂಬಳ್ಳಿ ಕೆರೆ ಅಭಿವೃದ್ಧಿ ಕಾಮಗಾರಿ, ಹುತ್ತೂರು ಹೋಬಳಿ ವಿಟ್ಟಪ್ಪನಹಳ್ಳಿ ಕೆರೆ ಅಭಿವೃದ್ಧಿ ಕಾಮಗಾರಿ ಮತ್ತು ತೊಟ್ಲಿ ಗ್ರಾಮ ಪಂಚಾಯಿತಿಯ ಆಲೇರಿ ಕೆರೆ ಅಭಿವೃದ್ಧಿ ಕಾಮಗಾರಿ ಪೂರ್ಣಗೊಂಡಿದೆ ಎಂದು ಹೇಳುತ್ತಾರೆ. ಆದರೆ ಇದ್ಯಾವುದೂ ಕೂಡ ಪೂರ್ಣಗೊಂಡಿಲ್ಲ. ಕೆಲಸವನ್ನು ಅಲ್ಪಸ್ವಲ್ಪ ಮಾಡಿ ಬಿಟ್ಟು ಬಿಟ್ಟಿದ್ದಾರೆ. ಎಲ್ಲಾ ಕೆರೆಗಳಿಗೂ ನೀರು ಬಂದಿದೆ. ಮಳೆಯಿಂದಲೂ ಕೂಡ ನೀರು ಬಂದಿದೆ ಮತ್ತು ಕೆ.ಸಿ. ವ್ಯಾಲಿ ಕೆರೆಗಳಿಂದ ನೀರು ಬಂದಿರುವುದರಿಂದ ಇದರಲ್ಲಿ ಗೋಲ್‌ಮಾಲ್ ಆಗಿರುವುದು ಮೇಲ್ನೋಟಕ್ಕೆ ಕಾಣುತ್ತಿದೆ. ಆದ್ದರಿಂದ ತಾವು ಇದರ ಮೇಲೆ ಸೂಕ್ತವಾದ ಕ್ರಮ ತೆಗೆದುಕೊಳ್ಳಬೇಕು. ಮೇಲಧಿಕಾರಿಗಳನ್ನು ಕರೆಸಿ, ಇದನ್ನು ತಪಾಸಣೆ ಮಾಡಿಸಿ

ಕಾಮಗಾರಿಯಾಗಿರುವುದಕ್ಕೆ ಬಿಲ್ ಕೊಟ್ಟರೆ ನಮ್ಮದೇನೂ ಅಭ್ಯಂತರವಿಲ್ಲ. ಕಾಮಗಾರಿ ಆಗದೇ ಕಾಮಗಾರಿ ಆಗಿದೆಯೆಂದು ತೋರಿಸಿ ಬಿಲ್ ಮಾಡುವುದಕ್ಕೆ ತಾವು ಕ್ರಮ ತೆಗೆದುಕೊಳ್ಳಬೇಕು.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಕಾಳಜಿಯನ್ನು ನಾನು appreciate ಮಾಡುತ್ತೇನೆ. ಎಸ್ಟಿಮೇಟ್ ಪ್ರಕಾರ ಕೆಲಸ ಆಗದೇ ಯಾರಾದರೂ ಬಿಲ್ ಕೊಟ್ಟಿದ್ದರೆ ಅದನ್ನು ತೆಗೆದುಕೊಳ್ಳುವ ಸ್ಥಿತಿ ನನಗಿಲ್ಲ. ತಾವು ಹೇಳುವುದೆಲ್ಲವನ್ನೂ ದಯಮಾಡಿ ಸ್ಪಷ್ಟವಾಗಿ ಕಾಗದದಲ್ಲಿ ಕೊಟ್ಟರೆ ಆ ಕೆರೆಗಳನ್ನು ತಪಾಸಣೆ ಮಾಡುತ್ತೇನೆ. ಏಕೆಂದರೆ ತಾವು ಆ ಪ್ರಶ್ನೆ ಕೇಳಿಲ್ಲ, ನನ್ನಲ್ಲಿ ಸಿದ್ಧ ಉತ್ತರವಿಲ್ಲ. ಮಾಲೂರಿನದ್ದು ಕೇಳಿದ್ದಿರಿ ಅದಕ್ಕೆ ನಾನು ತಯಾರಾಗಿ ಬಂದೆ. ಮಾಲೂರಿನಲ್ಲಿ Malur Planning Authority ಅವರು ರೂ. 08 ಕೋಟಿ ಹಣವನ್ನು ಕಟ್ಟಿದರೆ ಕೆಲಸ ಮಾಡಿಕೊಡುವುಕ್ಕೆ ನಾವು ತಯಾರಿದ್ದೇವೆ. ನಾವು ಎಸ್ಟಿಮೇಟನ್ನು ಡಿ.ಪಿ.ಆರ್., ಅವರಿಗೆ ಕೊಟ್ಟಿದ್ದೇವೆ. ಬೇರೆ ಎಲ್ಲಾದರೂ ಈ ರೀತಿ ನಡೆಯಬಾರದ ಕೃತ್ಯಗಳು ನಡೆದರೆ ಅದನ್ನು ದಯಮಾಡಿ ನಮ್ಮ ಗಮನಕ್ಕೆ ತನ್ನಿ, ನಾವು ಕಠಿಣವಾಗಿ ಕ್ರಮ ತೆಗೆದುಕೊಳ್ಳುತ್ತೇವ. 2018–19 ಮತ್ತು 2019–20ರಲ್ಲಿ ರಾಜ್ಯಕ್ಕೆ ಆರ್ಥಿಕವಾಗಿ ಸ್ವಲ್ಪ ಹಿನ್ನಡೆಯಾದಾಗ ಆರ್ಥಿಕ ಇಲಾಖೆಯು ಕಾಮಗಾರಿಗಳನ್ನು ತಡೆಹಿಡಿದಿತ್ತು. Later on ಅದನ್ನೆಲ್ಲಾ ರಿಲೀಸ್ ಮಾಡಿಕೊಟ್ಟಿದ್ದಾರೆ ಮುಂದಿನ ದಿನಗಳಲ್ಲಿ ಮಾಡಿಕೊಡುತ್ತೇವೆ.

**ಶ್ರೀ ಎಂ.ಎಲ್. ಅನಿಲ್ ಕುಮಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈಗಾಗಲೇ ಮಾಲೂರು ತಾಲ್ಲೂಕು ಚೊಕ್ಕಂಡಹಳ್ಳಿ ಕೆರೆ ಬಗ್ಗೆ ಹೇಳಿದ್ದಾರೆ. ಅದು ಮಾಲೂರಿನ ನಗರದ ಪಕ್ಕದಲ್ಲಿಯೇ ಇರುವ ಕೆರೆ. ನಗರದ ಜನತೆಗೆ ನೀರು ಕೊಡುವ ಉದ್ದೇಶದಿಂದ ಪುರಸಭೆಯವರು ಕೆರೆಯಲ್ಲಿಯೂ ಸಹ ಬೋರ್‌ವೆಲ್‌ಗಳನ್ನು ಹಾಕಿದ್ದಾರೆ. ಕೆರೆಯ ಸುತ್ತಮುತ್ತಲೂ ಸಹ ಬೋರ್‌ವೆಲ್‌ಗಳನ್ನು ಹಾಕಿದ್ದಾರೆ. ಕೆರೆ ಕಾಮಗಾರಿಗೆ Malur Planning Authority ಅವರು ರೂ. 08 ಕೋಟಿ ಹಣವನ್ನು ಮೀಸಲಿಟ್ಟು ಡಿ.ಪಿ.ಆರ್., ಮಾಡಿಕೊಡಿ ಎಂದು ಎಂ.ಐ., ಗೆ 2014ರಲ್ಲಿಯೇ ಪ್ರಸ್ತಾವನೆ ಕೊಟ್ಟಿದ್ದಾರೆ. ಈಗ ಡಿ.ಪಿ.ಆರ್., ಆಗಿದೆ ಎಂದು ಹೇಳುತ್ತಿದ್ದಾರೆ. ಆ ಕೆರೆಗೆ

ಯು.ಜಿ.ಡಿ ಮಾಡುವಂತಹ ಸಂದರ್ಭದಲ್ಲಿ ಕೆ.ಡಬ್ಲ್ಯು.ಎಸ್.ಎಸ್.ಬಿ., ಯವರು ಯು.ಜಿ.ಡಿ., ಪೈಪ್‌ಲೈನ್ ಅನ್ನು S.T.P., ಗೆ ತೆಗೆದುಕೊಂಡು ಹೋಗಿ;

**ಸಭಾಪತಿಯವರು:-** ಮಾನ್ಯ ಅನಿಲ್‌ಕುಮಾರ್‌ರವರೇ, ಹೇಳಿಬಿಡಿ ಸಾಕು

**ಶ್ರೀ ಎಂ.ಎಲ್. ಅನಿಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ಇದು ತುಂಬಾ ಪ್ರಮುಖವಾದುದು. ಆ ಕೆರೆಯ ಪೋಷಕ ಕಾಲುವೆಗೆ S.T.P., ಪೈಪ್‌ಲೈನ್ ಹಾಕಿಕೊಂಡು ಹೋಗಿದ್ದಾರೆ. ಕೆರೆಯ ಕಾಲುವೆ ಅಭಿವೃದ್ಧಿ ಮಾಡುವುದಕ್ಕೆ ಹೋದಾಗ ಪೈಪ್‌ಲೈನ್ ಡ್ಯಾಮೇಜ್ ಆಗಿ ಕೊಳಚೆ ನೀರು ಕೆಳಗೆ ಹೋಗುತ್ತಿದೆ. ಹೀಗಾಗಿ ಮಾಲೂರು ನಗರಕ್ಕೆ ಕೊಳಚೆ ನೀರು ಕುಡಿಯುವ ವಾತಾವರಣ ಸೃಷ್ಟಿಯಾಗಿದೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾವು ಇನ್ನೂ ಕಾಮಗಾರಿಯನ್ನೇ ಪ್ರಾರಂಭ ಮಾಡಿಲ್ಲ. ಅಕಸ್ಮಾತ್ ಹಾಗೆ ಆಗಿದ್ದರೆ ನಾವು ಈಗ ಡಿ.ಪಿ.ಆರ್., ಮಾಡಿಕೊಟ್ಟಿದ್ದೇವೆ ಅವರು ರೂ. ೦೪ ಕೋಟಿ ಹಣವನ್ನು ಕಟ್ಟುತ್ತೇವೆಂದು ಒಪ್ಪಿದ್ದಾರೆ. ಅವರು ಹಣವನ್ನು ಕೊಟ್ಟ ತಕ್ಷಣವೇ ನಾವು ಟೆಂಡರ್ ಕರೆದು ಕೆಲಸ ಮಾಡುತ್ತೇವೆ. ನೀವು ಹೇಳಿದ ತೊಂದರೆಯೇನಾದರೂ ಇದ್ದರೆ ಆ ಸಮಯದಲ್ಲಿ rectify ಮಾಡುತ್ತೇವೆ.

**ಶ್ರೀ ಎಂ.ಎಲ್. ಅನಿಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ಸಣ್ಣ ನೀರಾವರಿ ಇಲಾಖೆಗೆ ಸೇರಿದ ಪೋಷಕ ಕಾಲುವೆಯಲ್ಲಿ ಅನುಮತಿ ಇಲ್ಲದೇ ಪೈಪ್‌ಲೈನ್ ಹಾಕಿರುವುದು ತಪ್ಪಲ್ಲವೇ? ಅದನ್ನು ಕೂಡ ಚೆಕ್ ಮಾಡಿಸಿ.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಹಾಗೆ ಮಾಡಿದ್ದರೆ ಈಗ ನಾವು ಏನು ಕೆರೆ ಅಭಿವೃದ್ಧಿ ಕಾಮಗಾರಿಯನ್ನು ಪ್ರಾರಂಭ ಮಾಡುತ್ತೇವೆ ಆಗ ಅದನ್ನು ಹೇಗೆ ಬೇಕೋ ಹಾಗೆ rectify ಮಾಡಿಕೊಡುತ್ತೇವೆ.

**ಶ್ರೀ ಎಂ.ಎಲ್. ಅನಿಲ್ ಕುಮಾರ್:-** ಅದಕ್ಕೆ ತಾವು ಕ್ರಮ ತೆಗೆದುಕೊಳ್ಳಬೇಕು.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಆಯಿತು, ಕ್ರಮ ತೆಗೆದುಕೊಳ್ಳುತ್ತೇವೆ.

**ಪ್ರಶ್ನೆ ಸಂಖ್ಯೆ: 2019**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಇಂದಿರಾನಗರದಲ್ಲಿ ಆರು ಎಕರೆ ಪ್ರದೇಶದಲ್ಲಿ ಒಂದು ಬಿ.ಡಿ.ಎ., ಕಾಂಪ್ಲೆಕ್ಸ್ ಇತ್ತು. ಅದರಿಂದ ವರ್ಷಕ್ಕೆ ರೂ. 75 ಲಕ್ಷ ಬಾಡಿಗೆ ಬರುತ್ತಿತ್ತು ಎಂದು ಮುಖ್ಯಮಂತ್ರಿಯವರು ಉತ್ತರ ಕೊಟ್ಟಿದ್ದಾರೆ. 4-5 ವರ್ಷದ ಹಿಂದೆ Joint Venture ಗೆ ಕೊಡುತ್ತೇವೆಂದು ಶೇ.75ರಷ್ಟು ಅಂಗಡಿಗಳೆಲ್ಲಾ ಖಾಲಿಯಾಗಿವೆ. ಇನ್ನು 25-30 ಜನರು ಅಂಗಡಿಯನ್ನು ನಡೆಸುತ್ತಿದ್ದಾರೆ. ಅವರಿಗೆ ಏನೂ ಸೌಕರ್ಯವಿಲ್ಲ. ಕಟ್ಟಡ ಕಾಮಗಾರಿ ಎರಡು ವರ್ಷದಲ್ಲಿ ಪೂರ್ಣಗೊಳ್ಳಬೇಕಾಗಿತ್ತು ಅದೂ ಆಗಲಿಲ್ಲ. ಅಲ್ಲಿ ಶೌಚಾಲಯ ಇಲ್ಲ, ಭದ್ರತೆ ಇಲ್ಲ, ಕಟ್ಟಡ ಸೋರುತ್ತಿದೆ. ಕಟ್ಟಡವೇ ಅಲ್ಲಲ್ಲಿ ಭಾಗವಾಗಿ ಕೆಳಗೆ ಬಿದ್ದು ಒಡೆದು ಹೋಗುತ್ತಿದೆ. ಮುಂಚೆ ಬೆಂಗಳೂರಿನಲ್ಲಿ ಇದೊಂದು ಹೆಸರಾಂತ ಜಾಗವಾಗಿತ್ತು. ಇಂದಿರಾನಗರದ ಬಿ.ಡಿ.ಎ., ಕಾಂಪ್ಲೆಕ್ಸನ್ನು ಜನರು ಹುಡುಕಿಕೊಂಡು ಹೋಗುತ್ತಿದ್ದರು. ಇವತ್ತು ಏನಾಗಿದೆ ಎಂದರೆ, ಪೋಲೀಸರು ಅವರ ಗಾಡಿಗಳನ್ನೆಲ್ಲಾ ರಸ್ತೆಯಲ್ಲಿ ತಂದು ನಿಲ್ಲಿಸುತ್ತಾರೆ. ಅಲ್ಲಿನ ಅನೈತಿಕ ಚಟುವಟಿಕೆಗಳ ಬಗ್ಗೆ ನಿಮಗೆ ಹೇಳಿದ್ದೆ, ಈ ಎಲ್ಲಾ ಕಾರ್ಯಕ್ರಮಗಳಾಗುತ್ತಿವೆ. 25 ಅಂಗಡಿಗಳಿವೆ, ಅವರು ಕೋವಿಡ್-19ನಲ್ಲೂ ಬಾಡಿಗೆ ಕಟ್ಟಿದ್ದಾರೆ. ಅಂಗಡಿ ಬಾಗಿಲು ಹಾಕಿಕೊಂಡಿದ್ದರೂ ಅವರೆಲ್ಲರು ಬಾಡಿಗೆ ಕಟ್ಟಿದ್ದಾರೆ. 30 ವರ್ಷದಿಂದ ಅಲ್ಲಿಯೇ ಇದ್ದಾರೆ. ಅವರಿಗೆ ತಾತ್ಕಾಲಿಕವಾಗಿ ಮಾಡಿಕೊಡುತ್ತೇವೆಂದು ಅಧಿಕಾರಿಗಳು ಹೇಳಿದ್ದಾರೆ. ಆದರೆ ಅವರಿಗೆ ಆ ಭಾಗ್ಯವೇ ಬರಲಿಲ್ಲ. ಅವರೇನು ಪಾಪ ಮಾಡಿದ್ದರೋ ಗೊತ್ತಿಲ್ಲ. ನಾನೇನಾದರೂ ಹೇಳಿದ್ದರೆ ದಯವಿಟ್ಟು ಮಾನ್ಯ ಮುಖ್ಯಮಂತ್ರಿಯವರು ಬೇಕಾದರೆ ಒಂದಷ್ಟು ;

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ವೆಂಕಟೇಶ್‌ರವರೇ, ಬೇಡ ಬಿಡಿ. ನೀವು ಯಾವಾಗಲೂ ಫೋಟೋ ತೋರಿಸುತ್ತೀರಿ.

**ಶ್ರೀ ಯು.ಬಿ. ವೆಂಕಟೇಶ್:-** ಬೇಕಾದರೆ City Tour ಹೋಗೋಣ. ನಾನು ಅವರೆಲ್ಲರನ್ನೂ ಕರೆದುಕೊಂಡು; ನಾನು ಫೋಟೋ ಕೊಟ್ಟಿದ್ದರಲ್ಲಿ ಏನಾದರೂ ತಪ್ಪಿದ್ದರೆ . . .

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಅವರು ಯಾವುದೇ ಪ್ರಶ್ನೆಗೂ ಫೋಟೋ ಸಮೇತ ಬಂದಿರುತ್ತಾರೆ. ಆದ್ದರಿಂದ ಫೋಟೋಗಳನ್ನು ಆಮೇಲೆ ಕೊಟ್ಟು ಕಳುಹಿಸಿ ಎಂದು ಹೇಳುತ್ತಿದ್ದೇನೆ ಅಷ್ಟೇ. ಯಾವಾಗಲೂ ಫೋಟೋ ಇಲ್ಲದೇ ನಿಮ್ಮ ಪ್ರಶ್ನೆಗಳೇ ಇರುವುದಿಲ್ಲ. That is your speciality.

**ಶ್ರೀ ಯು.ಬಿ. ವೆಂಕಟೇಶ್:–** ಇಲ್ಲ, ಅಲ್ಲಿರುವುದೇ ಅದು. ಅಲ್ಲಿ ಜನರು ಬಹಳ;

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ವೆಂಕಟೇಶ್‌ರವರೇ, ಎಫ್.ಐ.ಆರ್ ನಲ್ಲಿಯೇ ಸಾಕ್ಷಿ ಒದಗಿಸಬಾರದು. ಚಾರ್ಜ್‌ಶೀಟ್ ಆದಮೇಲೆ ಒದಗಿಸುವಿರಂತೆ ಅದನ್ನು ನೀವೇ ಇಟ್ಟುಕೊಂಡಿರಿ.

**ಶ್ರೀ ಯು.ಬಿ. ವೆಂಕಟೇಶ್:–** ನೀವು bad case ಗೆ ಒಳ್ಳೆಯ ಲಾಯರ್ ಎಂದು ನಾನು ಸುಮಾರು ಸಲ ಹೇಳಿದ್ದೇನೆ. ಈ ಸರ್ಕಾರ ನಿಮ್ಮನ್ನಿಟ್ಟುಕೊಂಡು ನಿಮ್ಮಿಂದ ಇದನ್ನೆಲ್ಲಾ ಹೇಳಿಸುತ್ತಾರೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಲಾಯರ್‌ಗಳು ಯಾವಾಗಲೂ bad case ಅನ್ನೇ ತೆಗೆದುಕೊಳ್ಳುವುದು.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, . . .

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಡಾ. ಕೆ. ಗೋವಿಂದರಾಜ್ ರವರು ಮುಖ್ಯಮಂತ್ರಿಯವರಿಗೆ ಹೇಳಲನುವಾದರು)**

ಇದರಲ್ಲಿ ನಿಮ್ಮದೇನಾದರೂ ಇದೆಯೇ? ಏನಾದರೂ ಇದ್ದರೆ ಮಾತನಾಡಿ ಬೇಕಾದರೆ ಅವಕಾಶ ಕೊಡುತ್ತೇನೆ.

**ಡಾ: ಕೆ. ಗೋವಿಂದರಾಜ್:–** ಮಾನ್ಯ ಮುಖ್ಯಮಂತ್ರಿಯವರೇ, ಮಾಹಿತಿ ಕೊಡುತ್ತಿದ್ದೇನೆ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಹೆಚ್ಚು ಕಡಿಮೆ ಯಾವುದರಲ್ಲಿ ಯಾರ್ಯಾರು ಇದ್ದಾರೆ ಎಂದು ನನಗೆ ಮಾಹಿತಿ ಇರುತ್ತದೆ. ಕೆಲವೊಂದನ್ನು ನೀವು ನನಗೆ

ಗೊತ್ತಿಲ್ಲದೇ ಬಹಳ ಮಾಡಿರುತ್ತೀರಿ. ಮಾನ್ಯ ಸದಸ್ಯರು ಬಹಳ ಪ್ರಮುಖವಾದ ಪ್ರಶ್ನೆಯನ್ನು ಎತ್ತಿದ್ದಾರೆ. ಒಂದು ಪ್ರಮುಖವಾದ ಪ್ರಾಪರ್ಟಿ ಬೆಂಗಳೂರಿನಲ್ಲಿ. ಈಗಂತೂ ಅದು commercially ಮೊದಲು ಕಟ್ಟಿದ್ದಕ್ಕಿಂತ ಈಗ ಜಾಸ್ತಿ ಬೆಲೆ ಇದೆ. ಅದರ ಬಗ್ಗೆ P.P.P., model ಅಡಿಯಲ್ಲಿ ಇದನ್ನು ಅಭಿವೃದ್ಧಿ ಮಾಡಬೇಕೆಂದು ಸುಮಾರು 2016ರಲ್ಲಿ ಒಂದು ನಿರ್ಣಯವಾಗಿತ್ತು. ಅದನ್ನು M/s. M.K.Embassy Land Developers Pvt. Ltd., ಗೆ ಕೊಟ್ಟಿದ್ದರು. ಆ ಸಂದರ್ಭದಲ್ಲಿ ಈ ರೀತಿ 3-4 ಬಿ.ಡಿ.ಎ ಕಾಂಪ್ಲೆಕ್ಸ್‌ಗಳನ್ನು ಪ್ರೈವೇಟ್ ಗೆ ಕೊಡುವ ತೀರ್ಮಾನವಾಗಿ ಬಹಳ ಗಲಾಟೆಯಾಗಿ, ಒಂದೇ ಕಂಪನಿಗೆ ಎಲ್ಲವೂ ಹೇಗೆ ಹೋಯಿತು, ಏತಕ್ಕೆ ಕೊಟ್ಟರು ಎಂದು ಇದೇ ಸದನದಲ್ಲಿ ಪ್ರಶ್ನೆಗಳಾಗಿತ್ತು. ಈಗ ಅದರ ಕೆಲಸ ನಿಂತಿದೆ. ಈ ಕಡೆ ಅದರ ಕೆಲಸ ಪೂರ್ತಿಯೂ ಆಗಿಲ್ಲ, ಅದರ demolition ಕೂಡ ಪೂರ್ತಿಯಾಗಿಲ್ಲ, ಒಂದು ರೀತಿಯ ಅತಂತ್ರ ಸ್ಥಿತಿ ಇದೆ.

(ಮುಂದು)

(409) 17-03-2022 KH/GR 11-40

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಸವರಾಜ ಬೊಮ್ಮಾಯಿ (ಮುಂದು):-**

ನಾವು ಇದರ ಬಗ್ಗೆ ಸಂಪೂರ್ಣವಾಗಿ ಪರಿಶೀಲನೆ ಮಾಡುತ್ತೇವೆ. 2016ನೇ ಸಾಲಿನಿಂದ ಇರುವುದನ್ನು 2019ನೇ ಸಾಲಿಗೆ ನಿಲ್ಲಿಸಿದ್ದಾರೆ. ಈಗ ಮತ್ತೆ 3 ವರ್ಷ ಆಗಿದೆ. ಈಗ ಅವರನ್ನೇ ಮುಂದುವರೆಸಬೇಕೇ, ಏನು ಮಾಡಬೇಕೆನ್ನುವ ಬಗ್ಗೆ ಹಲವಾರು ಪ್ರಶ್ನೆಗಳನ್ನು ಇಟ್ಟುಕೊಂಡು ನನಗೆ ಕಡತವನ್ನು ಕಳುಹಿಸಿದ್ದರು. ನಾನು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳನ್ನು ಕರೆಸಿ ಕೂಡಲೇ ನಿರ್ಣಯ ಮಾಡಬೇಕೆಂದು ಮುಖ್ಯ ಕಾರ್ಯದರ್ಶಿಯವರಿಗೆ ತಿಳಿಸಿದ್ದೇನೆ. ಆದಷ್ಟು ಬೇಗ ಅಲ್ಲಿಂದ ವರದಿಯನ್ನು ತರಿಸಿಕೊಂಡು ಒಂದು ನಿರ್ಣಾಯಕ ತೀರ್ಮಾನವನ್ನು ಮಾಡುತ್ತೇನೆ. Ultimately, ನಮ್ಮ goal ಏನೆಂದರೆ, ಬಿ.ಡಿ.ಎ., ಕಾಂಪ್ಲೆಕ್ಸ್, ಇಂದಿರಾ ನಗರ ಸಂಪೂರ್ಣವಾಗಿ ಇವತ್ತಿನ ಅವಶ್ಯಕತೆಗೆ

ಅನುಗುಣವಾಗಿ ಅದನ್ನು ಆಧುನಿಕವಾಗಿ ಕಟ್ಟುವುದಕ್ಕೆ ಎಲ್ಲಾ ರೀತಿಯ ನಿರ್ಣಾಯಕ ಕ್ರಮಗಳನ್ನು ನಾವು ತೆಗೆದುಕೊಳ್ಳುತ್ತೇವೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಇದನ್ನು ಸ್ವಾಗತ ಮಾಡುತ್ತೇನೆ. ಈಗ ಇರುವಂತಹ 26 ಅಂಗಡಿಗಳೇನಿವೆ, ಅವರು ಅಲ್ಲಿ ಇರುವುದಕ್ಕೆ ಆಗುತ್ತಿಲ್ಲ. ಎಲ್ಲಾ ಬಿದ್ದು ಹೋಗುವುದು, ಸೋರುವುದು, ಶೌಚಾಲಯದ ವ್ಯವಸ್ಥೆ ಇಲ್ಲ, ನಿರ್ವಹಣೆ ಇಲ್ಲ, ಸೆಕ್ಯೂರಿಟಿ ಇಲ್ಲ, ಅಲ್ಲಿ ಯಾರು ಇಲ್ಲ. ದಯವಿಟ್ಟು, ಅದರ ಕಡೆ ತಾವು ಕಾಳಜಿವಹಿಸಬೇಕು. 26 ಅಂಗಡಿಯವರು 40 ವರ್ಷಗಳಿಂದ ಬಾಡಿಗೆ ಕಟ್ಟುತ್ತಿದ್ದಾರೆ. ಇದನ್ನು 2 ವರ್ಷ ಅಥವಾ 3 ವರ್ಷಗಳಲ್ಲಿ ಮಾಡುತ್ತೇವೆ ಎಂದು ಅವರಿಗೆ ಆಶ್ವಾಸನೆ ಕೊಡಿ. ಇಲ್ಲದಿದ್ದರೆ ಕನಿಷ್ಟಪಕ್ಷ ಕ್ಲೀನ್ ಮಾಡಿಸಿಕೊಡುವುದಕ್ಕಾದರೂ ಕ್ರಮ ವಹಿಸಬೇಕು ಎಂದು ತಮ್ಮನ್ನು ಮನವಿ ಮಾಡುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಮಾನ್ಯ ಯು.ಬಿ.ವೆಂಕಟೇಶ್‌ರವರು ಹೇಳಿರುವಂತಹ ಸಲಹೆಗಳನ್ನು ಕೂಡ ನಿರ್ಣಯದಲ್ಲಿ ಪರಿಶೀಲನೆ ಮಾಡಿ, ಈಗ ಇರುವವರಿಗೆ ಯಾವುದೇ ತೊಂದರೆಯಾಗದಂತೆ ಕ್ರಮಗಳನ್ನು ತೆಗೆದುಕೊಳ್ಳುತ್ತೇನೆ.

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ: 17ನೇ ಮಾರ್ಚ್ 2022 ಸಮೂಹ-4ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 100 ಪ್ರಶ್ನೆಗಳ ಪೈಕಿ 18 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಲಿಖಿತ ಮೂಲಕ ನೀಡಲಾದ ಉತ್ತರಗಳನ್ನು ಲಗತ್ತಿಸಲಾಗಿದೆ)**

**೦5. <u>ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟಿದ್ದ ವಿಷಯಕ್ಕೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು</u>**

ಅ) ವಿಷಯ: ರಾಜ್ಯದಲ್ಲಿ ಕ್ಯಾನ್ಸರ್ ಪೀಡಿತರ ಸಂಖ್ಯೆ ಹೆಚ್ಚಳವಾಗುತ್ತಿರುವ ಬಗ್ಗೆ.

* * *

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ಮಾನ್ಯ ಸದಸ್ಯರಾದ ಶ್ರೀ ಕೆ.ಹರೀಶ್ ಕುಮಾರ್‌ರವರು ದಿನಾಂಕ:14-03-2022ರಂದು ಪ್ರಸ್ತಾಪಿಸಿದ ಸೂಚನೆಗೆ ಸಂಬಂಧಿಸಿದಂತೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಸಚಿವರ ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)**

ಆ) ವಿಷಯ: ಕೋಲಾರ ಜಿಲ್ಲಾ ನ್ಯಾಯಾಲಯದ ಕಟ್ಟಡ ಶಿಥಿಲಗೊಂಡು ನೂತನ ಕಟ್ಟಡ ನಿರ್ಮಾಣಕ್ಕೆ ರೂ.25.00 ಕೋಟಿ ಮಂಜೂರಾಗಿದ್ದರೂ, ಕಟ್ಟಡ ಕಾಮಗಾರಿ ಪ್ರಾರಂಭಗೊಳ್ಳದಿರುವ ಬಗ್ಗೆ.

* * *

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ಮಾನ್ಯ ಸದಸ್ಯರಾದ ಶ್ರೀ ಗೋವಿಂದರಾಜುರವರು ದಿನಾಂಕ:16–03–2022ರಂದು ಪ್ರಸ್ತಾಪಿಸಿದ ಸೂಚನೆಗೆ ಸಂಬಂಧಿಸಿದಂತೆ ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಸಚಿವರ ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)**

## ೦6. ಮಾನ್ಯ ಸಭಾಪತಿಯವರ ವಿರುದ್ಧ ಎಫ್.ಐ.ಆರ್., ದಾಖಲಾಗಿರುವ ಬಗ್ಗೆ (ಮುಂದುವರೆದ ಚರ್ಚೆ)

* * *

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ದಯಮಾಡಿ, ಸದನದಲ್ಲಿ ಮಾನ್ಯ ಮುಖ್ಯಮಂತ್ರಿಯವರು, ಗೃಹ ಸಚಿವರು ಮತ್ತು ಕಾನೂನು ಸಚಿವರು ಇದ್ದಾರೆ. ಮಾನ್ಯ ಮುಖ್ಯಮಂತ್ರಿಯವರ ಸಮಯ ಬಹಳ precious ಆಗಿದ್ದು, ನಾನು ತಮ್ಮ ಸಮಯವನ್ನು ಹಾಳು ಮಾಡುವುದಕ್ಕೆ ಹೋಗುವುದಿಲ್ಲ. ಎಂತಹ ವಿಚಾರ ಇದೆ ಎಂಬುದು ತಮಗೆ ಗೊತ್ತಿದೆ.

**ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, . . .

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಇದನ್ನು ನಾನು sportive ಮತ್ತು compliment ಆಗಿ ತೆಗೆದುಕೊಳ್ಳುತ್ತೇನೆ. ಮಾನ್ಯ ಸಭಾಪತಿಯವರು ಯಾರೇ ಬೇಕಾದರೂ ಇರಲಿ, ಮಾನ್ಯ ಸಭಾಪತಿಯವರ ಸ್ಥಾನಕ್ಕೆ ಅದರದೇ ಆದಂತಹ ಪಾವಿತ್ರ್ಯತೆ ಇದೆ; ಘನತೆ, ಗೌರವ ಇದೆ. ಈ ರೀತಿ ಇದ್ದಾಗ ಸಭಾಪತಿಯವರ ಮೇಲೆ ಒಂದು ದೂರನ್ನು ಕೊಟ್ಟಂತಹ ಸಂದರ್ಭದಲ್ಲಿ ಆ ಸಂಬಂಧಪಟ್ಟ ಅಧಿಕಾರಿ ಯಾರೇ ಇರಬಹುದು, that Investigating Officer should he not aware of the situation? ಏನೆಂದು ನೋಡಬೇಕಲ್ಲವೇ? ಮಾನ್ಯ ಕಾನೂನು ಸಚಿವರೇ, ಏನನ್ನೂ ನೋಡದೇ ಏಕಾಏಕಿ ಯಾರಾದರೂ ದೂರು ಕೊಟ್ಟರೆ, ಎಫ್.ಐ.ಆರ್., ಹಾಕಿ, ನಂತರ ವಿಚಾರಣೆ ಮಾಡಬೇಕೆಂದು ಸುಪ್ರೀಂ ಕೋರ್ಟ್ ತೀರ್ಮಾನ ಇದೆ. ಅದನ್ನು ನಾವು ಒಪ್ಪುತ್ತೇವೆ. ಅದರಲ್ಲಿ ಎರಡನೇ ಮಾತಿಲ್ಲ. ಇಲ್ಲಿ ಮಾನ್ಯ ಸಭಾಪತಿಯವರ ಮೇಲೆ ದೂರು ಬಂದಿದೆ. ಇದರ ಜೊತೆಗೆ he was not in the station. He was very much known to the same Officer. ಏಕೆಂದರೆ, ಅವರಿಗೆ ಮಾನ್ಯ ಸಭಾಪತಿಯವರ ಟೂರ್ ಪ್ರೋಗ್ರಾಂ ಅನ್ನು ಕೊಡುತ್ತಾರೆ. ಆ ಟೂರ್ ಪ್ರೋಗ್ರಾಂನಲ್ಲಿ ಅವರು ಹೇಗೆ ಟ್ರಾವಲ್ ಮಾಡುತ್ತಾರೆ ಎನ್ನುವುದನ್ನು ಸಂಬಂಧಪಟ್ಟ 4 ರಿಂದ 5 ಎಸ್.ಪಿ., ಯವರಿಗೆ ಬೆಂಗಳೂರಿನವರೆಗೂ ಗೊತ್ತಿದೆ. But, on that day he (Hon'ble Chairman) was very much in Bengaluru and he held a meeting at 12 O'

Clock. Meeting ಆಗಿರುವಂತಹ ವಿಚಾರ ಅವರಿಗೆ ಗೊತ್ತಿದ್ದರೂ ಕೂಡ ಆ ರೀತಿಯ ದೂರು ಕೊಟ್ಟಂತಹ ಸಂದರ್ಭದಲ್ಲಿ first citizen of the State ಬಳಿಯಲ್ಲಿ ಅನುಮತಿ ತೆಗೆದುಕೊಂಡು, ಏನು ಮೂವ್ ಮಾಡಬೇಕೋ, ಅದನ್ನು ಮಾಡಬೇಕು. ನಂತರ investigation ಮಾಡಬೇಕು. Forthwith he has filed F.I.R., and by 2 O'Clock in the midnight ಮಾನ್ಯ ಸಭಾಪತಿಯವರಿಗೆ ಕಾಲ್ ಮಾಡಿ ಈ ರೀತಿ ನನ್ನಿಂದ ತಪ್ಪಾಗಿದೆ ಎಂದು ಒಬ್ಬ ಅಧಿಕಾರಿ ಹೇಳಬೇಕಾದರೆ, ಅದನ್ನು ಇಡೀ ಸದನ ಒಕ್ಕೊರಲಿನಿಂದ ಮಾನ್ಯ ಸಭಾಪತಿಯವರ ಪರಿಸ್ಥಿತಿಯೇ ಈ ರೀತಿಯಾದ ಮೇಲೆ ಸಾಮಾನ್ಯ ಮನುಷ್ಯನಿಗೆ ಯಾವ ರೀತಿಯಾಗುತ್ತದೆ ಎಂದು ದಯಮಾಡಿ ತಾವು ಯೋಚನೆ ಮಾಡಬೇಕು. ಹಾಗಾಗಿ, ತಮಗೆ ಈ ವಿಚಾರದ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಸಭಾಪತಿಯವರಿಗೆ ಈಗ ಆಗಿರುವಂತಹ ವಿಚಾರ ಸಾಮಾನ್ಯ ಮನುಷ್ಯನಿಗೆ ಬಂದಂತಹ ಸಂದರ್ಭದಲ್ಲಿ ಆ ಅಧಿಕಾರಿಗಳಿಗೆ ಮತ್ತು I.O., ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಅದು ಯಾರೂ ಬೇಕಾದರೂ ಇರಲಿ. ಇದನ್ನು ಮಾನ್ಯ ಗೃಹ ಸಚಿವರ ಹತ್ತಿರ ಚರ್ಚೆ ಮಾಡಿದಾಗ ನಾನು 3 ದಿವಸಗಳಲ್ಲಿ ಉತ್ತರ ಕೊಡುತ್ತೇನೆ ಮತ್ತು ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದರು. ಮೊನ್ನೆಯ ದಿವಸ ಒಬ್ಬ ಸಬ್-ಇನ್ಸ್‌ಪೆಕ್ಟರ್ ಅನ್ನು ಅಮಾನತು ಮಾಡಿದ್ದಾರೆ ಎಂದು ಒಂದು ಪತ್ರಿಕೆಯಲ್ಲಿ ಬಂದಿರುವುದನ್ನು ನಾನು ಓದಿದೆ. ಇಲ್ಲಿ Atrocity Case ಇರುವಂತಹದ್ದಾಗಿದೆ. Atrocity Case ಗೆ ಸಬ್-ಇನ್ಸ್‌ಪೆಕ್ಟರ್‌ಗೆ ಏನು ಸಂಬಂಧ? I.O., is the Dy.S.P., and above rank. ಇದರ ಬಗ್ಗೆ ತಮಗೂ ಗೊತ್ತಿದೆ, ನಮಗೂ ಗೊತ್ತಿದೆ. ಎಲ್ಲರಿಗೂ ಗೊತ್ತಿದೆ. ಹಾಗಾಗಿ Dy.S.P., ಯವರ ಮೇಲೆ ಕ್ರಮವಹಿಸಿದ್ದರೆ ನಾವು ಒಪ್ಪಿಕೊಳ್ಳುತ್ತಿದ್ದೆವು. ಇದನ್ನು Writer ಬರೆಯುವುದು ಎಂದು ನಮಗೂ, ನಿಮಗೂ ಗೊತ್ತಿದೆ. ಹಾಗಾಗಿ, ದಯಮಾಡಿ ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ. ಇದು ಮಾನ್ಯ ಸಭಾಪತಿಯವರ ಪೀಠಕ್ಕೆ ಆಗಿರುವಂತಹದ್ದು. ಆ ಪೀಠದಲ್ಲಿ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಇರಬಹುದು ಅಥವಾ ಬೇರೆ ಯಾರೂ ಬೇಕಾದರೂ ಇರಬಹುದು. ಮಾನ್ಯ ಸಭಾಪತಿಯವರ ಸ್ಥಾನಕ್ಕೆ ಈ ರೀತಿ ಮಾಡಿರುವಂತಹ ಸಂದರ್ಭದಲ್ಲಿ ಸಂಬಂಧಪಟ್ಟ ಅಧಿಕಾರಿಯನ್ನು forthwith ಅವರನ್ನು ಅಮಾನತು ಮಾಡಿ, ವಿಚಾರಣೆಗೆ

ವಹಿಸಿಕೊಡಿ ಎನ್ನುವಂತಹದ್ದು ಎಲ್ಲಾ ಮಾನ್ಯ ಸದಸ್ಯರುಗಳ ಒಕ್ಕೊರಲಿನ ಮಾತು. ದಯಮಾಡಿ ಇದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡಬೇಕು.

**ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾಪತಿಯವರ ಸ್ಥಾನ ಬಹಳ ಪ್ರಮುಖವಾಗಿರುವಂತಹದ್ದು, protocol ನಲ್ಲಿ after the Governor ಮಾನ್ಯ ಸಭಾಪತಿಯವರ ಸ್ಥಾನ ಇದೆ ಮತ್ತು ಇದಕ್ಕೆ ಕಾನೂನು ಕೂಡ ಇದೆ. Constitutional Heads ಗಳ ಮೇಲೆ ಕ್ರಮಗಳನ್ನು ತೆಗೆದುಕೊಳ್ಳಬೇಕಾದರೆ ಏನೆಲ್ಲಾ procedure follow ಮಾಡಬೇಕು, let it be a Minister, Chief Minister, Speaker, ಸಭಾಪತಿಯವರು, ಮಾನ್ಯ ಗೌವರ್ನರ್ – ಈ ಎಲ್ಲಾ Constitutional Heads ಗಳಿಗೆ ಆ ರೀತಿಯ ಒಂದು insulation ಇದೆ. ಆದರೆ, ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬೇಕು. ಕ್ರಮವನ್ನು ತೆಗೆದುಕೊಳ್ಳುವುದಕ್ಕಿಂತ ಮುಂಚೆ ಏನು procedure follow ಮಾಡಬೇಕೋ, ಅದನ್ನು ಫಾಲೋ ಮಾಡಬೇಕಾಗುತ್ತದೆ. ಈ ವಿಚಾರ ನನಗೆ ತಿಳಿದ ತಕ್ಷಣ ಮಾನ್ಯ ಸಭಾಪತಿಯವರ ಹತ್ತಿರ ಮಾತನಾಡಿದ್ದೇನೆ. ಇಲಾಖೆಯ ಹಿರಿಯ ಅಧಿಕಾರಿಗಳ ಜೊತೆ ಕೂಡ ಮಾತನಾಡಿದ್ದೇನೆ. ಅಷ್ಟೊತ್ತಿಗಾಗಲೇ ರಾತ್ರಿ ಆಗಿಬಿಟ್ಟಿತ್ತು. ಇದಕ್ಕೆ ಮಾನ್ಯ ಸಭಾಪತಿಯವರು ಹೈಕೋರ್ಟ್‌ಗೆ ಹೋಗಿ ತಡೆಯಾಜ್ಞೆಯನ್ನು ತಂದಿದ್ದಾರೆ. ಇದರಲ್ಲಿ ಖಂಡಿತವಾಗಿಯೂ procedure follow ಆಗಿಲ್ಲವೆನ್ನುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಅದಕ್ಕಾಗಿ ಮಾನ್ಯ ಗೃಹ ಸಚಿವರು ಯಾವ ಇನ್ಸ್‌ಪೆಕ್ಟರ್ ಎಫ್.ಐ.ಆರ್., ದಾಖಲು ಮಾಡಿದ್ದಾರೋ, ಅವರ ಮೇಲೆ ಕ್ರಮ ತೆಗೆದುಕೊಂಡಿದ್ದಾರೆ. ತಾವು ಹೇಳಿದ ಹಾಗೆ I.O., ಆಗಿರುವವರು Dy.S.P., ಇರುತ್ತಾರೆ, A.C.P., ಇರುತ್ತಾರೆ. ಇವರ ಮುಖಾಂತರವೇ ಇದು ಆಗಬೇಕಾಗುತ್ತದೆ. ಇದರ ಬಗ್ಗೆ ಏನು ವಿಚಾರಣೆ ಮಾಡಿದ್ದಾರೆ, ಏನು ವರದಿ ಕೊಟ್ಟಿದ್ದಾರೆ; ಅವರ ಮೇಲೆ ನಿಜವಾಗಿಯೂ ಎಫ್.ಐ.ಆರ್.,ಗೆ ಅನುಗುಣವಾಗಿಯೇ ಏನಾದರೂ ಕ್ರಮ ತೆಗೆದುಕೊಳ್ಳುತ್ತಿದ್ದಾರೆಯೇ, ಎಲ್ಲವನ್ನೂ ಕೂಡ ಪರಿಶೀಲನೆ ಮಾಡುತ್ತೇನೆ. ಏಕೆಂದರೆ, ನನ್ನ ಹತ್ತಿರ ಯಾವುದೇ ಮಾಹಿತಿಗಳು ಇಲ್ಲ. ಇದರ ಬಗ್ಗೆ ಪರಿಶೀಲನೆ ಮಾಡಿ, ಖಂಡಿತವಾಗಿಯೂ ಮಾನ್ಯ ಸಭಾಪತಿಯವರ ಹುದ್ದೆಯನ್ನು ಎತ್ತಿ ಹಿಡಿಯುವುದಕ್ಕೆ ಮತ್ತು ಈ ರೀತಿಯ ಘಟನೆ ಇನ್ನೊಂದು ಬಾರಿ

ಮರುಕಳಸಬಾರದೆನ್ನುವ ಸಲುವಾಗಿ ಏನೆಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ಖಂಡಿತವಾಗಿಯೂ ತೆಗೆದುಕೊಳ್ಳುತ್ತೇನೆ. ಹಾಗೆಯೇ ಆ ಪತ್ರಿಕಾ ವರದಿಯನ್ನು ಸಹ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಆ ರೀತಿ ಏನಿಲ್ಲ. ಒಂದು ಮಾತು. ಮಾನ್ಯ ಸಭಾಪತಿಯವರು ಮಹಾಭಾರತ ಫಾಲೋ ಮಾಡುತ್ತಿದ್ದಾರೋ, ರಾಮಾಯಣ ಫಾಲೋ ಮಾಡುತ್ತಿದ್ದಾರೋ ಎಂಬುದು ನನಗೆ ಗೊತ್ತಿಲ್ಲ. ಏಕೆಂದರೆ, ಅವರು ಒಂದು ಕಡೆ ಧೃತರಾಷ್ಟ್ರ ಆಗಿದ್ದಾರೆ, ಇನ್ನೊಂದು ಕಡೆ ದಯಾಮರಣದ ನಿರೀಕ್ಷೆಯಲ್ಲಿದ್ದ ಭೀಷ್ಮರಂತೆ ಆಗಿಹೋಗಿದ್ದಾರೆ. ಇಷ್ಟಾದರೂ ಇದನ್ನು ಸರ್ಕಾರ ಸರಿಯಾಗಿ ಗಮನಕ್ಕೆ ತೆಗೆದುಕೊಂಡಿಲ್ಲ ಎಂದು . . .

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಯು.ಬಿ.ವೆಂಕಟೇಶ್‌ರವರು ರಾಮಾಯಣದ ಪಾತ್ರದ ಬಗ್ಗೆ ಹೇಳಲಿಲ್ಲ. ಎರಡು ಸಹ ಮಹಾಭಾರತದ ಪಾತ್ರಗಳೇ ಆಗಿವೆ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಜೆ.ಸಿ.ಮಾಧುಸ್ವಾಮಿಯವರೇ, ಆಯಿತು. ಎರಡೂ ಮಹಾಭಾರತದ ಪಾತ್ರಗಳೇ. ತಾವು ಏನು ಹೇಳಿದರೆ ಅದು. ತಮ್ಮ ಮಾತು ಸರ್ವಜ್ಞರ ವಾಕ್ಯ ಎಂದು ಹೇಳಿಬಿಟ್ಟಿದ್ದೇನೆ. ತಮಗೆ ನಾನು ಜವಾಬು ಕೊಡುವುದಿಲ್ಲ. ಮಾನ್ಯ ಗೃಹ ಮಂತ್ರಿಗಳು ಆವತ್ತಿನ ದಿವಸ ಇನ್ನು 3 ದಿವಸಗಳಲ್ಲಿ ತಮಗೆಲ್ಲಾ ಸಮಾಧಾನ ಬರುವ ರೀತಿ ಉತ್ತರ ಕೊಡುತ್ತೇವೆಂದು ಹೇಳಿದರು. 5 ದಿನವಾದರೂ ಇದರಲ್ಲಿ ಏನು ಮಾಡಿದ್ದಾರೆ ಎಂದು ಅನೌನ್ಸ್ ಮಾಡಿಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಯು.ಬಿ.ವೆಂಕಟೇಶ್‌ರವರೇ ಅವರು ಹೇಳಿದ್ದಾರೆ. ತಾವು ಮತ್ತೊಮ್ಮೆ ಏಕೆ ರಿಪೀಟ್ ಮಾಡುತ್ತೀರಿ?

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಮುಖ್ಯಮಂತ್ರಿಯವರೇ, ಮಾನ್ಯ ಗೃಹ ಸಚಿವರು ಏನು ಹೇಳಿದ್ದಾರೆ ಎಂಬುದನ್ನು ನಾನು ಇನ್ನು ಕೇಳಿಲ್ಲ. ತಾವು ಮಾತನಾಡಿದ್ದೀರಿ ಅಷ್ಟೇ. ಅವರು ಇನ್ನೂ ಮಾತನಾಡಿಲ್ಲ.

**ಶ್ರೀ ಅರಗ ಜ್ಞಾನೇಂದ್ರ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಮಾನ್ಯ ಸಭಾಪತಿಯವರ ಸ್ಥಾನಮಾನ; ನಮ್ಮ ಬದ್ಧತೆ, ಇಡೀ ಸದನದ ಬದ್ಧತೆ; ತಮ್ಮ ಚರ್ಚೆ ಈ ಎಲ್ಲದರ ಹಿನ್ನೆಲೆಯಲ್ಲಿ ಹೇಳಿದ್ದಾರೆ. ನಾನು ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೆ. ಇದರ ಬಗ್ಗೆ ವಿಚಾರಣೆ ಮಾಡಿದ್ದೇವೆ. ಶ್ರೀ ಶ್ರೀಧರ್ ವಿ. ಸತಾರೆ ಎನ್ನುವ ಪೋಲೀಸ್ ಇನ್ಸ್‌ಪೆಕ್ಟರ್‌ರವರನ್ನು ಅಮಾನತಿನಲ್ಲಿಟ್ಟು ವಿಚಾರಣೆಗೆ ಆದೇಶ ಮಾಡಿದ್ದೇವೆ. ಅವರೇ ಎಫ್.ಐ.ಆರ್.,ಗೆ ಕಾರಣ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಈ ಪೋಲೀಸ್ ಇನ್ಸ್‌ಪೆಕ್ಟರ್ ಕೋವಿಡ್-19 duty ನಲ್ಲಿ ಇದ್ದರು ಎನ್ನುವಂತಹ ನ್ಯೂಸ್ ಇದೆ. ಇದರಲ್ಲಿ ಅಮಾಯಕರನ್ನು ಬಲಿಪಶು ಮಾಡಬೇಡಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಎಫ್.ಐ.ಆರ್., ಹಾಕುವುದಕ್ಕೆ ಸರ್ಕಲ್ ಇನ್ಸ್‌ಪೆಕ್ಟರ್‌ಗೆ ಎಲ್ಲಿ ಅಧಿಕಾರವಿದೆ?

**ಶ್ರೀ ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಕಳೆದ ಬಾರಿ ಮಾನ್ಯ ಸಭಾಪತಿಯವರಿಗೆ ಎಸ್.ಪಿ., ಯವರು 3 ಗಂಟೆ ರಾತ್ರಿಯಲ್ಲಿ ಫೋನ್ ಮಾಡಿ, ತಮ್ಮ ಮೇಲೆ ಎಫ್.ಐ.ಆರ್., ದಾಖಲು ಮಾಡಿದ್ದೇವೆ ಎನ್ನುವಂತಹ ಉದ್ಧಟತನದ ಮಾತನ್ನು ಹೇಳಿದ್ದಾರೆ. ಕೊನೆಯದಾಗಿ ನಾವು ಎಸ್.ಪಿ.,ಯವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಿದ್ದೇವೆ. ಈಗ ತಾವು "ಕೆಳಗಿನವರನ್ನು ಮಾಡಿದ್ದೇವೆ; ಅವರನ್ನು ಮಾಡಿದ್ದೇವೆ, ಇವರನ್ನು ಮಾಡಿದ್ದೇವೆ" ಎಂದು ಹೇಳುವಂತಹದ್ದು ಸರಿಯಲ್ಲ. ಎಫ್.ಐ.ಆರ್., ದಾಖಲಾಗಲಿ. ನೇರವಾಗಿ ಅವರೇ

ಮಾತನಾಡಿದ್ದಾರೆ. He is the authority. ತಾವು ಅವರ ಮೇಲೆ ಕ್ರಮ ತೆಗೆದುಕೊಳ್ಳುವುದನ್ನು ಬಿಟ್ಟು, ಕೆಳಗಿನವರ ಮೇಲೆ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಾ, ಇದು ಸರಿಯಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಸದನದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಸಹ ಇದ್ದಾರೆ. ಈ ವಿಷಯ ಬಹಳ ಗಂಭೀರವಾಗಿ ಚರ್ಚೆಯಾಯಿತು. ಚರ್ಚೆ ಮಾಡಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ತೀರ್ಮಾನವಾಯಿತು. ಒಬ್ಬ ದಲಿತ ಸಬ್–ಇನ್ಸ್‌ಪೆಕ್ಟರ್ ಅನ್ನು ಅಮಾನತು ಮಾಡಲಾಗಿದೆ. ಅಲ್ಲಿರುವಂತಹ ಎಲ್ಲಾ ಅಧಿಕಾರಿಗಳನ್ನು ಅಮಾನತು ಮಾಡಬೇಕಾಗಿತ್ತು.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, no, no. ತಾವು ಅವರನ್ನು ಬಲಿಪಶು ಮಾಡುವುದಕ್ಕೆ ಆಗುವುದಿಲ್ಲ. I am very sorry in this issue. ಎಲ್ಲರನ್ನೂ ಮಾಡಿ. ಯಾವಾಗ ಹರಕೆಯ ಕುರಿ ಸಿಗುತ್ತದೆ ಎಂದು ಅದನ್ನು ಬಲಿಪಶು ಮಾಡಿದರೆ ಆಗುವುದಿಲ್ಲ.

ಎರಡನೆಯ ವಿಚಾರವೇನೆಂದರೆ, ಮಾನ್ಯ ಮುಖ್ಯಮಂತ್ರಿಯವರು ಮತ್ತು ತಾವೂ ಕೂಡ ಸದನದಲ್ಲಿ ಇದ್ದೀರಿ. ಈ ಸದನವನ್ನು ಸರ್ಕಾರ ಗಂಭೀರವಾಗಿ ತೆಗೆದುಕೊಂಡಿಲ್ಲ. ಮಂತ್ರಿಗಳ ಸಮ್ಮತದಿಂದಲೋ, ಬೇರೆ ವಿಚಾರವೋ ಏನೋ ಎಂಬುದು ನಮಗೆ ಗೊತ್ತಿಲ್ಲ. 7ನೇ ತಾರೀಖಿನಿಂದ ಇವತ್ತಿನವರೆಗೂ ಕೂಡ 1/3 ರಷ್ಟು ಪ್ರಶ್ನೆಗಳಿಗೆ ಸಹ ಸರ್ಕಾರದಿಂದ ಉತ್ತರ ಬರುತ್ತಿಲ್ಲ. ಮಾನ್ಯ ಸದಸ್ಯರುಗಳಿಗೆ ಕಾರಣ ಏನು ಎಂಬುದನ್ನು ತಿಳಿಸಿದರೆ ಬಹಳ ಸಂತೋಷ.

(ಮುಂದು)

(410)/17-3-2022/11-50/ಎಲ್‌ಎ/ಎಂಡಿ

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ಈ ಪ್ರಕರಣದಲ್ಲಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇಲ್ಲಿ ಈಗ ಗೃಹ ಸಚಿವರು ಮತ್ತು

ಕಾನೂನು ಸಚಿವರು ಇಬ್ಬರೂ ಇದ್ದಾರೆ. ಒಂದು ಠಾಣೆಯಲ್ಲಿ ಎಫ್ಎಆರ್ ದಾಖಲಾದರೆ, ಎಷ್ಟು ಗಂಟೆಯೊಳಗೆ ಎಸ್‌ಪಿ ಯವರಿಗೆ ಮಾಹಿತಿಯನ್ನು ಕೊಡಬೇಕು ಎನ್ನುವುದು ಎಲ್ಲರಿಗೂ ಗೊತ್ತಿರುವ ತಹ ವಿಚಾರ. ಈ ವಿಚಾರದ ಬಗ್ಗೆ ಎಸ್‌ಪಿ ಯವರಿಗೆ ಮಾಹಿತಿ ಇದ್ದರೂ ಕೂಡ ಏಕೆ ಎಸ್‌ಪಿ ಯವರು ಕ್ರಮ ತೆಗೆದುಕೊಳ್ಳಲಿಲ್ಲ, ತನಿಖೆಗೆ ಆದೇಶ ಮಾಡಲಿಲ್ಲ? ಎಸ್‌ಐ ಅಥವಾ ಸರ್ಕಲ್ ಇನ್ಸ್‌ಪೆಕ್ಟರ್ ರವರು ತಿಳಿದೊ ತಿಳಿಯದೊ ಅಥವಾ ಯಾರದೊ ಒತ್ತಡಕ್ಕೆ ಮಣಿದು ಎಫ್‌ಐಆರ್ ದಾಖಲು ಮಾಡಿದ್ದಾರೆ. ಇಂತಹ ವಿಚಾರಗಳು ಎಸ್‌ಪಿ ಯವರಿಗೆ ತಿಳಿದ ತಕ್ಷಣ ಅವರು ನಮ್ಮ ಕೆಳಹಂತದ ಅಧಿಕಾರಿಗಳು ಈ ರೀತಿ ಮಾಡಿದ್ದಾರೆ, ಅದಕ್ಕಾಗಿ ನಾನು ತನಿಖೆಗೆ ಆದೇಶ ಮಾಡಿದ್ದೇನೆ ಎಂದು ಏಕೆ ಹೇಳಲಿಲ್ಲ? ಆದ್ದರಿಂದ ಎಸ್‌ಪಿ ಯವರಿಗೂ ಇದರಲ್ಲಿ ಜವಾಬ್ದಾರಿ ಇದೆ. ಆದ್ದರಿಂದ ಎಸ್‌ಐ ಮೇಲೆ ಮಾತ್ರವಲ್ಲ ಸಂಬಂಧಪಟ್ಟ ಎಲ್ಲಾ ಅಧಿಕಾರಗಳ ಮೇಲೆ ತನಿಖೆ ಮಾಡಿ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

**ಸಭಾಪತಿಯವರು:–** ಮಾನ್ಯ ತಿಪ್ಪೇಸ್ವಾಮಿಯವರೆ ನಿಮ್ಮ ವಿಷಯವನ್ನು ನಿಯಮ ೬೮ಕ್ಕೆ convert ಮಾಡಲಾಗಿದೆ.

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–**ಮಾನ್ಯ ಸಭಾಪತಿಗಳೆ, ಮಾನ್ಯ ವಿರೋಧ ಪಕ್ಷದ ನಾಯಕರಾದ ಮಾನ್ಯ ಬಿ.ಕೆ.ಹರಿಪ್ರಸಾದರವರು ಹೇಳಿದ ವಿಷಯಕ್ಕೆ ಸಂಬಂಧಪಟ್ಟ ಹಾಗೆ, ನಿನ್ನೆ ನಾನು ವಿಧಾನಸಭೆಯಲ್ಲಿಯು ಈ ರೀತಿ ಪ್ರಶ್ನೆಗಳಿಗೆ ಉತ್ತರ ಕೊಡದೆ, ಸಮಯವನ್ನು ತೆಗೆದುಕೊಳ್ಳುವುದು, ಏನೊ ಒಂದು ಹೇಳುವುದನ್ನ ನಾನು as Parliamentary Affairs and Legislation Minister ಆಗಿ tolerate ಮಾಡುವುದಿಲ್ಲ ಎಂದು ಮಾನ್ಯ ಸಭಾಧ್ಯಕ್ಷರಿಗೆ ಹೇಳಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಈ ವಿಚಾರವನ್ನು ತಂದಿರಲಿಲ್ಲ. ಅದಕ್ಕಾಗಿ ಈಗ ಹೇಳುತ್ತಿದ್ದೇನೆ. ಈ ರೀತಿ ಮಾಡುವುದನ್ನು ನಾನು tolerate ಮಾಡುವುದಿಲ್ಲ ಎಂದು ಹೇಳಿದ್ದೇನೆ. Including unstarred questions ಉತ್ತರ ಕೊಡಲೇಬೇಕು. ನಿನ್ನೆ ದಿವಸ ಸುಮಾರು ಇನ್ನೂರಕ್ಕೂ ಹೆಚ್ಚು unstarred questions ಪ್ರಶ್ನೆಗಳಿಗೆ ಕೇವಲ ೯೫ ಪ್ರಶ್ನೆಗಳಿಗೆ ಮಾತ್ರ ಉತ್ತರಗಳು ಬಂದಿದ್ದವು. ಅದನ್ನು ನಾನೇ objection

ಮಾಡಿದ್ದೇನೆ. Government Offices are not supposed to behave like this with Legislature. We are taking up action.

**ಶ್ರೀ ಬಿ.ಕೆ.ಹರಿಪ್ರಸಾದ್(ಮಾನ್ಯ ವಿರೋಧ ಪಕ್ಷದ ನಾಯಕರು**):- ಮಾನ್ಯ ಸಭಾಪತಿಗಳೆ, ತಾವು ಹೇಳುವುದನ್ನು ಒಪ್ಪುತ್ತೇವೆ. ಸದನವನ್ನು ಗಂಭೀರವಾಗಿ ತೆಗೆದುಕೊಳ್ಳದಿದ್ದರೆ ಪ್ರಶ್ನೋತ್ತರವೆ ಬೇಡ ಎಂದು ಹೇಳಿಬಿಡಿ. ಸದಸ್ಯರು ಬೆಳಗ್ಗೆಯಿಂದ ರಾತ್ರಿವರೆಗೆ ಕಷ್ಟಪಟ್ಟು ಮಾಹಿತಿ ಸಂಗ್ರಹ ಮಾಡಿ ಪ್ರಶ್ನೆಯನ್ನು ಕೇಳಿರುತ್ತಾರೆ. ಆ ಪ್ರಶ್ನೆಗಳಿಗೆ ಉತ್ತರ ಕೊಡದಷ್ಟು ಕೆಲಸವನ್ನು ಅಧಿಕಾರಿಗಳು ಮಾಡುತ್ತಾರೆ ಎನ್ನುವುದಾದರೆ ನಮ್ಮ ರಾಜ್ಯ ಯಾವುದೊ ಮಟ್ಟಕ್ಕೆ ಹೋಗಬೇಕಾಗಿತ್ತು. ಸದಸ್ಯರು ಕೇಳುವ ಪ್ರಶ್ನೆಗಳಿಗೆ ಉತ್ತರವನ್ನು ಕೊಡಬಾರದು ಎನ್ನುವ ಉದಾಸೀನತೆ ಇದ್ದರೆ ಪ್ರಶ್ನೋತ್ತರ ಅವಧಿಯನ್ನೇ ತೆಗೆದು ಬಿಡಿ. ನಾವು ಬೇರೆ ಏನಾದರೂ ಚರ್ಚೆ ಮಾಡುತ್ತೇವೆ. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಏನಾದರೂ ಆಶ್ವಾಸನೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಗಳೆ, ತಾವು ಪ್ರತಿ ದಿನ ಇಂತಹ ಮಂತ್ರಿಗಳು ಸದನದಲ್ಲಿ ಕಡ್ಡಾಯವಾಗಿ ಇರಬೇಕು ಎಂದು ಓದುತ್ತೀರಿ. ಆದರೆ ಮಂತ್ರಿಗಳು ಇರುವುದೇ ಇಲ್ಲ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಒಂದು ಆದೇಶವನ್ನು ಕೊಡಬೇಕು. ಪದೇ-ಪದೇ ನಾವು ಮಾನ್ಯ ನಾರಾಯಣಸ್ವಾಮಿಯವರಿಗೆ ಹೇಳಬೇಕಾಗುತ್ತದೆ.

**ಶ್ರೀ ಬಸವರಾಜ ಬೊಮ್ಮಾಯಿ(ಮಾನ್ಯ ಮುಖ್ಯಮಂತ್ರಿಗಳು**):- ಮಾನ್ಯ ಸಭಾಪತಿಗಳೆ, ಈ ವಿಷಯದ ಬಗ್ಗೆ ವಿರೋಧ ಪಕ್ಷದ ನಾಯಕರು ಹೇಳಿದರು ಮತ್ತು ಸಂಸದೀಯ ವ್ಯವಹಾರ ಸಚಿವರು ಈಗಾಗಲೇ ಅದರ ಬಗ್ಗೆ ಹೇಳಿದ್ದಾರೆ. ಇದನ್ನು ನಾನೂ ಗಂಭೀರವಾಗಿ ತೆಗೆದುಕೊಂಡು ಎಲ್ಲಾ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳಿಗೆ ಸೂಚನೆಯನ್ನು ಕೊಡುತ್ತೇನೆ. ಯಾವುದಾದರೂ genuine ಆಗಿದ್ದರೆ ಅಥವಾ state level ವಿಚಾರಗಳನ್ನು ಬಿಟ್ಟು ಇಲ್ಲೇ ಸಿಗುವಂತಹ ಎಲ್ಲಾ ಮಾಹಿತಿಯನ್ನು ಕೂಡಲೇ ಒದಗಿಸಬೇಕೆಂದು ತಿಳಿಸಿದ್ದೇನೆ. ಯಾವುದನ್ನು ತಡಮಾಡಬಾರದು.

**ಸಭಾಪತಿಯವರು:–** ಒಂದೊಂದು ಪ್ರಶ್ನೆಗೆ ತಿಂಗಳಗಟ್ಟಲೆ ಉತ್ತರ ಒದಗಿಸಲು ಸಮಯವನ್ನು ತೆಗೆದುಕೊಳ್ಳುತ್ತಾರೆ.

**ಶ್ರೀ ಬಸವರಾಜ ಬೊಮ್ಮಾಯಿ:–** ಯಾವ ಅಧಿಕಾರಿಗಳಿಂದ ಮಾಹಿತಿ ಒದಗಿಸಲು ತಡವಾಗುತ್ತದೆ, ಅಂತವರ ಮೇಲೆ ಕ್ರಮ ತೆಗೆದುಕೊಳ್ಳಲು ನಾನು ತಿಳಿಸುತ್ತೇನೆ.

**ಸಭಾಪತಿಯವರು:–** ಯಾವ ಇಲಾಖೆಯ ಪ್ರಶ್ನೆಗಳು ಬಂದಿರುತ್ತವೆ, ಆ ಸಚಿವರನ್ನೆ ಕಡ್ಡಾಯವಾಗಿ ಸದನದಲ್ಲಿರಬೇಕು ಎಂದು ಮಾಡುವುದು ಒಳ್ಳೆಯದು. ಗಮನ ಸೆಳೆಯುವ ಸೂಚನೆ, ನಿಯಮ 330 ಯಾವ ಇಲಾಖೆಗೆ ಬಂದಿರುತ್ತವೆ ಅವರನ್ನೆ ಕಡ್ಡಾಯ ಮಾಡಿದರೆ ಎರಡು ಸದನಗಳಿಗೆ overlap ಆಗುವುದಿಲ್ಲ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಗಳೆ, Zero Hour, Calling Attentions ಇವುಗಳಿಂದ ಸ್ವಲ್ಪ modulate ಆಗುತ್ತದೆ. ಇಲ್ಲಿಗೆ ಗಮನ ಸೆಳೆಯುವ ಸೂಚನೆ ಬಂದಿರುತ್ತದೆ, ಅದನ್ನು ವಿಧಾನಸಭೆಯಲ್ಲಿ raise ಮಾಡುತ್ತಾರೆ. Coordination ಇಲ್ಲದೆ ಹೀಗೆ ಆಗುತ್ತದೆ. ನಿನ್ನೆ ನನ್ನದು Calling Attention ವಿಷಯ ಇತ್ತು, ನಾನು ವಿಧಾನಸಭೆಯಲ್ಲಿ ಇದ್ದೆ. ಅದಕ್ಕಾಗಿ ಮಾನ್ಯ ಸಭಾಧ್ಯಕ್ಷರು ಮತ್ತು ತಾವು ಕುಳಿತು coordinate ಮಾಡಿದರೆ ಒಳ್ಳೆಯದು. ಕೆಳಮನೆಯಲ್ಲಿ ಮಂತ್ರಿಗಳಿಗೆ duty ಹಾಕಿದಾಗ ನೀವು ಮೇಲ್ಮನೆಗೆ ಹೋಗಿ ಎಂದು ಹೇಳಲು ಬರುವುದಿಲ್ಲ. ಇದರಿಂದ ಸ್ವಲ್ಪ ತೊಂದರೆಯಾಗಿದೆ. Duty ಹಾಕಿರುವ ಮಂತ್ರಿಗಳು ಬರದಿದ್ದರೆ ನೀವು ಕ್ರಮ ತೆಗೆದುಕೊಳ್ಳಿ. ಆದರೆ ಗಮನ ಸೆಳೆಯುವ ಸೂಚನೆ ಈ ಮನೆಗೆ ಬಂದಿರುತ್ತದೆ, duty ಕೆಳಮನೆಯಲ್ಲಿ ಇರುತ್ತದೆ. ಹೀಗಾಗಿ ನಮಗೆ ಸ್ವಲ್ಪ ತೊಂದರೆಯಾಗಿದೆ. ಇದನ್ನು ತಾವು ಸ್ವಲ್ಪ ನೋಡಿಕೊಳ್ಳಿ. Exhaustive questions ಗಳನ್ನು ನಿಮ್ಮ ಹಂತದಲ್ಲಿಯೇ scrutinize ಮಾಡಬೇಕು ಸರ್. Scrutinize ಮಾಡುವುದು ನಿಮ್ಮ ಕಾರ್ಯದರ್ಶಿಯವರ ಕೆಲಸ. ಮಾಹತಿಯನ್ನು ಎಷ್ಟು ಕೇಳುತ್ತಾರೆ, ಎಷ್ಟು ದಿನಗಳಲ್ಲಿ ಕೊಡುವುಕ್ಕೆ ಸಾಧ್ಯ, 15 ದಿವಸಗಳಲ್ಲಿ ನಾವು ಎಷ್ಟು ಮಾಹಿತಿಯನ್ನು ಕೊಡಬಹುದು ಎನ್ನುವಂಥಾದ್ದನ್ನು ಮಾತ್ರ starred question ಎಂದು ಮಾಡಿಬಿಟ್ಟರೆ ನಿಮ್ಮ ಹಂತದಲ್ಲಿಯೇ ಸಮಸ್ಯೆ ಪರಿಹಾರವಾಗುತ್ತದೆ. ಹಾಗೂ ತಡವಾದರೆ, we will take action.

**೦7. ಪ್ರಕಟಣೆ**

**–ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಸಚಿವರ ಕುರಿತು**

**ಸಭಾಪತಿಯವರು:–** ನಾನು ಈ ಬಗ್ಗೆ instructions ಕೊಡುತ್ತೇನೆ. ಇಂದು ಕಡ್ಡಾಯವಾಗಿ ಸದನದಲ್ಲಿ ಹಾಜರಿರಬೇಕಾದ ಮಾನ್ಯ ಸಚಿವರು ಶ್ರೀ ಮುರುಗೇಶ ನಿರಾಣಿ, ಶ್ರೀ ಎಸ್.ಟಿ.ಸೋಮಶೇಖರ್, ಶ್ರೀ ಬಿ.ಎ.ಬಸವರಾಜ. ಶ್ರೀ ಎಂ. ನಾಗರಾಜು. ಶ್ರೀ ಆಚಾರ್ ಹಾಲಪ್ಪ ಬಸಪ್ಪ, ಶ್ರೀ ಶಂಕರ್ ಬಿ. ಪಾಟೀಲ್.

**೦8. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**(ಅ) ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಹಾಗೂ ಅನುದಾನಿತ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಸ್.ಸಿ/ಎಸ್.ಟಿ/ಓಬಿಸಿ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ಹಣ ಬಿಡುಗಡೆಯಾಗದಿರುವ ಬಗ್ಗೆ.**

--------

**ಶ್ರೀ ಮರಿತಿಬ್ಬೇಗೌಡ( ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ಅನುದಾನ ರಹಿತ, ಅನುದಾನಿತ ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಇನ್ನಿತರೆ ಎಲ್ಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ಎಸ್ಎಸಿ/ಎಸ್ಟಿ ಹಾಗೂ ಓ.ಬಿ.ಸಿ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ನೀಡಲಾಗುವ ಶುಲ್ಕ ವಿನಾಯಿತಿ ಹಣವಾದ ಪ್ರವೇಶ, ಪರೀಕ್ಷೆ, ಬೋಧನೆ ಹಾಗೂ ಇತರೆ ಶುಲ್ಕಗಳನ್ನು ಆಯಾ ಕಾಲೇಜಿನ ಪ್ರಾಂಶುಪಾಲರ ಖಾತೆಗೆ ಇಲಾಖೆ ಮರು ಪಾವತಿ ಮಾಡದೆ. ಕಳೆದ ಎರಡು ವರ್ಷಗಳಿಂದ ವಿದ್ಯಾರ್ಥಿಗಳ ಖಾತೆಗೆ ನೇರವಾಗಿ ಜಮಾ ಮಾಡುತ್ತಿರುವುದರಿಂದ ಕಾಲೇಜಿಗೆ ಬರಬೇಕಾದ ಯಾವುದೇ ಶುಲ್ಕಗಳು ಜಮಾ ಮಾಡಲಾಗಿದೆ. ಜಮಾ ಆಗಿರುವ ಬಗ್ಗೆ ಇಲಾಖೆಯು ಸಹ ಕಾಲೇಕುಗಳಿಗೆ ಸಕಾಲದಲ್ಲಿ ಮಾಹಿತಿಯನ್ನು ನೀಡದೆ ಇರುವುದರಿಂದ ಕಾಲೇಜುಗಳ ನಿರ್ವಹಣೆಯು ತುಂಬಾ ಕಷ್ಟದಾಯಕವಾಗಿದೆ.

ಆದ್ದರಿಂದ ಇಲಾಖೆಗಳಿಂದ ಸಂಸ್ಥೆಗಳಿಗೆ ವಿದ್ಯಾರ್ಥಿಗಳ ಪರವಾಗಿ ನೀಡಬೇಕಾಗಿರುವ ಶುಲ್ಕವಿನಾಯಿತಿ ಹಣವನ್ನು ಪ್ರಾಂಶುಪಾಲರ ಖಾತೆಗೆ ಕಡ್ಡಾಯವಾಗಿ ಜಮೆ ಮಾಡುವಂತೆ ಸೂಕ್ತ ಕ್ರಮ ವಹಿಸಬೇಕೆಂದು ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರನ್ನು ಕೋರುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಗಳೆ,  ಮಾನ್ಯ ಸದಸ್ಯರಾದ ಮರಿತಿಬ್ಬೇಗೌಡರು ಶೂನ್ಯವೇಳೆಯಲ್ಲಿ ಎತ್ತಿರುವ ವಿಷಯಕ್ಕೆ ವಿವರವಾದ ಉತ್ತರವನ್ನು ನಂತರ ಕೊಡುತ್ತೇನೆ. ಈಗ ಸಂಕ್ಷಿಪ್ತವಾಗಿ ಹೇಳುತ್ತೇನೆ. ಮಕ್ಕಳು ಮತ್ತು ಪಾಲಕರು ನಮ್ಮ ಹತ್ತಿರ ಬಂದು, ನೀವು ಮೊದಲು ಕಾಲೇಜಿಗೆ ಶುಲ್ಕವನ್ನು ಕಟ್ಟಿ, ಸರ್ಕಾರ ಯಾವಾಗ ಕೊಡುತ್ತದೊ ಗೊತ್ತಿಲ್ಲ ಎಂದು ಹೇಳುತ್ತಾರೆ ಎಂದು ಹೇಳಿದರು. ನಾವು ಮೊದಲೇ ಶುಲ್ಕವನ್ನು ಕಟ್ಟುತ್ತೇವೆ, ನಂತರ ಸರ್ಕಾರ ಹಣವನ್ನು ಕಾಲೇಜಿಗೆ ಕೊಟ್ಟಾಗ ಅವರು ನಮಗೆ ಹಣವನ್ನು ವಾಪಸ್ ಕೊಡುತ್ತಿಲ್ಲ ಎನ್ನುವ ದೂರುಗಳು ಬಂದವು. ಆ ಹಿನ್ನಲೆಯಲ್ಲಿ ಎಲ್ಲಾ ಅಧಿಕಾರಿಗಳು ಸೇರಿ ಒಂದು ನಿರ್ಧಾರವನ್ನು ತೆಗೆದುಕೊಂಡು ಮಕ್ಕಳ ಖಾತೆಗೆ ನೇರವಾಗಿ ಹಣವನ್ನು ಹಾಕುವಂತಹ ವ್ಯವಸ್ಥೆಯನ್ನು ಮಾಡಿದ್ದೇವೆ. ಈಗ ಮಾನ್ಯ ಸದಸ್ಯರು ಮಕ್ಕಳ ಖಾತೆಗೆ ಹಣವನ್ನು ಹಾಕುತ್ತೀರಿ ಆದರೆ ಅದು ಪ್ರಾಂಶುಪಾಲರಿಗೆ ಹೋಗುತ್ತಿಲ್ಲ, ನಮ್ಮ ಖಾತೆಗೆ ಹಣ ಬರುತ್ತಿಲ್ಲ ಎಂದು ಪ್ರಾಂಶುಪಾಲರಿಂದ ದೂರು ಬರುತ್ತಿದೆ ,  ಅದಕ್ಕಾಗಿ ಪ್ರಾಂಶುಪಾಲರ ಖಾತೆಗೆ ಕೊಡಬೇಕು ಎಂದು ಹೇಳುತ್ತಿದ್ದಾರೆ. ಅದು ಸ್ವಲ್ಪಮಟ್ಟಿಗೆ ಸತ್ಯವು ಇರಬಹುದು. ಆದರೆ ಮಕ್ಕಳು ಮತ್ತು ಅವರ ಪಾಲಕರು ಕಾಲೇಜಿನವರು ಮೊದಲು ಶುಲ್ಕ ಕಟ್ಟಿ, ಸರ್ಕಾರದಿಂದ ಹಣ ಬಂದಾಗ ನಿಮಗೆ ವಾಪಸ್ ಕೊಡುತ್ತೇವೆ ಎಂದು ಶುಲ್ಕವನ್ನು ಕಟ್ಟಿಸಿಕೊಳ್ಳುತ್ತಾರೆ, ಆದರೆ ನಂತರ ನಮಗೆ ಹಣವನ್ನು ಕೊಡುವುದಿಲ್ಲ ಎನ್ನುವ ದೂರು ಇದೆ. ಇದರ ಬಗ್ಗೆ ವಿವರವಾದ ಮಾಹಿತಿಯನ್ನು ತೆಗೆದುಕೊಂಡು, ಮಾನ್ಯ ಸದಸ್ಯರ ಸಲಹೆಯನ್ನು ಪಡೆದು ನಂತರ ಇದರ ಬಗ್ಗೆ ವಿವವರವಾದ ಮಾಹಿತಿಯನ್ನು ಕೊಡುತ್ತೇನೆ.

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(411)17-03-2022(12-00)bsd-md

**ಆ) ಕೊಡಗು ಜಿಲ್ಲೆಯ ಕಾಫಿ ಬೆಳೆಗಾರರಿಗೆ 10 ಹೆಚ್.ಪಿ ವರೆಗೆ ಉಚಿತ ವಿದ್ಯುತ್ ನೀಡುವ ಬಗ್ಗೆ.**

**ಶ್ರೀ ಎಂ.ಪಿ. ಸುಜಾ ಕುಶಾಲಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕೊಡಗು ಜಿಲ್ಲೆಯ ರೈತರು ಮತ್ತು ಬೆಳೆಗಾರರು ಸರ್ಕಾರಕ್ಕೆ 10 ಹೆಚ್.ಪಿ ಪಂಪ್‌ಸೆಟ್‌ಗೆ ಉಚಿತ ವಿದ್ಯುತ್‌ಗೆ ಹಲವಅರು ಬಾರಿ ಸರ್ಕಾರದ ಮುಂದೆ ಬೇಡಿಕೆ ಇಟ್ಟಿದ್ದು, ಇದಕ್ಕೆ ಇದುವರೆಗೂ ಯಾವುದೇ ರೀತಿಯ ಉತ್ತರ ಸಿಕ್ಕಿರುವುದಿಲ್ಲ.

ಎಲ್‌ಟಿ-4 ಎಂದರೆ (ಲಾ-ಟೆನ್ಷನ್) ಇದರಲ್ಲಿ ಎ.ಬಿ.ಸಿ ಎಂಬ 3 ವಿಭಾಗಗಳಿದ್ದು, ಎ ವಿಭಾಗದಲ್ಲಿ 10 ಹೆಚ್.ಪಿ ತನಕ ಉಚಿತವಾಗಿಯೇ ವಿದ್ಯುತ್ ನೀಡುತ್ತಿವೆ. ಇದರಲ್ಲಿ ಗದ್ದೆ ಕೃಷಿ, ತೆಂಗು, ಅಡಿಕೆ ಬೆಳೆ ಇತ್ಯಾದಿ. ಬಿ ವಿಭಾಗದಲ್ಲಿ ನರ್ಸರಿ, ಹುಲ್ಲುಗಾವಲು, ಸರ್ಕಾರಿ ಉದ್ಯಾನವನ, ಅರಣ್ಯ ನರ್ಸರಿ ಇತ್ಯಾದಿಗಳು ಬರುತ್ತವೆ ಮತ್ತು ವಿದ್ಯುತ್ ಉಚಿತವಾಗಿದೆ.

ಎಲ್‌ಟಿ- 4ಸಿ ವಿಭಾಗದಲ್ಲಿ ಕಾಫಿ, ಖಾಸಗಿ ನರ್ಸರಿಗಳಂತಹ ಬೆಳೆಗಳನ್ನು ಒಳಗೊಂಡಿರುತ್ತದೆ. ಆದರೆ ಇದಕ್ಕೆ ಉಚಿತ ವಿದ್ಯುತ್ ಇರುವುದಿಲ್ಲ. ರೈತರು ಅಥವಾ ಬೆಳೆಗಾರರು ಇದರ ನಿಗದಿತ ಬೆಲೆಯನ್ನು ಪಾವತಿಸಲೇಬೇಕಾಗಿದೆ. ಇದು ಪ್ರಸ್ತುತ ಎಲ್ಲಾ ಜಿಲ್ಲೆಗಳಲ್ಲೂ ಒಂದೇ ರೀತಿ ಇದೆ. ಉಚಿತ ವಿದ್ಯುತ್‌ನ ಪಟ್ಟಿಯಲ್ಲಿ ತಂಬಾಕು ಬೆಳೆ, ಕಬ್ಬು ಬೆಳೆಗಳಂತಹ ಕೃಷಿಗಳು ಸೇರಿವೆ. ಆದರೆ ಕಾಫಿ ಬೆಳೆ ಉಚಿತ ವಿದ್ಯುತ್ ಪಟ್ಟಿಯಲ್ಲಿ ಇಲ್ಲ.

ಆದರೆ ಎಲ್‌ಟಿ-4 ಎ ನಿಯಮದಂತೆ ಕೃಷಿ ಕೆಲಸ ಕಾರ್ಯಕ್ಕೆ ಉಚಿತ ವಿದ್ಯುತ್ ಇದೆ. ಆದರೆ ಕೊಡಗಿನಲ್ಲಿ ಭತ್ತ ಹಾಗೂ ಮತ್ತಿತರ ಕೃಷಿ ಕೆಲಸ ನಡೆಯುವುದು ಕೇವಲ ಮಳೆಗಾಲದ ಅವಧಿಯಲ್ಲಿ ಮಾತ್ರ. ಕೊಡಗು ಜಿಲ್ಲೆಯಲ್ಲಿ ಮುಖ್ಯವಾಗಿ ಬೇಕಾಗಿರುವುದು ಕಾಫಿ ತೋಟಗಳಿಗೆ ನೀರು ಹಾಯಿಸುವ ಸಂದರ್ಭದಲ್ಲಿ ಮಾತ್ರ. ಅದೂ ಕೇವಲ ಕೆಲ ದಿನಗಳ ಮಟ್ಟಿಗಷ್ಟೇ. ರಾಜ್ಯದ ಇತರ ಜಿಲ್ಲೆಗಳಲ್ಲಿ ರೈತರು ವಿವಿಧ ಕೃಷಿಗಳನ್ನು ವರ್ಷವಿಡಿ ಬೆಳೆಯುತ್ತಾರೆ. ಇದಕ್ಕೆ ನಿರಂತರವಾಗಿ ನೀರಾವರಿ ಬಳಕೆಯಾಗುತ್ತದೆ. ತಂಬಾಕು ಮತ್ತು ಕಬ್ಬುಗಳ ಬೆಳೆಗಳಿಗೆ ಹಲವಾರು ತಿಂಗಳು ನೀರು ಬೇಕಿದ್ದು, ವಿದ್ಯುತ್

ಬಳಸಲೇಬೇಕಾಗುತ್ತದೆ. ಈ ವ್ಯತ್ಯಾಸಗಳನ್ನು ಸರ್ಕಾರ ಅಥವಾ ವಿದ್ಯುತ್ ಇಲಾಖೆ ಗಮನಿಸಬೇಕಾಗಿದೆ.

10 ಹೆಚ್.ಪಿ ಪಂಪ್‌ಸೆಟ್‌ಗೆ ಉಚಿತ ವಿದ್ಯುತ್ ನೀಡುವ ಯೋಜನೆಯನ್ನು ವಿದ್ಯುತ್ ಇಲಾಖೆ ಅಥವಾ ಸರ್ಕಾರ ಅತೀ ಶೀಘ್ರದಲ್ಲಿ ಈ ಯೋಜನೆಯನ್ನು ಕೈಗೆತ್ತಿಕೊಂಡು ಕೊಡಗು ಜಿಲ್ಲೆಯ ರೈತರು ಹಾಗೂ ಬೆಳೆಗಾರರ ಬೇಡಿಕೆಯನ್ನು ಈಡೇರಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಶೂನ್ಯವೇಳೆಯ ಪ್ರಶ್ನೆಗೆ ಮಾನ್ಯ ಇಂಧನ ಸಚಿವರಿಂದ ಉತ್ತರವನ್ನು ಮಂಡಿಸುತ್ತೇನೆ.

**ಇ) ವಿಷಯ: ಕುವೆಂಪು ವಿಶ್ವವಿದ್ಯಾಲಯದಲ್ಲಿ ದೂರ ಶಿಕ್ಷಣ ಕೇಂದ್ರದಲ್ಲಿ ಪರೀಕ್ಷೆ ನಡೆಯದಿರುವ ಬಗ್ಗೆ.**

**ಡಾ: ತಳವಾರ ಸಾಬಣ್ಣ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ,2020 ಜನವರಿಯಲ್ಲಿ ಶಿವಮೊಗ್ಗ ಕುವೆಂಪು ವಿಶ್ವವಿದ್ಯಲಯದ ದೂರ ಶಿಕ್ಷಣ ಕೇಂದ್ರದಲ್ಲಿ ವಿವಿಧ ವಿಷಯಗಳಿಗೆ ಪಿ.ಜಿ ಕೋರ್ಸ್‌ಗೆ ಸೇರಿಕೊಂಡಿರುವ ವಿದ್ಯಾರ್ಥಿಗಳಿಗೆ ಎರಡು ವರ್ಷಗಳು ಕಳೆದು ಮೂರನೇ ವರ್ಷಕ್ಕೆ ಕಾಲಿಟ್ಟರೂ ಇನ್ನೂ ಪ್ರಥಮ ವರ್ಷ ಹಾಗೂ ದ್ವಿತೀಯ ವರ್ಷದ ಪರೀಕ್ಷೆಗಳು ನಡೆದಿಲ್ಲ. ವಿಶ್ವವಿದ್ಯಾಲಯವು ಸುಮಾರು 24 ಸಾವಿರ ವಿದ್ಯಾರ್ಥಿಗಳ ಜೀವನದ ಜೊತೆ ಚೆಲ್ಲಾಟವಾಡುತ್ತಿದೆ. ವಿದ್ಯಾರ್ಥಿಗಳು 2 ವರ್ಷದ ಶುಲ್ಕವನ್ನು ಭರಿಸಿರುತ್ತಾರೆ. 2 ವರ್ಷಗಳಲ್ಲಿ ಮುಗಿಯಬೇಕಾದ ಪಿ.ಜಿ ಕೋರ್ಸ್ 3 ವರ್ಷವಾದರೂ ಮುಗಿಯುತ್ತಿಲ್ಲ. ಈ ವಿದ್ಯಾರ್ಥಿಗಳು ಕೆ-ಸೆಟ್ ಮತ್ತು ಕೆಇಎ ಅವರು ನಡೆಸುವ ಪರೀಕ್ಷೆಗಳಿಂದ ವಂಚಿತರಾಗಿದ್ದಾರೆ. ಕೆಎಸ್‌ಓ ಯು ಹಾಗೂ ಇಗ್ನೊ ವಿಶ್ವವಿದ್ಯಾಲಯಗಳು ಪ್ರಥಮ ವರ್ಷ ಪ್ರಮೋಟ್ ಮಾಡಿ ಫಲಿತಾಂಶವನ್ನು ಪ್ರಕಟಿಸಿರುತ್ತವೆ. ಕೋವಿಡ್-19 ಬಂದಾಗ 10ನೇ ತರಗತಿ ಮತ್ತು 12 ನೇ ತರಗತಿ ಅಂದರೆ 16-18ನೇ ವಯಸ್ಸಿನ ಮಕ್ಕಳು ಪರೀಕ್ಷೆ ಬರೆದಿದ್ದಾರೆ. 22-23 ವಯಸ್ಸಿನ ವಿದ್ಯಾರ್ಥಿಗಳು ಪರೀಕೆ ಬರೆಯುತ್ತಿರಲಿಲ್ಲವೇ?

ವಿಶ್ವವಿದ್ಯಾಲಯದ ದೂರ ಶಿಕ್ಷಣ ಕೇಂದ್ರವು ಪರೀಕ್ಷೆಯ ದಿನಾಂಕಗಳನ್ನು ಸರಿಯಾಗಿ ನಿಗದಿಗೊಳಸದೇ ಹಲವಾರು ಬಾರಿ ಪರೀಕ್ಷಾ ದಿನಾಂಕಗಳನ್ನು ಮುಂದೂಡುತ್ತಾ ಬಂದಿರುತ್ತದೆ. ಇದರಿಂದ ವಿಶ್ವವಿದ್ಯಾಲಯದ ಸುಮಾರು 24 ಸಾವಿರ ವಿದ್ಯಾರ್ಥಿಗಳಗೆ ಸರಿಯಾಗಿ ಪರೀಕ್ಷೆ ನಡೆಸದೇ ಇರುವುದರಿಂದ ಅವರ ಮುಂದಿನ ಅಧ್ಯಯನ ಮತ್ತು ಭವಿಷ್ಯಕ್ಕೆ ತೊಂದರೆಯಾಗುತ್ತಿದೆ. ಸದರಿ ವಿದ್ಯಾರ್ಥಿಗಳನ್ನು ಪ್ರಥಮ ವರ್ಷ ಪ್ರಮೋಟ್ ಮಾಡಿ ಫಲಿತಾಂಸ ಪ್ರಕಟಿಸಿದರೆ ಅನುಕೂಲವಾಗುತ್ತದೆ. ದ್ವಿತೀಯ ವರ್ಷದ ಪರೀಕ್ಷೆಗಳನ್ನು ಏಪ್ರಿಲ್-ಮೇ ತಿಂಗಳನಲ್ಲಿ ನಡೆಸಿದರೆ ವಿದ್ಯಾರ್ಥಿಗಳ ಮುಂದಿನ ಉದ್ಯೋಗಕ್ಕೂ ಅನುಕೂಲವಾಗುವುದು. ವಿದ್ಯಾರ್ಥಿಗಳ ಈ ಸಮಸ್ಯೆನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಉನ್ನತ ಶಿಕ್ಷಣ ಸಚಿವರನ್ನು ಈ ಮೂಲಕ ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಶೂನ್ಯವೇಳೆಯ ಪ್ರಶ್ನೆಗೆ ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರವನ್ನು ಮಂಡಿಸುತ್ತೇನೆ.

**ಈ) ವಿಷಯ: ಕರ್ನಾಟಕ ಆರ್ಥಿಕ ಸಮೀಕ್ಷೆಯಲ್ಲಿ ತಂತ್ರಜ್ಞಾನ ಬಳಕೆ ಕಡಿಮೆ ಆಗಿರುವ ಬಗ್ಗೆ.**

**ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಆರ್ಥಿಕ ಸಮೀಕ್ಷೆ 2021-22 ರ ವರದಿಯಲ್ಲಿ ತಂತ್ರಜ್ಞಾನ ಬಳಕೆಯಲ್ಲಿ ಬೆಂಗಳೂರು ನಗರ ಅತ್ಯಂತ ಕೆಟ್ಟ ಸ್ಥಿತಿಯಲ್ಲಿದ್ದು, ಸಾಕಷ್ಟು ಪ್ರಗತಿ ಸಾಧಿಸಬೇಕಾಗಿದೆ ಎನ್ನುವಂತಹ ಅಂಶಗಳು ವ್ಯಕ್ತವಾಗಿರುವುದು ಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ.

ಬೆಂಗಳೂರು ನಗರ ದೇಶದಲ್ಲೇ ಗರಿಷ್ಠ ಐ.ಟಿ. ಸೇವೆಗಳನ್ನು ರಫ್ತು ಮಾಡುವ ನಗರವಾಗಿದ್ದು, ಹೆಚ್ಚು ಆದಾಯ ತಂದುಕೊಡುವ ನಗರವಾಗಿ ಗುರುತಿಸಿಕೊಂಡಿದೆ. ಆದರೆ ತಂತ್ರಜ್ಞಾನ ಬಳಕೆಯಲ್ಲಷ್ಟೇ ಅಲ್ಲ, ಹಣಕಾಸು ಮತ್ತು ಯೋಜನಾ ಅನುಷ್ಠಾನದಲ್ಲೂ ಬೆಂಗಳೂರಿನ ಪ್ರದರ್ಶನ ಕಳಪೆಯಾಗಿದ್ದು, ದೇಶದ ಇತರ ಮಹಾನಗರ ಪಾಲಿಕೆಗಳಗೆ ಹೋಲಿಸಿದರೆ ಸಾಕಷ್ಟು ಹಿಂದುಳದಿದ್ದು, ಇದು ಆಡಳತದ

ರಚನೆಯ ಶಿಥಿಲತೆ ಮತ್ತು ವೈಫಲ್ಯಗಳನ್ನು ಎತ್ತಿ ತೋರಿಸುತ್ತದೆ ಎಂಬುದಾಗಿ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ತಂತ್ರಜ್ಞಾನ ಬಳಕೆಯಲ್ಲಿ 25ನೇ ಸ್ಥಾನ, ಯೋಜನೆ ಜಾರಿಯಲ್ಲಿ 36ನೇ ಸ್ಥಾನ ಹಾಗೂ ಹಣಕಾಸು ನಿರ್ವಹಣೆಯಲ್ಲಿ 40ನೇ ಸ್ಥಾನದಲ್ಲಿರುವ ಬೆಂಗಳೂರು ನಗರ, ಪಕ್ಕದ ಚೆನ್ನೈ ಹೈದ್ರಾಬಾದ್, ಮುಂಬೈ ಮತ್ತು ರಾಷ್ಟ್ರ ರಾಜಧಾನಿ ದೆಹಲಿಗಿಂತ ಸಾಕಷ್ಟು ಹಿಂದುಳಿದಿದೆ. ಮುಂದುವರೆದು, ಸಮಾಜದ ವಿವಿಧ ವರ್ಗದ ಜನರಿಗೆ ಆರೋಗ್ಯ ಮತ್ತು ಶಿಕ್ಷಣ ಸೌಲಭ್ಯ ಕಲ್ಪಿಸುವುದು, ನಾಗರಿಕರಿಗೆ ಕುಡಿಯುವ ನೀರು ನೀಡುವುದು, ಕೊಳಚೆ ನೀರಿನ ಸಂಸ್ಕರಣೆ, ಘನತ್ಯಾಜ್ಯ ನೈರ್ಮಲ್ಯೀಕರಣ, ನೋಂದಣಿ ಮತ್ತು ಪರವಾನಗಿ ಹಾಗೂ ಮೂಲಸೌಲಭ್ಯ ಕಲ್ಪಿಸುವಲ್ಲಿಯೂ ಬೆಂಗಳೂರು ಹಿಂದುಳಿದಿದೆ.

ಆಡಳಿತದಲ್ಲಿ ಪಾರದರ್ಶಕತೆ, ಉತ್ತರದಾಯಿತ್ವ, ಮಾನವ ಸಂಪನ್ಮೂಲ, ಭಾಗವಹಿಸುವಿಕೆ ಮತ್ತು ಪರಿಣಾಮಕಾರಿ ಆಡಳಿತ ನೀಡುವ ವಿಚಾರದಲ್ಲಿಯೂ ಎಲ್ಲಾ ಮಹಾನಗರಗಳನ್ನು ಸಮೀಕ್ಷೆಗೆ ಒಳಪಡಿಸಲಾಗಿದ್ದು, ವರದಿಯಲ್ಲಿನ ಅಂಶಗಳ ಬಗ್ಗೆ ಸರ್ಕಾರ ಪುನರ್ ಮನನ ಮಾಡಿಕೊಳ್ಳಬೇಕಾದ ಅಗತ್ಯತೆ ಇದ್ದು, ಸಿಲಿಕಾನ್ ಸಿಟಿಯ ಹಿರಿಮೆಯನ್ನು ಉಳಿಸಬೇಕೆನ್ನುವ ಬಗ್ಗೆ ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಶೂನ್ಯವೇಳೆಯ ಪ್ರಶ್ನೆಗೆ ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಸಚಿವರಿಂದ ಉತ್ತರವನ್ನು ಮಂಡಿಸುತ್ತೇನೆ.

**ಉ) ವಿಷಯ: 5ಜಿ ನೆಟ್‌ವರ್ಕ್‌ಗಳ ಹೆಸರಿನಲ್ಲಿ ಸೈಬರ್ ಕೇಂದ್ರಗಳು ಸಾರ್ವಜನಿಕರಿಂದ ಹಣ ದೋಚುತ್ತಿರುವ ಬಗ್ಗೆ.**

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯದ ಕೆಲವು ಭಾಗಗಳಲ್ಲಿ 5ಜಿ ನೆಟ್‌ವರ್ಕ್‌ಗಾಗಿ ಟವರ್ ಅಳವಡಿಸಲು “ ನಿಮ್ಮ ಜಮೀನು ಇಲ್ಲವೇ ಮನೆಗಳ ಮೇಲೆ ಜಾಗ ನೀಡಿ, ಇದಕ್ಕಾಗಿ ರೂ.50 ಲಕ್ಷ ಮುಂಗಡದೊಂದಿಗೆ ಪ್ರತಿ ತಿಂಗಳು 20 ರಿಂದ 50 ಸಾವಿರ ಬಾಡಿಗೆ ನೀಡಲಾಗುವುದು” ಎಂದು ಜಿಯೋ, ಏರ್‌ಟೆಲ್ ಮತ್ತಿತರ ಟೆಲಿಕಾಂ ಬ್ರ್ಯಾಂಡ್‌ಗಳ ಹೆಸರಿನಲ್ಲಿ ಸಂದೇಶ ಕಳುಹಿಸುವ ಸೈಬರ್

ವಂಚಕರು, ಲಕ್ಷಗಟ್ಟಲೆ ಆಫರ್ ನೀಡಿ ಆಸಕ್ತಿ ಉಳ್ಳವರು ಕರೆ ಮಾಡಿ ಎಂದು ಫೋನ್ ನಂಬರ್‌ಗಳನ್ನು ಕಳುಹಿಸುತ್ತಿದ್ದಾರೆ. ಈ ಮೆಸೆಜ್‌ಗಳನ್ನು ನಂಬಿ, ಕರೆ ಮಾಡುವ ಅಮಾಯಕರನ್ನೇ ಗುರಿಯಾಗಿಸಿಕೊಳ್ಳುವ ವಂಚಕರು ಅವರಿಂದ ಜಮೀನಿನ ಅಥವಾ ಮನೆಯ ದಾಖಲೆಗಳನ್ನು ಪಡೆದು ನಿಮ್ಮ ಜಾಗದಲ್ಲಿಯೇ ಟವರ್ ಅಳವಡಿಸಲಾಗುವುದು, ಆದರೆ ನಮ್ಮ ಹಿರಿಯ ಅಧಿಕಾರಿಗಳು ಒಪ್ಪುತ್ತಿಲ್ಲ, ಹಣ ನೀಡಿದರೆ ಒಪ್ಪಬಹುದೆಂದು ಕನಿಷ್ಟ 50 ಸಾವಿರದಿಂದ 1 ಲಕ್ಷದವರೆಗೆ ಹಣ ಡಿಮ್ಯಾಂಡ್ ಮಾಡುತ್ತಿರುವುದು ಕಂಡು ಬಂದಿದೆ. ತಿಂಗಳಿಗೆ 50 ಸಾವಿರ ಬಾಡಿಕೆ ಬರುತ್ತದೆ ಎಂಬ ಆಸೆಗೆ ಸಾರ್ವಜನಿಕರು ಹಣ ನೀಡಿ ಯಾಮಾರುತ್ತಿರುವ ಬಗ್ಗೆ ಇಂದಿನ ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ವರದಿಯಾಗಿದೆ.

ಇವರು ಟೆಲಿಕಾಂ ಕಂಪನಿಗಳ ನಕಲಿ ವೆಬ್‌ತಾಣಗಳನ್ನು ಸೃಷ್ಟಿಸಿ ಸಂದೇಶಗಳನ್ನು ಕಳುಹಿಸುತ್ತಿರುವುದರಿಂದ ಇಲ್ಲಿ ಬ್ರೌಸ್ ಮಾಡುವವರು ಸಹ ಇದು ಅಸಲಿ ಕಂಪನಿಯೆಂದೇ ನಂಬಿ ಮೋಸ ಹೋಗುತ್ತಿದ್ದಾರೆ. ಇದಲ್ಲದೇ ಇವರು ಸಾರ್ವಜನಿಕರೊಂದಿಗೆ ವ್ಯವಹರಿಸಲು ಬಳಸುವ ಮೊಬೈಲ್ ನಂಬರ್‌ಗಳು, ಐಪಿ ಅಡ್ರೆಸ್‌ಗಳು ಸಹ ನಕಲಿಯಾಗಿದ್ದು, ಅಮಾಯಕರು ಹಣ ಕಳೆದುಕೊಂಡ ಬಳಿಕವಷ್ಟೇ ದೂರು ನೀಡುತ್ತಿರುವುದರಿಂದ ಪೊಲೀಸರಿಗೂ ಪ್ರಕರಣ ಬೇಧಿಸಲು ಕಷ್ಟವಾಗುತ್ತಿದೆ. ಇತ್ತೀಚೆಗೆ ಇಂತಹ ಪ್ರಕರಣಗಳು ಹೆಚ್ಚಾಗಿ ಬೆಳಕಿಗೆ ಬರುತ್ತಿದ್ದು, ಇಂತಹ ಸೈಬರ್ ವಂಚಕರಿಂದ ಸಾರ್ವಜನಿಕರು ಮೋಸಕ್ಕೆ ಒಳಗಾಗದಂತೆ ಅಗತ್ಯ ಕ್ರಮ ಕೈಗೊಳ್ಳಲು ಮಾನ್ಯ ಗೃಹ ಸಚಿವರನ್ನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

**ಶ್ರೀ ಅರಗ ಜ್ಞಾನೇಂದ್ರ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿದ ಶೂನ್ಯವೇಳೆಯ ಪ್ರಶ್ನೆಗೆ ಉತ್ತರವನ್ನು ತರಿಸಿಕೊಡುತ್ತೇನೆ.

**ಊ) ವಿಷಯ: ಗುಂಡ್ಲುಪೇಟೆ ತಾಲ್ಲೂಕು ಬಂಡೀಪುರ ರಾಷ್ಟ್ರೀಯ ಉದ್ಯಾನವನದಲ್ಲಿ ಬೆಂಕಿ ಕಾಣಿಸಿಕೊಂಡಿರುವ ಬಗ್ಗೆ.**

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ ಗುಂಡ್ಲುಪೇಟೆ ತಾಲ್ಲೂಕು ಬಂಡೀಪುರದ ರಾಷ್ಟ್ರೀಯ ಉದ್ಯಾನವನದಲ್ಲಿ ದಿನಾಂಕ 15-3-2022 ರಂದು ಚಿಗರೆಕಡು ವಲಯದ ಪ್ರದೇಶದಲ್ಲಿ ಮೊದಲು ಸಣ್ಣದಾಗಿ ಬೆಂಕಿ ಕಾಣಿಸಿಕೊಂಡಿದೆ. ಈ ಬಗ್ಗೆ ದಿನಾಂಕ 16-3-2022 ರ ವಿಜಯವಾಣಿ ಪತ್ರಿಕೆಯಲ್ಲೂ ಸಹ ವರದಿಯಾಗಿದೆ. ಬೆಂಕಿಯನ್ನು ನಂದಿಸಲು ಅರಣ್ಯ ಇಲಾಖೆಯವರು ಹರಸಾಹಸ ಮಾಡುತ್ತಿದ್ದಾರೆ. ಬೆಂಕಿ ನಂದಿಸಲು ಎಲ್ಲಾ ರೀತಿ ಪ್ರಯತ್ನ ಮಾಡುತ್ತಿದ್ದರೂ ಸಹ ನಿಯಂತ್ರಣಕ್ಕೆ ಬಂದಿರುವುದಿಲ್ಲ. ಬಂಡೀಪುರದ ಅಕ್ಕಪಕ್ಕದ ವಲಯಗಳಿಂದ ಸಿಬ್ಬಂದಿಗಳನ್ನು ಕರೆಸಿಕೊಂಡು ಬೆಂಕಿ ನಂದಿಸುವ ಕಾರ್ಯ ಮುಂದುವರೆದಿದೆ. ಅಲ್ಲದೇ ಜೋರಾಗಿ ಬೀಸುತ್ತಿದ್ದ ಗಾಳಿಯ ರಭಸಕ್ಕೆ ಬೆಂಕಿಯು ವ್ಯಾಪಿಸುತ್ತಿದ್ದು, ಅಕ್ಕಪಕ್ಕದ ಗ್ರಾಮಸ್ಥರಲ್ಲಿ ಆತಂಕದ ವಾತಾವರಣ ಮೂಡಿದೆ. ಬೇಸಿಗೆ ಬಂತೆಂದರೆ ರಾಜ್ಯದ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಪದೇಪದೇ ಬೆಂಕಿಯು ಹತ್ತಿಕೊಂಡು ಇಡೀ ಅರಣ್ಯ ಪ್ರದೇಶ ನಾಶವಾಗುತ್ತಿದೆ ಮತ್ತು ಕಾಡಿನಲ್ಲಿರುವ ಅನೇಕ ಜೀವ ರಾಶಿಗಳು, ಪ್ರಾಣಿ ಪಕ್ಷಿಗಳು ಸಹ ಸಾವನ್ನಪ್ಪುತ್ತಿವೆ. ಮೈಸೂರು ಮತ್ತು ಚಾಮರಾಜನಗರ ಜಿಲ್ಲೆ ಹೆಚ್ಚಿನ ಅರಣ್ಯ ಪ್ರದೇಶದಿಂದ ಕೂಡಿದೆ.

ಆದ್ದರಿಂದ, ಇಂತಹ ಅನಾಅಹುತ ಘಟನೆಗಳು ನಡೆಯದಂತೆ, ಸರ್ಕಾರವು ಕೂಡಲೇ ಮುಂಜಾಗ್ರತೆ ಕ್ರಮಗಳನ್ನು ತೆಗೆದುಕೊಳ್ಳಬೇಕು. ಬೆಂಕಿಯ ಅನಾಹುತದಿಂದ ಪ್ರಾಣಿ ಪಕ್ಷಿಗಳ ಪ್ರಾಣ ಹಾನಿಯನ್ನು, ಅರಣ್ಯ ಸಿಬ್ಬಂದಿಗಳಿಗೆ ಆಗುವ ಅನಾಹುತಗಳನ್ನು ತಡೆಯಬೇಕು. ಇದರ ಜೊತೆಗೆ ಸರ್ಕಾರ ಅರಣ್ಯ ವ್ಯಾಪ್ತಿಯಲ್ಲಿ ಕಾಣಿಸಿಕೊಳ್ಳುವ ಬೆಂಕಿಯನ್ನು ತಡೆಗಟ್ಟುವ ಸಲುವಾಗಿ ಆಧುನಿಕ ರೀತಿಯ ಮುಂಜಾಗ್ರತವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ನಾನು ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಶೂನ್ಯವೇಳೆಯ ಪ್ರಶ್ನೆಗೆ ಮಾನ್ಯ ಅರಣ್ಯ ಸಚಿವರಿಂದ ಉತ್ತರವನ್ನು ಮಂಡಿಸುತ್ತೇನೆ.

**೦9. ವಿತ್ತೀಯ ಕಾರ್ಯಕಲಾಪ**

**2022–23 ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ**

**ಸಭಾಪತಿಯವರು:–** ಆಯವ್ಯಯದ ಮೇಲೆ ಮಾತನಾಡಲು ಸರ್ಕಾರಿ ಮುಖ್ಯ ಸಚೇತಕರ ಪಟ್ಟಿಯನ್ನು ನೋಡಬೇಕು. ವಿತ್ತೀಯ ಕಾರ್ಯಕಲಾಪಗಳ ಬಗ್ಗೆ ಇನ್ನೂ 25 ಸದಸ್ಯರು ಮಾತನಾಡುವವರಿದ್ದಾರೆ. ಮಾತನಾಡುವಾಗ ನಾನು ಸಮಯ ಕೊಟ್ಟಷ್ಟೇ ಅವಧಿಯಲ್ಲಿ ಮಾತನಾಡಿ ಮುಗಿಸುವುದಿಲ್ಲ. ಒಬ್ಬೊಬ್ಬರು ಒಂದು ತಾಸು ಇಪ್ಪತ್ತು ನಿಮಿಷಗಳವರೆಗೂ ಮಾತನಾಡುತ್ತೀರಿ. ಈಗ ಸಮಯ ಇಲ್ಲ ಎಂದು ಹೇಳಿದರೆ ಏನು ಮಾಡುವುದು?

(ಮುಂದು)

(412) 17.03.2022 12.10 hv.ak

**ಸಭಾಪತಿಯವರು (ಮುಂದುವರಿದದ್ದು):–**

ಕೆಲವು ಸದಸ್ಯರು ದೀರ್ಘ ಸಮಯದವರೆಗೆ ಮಾತಾಡಿದ ಕಾರಣದಿಂದಾಗಿ, ಈಗ ಬೇರೆಯವರಿಗೆ ಮಾತನಾಡಲು ಅವಕಾಶವನ್ನು ಕೊಡಲು ಸಮಯವಿಲ್ಲದಂತಾಗಿದೆ.

**ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಮೊದಲು ಆಯವ್ಯಯದ ಮೇಲಿನ ಚರ್ಚೆಯನ್ನು ತೆಗೆದುಕೊಳ್ಳಲಾಗುತ್ತದೆಂದು ತಾವು ಆಶ್ವಾಸನೆಯನ್ನು ಕೊಟ್ಟಿದ್ದೀರಿ. ಹಿರಿಯ ಸದಸ್ಯರುಗಳು ಆಯವ್ಯಯದ ಮೇಲೆ ಮಾತನಾಡುವವರು ಇದ್ದಾರೆ. ಅವರಿಗೆ ಇಪ್ಪತ್ತು ನಿಮಿಷಗಳ ಕಾಲ ಮಾತನಾಡಲು ಅವಕಾಶವನ್ನು ನೀಡಿ, ನಿರ್ಬಂಧ ಮಾಡಿದರೆ ಒಳ್ಳೆಯದು ಎನ್ನುವುದು ನನ್ನ ಭಾವನೆಯಾಗಿದೆ.

**ಸಭಾಪತಿಯವರು:-** ನಾನು ಇನ್ನೆಷ್ಟು ಸಮಯವನ್ನು ಕೊಡುವುದಕ್ಕೆ ಸಾಧ್ಯ? ಒಬ್ಬೊಬ್ಬರು ಒಂದು ಗಂಟೆ, ಒಂದೂವರೆ ಗಂಟೆಗಳ ಕಾಲ ಮಾತನಾಡಿದ್ದಾರೆ. ಎಷ್ಟು ಸಮಯ ಕೊಡಬೇಕೆನ್ನುವುದರ ಬಗ್ಗೆ ತಾವೇ ಹೇಳಬಿಡಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಸನ್ಮಾನ್ಯ ಸಭಾಪತಿಯವರೇ, ಮಾತನಾಡುವವರಿಗೆ ತಾವು ಉದಾರವಾಗಿ ಸಮಯವನ್ನು ನೀಡಿದ್ದೀರಿ. ಬೇರೆ ವಿಚಾರಗಳ ಮೇಲಿನ ಚರ್ಚೆಯನ್ನು ಸಹ ನಾವು ತೆಗೆದುಕೊಳ್ಳಬೇಕಾಗಿರುವುದರಿಂದ ಸಮಯದ ಅಭಾವವಿದೆ. ನಮ್ಮ ಪಕ್ಷದ ವತಿಯಿಂದ ಹಿರಿಯ ಸದಸ್ಯರುಗಳು ಮಾತನಾಡುವವರಿದ್ದಾರೆ. ಅವರೆಲ್ಲರಿಗೂ ತಲಾ 20 ನಿಮಿಷಗಳ ಕಾಲಾವಕಾಶವನ್ನು ಕೊಡಬೇಕೆನ್ನುವುದು ನನ್ನ ವಿನಂತಿ.

**ಸಭಾಪತಿಯವರು:-** ಕಿರಿಯ ಸದಸ್ಯರಿಗಿಂತ ಹಿರಿಯ ಸದಸ್ಯರಿಗೆ ಹೆಚ್ಚು ಮಾತನಾಡಲು ಅವಕಾಶವನ್ನು ನೀಡಿದ್ದೇನೆ.

**ಡಾ|| ವೈ.ಎ.ನಾರಾಯಣಸ್ವಾಮಿ(ಸರ್ಕಾರದ ಮುಖ್ಯ ಸಚೇತಕರು):-** ಸನ್ಮಾನ್ಯ ಸಭಾಪತಿಯವರೇ, ವಿತ್ತೀಯ ಕಾರ್ಯಕಲಾಪಗಳ ಮೇಲಿನ ಚರ್ಚೆಯನ್ನು ತೆಗೆದುಕೊಂಡಿದ್ದೀರಿ, ನಾವು ಅದನ್ನು ಸ್ವಾಗತಿಸುತ್ತಿದ್ದೇವೆ. ಆಯವ್ಯಯದ ಮೇಲೆ ಮಾತನಾಡುವುದಕ್ಕೆ ನಮ್ಮ ಪಕ್ಷದಿಂದ ಸುಮಾರು 23 ಜನ ಸದಸ್ಯರು ಹೆಸರು ಕೊಟ್ಟಿದ್ದಾರೆ. ಅದರಲ್ಲಿ ಕೇವಲ 8 ಜನ ಸದಸ್ಯರು, 4 ಗಂಟೆಗಳ ಕಾಲ ಮಾತ್ರ ಮಾತನಾಡಿದ್ದಾರೆ. ಬೇರೆ ಸದಸ್ಯರಿಗೂ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುವ ಆಸೆಯಿದೆ. ಅವರುಗಳಿಗೂ ಅವಕಾಶವನ್ನು ನೀಡಬೇಕೆನ್ನುವುದು ನನ್ನ ವಿನಂತಿಯಾಗಿದೆ.

**ಸಭಾಪತಿಯವರು:-** ಭಾರತೀಯ ಜನತಾ ಪಕ್ಷದಿಂದ 23 ಜನ ಸದಸ್ಯರಲ್ಲಿ 8 ಜನರು ಮಾತನಾಡಿದ್ದಾರೆ. ಇನ್ನೂ 15 ಜನರು ಬಾಕಿ ಉಳಿದಿದ್ದಾರೆ. ಕಾಂಗ್ರೆಸ್ ಪಕ್ಷದಿಂದ 10 ಜನ ಸದಸ್ಯರು ಮಾತನಾಡುವವರಿದ್ದಾರೆ.

**ಡಾ|| ವೈ.ಎ.ನಾರಾಯಣಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ಇಲ್ಲಿಯವರೆಗೆ ಕಾಂಗ್ರೆಸ್ ಪಕ್ಷದವರು 9 ಗಂಟೆಗಳ ಕಾಲ ಮಾತನಾಡಿದ್ದಾರೆ. ಜೆ.ಡಿ.(ಎಸ್)ನವರು 7 ಗಂಟೆಗಳ ಕಾಲ

ಮಾತನಾಡಿದ್ದಾರೆ. ಆದರೇ, ಭಾರತೀಯ ಜನತಾ ಪಕ್ಷದವರು ಕೇವಲ 4 ಗಂಟೆಗಳ ಕಾಲ ಮಾತನಾಡಿದ್ದಾರೆ. ಎಲ್ಲರಿಗೂ ಸಮಾನವಾದ ಅವಕಾಶ ಕೊಡಬೇಕೆನ್ನುವುದು ನನ್ನ ವಿನಂತಿಯಾಗಿದೆ.

**ಶ್ರೀ ಎಸ್.ರವಿ (ವಿಧಾನಸಭೆಯಿಂದ ಆಯ್ಕೆಗೊಂಡವರು):-** ಸನ್ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರಿಗೆ ಹೆಚ್ಚು ಮಾತನಾಡುವುದಕ್ಕೆ ಅವಕಾಶವನ್ನು ನೀಡಬೇಕೆನ್ನುವುದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿರುವ ನಿಯಮವಾಗಿದೆ.

**ಸಭಾಪತಿಯವರು:-** ಮಾನ್ಯ ರವಿಯವರೇ, ನಾನು ಆ ರೀತಿ ಹೇಳುವುದಕ್ಕೆ ಬರುವುದಿಲ್ಲ. ಚರ್ಚೆಯಲ್ಲಿ ಭಾಗವಹಿಸುವುದು ಪ್ರತಿಯೊಬ್ಬ ಸದಸ್ಯರ ಹಕ್ಕಾಗಿದೆ. ಆಡಳಿತ ಪಕ್ಷದವರು ಹೆಚ್ಚು ಮಾತನಾಡಬಾರದೆನ್ನುವುದು ಸಂಪ್ರದಾಯವಾಗಿದೆ. ಯಾರಾದರೊಬ್ಬರು ಸದಸ್ಯರು ಎದ್ದು ನಿಂತು, "ನಾನು ಮಾತನಾಡುತ್ತೇನೆ. ಅವಕಾಶ ಕೊಡಿ" ಎಂದು ಕೇಳಿದರೆ, ನಾನು ಇಲ್ಲವೆಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಅವರಿಗೂ ಅವಕಾಶವನ್ನು ನೀಡಬೇಕಾಗುತ್ತದೆ.

**ಡಾ॥ ವೈ.ಎ.ನಾರಾಯಣಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ನಮ್ಮ ಪಕ್ಷದ ಸದಸ್ಯರ ಸಂಖ್ಯೆಗೆ ಅನುಗುಣವಾಗಿ ಸಮಯವನ್ನು ಕೊಡಬೇಕೆನ್ನುವುದು ನನ್ನ ಮನವಿಯಾಗಿದೆ.

**ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೇ, ತಾವು ಮೊದಲು 6 ಜನ ಸದಸ್ಯರ ಪಟ್ಟಿಯನ್ನು ಕೊಟ್ಟಿದ್ದೀರಿ.

**ಡಾ॥ ವೈ.ಎ.ನಾರಾಯಣಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, "ಇವತ್ತು ಯಾರು ಮಾತನಾಡುತ್ತಾರೆ ಅವರ ಪಟ್ಟಿ ಕೊಡಿ" ಎಂದು ನಮ್ಮ ನಾಯಕರು ಹೇಳಿದ್ದರು. ಆದ್ದರಿಂದ ಅವತ್ತು ಯಾವ ಸದಸ್ಯರುಗಳು ಮಾತನಾಡಲು ಇಚ್ಛಿಸಿದರು ಅವರ ಪಟ್ಟಿಯನ್ನು ಕೊಟ್ಟಿದ್ದೇವೆ.

**ಶ್ರೀ ಎನ್.ರವಿಕುಮಾರ್:-** ಸನ್ಮಾನ್ಯ ಸಭಾಪತಿಯವರೇ, 6 ಜನ ಸದಸ್ಯರ ಪಟ್ಟಿ ಕೊಟ್ಟಿರುವುದು ಆ ದಿನಕ್ಕೆ ಮಾತ್ರ ಸೀಮಿತವಾಗಿದೆ. ನಾವೆಲ್ಲರೂ ಒಟ್ಟಿಗೆ ಕುಳಿತುಕೊಂಡು ಯಾರುಯಾರು ಮಾತನಾಡುತ್ತಾರೆ ಎನ್ನುವುದರ ಬಗ್ಗೆ ಒಂದು ಪಟ್ಟಿ ತಯಾರು ಮಾಡಿ, ಇವತ್ತು ಆ ಪಟ್ಟಿಯನ್ನು ಕೊಟ್ಟಿದ್ದೇವೆ.

**ಸಭಾಪತಿಯವರು:-** ಇಲ್ಲಿಯವರೆಗೆ ನಡೆದುಕೊಂಡು ಬಂದಿರುವ ಪದ್ಧತಿಯ ಬಗ್ಗೆ ನಾನು ಹೇಳುತ್ತೇನೆ ಕೇಳಿ. "ಆಯವ್ಯಯದ ಮೇಲೆ ಮಾತನಾಡುವ ಸದಸ್ಯರ ಪಟ್ಟಿ ಕಳುಹಿಸಿಕೊಡಿ" ಎಂದು ನಾನು ಪತ್ರವನ್ನು ಕಳುಹಿಸಿಕೊಟ್ಟಿದ್ದೇನೆ. ಆಗ ಕಾಂಗ್ರೆಸ್‌ನವರು 22 ಜನ ಸದಸ್ಯರ ಪಟ್ಟಿಯನ್ನು ಕಳುಹಿಸಿಕೊಟ್ಟಿದ್ದಾರೆ. ಭಾರತೀಯ ಜನತಾ ಪಕ್ಷದವರು 06 ಜನ ಸದಸ್ಯರ ಪಟ್ಟಿಯನ್ನು ಕಳುಹಿಸಿಕೊಟ್ಟಿದ್ದೀರಿ. ಜೆ.ಡಿ.(ಎಸ್) ಪಕ್ಷದವರು 9 ಜನ ಸದಸ್ಯರ ಪಟ್ಟಿಯನ್ನು ಕಳುಹಿಸಿಕೊಟ್ಟಿದ್ದಾರೆ. ಅನಂತರ ದಿನಾ ಒಂದೊಂದು ಲಿಸ್ಟ್ ಬರುವುದಕ್ಕೆ ಪ್ರಾರಂಭವಾಯಿತು. ಆ ಪಟ್ಟಿಯನ್ನೆಲ್ಲ ಸೇರಿಸಿಕೊಂಡು ಎಲ್ಲರಿಗೂ ಅವಕಾಶವನ್ನು ಕೊಡುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಆ ಪಟ್ಟಿಯಲ್ಲಿ ಇರುವಂತಹ ಎಲ್ಲ ಸದಸ್ಯರಿಗೂ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ. ಬೇಗನೆ ಚರ್ಚೆಯನ್ನು ಮುಗಿಸೋಣ.

**ಶ್ರೀ ಎಸ್.ರವಿ:-** ಸನ್ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರಿಗೆ ಹೆಚ್ಚಿಗೆ ಮಾತನಾಡಲು ಅವಕಾಶವನ್ನು ನೀಡಬೇಕಾಗುತ್ತದೆ.

**ಡಾ॥ ವೈ.ಎ.ನಾರಾಯಣಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ರವಿಯವರು ನಿನ್ನೆ ದಿನ ಸುಮಾರು ಒಂದೂವರೆ ಗಂಟೆಗಳ ಕಾಲ ಮಾತನಾಡಿದ್ದಾರೆ.

**ಶ್ರೀ ಎಸ್.ರವಿ:-** ಸನ್ಮಾನ್ಯ ಸಭಾಪತಿಯವರೇ, ನಿನ್ನೆ ಅವರಿಗೆ ಮಾತನಾಡಲು ಅವಕಾಶ ಕೊಟ್ಟಾಗ, ಪತ್ರಕರ್ತರ ಗ್ಯಾಲರಿಯಲ್ಲಿ ಯಾರೂ ಇರಲಿಲ್ಲ, ಅಧಿಕಾರಿಗಳು ಇರಲಿಲ್ಲವೆಂದು ಅವರು ಮಾತನಾಡಲಿಲ್ಲ. ಆದರೆ, ನಾನು ಪೇಪರ್‌ನವರು ಇಲ್ಲದಿದ್ದರೂ ಮಾತನಾಡಿದ್ದೇನೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ(ವಿಧಾನಸಭೆಯಿಂದ ಆಯ್ಕೆಗೊಂಡವರು):-** ಸನ್ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷ ವಿರೋಧ ಪಕ್ಷದ ಎನ್ನುವ ತಾರತಮ್ಯವಿಲ್ಲ. ಪ್ರತಿಯೊಬ್ಬ ಸದಸ್ಯರು ಸದನದೊಳಗೆ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಲು, ಮಾತನಾಡುವುದು ಅವರ ಹಕ್ಕಾಗಿದೆ. ಆ ಹಕ್ಕನ್ನು ಮೊಟಕುಗೊಳಿಸುವುದಕ್ಕೆ ಸಾಧ್ಯವಾಗುವುದಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಮೊದಲನೆಯ ಪಟ್ಟಿಯಲ್ಲಿ ಕೊಟ್ಟಿರುವ ಹೆಸರುಗಳನ್ನು ಮತ್ತು ನಂತರ ಕೊಟ್ಟಿರುವ ಹೆಸರುಗಳನ್ನು ಪರಿಗಣನೆಗೆ ತೆಗೆದುಕೊಂಡು ಎಲ್ಲ ಸದಸ್ಯರಿಗೂ ಮಾತನಾಡುವುದಕ್ಕೆ ಅವಕಾಶವನ್ನು ನೀಡುವುದು ತಮ್ಮ ಧರ್ಮವಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಲೋಕಸಭೆಯಲ್ಲಿ ಕೆಲಸ ಮಾಡಿರುವ ಅನುಭವವನ್ನು ಹೊಂದಿದ್ದಾರೆ. ಅಲ್ಲಿ ಯಾವ ಪಕ್ಷದಲ್ಲಿ ಎಷ್ಟು ಸದಸ್ಯರಿದ್ದಾರೆ ಎನ್ನುವುದನ್ನು ಗಣನೆಗೆ ತೆಗೆದುಕೊಂಡು ಅದಕ್ಕೆ ತಕ್ಕಂತೆ ಸಮಯಾವಕಾಶವನ್ನು ನೀಡಲಾಗುತ್ತದೆ. ಇಲ್ಲಿಯೂ ಸಹ ಯಾವಯಾವ ಪಕ್ಷದಲ್ಲಿ ಎಷ್ಟು ಸದಸ್ಯರಿದ್ದಾರೆ ಎಷ್ಟು ಸಮಯ ಲಭ್ಯವಿದೆ ಎನ್ನುವುದನ್ನು ನೋಡಿಕೊಂಡು ಅಂದರೆ, ಒಟ್ಟು ಸದಸ್ಯರ ಸಂಖ್ಯೆಯನ್ನು ಲಭ್ಯವಿರುವ ಸಮಯದಿಂದ ಭಾಗಿಸಿದರೆ ಒಬ್ಬ ಸದಸ್ಯರಿಗೆ ಎಷ್ಟು ನಿಮಿಷಗಳ ಕಾಲಾವಕಾಶ ದೊರೆಯುತ್ತದೆ ಎನ್ನುವುದು ಗೊತ್ತಾಗುತ್ತದೆ. ಅಷ್ಟು ಸಮಯವನ್ನು ಆಯಾಯ ಸದಸ್ಯರುಗಳಿಗೆ ಮಾತನಾಡುವುದಕ್ಕೆ ನೀಡುವುದು ಉತ್ತಮ ಎನ್ನುವುದು ನನ್ನ ಸಲಹೆಯಾಗಿದೆ.

**ಶ್ರೀ ಎಂ.ಕೆ.ಪ್ರಾಣೇಶ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ತಾವು ಒಬ್ಬ ಸದಸ್ಯರು ಮಾತನಾಡುವುದಕ್ಕೆ 22 ರಿಂದ 23 ನಿಮಿಷಗಳೆಂದು ನಿಗದಿ ಮಾಡಿದ್ದೀರಿ. ನಿಗದಿ ಮಾಡಿದ ಸಮಯದೊಳಗೆ ನಮ್ಮ ಮಾತುಗಳನ್ನು ಮುಗಿಸುವಂತಹ ಪ್ರಯತ್ನಗಳಾಗಬೇಕು. ಅದನ್ನು ಬಿಟ್ಟು ಒಂದು ಗಂಟೆ, ಒಂದು ಗಂಟೆ ಇಪ್ಪತ್ತು ನಿಮಿಷ, ಒಂದು ಗಂಟೆ ಮೂವತ್ತು ನಿಮಿಷಗಳವರೆಗೆ ಮಾತನಾಡಿದಂತಹ ಉದಾಹರಣೆಗಳು ಇವೆ. ಪೀಠ ಕೊಟ್ಟಂಥ ನಿರ್ದೇಶನ ಪಾಲನೆಯಾಗಿಲ್ಲ. ತಾವು ನಿಗದಿಪಡಿಸಿದ ಸಮಯಕ್ಕೆ ನಿರ್ಬಂಧವನ್ನು ಹೇರಿದ್ದರೆ ಸಮಯಾವಕಾಶದ ಕೊರತೆಯಾಗುತ್ತಿರಲಿಲ್ಲ. ನಾನು ಕೇವಲ 22 ನಿಮಿಷಗಳಲ್ಲಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸಿದ್ದೇನೆ.

**ಸಭಾಪತಿಯವರು:–** ಮೊದಲು ಕೊಟ್ಟ ಪಟ್ಟಿಯಲ್ಲಿ ಇದ್ದ ಸದಸ್ಯರುಗಳ ಸಂಖ್ಯೆ ಮತ್ತು ಲಭ್ಯವಿರುವ ಸಮಯವನ್ನು ಲೆಕ್ಕಾಚಾರ ಮಾಡಿದಾಗ ಒಬ್ಬೊಬ್ಬರಿಗೆ 22 ನಿಮಿಷ ಮಾತನಾಡುವುದಕ್ಕೆ ಅವಕಾಶ ದೊರೆಯುತ್ತಿತ್ತು. ಆದರೆ ಯಾರೂ ಸಹ 22 ನಿಮಿಷಗಳ ಕಾಲ ಮಾತನಾಡದೇ ಎಲ್ಲರೂ ಗಂಟೆಗಟ್ಟಲೆ ಮಾತನಾಡಿದರೆ ಹೇಗೆ? ಕೆಲವರು ಮಾತ್ರ ನಿಗದಿತ ಸಮಯದೊಳಗೆ ತಮ್ಮ ಮಾತುಗಳನ್ನು ಮುಕ್ತಾಯಗೊಳಿಸಿದ್ದಾರೆ.

ಈಗ ನಾನು ಮಾನ್ಯ ನವೀನ್ ಕೆ.ಎಸ್. ಅವರ ಹೆಸರನ್ನು ಕರೆಯುತ್ತಿದ್ದೇನೆ. ಅವರಿಗೆ ಮಾತನಾಡಲು 15 ನಿಮಿಷಗಳ ಕಾಲಾವಕಾಶವನ್ನು ನೀಡಲಾಗುತ್ತಿದೆ.

**ಶ್ರೀ ನವೀನ್.ಕೆ.ಎಸ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವ ಈ ಸಾಲಿನ ಆಯವ್ಯಯದ ಮೇಲೆ ಮಾತನಾಡುವುದಕ್ಕೆ ನನಗೆ ಅವಕಾಶವನ್ನು ನೀಡಿದ ತಮಗೆ ವಂದಿಸಿ, ನನ್ನ ಮಾತುಗಳನ್ನು ಪ್ರಾರಂಭಿಸುತ್ತಿದ್ದೇನೆ. ಆಚಾರ್ಯ ಚಾಣುಕ್ಯರು ತಮ್ಮ ಆರ್ಥಿಕ ನೀತಿಯಲ್ಲಿ ಪ್ರಮುಖವಾಗಿ 4 ಅಂಶಗಳ ಬಗ್ಗೆ ಉಲ್ಲೇಖ ಮಾಡಿದ್ದಾರೆ. ಅದು ಈ ಮುಂದಿನಂತಿದೆ;

1. ಹಣಕ್ಕಿಂತ ಸಮಯ ಹೆಚ್ಚು ಅಮೂಲ್ಯವಾಗಿರುವುದು
2. ತಕ್ಷಣದ ಲಾಭಕ್ಕಾಗಿ ತಪ್ಪು ಮಾಡಿರುವವನ್ನು ಅನುಸರಿಸಿದರೆ ದೀರ್ಘಕಾಲದಲ್ಲಿ ಅದು ನಮಗೆ ಸಮಸ್ಯೆಯಾಗಿ ಪರಿಣಮಿಸುತ್ತದೆ.
3. ಯಶಸ್ವಿಯಾಗಲು ಸುಳ್ಳುಗಳನ್ನು ಆಶ್ರಯಿಸಬಾರದು.
4. ಹಣವನ್ನು ಅತ್ಯಂತ ಎಚ್ಚರಿಕೆಯಿಂದ ಒಳ್ಳೆಯ ಕೆಲಸಗಳಿಗೆ ಮಾತ್ರ ಬಳಕೆ ಮಾಡಬೇಕು.

ಅದೇ ರೀತಿಯಲ್ಲಿ 12ನೇ ಶತಮಾನದಲ್ಲಿ ಜಗಜ್ಯೋತಿ ಬಸವಣ್ಣನವರು "ಕಾಯಕವೇ ಕೈಲಾಸ" ಎಂದು ಹೇಳುವ ಮೂಲಕ "ದುಡಿಯುವ ಕೈಗಳಿಗೆ ಕೆಲಸವನ್ನು ಕೊಡುವ ಮೂಲಕ ಸಮಾಜದ ಆರ್ಥಿಕ ಸ್ಥಿತಿಯನ್ನು ಮೇಲ್ದರ್ಜೆಗೇರಿಸಿದಂತಾಗುತ್ತದೆ" ಎಂದು ಹೇಳಿದ್ದಾರೆ. 12ನೇ ಶತಮಾನದಲ್ಲಿಯೇ ಬಸವಣ್ಣನವರು, "ಕಾಯಕವೇ ಕೈಲಾಸ" ಎಂದು ಸಾರಿದ್ದಾರೆ. ಸಂವಿಧಾನ ಶಿಲ್ಪಿ ಡಾ॥ ಬಿ.ಆರ್.ಅಂಬೇಡ್ಕರ್‌ರವರು, "ಸರ್ವರಿಗೂ ಸಮ ಬಾಳು; ಸರ್ವರಿಗೂ ಸಮ ಪಾಲು" ಎಂದು ಹೇಳುವ ಮೂಲಕ ಸಾಮಾಜಿಕ ನ್ಯಾಯದಡಿಯಲ್ಲಿ ನಮ್ಮ ಎಲ್ಲ ಚಿಂತನೆಗಳು ಈ ಆಧಾರದ ಮೇಲಿರಬೇಕೆನ್ನುವ ಕರೆಯನ್ನು ಕೊಟ್ಟಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವಂತಹ ಈ ಸಾಲಿನ ಆಯವ್ಯಯದಲ್ಲಿ ಈ ಮೂರು ನೀತಿಗಳನ್ನು ಅತ್ಯಂತ ಸಮರ್ಪಕವಾಗಿ ಅಳವಡಿಸಿಕೊಂಡು, ಸಮತೋಲಿತವಾಗಿರುವ, ಸರ್ವವ್ಯಾಪಿಯಾಗಿರುವ ಇಡೀ ರಾಜ್ಯಕ್ಕೆ ಹಿತವನ್ನು ಕೊಡುವಂತಹ

ಮುಂಗಡಪತ್ರವನ್ನು ಮಂಡಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಮುಂಗಡಪತ್ರದಲ್ಲಿ Employment, Education and Empowerment ಎಂದು ಮೂರು "E" ಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆಯವ್ಯಯ ಪುಸ್ತಕದಲ್ಲಿ Employment ಎನ್ನುವುದನ್ನು ಮೊದಲಿಗೆ ಕೊಟ್ಟಿದ್ದಾರೆ. ಇದರ ಬದಲಿಗೆ Education ಎನ್ನುವುದು ಮೊದಲು ಬರಬೇಕಾಗಿತ್ತು. ಏಕೆಂದರೆ, ಉತ್ತಮ ಶಿಕ್ಷಣ ದೊರೆತಾಗ ಮಾತ್ರ ಉತ್ತಮ ಉದ್ಯೋಗ ಸಿಗುವುದಕ್ಕೆ ಸಾಧ್ಯವಾಗುತ್ತದೆ. ಉದ್ಯೋಗ ಸಿಕ್ಕರೆ ಸಬಲರಾಗುವುದಕ್ಕೆ ಸಾದ್ಯವಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಪಂಚಸೂತ್ರಗಳಡಿಯಲ್ಲಿ ಅಭಿವೃದ್ಧಿಯ ಪಥದಡಿಯಲ್ಲಿ ಸಾಗಬೇಕೆನ್ನುವ ಪರಿಕಲ್ಪನೆಯನ್ನು ನೀಡಿದ್ದಾರೆ. "ನವ ಭಾರತಕ್ಕಾಗಿ ನವ ಕರ್ನಾಟಕ ನಿರ್ಮಾಣ" ಮಾಡುವಂತಹ ಪ್ರಯತ್ನವನ್ನು ಸಹ ಮಾಡಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ವಿತ್ತೀಯ ಕೊರತೆಯನ್ನು ನೀಗಿಸುವ ನಿಟ್ಟಿನಲ್ಲಿ ಕಳೆದ ಎರಡು ವರ್ಷ ಇಡೀ ವಿಶ್ವವೇ ಕೋವಿಡ್-19ಗೆ ತುತ್ತಾಗಿ, ಹಲವಾರು ರಾಷ್ಟ್ರಗಳು ಆರ್ಥಿಕ ದಿವಾಳಿಯನ್ನು ಎದುರಿಸುತ್ತಿವೆ.

(ಮುಂದುವರಿದಿದೆ)

(413) 17.3.2022 12.20 ಪಿಕೆ:ಎಕೆ

**ಶ್ರೀ ಕೆ.ಎಸ್.ನವೀನ್(ಮುಂದು)**

ಎಷ್ಟೋ ದೇಶಗಳು ದಿವಾಳಿಯಾಗಿ, ತಿನ್ನುವ ಅನ್ನಕ್ಕೂ ಪರದಾಡುವಂತಾಯಿತು. ಅಂತಹ ಸ್ಥಿತಿಯನ್ನು ಕೂಡ ನಾವು ನೋಡಿದ್ದೇವೆ. ಆದರೆ, ನಮ್ಮ ದೇಶದಲ್ಲಿ ಕಳೆದ ಎರಡು ವರ್ಷದಲ್ಲಿ, ಹಸಿವಿನಿಂದ ಯಾರೂ ಇರಬಾರದು ಎಂದು ಮಾನ್ಯ ಪ್ರಧಾನ ಮಂತ್ರಿಗಳು "ಗರೀಬ್ ಕಲ್ಯಾಣ ಯೋಜನೆ" ಪ್ಯಾಕೇಜ್ ಘೋಷಣೆ ಮಾಡಿದರು. ಆ ಮೂಲಕ ಸುಮಾರು 85 ಕೋಟಿ ಜನರಿಗೆ ನಿರಂತರವಾಗಿ ಆಹಾರ ಧಾನ್ಯಗಳನ್ನು ಉಚಿತವಾಗಿ ಕೊಡುವಂತಹ ಕೆಲಸ ಮಾಡಿದರು. ನಮ್ಮ ದೇಶದ ಬಡವರ ರಕ್ಷಣೆ ಮಾಡುವಂತಹ ಕೆಲಸವನ್ನು ಕೇಂದ್ರ ಸರ್ಕಾರ ಮಾಡಿತ್ತು. ಅದೇ ನಿಟ್ಟಿನಲ್ಲಿ

ನಮ್ಮ ರಾಜ್ಯ ಸರ್ಕಾರ, ಎಷ್ಟೇ ವಿತ್ತೀಯ ಕೊರತೆ ಇದ್ದರೂ; ಅದನ್ನು ಮೂರುವರೆ ಪರ್ಸೆಂಟ್‌ನಷ್ಟು ಹೆಚ್ಚಿಸಿಕೊಳ್ಳಲು ಅವಕಾಶ ಮಾಡಿ ಕೊಟ್ಟಿದ್ದರೂ ಕೂಡ, financial discipline maintain ಮಾಡಬೇಕು ಎನ್ನುವ ಹಿನ್ನೆಲೆಯಲ್ಲಿ, ಕೇವಲ 3.26 ಪರ್ಸೆಂಟ್‌ಗೆ ಮಿತಿಗೊಳಿಸಿದರು. ರಾಜ್ಯವನ್ನು ಆರ್ಥಿಕವಾಗಿ, ಶಿಸ್ತುಬದ್ಧವಾಗಿ ನಡೆಸಬೇಕು ಎನ್ನುವ ನಿರ್ಣಯ ಮಾಡಿದ್ದು ಬಹಳ ಉತ್ತಮವಾದ ಬೆಳವಣಿಗೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಿನ್ನೆ-ಮೊನ್ನೆ ಮಾತನಾಡಿದ ಹಲವಾರು ಮಾನ್ಯ ಸದಸ್ಯರುಗಳು, ಈ ಸರ್ಕಾರ ಮಾಡಿದಷ್ಟು ಸಾಲವನ್ನು ಹಿಂದಿನ ಯಾವುದೇ ಸರ್ಕಾರಗಳು ಮಾಡಿಲ್ಲ ಎನ್ನುವಂತಹ ಮಾತುಗಳನ್ನು ಹೇಳಿದರು. ಆದರೆ, ಸಾಲ ಮಾಡುವುದರಲ್ಲೂ ಕೂಡ ಬಹಳ ಆಲೋಚನೆ ಮಾಡಿ, ರಾಜ್ಯದ ಜನರ ಮೇಲೆ ಸಾಲದ ಹೊರೆ ಹೆಚ್ಚಾಗಬಾರದು ಎಂದು, ಬಹಳಷ್ಟು ಶಿಸ್ತು ವಹಿಸುವಂತಹ ಕೆಲಸವನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಿದರು. ಹಿಂದೆ ಯಾವುದೇ ಕೋವಿಡ್‌ನ ಪರಿಸ್ಥಿತಿ ಇಲ್ಲದ ಸಂದರ್ಭದಲ್ಲೂ ಕೂಡ, ಹಿಂದೆ ಸರ್ಕಾರವನ್ನು ನಡೆಸಿದವರು ನಮ್ಮ ರಾಜ್ಯಕ್ಕೆ ನಿರಂತರವಾಗಿ ಸಾಲವನ್ನು ತರುವ ಕೆಲಸ ಮಾಡಿದರು. ಪ್ರಸ್ತುತ, ಕೇಂದ್ರದ ಗೈಡ್‌ಲೈನ್ಸ್ ಪ್ರಕಾರ ಈ ಸಲ ರೂ. 67,100 ಕೋಟಿ ಸಿಗುವಂಥದ್ದಿರೂ ಕೂಡ, ರೂ.63,000 ಕೋಟಿಗೆ ನಿಲ್ಲಿಸುವ ಕೆಲಸವನ್ನು ಮಾಡಿ, ಒಂದು ಒಳ್ಳೆಯ ಬದ್ಧತೆಯನ್ನು ತೋರಿಸಿದರು. ನಮ್ಮ ದೇಶದ ಬೆನ್ನೆಲುಬು ರೈತ. ರೈತನ ಪರವಾಗಿ ಹಲವಾರು ವಿಷಯಗಳು ಚರ್ಚೆಯಾಯಿತು. ಈ ಬಜೆಟ್‌ನಲ್ಲಿ ಕೃಷಿ ಕ್ಷೇತ್ರಕ್ಕೆ ಬಂಪರ್ ಕೊಡುಗೆಯನ್ನು ಕೊಡುವಂತಹ ಕೆಲಸವನ್ನು ಮಾನ್ಯ ಮಂತ್ರಿಗಳು ಮಾಡಿದ್ದಾರೆ. ಮಾನ್ಯ ಸದಸ್ಯರುಗಳು ಬಹಳಷ್ಟು ವಿಷಯಗಳನ್ನು ಹೇಳುವಂತಹ ಸಂದರ್ಭದಲ್ಲಿ, ಕೇವಲ ರೂ.250ಗಳನ್ನು ಕೊಟ್ಟರೆ ಏನಾಗತ್ತದೆ ಎಂದು ಕೇಳಿದರು. ಆದರೆ, ರೂ. 250ಗಳನ್ನು ಪ್ರತಿ ಎಕರೆಗೆ, 5 ಎಕರೆ ಭೂಮಿ ಹೊಂದಿರುವಂತಹ ರೈತನಿಗೆ ಕೊಡುವ ಸಂದರ್ಭದಲ್ಲಿ ಕೇವಲ ಆ ಮೊತ್ತದ ಪ್ರಮಾಣವನ್ನಷ್ಟೇ ನೋಡಬಾರದು. ಒಬ್ಬ ರೈತ ತಾನು ಬೆಳೆಯುವಂತಹ ಬೆಳೆಗೆ ಮುಂಗಡವಾಗಿ ಸಾಕಷ್ಟು ತಯಾರಿಯನ್ನು ಮಾಡುತ್ತಾನೆ. ನಾಲ್ಕೈದು ಜನ ರೈತರು ಸೇರಿ ಒಂದು ಟ್ರ್ಯಾಕ್ಟರ್‌ನ್ನು ಬಾಡಿಗೆ ತೆಗೆದುಕೊಳ್ಳುವಂಥದ್ದು, ಹೊಲ ಹೊಡೆಸುವುದಕ್ಕೆ ಬೇಕಾದ, ಉಳುಮೆ ಮಾಡಲು ಬೇಕಾಗುವಂತಹ ಸಲಕರಣೆ ಇತ್ಯಾದಿ ವ್ಯವಸ್ಥೆಗಳನ್ನು ಮಾಡುತ್ತಾರೆ. ಈ ರೀತಿ ಒಂದು ಗುಂಪು ಮಾಡಿಕೊಂಡು ಕೃಷಿ ಮಾಡುವ ಸಂದರ್ಭದಲ್ಲಿ ರೂ. 1250 ಕೂಡ ಸಾಕಷ್ಟು ಸಹಾಯಕ್ಕೆ ಬರುತ್ತದೆ. "ಪಿ.ಎಂ.ಕಿಸಾನ್

ಸಮ್ಮಾನ್ ನಿಧಿ ಯೋಜನೆ"ಯಲ್ಲಿ ಬರುವಂತಹ ರೂ.6000ಗಳನ್ನು ಕೇಂದ್ರ ಕೊಡವುದು ಮತ್ತು ರಾಜ್ಯ ಸರ್ಕಾರ ಕೊಡುವ ರೂ. 4000 ಮತ್ತು ಜೊತೆಗೆ ಪ್ರತಿ ಎಕರೆಗೆ ಡೀಸೆಲ್‌ಗೆಂದು ರೂ. 250 ಕೊಡುವುದನ್ನು ಲೆಕ್ಕ ಹಾಕಿದರೆ ವಾರ್ಷಿಕವಾಗಿ ರೂ. 11,250 ಹಣ ರೈತರ ಖಾತೆಯಲ್ಲಿ ಜಮಾ ಮಾಡುವಂತಹ ಕೆಲಸ ಆಗುತ್ತಿದೆ. ದೊಡ್ಡ ರೈತರು ಖರ್ಚು ಮಾಡುವ ಹಾಗೆ ಸಣ್ಣ ರೈತರು ಖರ್ಚು ಮಾಡುವುದಿಲ್ಲ. ಸಣ್ಣ ರೈತರು ಬಹಳ ಯೋಚನೆ ಮಾಡಿ ಖರ್ಚು ಮಾಡುವ ಕೆಲಸವನ್ನು ಮಾಡುತ್ತಾರೆ. ಸದನದಲ್ಲಿರುವ ಹಿರಿಯ ಸದಸ್ಯರು, ರೂ. 250 ಗಳು ಯಾವ ಮೂಲೆಗಾಗುತ್ತದೆ ಎನ್ನುವ ಮಾತುಗಳನ್ನು ಹೇಳಿದರು. ಆದರೆ, ಒಬ್ಬ ಸಣ್ಣ ರೈತನಿಗೆ ಖಂಡಿತಾ ರೂ. 250 ಏನಿದೆ, ಅದು ಆತನ ಕೈ ಹಿಡಿಯುವಂತಹ ಕೆಲಸ ಮಾಡುತ್ತದೆ. ನಾಲ್ಕೈದು ಜನ ರೈತರು ಗುಂಪಾಗಿ ಸೇರಿ ಕೆಲಸ ಮಾಡಿದರೆ ಸದರಿ ಹಣವನ್ನು ಸದ್ಬಳಕೆ ಮಾಡಬಹುದು. ರಾಜ್ಯ ಸರ್ಕಾರ ಈ ಬಜೆಟ್‌ನಲ್ಲಿ ಬಹಳಷ್ಟು ಅನುಕೂಲ ಮಾಡಿರುವುದನ್ನು ಮುಂದಿನ ದಿನಗಳಲ್ಲಿ ಅವರಿಗೆ ಕಂಡು ಬರುತ್ತದೆ.

ಮಾನ್ಯ ಸಭಾಪತಿಗಳೆ, ನಾನು ಚಿತ್ರದುರ್ಗ ಜಿಲ್ಲೆಯನ್ನು ಪ್ರತಿನಿಧಿಸುತ್ತೇನೆ. ನಮ್ಮ ಜಿಲ್ಲೆಯಲ್ಲಿ ಅತಿ ಹೆಚ್ಚು, ತೋಟಗಾರಿಕೆ ಬೆಳೆಗಳಾದ ಹಣ್ಣು, ಹೂವು, ತರಕಾರಿ ಇತ್ಯಾದಿಗಳನ್ನು ಬೆಳೆಯಲಾಗುತ್ತದೆ. ಈ ಬಜೆಟ್‌ನಲ್ಲಿ ಇಂತಹ ತೋಟಗಾರಿಕೆ ಬೆಳೆಗಳನ್ನು ಸಂರಕ್ಷಣೆ ಮಾಡಲು Mini Food Park ರಚನೆ ಮಾಡುವಂತಹ ಘೋಷಣೆ ಮಾಡಿದ್ದಾರೆ. ಇದು ಖಂಡಿತವಾಗಿ ರೈತ ತಾನು ಬೆಳೆದಂತಹ ಬೆಳೆಯನ್ನು ಸೂಕ್ತ ಸಮಯಕ್ಕೆ ಮಾರುಕಟ್ಟೆಗೆ ತಲುಪಿಸಲು ಅಥವಾ ಮೌಲ್ಯ ವರ್ಧನೆ ಮಾಡುವಲ್ಲಿ ಈ Mini Food Park ಗಳು ರೈತನ ಕೈಹಿಡಿಯುವುದರಲ್ಲಿ ಯಶಸ್ವಿಯಾಗುತ್ತದೆ. ಈ ನಿಟ್ಟಿನಲ್ಲಿ ಮಾನ್ಯ ಮುಖ್ಯಮಂತ್ರಿಗಳು ತೆಗೆದುಕೊಂಡ ನಿರ್ಧಾರವನ್ನು ನಾನು ಸ್ವಾಗತ ಮಾಡುತ್ತೇನೆ. ಎಲ್ಲಾ ಜಿಲ್ಲೆಗಳಲ್ಲಿ Mini Food Park ಗಳು ಬಂದರೆ ಎಲ್ಲಾ ರೈತರಿಗೂ ಖಂಡಿತಾ ಲಾಭವಾಗುತ್ತದೆ.

ಮಾನ್ಯ ಸಭಾಪತಿಗಳೆ, ಇದೇ ಸಂದರ್ಭದಲ್ಲಿ ಮತ್ತೊಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಕೇಂದ್ರ ಸರ್ಕಾರ ರೈತರ ಪರವಾಗಿ F.P.O (Farmer Producer Organizations) ಎನ್ನುವುದನ್ನು ತಂದ್ದಿದೆಯೋ ಅಲ್ಲಿ ಒಂದಿಷ್ಟು ಗೊಂದಲಗಳಿವೆ. ಅಲ್ಲಿ State sponsored FPO, Central sponsored FPO ಮತ್ತು NABARD

sponsored FPO ಗಳು ಇವೆ. ಇದರಲ್ಲಿ ಹಲವಾರು ಜನ ರೈತರು ಸದಸ್ಯರಾಗಿದ್ದಾರೆ. ಸಾವಿರಾರು ಕೋಟಿ ಹಣ ಇದಕ್ಕೆಂದು ಬಿಡುಗಡೆಯಾಗಿದೆ. ಆದರೆ, State sponsored FPO, Central sponsored FPO ಮತ್ತು NABARD sponsored FPO ಗಳಲ್ಲಿ ಪರಸ್ಪರ co-ordination ಇಲ್ಲ. ಇದನ್ನು Handholding NGO ಎನ್ನುವ ಒಂದು ಎನ್‌ಜಿಓಗೆ ಕೊಡುವ ಕೆಲಸ ಮಾಡಿದ್ದಾರೆ. ಇದರಲ್ಲಿ ಎನ್‌ಜಿಓಗಳು ಸರಿಯಾಗಿ ಪಾತ್ರ ನಿರ್ವಹಿಸದೇ ಇರುವ ಕಾರಣ ಹಲವಾರು ಕಡೆ FPO ಗಳು ಕಾರ್ಯನಿರ್ವಹಣೆ ಮಾಡುವುದಕ್ಕೆ ಕಷ್ಟವಾಗುತ್ತಿದೆ. ಹಾಗಾಗಿ ಸರ್ಕಾರದ ವತಿಯಿಂದ ಮಾನ್ಯ ಕೃಷಿ ಸಚಿವರು ಮತ್ತು ಮಾನ್ಯ ತೋಟಗಾರಿಕೆ ಸಚಿವರು ಇದಕ್ಕೆ ಸಂಬಂಧಪಟ್ಟಂತೆ ಇಡೀ ರಾಜ್ಯದಲ್ಲಿ FPO ಗಳು ಎಷ್ಟು ನೋಂದಣಿಯಾಗಿದೆ, ಇವರ ಸಮಸ್ಯೆಗಳೇನು, ಇವುಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಕ್ರಮಗಳೇನು ಎನ್ನುವುದನ್ನು ಗಮನಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳಿಗೆ ಹಾಲು ಒಕ್ಕೂಟದ ರಚನೆ ಮಾಡುವುದಕ್ಕೋಸ್ಕರ ಈ ಬಜೆಟ್‌ನಲ್ಲಿ ಅವಕಾಶ ಮಾಡಿಕೊಟ್ಟಿದ್ದಾರೆ. ರೈತ ಮಹಿಳೆ ತನ್ನ ಪ್ರತಿನಿತ್ಯದ ಆದಾಯಕ್ಕೆಂದು ಹಾಲಿನ ಉತ್ಪಾದನೆ ಮೇಲೆ ಏನು ಅವಲಂಬಿತರಾಗಿದ್ದಾರೋ, ಅಂಥವರಿಗೆ ಹಾಲು ಒಕ್ಕೂಟ ರಚನೆ ಮಾಡುವುದರಿಂದ ಸ್ವಾವಲಂಬನೆಯ ಬದುಕು ಕಟ್ಟಿಕೊಡುವ ಹಾಗೆ ಆಗುತ್ತದೆ; ದಿನನಿತ್ಯದ ಬದುಕಿಗೆ ಬೇಕಾದ ಹಣವನ್ನು ದುಡಿಯಲು ಅನುಕೂಲ ಮಾಡಿಕೊಟ್ಟ ಹಾಗೆ ಆಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಸಭಾಪತಿಗಳೆ, ಗೋ ಶಾಲೆಗಳನ್ನು ಪ್ರಾರಂಭ ಮಾಡುವುದಕ್ಕೆ ಸಂಬಂಧಪಟ್ಟಂತೆ ಸರ್ಕಾರ ಒಳ್ಳೆಯ ನಿರ್ಣಯ ತೆಗೆದುಕೊಂಡಿದೆ. 30 ರಿಂದ 100 ಗೋಶಾಲೆಗಳನ್ನು ಮಾಡಲು ಹೊರಟಿದ್ದಾರೆ. ಇದಕ್ಕೆಂದು ಇಟ್ಟಿರುವ ಹಣಕ್ಕೆ ಸಂಬಂಧಪಟ್ಟಂತೆ ಸಾಕಷ್ಟು ಟೀಕೆಗಳು ಬಂತು. ಮಾನ್ಯ ಸಭಾಪತಿಗಳೆ, ತಮ್ಮ ಗೋಶಾಲೆಗೆ ಬಂದು, ಗೋವುಗಳನ್ನು ನೋಡಿಕೊಂಡು ಬಂದಿದ್ದೇನೆ. ನಾನೂ ಕೂಡ ಕಳೆದ 5 ವರ್ಷಗಳಿಂದ 50 ದೇಶಿ ತಳಿಗಳ ಗೋವುಗಳನ್ನು ಸಾಕುತ್ತಿದ್ದೇನೆ. ಇವತ್ತು ಗೋಶಾಲೆಗಳನ್ನು ತೆರೆಯುವುದರ ಮೂಲಕ ರೈತರಿಗೆ ಲಾಭ ಸಿಗುವಂತಾಗಿದೆ. ನಮ್ಮ ತುರುವೇಕೆರೆ ಶಾಸಕರು ಅಮೃತ್‌ಮಹಲ್ ತಳಿಯ ಒಂದು ಜೋಡಿ ಎತ್ತನ್ನು ರೂ. 27 ಲಕ್ಷಕ್ಕೆ ಖರೀದಿ

ಮಾಡಿದ್ದಾರೆ. ನಿಜವಾಗಲೂ ಕೂಡ ರೈತನಿಗೆ ಅದರಿಂದ ಆದಾಯ ಸಿಗುವಂತೆ ಆಗುತ್ತಿದೆ. ಗೋಶಾಲೆಗಳನ್ನು ಮಾಡಿ, ಗೋವುಗಳಿಗೆ ಒಳ್ಳೆಯ ಜೀವನ ಕೊಡುವ ನಿಟ್ಟಿನಲ್ಲಿ ಸಾಕಷ್ಟು ಜನ ಮತ್ತು ಸಂಘ ಸಂಸ್ಥೆಗಳು ದತ್ತು ತೆಗೆದುಕೊಳ್ಳಲು ಮುಂದೆ ಬರುವುದಕ್ಕೆ ಸಿದ್ಧವಾಗಿವೆ. ಸರ್ಕಾರ ಈ ಬಜೆಟ್‌ನಲ್ಲಿ ಅಂಥವರಿಗೆ ಆದ್ಯತೆ ಕೊಟ್ಟಿದೆ. ನಮ್ಮ ಪಕ್ಷದ ಪ್ರಣಾಳಿಕೆಯಲ್ಲಿ ಹೇಳಿದ್ದೆಲ್ಲವನ್ನೂ ಮಾಡುವಂತಹ ದಿಸೆಯಲ್ಲಿ ಈ ಬಜೆಟ್ ಇದೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಸಭಾಪತಿಗಳೆ, ನಮ್ಮ ಜಿಲ್ಲೆಯಲ್ಲಿ ಅತಿ ಹೆಚ್ಚು ಮೇಕೆ ಮತ್ತು ಕುರಿಯನ್ನು ಸಾಕಲಾಗುತ್ತದೆ. ನಮ್ಮ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹಿಂದುಳಿದ ಮತ್ತು ಎಸ್‌ಸಿ/ಎಸ್‌ಟಿ ಜನಾಂಗವಿದೆ. ಅಲ್ಲಿ ಬಹಳಷ್ಟು ಜನ ತಮ್ಮ ಮನೆಯಲ್ಲಿ ಒಂದೆರಡಾದರೂ ಕುರಿಗಳನ್ನು ಸಾಕುತ್ತಾರೆ. "ಅನುಗ್ರಹ" ಯೋಜನೆ ಅಡಿ, ಕುರಿಗಳು ಮರಣ ಹೊಂದಿದರೆ ಅದಕ್ಕೆ ಹಣ ಕೊಡಲು ಯೋಜನೆ ತಂದಿದ್ದಾರೆ. ಇದು ಬಹಳ ಒಳ್ಳೆಯ ಯೋಜನೆಯಾಗಿದೆ. ಕೆಲವು ಸಲ ನೂರಾರು ಕುರಿಗಳು ಒಟ್ಟಿಗೆ ಸತ್ತು ಹೋಗುತ್ತವೆ. ಆ ಸಂದರ್ಭದಲ್ಲಿ ರೈತರಿಗೆ ಬಹಳ ತೊಂದರೆಯಾಗುತ್ತದೆ. ಇದರ ಜೊತೆಗೆ ನಾನು ಸರ್ಕಾರಕ್ಕೆ ಒಂದು ಮನವಿ ಮಾಡುತ್ತೇನೆ. ಕುರಿಗಳು ಸತ್ತಂತಹ ಸಂದರ್ಭದಲ್ಲಿ ಪರಿಹಾರ ಕೊಡುವುದಷ್ಟೇ ಅಲ್ಲ, Veterinary Polytechnic College ಗಳನ್ನು ಎಲ್ಲಾ ಕಡೆಗಳಲ್ಲಿ ಸ್ಥಾಪನೆ ಮಾಡಬೇಕು. ಕುರಿಗಳಿಗೆ ಕಾಯಿಲೆ ಬಂದು ಸಾಯುತ್ತವೆ.

(ಮುಂದು . . .)

**(414) 17-03-2022 (12-30) spr(bkp)rn (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೆ.ಎಸ್.ನವೀನ್ (ಮುಂದು):-**

ಇವತ್ತು ಕುರಿಗಳು ಕಾಯಿಲೆ ಬಂದು ಸಾಯುತ್ತಿವೆ. ಆ ಕಾಯಿಲೆಗೆ ಚಿಕಿತ್ಸೆ ಕೊಡಿಸುವಂತಹ ಕೆಲಸ ಆಗಬೇಕಾಗಿದೆ. ಅದಕ್ಕೆ Veterinary Hospital ಮತ್ತು ಪಾಲಿಟೆಕ್ನಿಕ್ ಆಸ್ಪತ್ರೆಗಳನ್ನು ತೆರೆಯುವಂತಹ ಕೆಲಸ ಮಾಡಬೇಕಾಗಿದೆ. ಭದ್ರಾ ಮೆಲ್ದಂಡೆ ಯೋಜನೆಗೆ ಸಂಬಂಧಪಟ್ಟಂತೆ

ಹೇಳುವುದಾದರೆ, ರಾಜ್ಯದ 25 ಜನ ಸಂಸದರುಗಳು ರಾಜ್ಯಕ್ಕೆ ಏನು ಮಾಡುತ್ತಿದ್ದಾರೆಂದು ವಿರೋಧ ಪಕ್ಷದವರು ಬಹಳಷ್ಟು ಟೀಕೆಗಳನ್ನು ಮಾಡಿದರು. ರಾಷ್ಟ್ರೀಯ ಯೋಜನೆಯಾಗಿ ಭದ್ರಾ ಮೇಲ್ದಂಡೆ ಯೋಜನೆ ಘೋಷಣೆಯಾಗಿದೆ. ಭದ್ರಾ ಮೇಲ್ದಂಡೆ ಯೋಜನೆ ಇಡೀ ದೇಶದಲ್ಲಿ ಮೊದಲ ರಾಷ್ಟ್ರೀಯ ನೀರಾವರಿ ಯೋಜನೆಯಾಗಿದೆ ಎಂಬುದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕಾಗಿದೆ. ಇಡೀ ದೇಶದಲ್ಲಿ ಎಲ್ಲೂ ಕೂಡ ರಾಷ್ಟ್ರೀಯ ಯೋಜನೆ ಮಾಡಿಲ್ಲ. ನಮ್ಮ ಶಾಸಕ ಮಿತ್ರರು ಹೇಳುತ್ತಿದ್ದರು. ಕೃಷ್ಣಾ ಮೇಲ್ದಂಡೆ ಯೋಜನೆಗೆ ಕೇವಲ ಐದು ಸಾವಿರ ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆಂದು. ಈ ಹಿಂದೆ ಮಾನ್ಯ ಸಿದ್ದರಾಮಯ್ಯನವರು ಏನೆಂದು ಮಾತನಾಡಿದ್ದರು ಎಂಬುದನ್ನು ತೆಗೆದು ನೋಡಲಿ. ಅವರು ಕೃಷ್ಣಾ ಮೇಲ್ದಂಡೆ ಯೋಜನೆಗೆ ವರ್ಷಕ್ಕೆ ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಕೊಡುತ್ತೇನೆಂದು ಹೇಳಿದ್ದರು. ಆದರೆ, ಅವರ ಅಧಿಕಾರದ ಐದು ವರ್ಷದ ಅವಧಿಯಲ್ಲಿ ಐದು ಸಾವಿರ ಕೋಟಿ ರೂಪಾಯಿಗಳನ್ನು ಸಹ ನೀಡಲಿಲ್ಲ. ಆದರೆ, ಇವತ್ತು ನಾವು ಹದಿನಾರು ಸಾವಿರ ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದಿಂದ ಭದ್ರಾ ಮೇಲ್ದಂಡೆ ಯೋಜನೆಗೆ ಚಾಲನೆಗೆ ಹಣ ಕೊಡುವಂತಹ ಕೆಲಸವನ್ನು ಮಾಡಿದ್ದೇವೆ. ಅದಕ್ಕೋಸ್ಕರ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಧನ್ಯವಾದಗಳನ್ನು ಸಮರ್ಪಣೆ ಮಾಡುವುದಕ್ಕೆ ಇಷ್ಟಪಡುತ್ತೇನೆ.

**ಸಭಾಪತಿಯವರು:-** ಮಾನ್ಯ ಕೆ.ಎಸ್.ನವೀನ್‌ರವರೆ, ನಾನು ಐದು ನಿಮಿಷಕಿಂತ ಮುಂಚಿತವಾಗಿ ಬೆಲ್ ಮಾಡಿದ್ದೇನೆ. ನೀವು ಐದು ನಿಮಿಷ ಮಾತ್ರ ಮಾತನಾಡಿ. ಈಗ ಸುಮಾರು 22 ನಿಮಿಷವಾಗಿದೆ.

**ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಮೊದಲನೆ ಬಾರಿ ಮಾತನಾಡುತ್ತಿದ್ದೇನೆ. ಕೆಲವು ಸದಸ್ಯರಿಗೆ ಸುಮಾರು ಒಂದೂಮುಕ್ಕಾಲು ಗಂಟೆ ಮಾತನಾಡುವುದಕ್ಕೆ ಅವಕಾಶ ನೀಡಿದ್ದೀರಿ. ನನಗೆ ಹತ್ತು ನಿಮಿಷ ಹೆಚ್ಚಿಗೆ ಮಾತನಾಡುವುದಕ್ಕೆ ಅವಕಾಶ ನೀಡುವುದಿಲ್ಲವೆಂದರೆ, ನಾನು ನನ್ನ ಮಾತನ್ನು ಮುಗಿಸಿ, ಕೈಮುಗಿದು ಕುಳಿತುಕೊಳ್ಳುತ್ತೇನೆ. ತಾವು ದಯವಿಟ್ಟು ಗಮನಿಸಬೇಕು. ನಾನು ಅನಾವಶ್ಯಕವಾಗಿ ಬೇರೆ ವಿಷಯವನ್ನು ಮಾತನಾಡುತ್ತಿಲ್ಲ. ನಾನು ಬಜೆಟ್ ವಿಷಯಗಳ ಮೇಲೆ ಮಾತ್ರ ಮಾತನಾಡುತ್ತಿದ್ದೇನೆ. ನಾನು ರಾಜಕೀಯವಾಗಿ ಪ್ರಚೋದನೆ ಮಾಡುವಂತಹ, ಕಾಲೆಳೆಯುವಂತಹ ಕೆಲಸ ಮಾಡಿಲ್ಲ. ಅಂತಹವರಿಗೆ ನೀವು ಮಾತನಾಡಲು

ಗಂಟೆಗಟ್ಟಲೆ ಅವಕಾಶ ನೀಡುತ್ತೀರಿ. ನಾನು ಬಜೆಟ್‌ನ ಪ್ರತಿಯೊಂದು ಪಾಯಿಂಟ್ ಅನ್ನು ಸಹ ಬರೆದುಕೊಂಡು, ಮಾತನಾಡುವುದಕ್ಕೆ ಮೂರು ದಿವಸದಿಂದ ಕಾಯುತ್ತಿದ್ದೇನೆ. ಆದುದರಿಂದ ತಾವು ನನಗೆ ಹತ್ತು ನಿಮಿಷ ಹೆಚ್ಚಿನ ಸಮಯವನ್ನು ನೀಡಿ.

**ಸಭಾಪತಿಯವರು:–** ತಾವು ಎಷ್ಟು ಹೊತ್ತು ಮಾತನಾಡುತ್ತೀರಿ, ಮಾತನಾಡಿ. ಅವರು ನಾನು ಹೇಳಿದ್ದನ್ನು ಕೇಳುವುದಿಲ್ಲವೆಂದರೆ ಏನು ಮಾಡುವುದು? ಮಾನ್ಯ ಸಭಾನಾಯಕರೆ, ನೀವು ಅವರಿಗೆ ತಿಳಿಸಿ ಹೇಳಬೇಕು. ಈ ರೀತಿಯಾಗಿ ಮಾತನಾಡಿದರೆ ಸದನ ಹೇಗೆ ನಡೆಯುತ್ತದೆ? ಸದಸ್ಯರು ಮಾತನಾಡುವುದಕ್ಕೆ 22 ನಿಮಿಷ ಎಂದು ಹೇಳಿದ್ದಾರೆ. ಅದಕ್ಕೆ ನಾನು 22 ನಿಮಿಷ ಸಮಯವನ್ನು ನೀಡುತ್ತಿದ್ದೇನೆ. ಈಗ ಬೇಕಾದವರಿಗೆ ಕೊಡುತ್ತಾರೆಂದರೆ ಹೇಗೆ? ನಾನು ಏನು ಹೇಳುವುದಿಲ್ಲ, ಆಯಿತು ಮಾನ್ಯ ಸದಸ್ಯರು ಮಾತನಾಡಿ.

**ಶ್ರೀ ಕೆ.ಎಸ್.ನವೀನ್:–** ಮಾನ್ಯ ಸಭಾಪತಿಯವರೇ, ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಇವತ್ತು ಏನು, **"ಸರ್ವೇ ಜನೋ ಸುಖಿನೋ ಭವಂತು"** ಎನ್ನುವ ಅರ್ಥದಲ್ಲಿ ಮಾಡುವಂಥದ್ದು ಮಾಡಿದ್ದೇವೆ. ಈ ಬಜೆಟ್‌ನಲ್ಲಿ ಎಲ್ಲಾ ವರ್ಗದ ಜನರಿಗೂ ಆದ್ಯತೆ, ಅವಕಾಶಗಳನ್ನು ಕೊಡುವಂತಹ ಕೆಲಸ ಈ ಬಜೆಟ್‌ನಲ್ಲಿ ಆಗಿದೆ. ವಿಶೇಷವಾಗಿ ಎಸ್.ಸಿ./ಎಸ್.ಟಿ ಮತ್ತು ಹಿಂದುಳಿದ ವರ್ಗದ ಜನರಿಗೆ ಈ ಬಜೆಟ್‌ನಲ್ಲಿ ಸಾಕಷ್ಟು ಯೋಜನೆಗಳನ್ನು ಕೊಡುವಂತಹ ಕೆಲಸವಾಗಿದೆ. ಎಸ್.ಸಿ./ಎಸ್.ಟಿ ಮತ್ತು ಹಿಂದುಳಿದ ವರ್ಗದ ಮಕ್ಕಳಿಗೆ ಅತಿ ಹೆಚ್ಚು ಬೇಡಿಕೆ ಇರುವುದು ವಿದ್ಯಾಭ್ಯಾಸ. ಅವರಿಗೆ ಬೇಕಾಗಿರುವುದು ಒಂದು ಒಳ್ಳೆಯ ವಿದ್ಯಾಭ್ಯಾಸ. ಅವರ ವಿದ್ಯಾಭ್ಯಾಸಕ್ಕೆ ಬೇಕಾಗಿರುವಂತಹ ಹಾಸ್ಟೆಲ್‌ಗಳು, ಕಾಲೇಜ್‌ಗಳು ಮತ್ತು ಅವರು ಬಂದು ಹೋಗುವಂಥದ್ದಕ್ಕೆ ಸರಿಯಾದ ವ್ಯವಸ್ಥೆಗಳು ಆಗಬೇಕು. ಇವತ್ತು ರಾಜ್ಯ ಸರ್ಕಾರ ಎಸ್.ಸಿ./ಎಸ್.ಟಿ. ಮತ್ತು ಹಿಂದುಳಿದ ವರ್ಗದ ಮಕ್ಕಳಿಗೆ ಹಾಸ್ಟೆಲ್‌ಗಳನ್ನು ಅದು ಅಂಬೇಡ್ಕರ್ ವಸತಿ ನಿಲಯ ಇರಬಹುದು, ನಾರಾಯಣಗುರು ವಸತಿ ನಿಲಯ ಇರಬಹುದು ಮತ್ತು ಕನಕದಾಸ ವಸತಿ ನಿಲಯ ಇರಬಹುದು. ಈ ರೀತಿಯ ವಸತಿ ನಿಲಯಗಳನ್ನು ನೀಡುವುದರ ಮೂಲಕ, ಯಾವ ಮಕ್ಕಳು ಶಾಲಾ–ಕಾಲೇಜುಗಳಿಗೂ ಹೋಗದೆ ಅರ್ಧಕ್ಕೆ ನಿಂತುಹೋಗುತ್ತಿದ್ದರು. ಅವರುಗಳಿಗೆ, ಇವತ್ತು ವಸತಿ ನಿಲಯಗಳನ್ನು ಹೆಚ್ಚು

ಮಾಡಿರುವ ಕಾರಣ, ಅತಿ ಹೆಚ್ಚು ಸಂಖ್ಯೆಯಲ್ಲಿ ಆ ವರ್ಗದ ಜನರ ಮಕ್ಕಳು ಪದವೀಧರರಾಗುವಂತಹ ಅವಕಾಶಗಳಿವೆ. ಅವರು ಓದಿ ಮುಂದೆ ಸಮಾಜಕ್ಕೆ ಉತ್ತಮ ಪ್ರಜೆಗಳಾಗಿ ಕೆಲಸ ಮಾಡುವಂತಹ ಅವಕಾಶವನ್ನು ಈ ಸರ್ಕಾರ ಮಾಡಿಕೊಟ್ಟಿದೆ.

ಅದೇ ರೀತಿ ಮಾನ್ಯ ಎ.ಪಿ.ಜೆ.ಅಬ್ದುಲ್ ಕಲಾಂ ವಸತಿ ಶಾಲೆಗಳು. ಹಾಗೆಯೇ ಸುಮಾರು 150 ಐಟಿಐ ಕಾಲೇಜುಗಳನ್ನು ಟಾಟಾ ಸಂಸ್ಥೆಯ ಜೊತೆಗೆ ಕೈಜೋಡಿಸಿ ಅದನ್ನು ಮುಂದೆ ತರುವಂತಹ ಕೆಲಸವನ್ನು ಮಾಡಿದ್ದಾರೆ. ಅಂಗನವಾಡಿಯಿಂದ ಹಿಡಿದು, ಯೂನಿವರ್ಸಿಟಿಗಳ ಸ್ಥಾಪನೆಗೆ ಈ ಬಾರಿಯ ಬಜೆಟ್‌ನಲ್ಲಿ ವಿಶೇಷ ಆದ್ಯತೆಯನ್ನು ನೀಡಿದ್ದು. ಸರ್ಕಾರ ಏನು ಮೊದಲನೆ "E" ಎಂದು ಹೇಳಿದೆ. ಅದು Education ಕಡೆಗೆ ನಮ್ಮ ಸರ್ಕಾರದ ಮುಖ್ಯಮಂತ್ರಿಗಳು ಕೊಟ್ಟಿರುವಂತಹ ಬದ್ಧತೆಯನ್ನು ಪ್ರದರ್ಶನ ಮಾಡುವಂತಹ ಕೆಲಸವಾಗುತ್ತಿದೆ.

ಇನ್ನು ಗ್ರಾಮೀಣಾಭಿವೃದ್ಧಿ ಬಗ್ಗೆ ಹೇಳುವುದಾದರೆ, ನಾವುಗಳು ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಆಯ್ಕೆಯಾಗಿ ಬಂದಿದ್ದೇವೆ. ಈಗ ಉದ್ಯೋಗಖಾತ್ರಿ ಅಡಿಯಲ್ಲಿ, ಹಿಂದೆ ಟಾರ್ಗೆಟ್ ಅನ್ನು ರೀಚ್ ಮಾಡುತ್ತಿರಲಿಲ್ಲ. ಈ ಬಾರಿ ನಮಗೆ ಕೊಟ್ಟಿರುವಂತಹ ಟಾರ್ಗೆಟ್ ಏನೆಂದರೆ, ಮೊದಲು ಹದಿಮೂರು ಕೋಟಿ ಮಾನವ ದಿನಗಳು ಇದ್ದವು. ಆದರೆ, ಈಗ ಮಾನ್ಯ ಸಚಿವರು ಮಾಡಿದಂತಹ ನಿರಂತರ ಪ್ರಯತ್ನದ ಫಲವಾಗಿ ಹದಿಮೂರು ಕೋಟಿ ಮಾನವ ದಿನಗಳನ್ನು ದಾಟಿ, ಇನ್ನು ಹೆಚ್ಚುವರಿಯಾಗಿ ಮೂರು ಕೋಟಿ ಮಾನವ ದಿನಗಳನ್ನು ಕೊಡುವಂತಹ ಕೆಲಸವನ್ನು ಕೇಂದ್ರ ಸರ್ಕಾರ ಮಾಡಿದೆ. ಅದರಿಂದ ನಮ್ಮ ರಾಜ್ಯಕ್ಕೆ ಎಷ್ಟು ಹಣ ಬರುತ್ತದೆ ಎಂಬುದನ್ನು ಸಹ ಗಮನಿಸಬೇಕಾಗುತ್ತದೆ. ಇದು ಗ್ರಾಮೀಣಾಭಿವೃದ್ಧಿ ಸಚಿವರ ಪ್ರಯತ್ನವಾಗಿದೆ. ಇವತ್ತು ಹಳ್ಳಿಗಳಲ್ಲಿ ಉದ್ಯೋಗ ಖಾತ್ರಿ ಮೂಲಕ ಸಾಕಷ್ಟು ಕೆಲಸ ಸಿಗುವಂಥದ್ದು ಆಗಿದೆ. ಅದೇ ಗ್ರಾಮೀಣಾಭಿವೃದ್ಧಿ ಸಚಿವರ ಕಡೆಯಿಂದ "ಜಲ ಜೀವನ ಮಿಷನ್"ಗೆ ಹಣವನ್ನು ಕೊಡುವಂತಹ ಕೆಲಸವನ್ನು ಮಾಡಿ, ಹಳ್ಳಿಗಳಲ್ಲಿ ಶುದ್ಧ ಕುಡಿಯುವ ನೀರು ವಿಶೇಷವಾಗಿ, ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ಇದ್ದಂತಹ ನೀರಿನ ಸಮಸ್ಯೆಯನ್ನು ನೀಗಿಸುವಂತಹ ನಿಟ್ಟಿನಲ್ಲಿ ಬಹಳ ಒಳ್ಳೆಯ ಕೆಲಸವನ್ನು ಮಾಡಿದೆ. ಇದರ ಜೊತೆಗೆ ಎಸ್.ಸಿ./ಎಸ್.ಟಿ. ಮತ್ತು ಹಿಂದುಳಿದ ವರ್ಗದ ಜನರಿಗೆ 400 ಕೋಟಿ ರೂಪಾಯಿಗಳನ್ನು ಅತೀ ಹಿಂದುಳಿದ ಸಮುದಾಯಗಳಿಗೆ ಹಣವನ್ನು

ಕೊಡುವಂತಹ ಕೆಲಸವನ್ನು ಮಾಡಲಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಮಂತ್ರಿಗಳಲ್ಲಿ ಮನವಿಯನ್ನು ಮಾಡುತ್ತೇನೆ. ಇರುವಂತಹ ಪಟ್ಟಿಯಲ್ಲಿ ಅಲೇಮಾರಿ ಸಮುದಾಯದವರನ್ನು ಸಹ ಸೇರಿಸುವಂತಹ ಕೆಲಸ ಆಗಬೇಕು. ಅಲೇಮಾರಿ ಸಮುದಾಯದವರು ಬಹಳಷ್ಟು ಸಮುದಾಯಗಳ ಮುಂದೆ ಹರಿದು ಹಂಚಿ ಹೋಗಿದ್ದಾರೆ. ಅದಕ್ಕೆ ಬಜೆಟ್‌ನಲ್ಲಿ ಅಲೇಮಾರಿ ಸಮುದಾಯದವರಿಗೂ ಕೂಡ ವಿಶೇಷವಾದಂತಹ ಆದ್ಯತೆಯನ್ನು ಕೊಡುವಂತಹ ಕೆಲಸವನ್ನು ಮಾಡಬೇಕಾಗಿದೆ ಎಂದು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವಂತಹ ಪ್ರಯತ್ನವನ್ನು ಮಾಡುತ್ತಿದ್ದೇನೆ.

ಇನ್ನು ನಮ್ಮ ಗ್ರಾಮೀಣ ರಸ್ತೆಗೆ ಬೇಕಾಗಿರುವಂತಹ ಆದ್ಯತೆಯನ್ನು ಬಜೆಟ್‌ನಲ್ಲಿ ಕೊಡುವಂತಹ ಕೆಲಸವನ್ನು ಮಾಡಿದ್ದಾರೆ. ಇನ್ನು ಬೆಂಗಳೂರು ಮಹಾನಗರಕ್ಕೆ ಎಂಟೂವರೆ ಸಾವಿರ ಕೋಟಿ ರೂಪಾಯಿಗಳ ಹಣವನ್ನು ಈ ಬಜೆಟ್‌ನಲ್ಲಿ ಮೀಸಲಿಟ್ಟಿರುವುದು, ನಮ್ಮ ಕರ್ನಾಟಕಕ್ಕೆ ಕೀರ್ತಿ ಕಳಸವಾಗಿರುವಂಥದ್ದು ಬೆಂಗಳೂರು ಮಹಾನಗರ. ಬೆಂಗಳೂರು ಮಹಾನಗರ ಇಡೀ ನಮ್ಮ ರಾಜ್ಯಕ್ಕೆ ದೊಡ್ಡ ಆದಾಯ ತರುವಂತಹ ಕೆಲಸವನ್ನು ಮಾಡುತ್ತಿದೆ. ಹಾಗಾಗಿ, ಬೆಂಗಳೂರಿನ ಅಭಿವೃದ್ಧಿ ವಿಚಾರವಾಗಿ ಮಾಡಬೇಕಾಗಿರುವಂತಹ ಹಲವಾರು ವಿಚಾರಗಳಿಗೆ ಏನು ಸರ್ಕಾರ ಹಣವನ್ನು ಮೀಸಲಿಟ್ಟಿದೆ. ಇದರಿಂದ ಬಹಳ ಅನುಕೂಲವಾಗುತ್ತದೆ. ಮುಂದಿನ ದಿನಗಳಲ್ಲಿ ಬೆಂಗಳೂರು ವಿಶ್ವದ ನಗರಗಳಲ್ಲಿ ಪ್ರಥಮ ಸ್ಥಾನವನ್ನು ಪಡೆಯುವಂತಹ ನಿಟ್ಟಿನಲ್ಲಿ ಕೆಲಸವನ್ನು ಮಾಡಬೇಕಾಗಿದೆ.

ಇನ್ನು ಆಡಳಿತ ವಿಷಯಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ನಮ್ಮ ಸ್ನೇಹಿತರಾದ ಮಾನ್ಯ ಪಿ.ಎಂ.ಮುನಿರಾಜು ಗೌಡರು ನಿನ್ನೆ  ಬಹಳ ಚೆನ್ನಾಗಿ ಹೇಳಿದರು. ಯಾವುದೇ ಪಕ್ಷ ಅಧಿಕಾರದಲ್ಲಿ ಇರಲಿ. ಆದರೆ, ಅಧಿಕಾರಿಗಳು ಮಾತ್ರ ಅವರುಗಳೇ ಇರುತ್ತಾರೆ. ಆಡಳಿತವನ್ನು ನಡೆಸುವಂತಹವರು ಅಧಿಕಾರಿಗಳೇ. ಆದರೆ, ಮಾನ್ಯ ಮುಖ್ಯಮಂತ್ರಿಗಳು ಆಡಳಿತದಲ್ಲಿ ಬಹಳಷ್ಟು ಚುರುಕು ತರುವಂತಹ ಪ್ರಯತ್ನ ಮಾಡುತ್ತಿದ್ದಾರೆ. ಆದರೆ, ವಾಸ್ತವವಾಗಿ ಇವತ್ತು ಏನಾಗುತ್ತಿದೆ ಎಂದರೆ, ಸುಮಾರು 18 ಜನ ಅಧಿಕಾರಿಗಳ ಮೇಲೆ, ಎಸಿಬಿ ದಾಳಿಯಾಗಿದೆ. ಅವರು ಹಣವನ್ನು ಎಲ್ಲೆಲ್ಲಿ ಇಟ್ಟಿದ್ದಾರೆ.  ಎಂದರೆ, ಕಸದ ಬುಟ್ಟಿಯಲ್ಲಿ ಬಂಗಾರ ಸಿಕ್ಕಿದೆ. ಯಾರೋ ಒಬ್ಬ ಅಧಿಕಾರಿ ಡ್ರೈನೇಜ್ ಪೈಪ್ ಒಳಗಡೆ ಹಣ ಇಟ್ಟಿರುವುದು. ಈ ರೀತಿಯ ಭ್ರಷ್ಟಾಚಾರದಲ್ಲಿ ಅಧಿಕಾರಿಗಳು ತೊಡಗಿದ್ದಾರೆ,  ಈ ವಿಚಾರದಲ್ಲಿ  ನಾನು ಆ ಪಕ್ಷ, ಈ

ಪಕ್ಷವೆಂದು ಹೇಳುವುದಿಲ್ಲ. ನಾವು 2.65 ಲಕ್ಷ ಕೋಟಿ ರೂಪಾಯಿಗಳ ಬಜೆಟ್ ಅನ್ನು ನೀಡಿದರು ಸಹ, ಅದನ್ನು ಅನುಷ್ಠಾನ ಮಾಡುವಂತಹ ದೃಷ್ಠಿಯಿಂದ ಸಾಕಷ್ಟು ಸುಧಾರಣೆಗಳನ್ನು ತರುವಂತಹ ಅವಶ್ಯಕತೆ ಇದೆ. ಅನುಷ್ಠಾನದ ಕಡೆಗೆ ಹೆಚ್ಚು ಗಮನವನ್ನು ನೀಡಬೇಕು. ಅನುಷ್ಠಾನ ಮಾಡುವುದರಲ್ಲಿ ಪಾರದರ್ಶಕತೆಯನ್ನು ತರುವಂತಹ ಕೆಲಸವನ್ನು ಮಾಡಬೇಕಾಗಿದೆ. ಎಲ್ಲಾ ಅಧಿಕಾರಿಗಳು ಭ್ರಷ್ಟರು ಎಂದು ನಾನು ಹೇಳುವುದಿಲ್ಲ. ಆದರೆ, ಒಂದು ಕೊಳೆತ ಹಣ್ಣು ಆ ಬುಟ್ಟಿಯಲ್ಲಿರುವ ಎಲ್ಲಾ ಹಣ್ಣುಗಳನ್ನು ಕೊಳೆಯಿಸುವಂತಹ ಕೆಲಸ ಮಾಡುತ್ತದೆ. ಸರ್ಕಾರ ಆ ಕೊಳೆತ ಹಣ್ಣುಗಳನ್ನು ತೆಗೆಯುವಂತಹ ಕೆಲಸವನ್ನು ಮಾಡಬೇಕಾಗಿದೆ. ಈಗ ಯಾರು ಭ್ರಷ್ಟಾ ಅಧಿಕಾರಿಗಳು ಇದ್ದಾರೆ, ಅವರು ಯಾವುದೇ ಮಟ್ಟದಲ್ಲಿ ಇದ್ದರೂ ಕೂಡ, ಅವರನ್ನು ಹೆಕ್ಕಿ ತೆಗೆಯುವಂತಹ ಕೆಲಸವನ್ನು ಮಾಡಬೇಕು. ಇವತ್ತು ಬಜೆಟ್‌ನಲ್ಲಿ ಏನು 2.60 ಲಕ್ಷ ಕೋಟಿಗಳನ್ನು ನೀಡುತ್ತಿದ್ದೇವೆ. ಅದು ನೇರವಾಗಿ ಸಮಾಜದಲ್ಲಿ ಪಾರದರ್ಶಕವಾಗಿ ಖರ್ಚಾಗುವಂತೆ ಮಾಡಬೇಕು. ನಾನು ಇದನ್ನು ಏಕೆ ಇಷ್ಟೊಂದು ಒತ್ತಿ ಹೇಳುತ್ತಿದ್ದೇನೆಂದರೆ? ಬಹಳಷ್ಟು ಕಡೆಗಳಲ್ಲಿ ಶಾಸಕರಾಗಿ ಮತ್ತು ಮಂತ್ರಿಗಳಾಗಿದ್ದರೂ ಕೂಡ ಸಾಕಷ್ಟು ಮಾಹಿತಿಗಳು ಸಿಗುವುದಿಲ್ಲ. ನಾವುಗಳು ಏನಾದರೂ ಪ್ರಶ್ನೆಗಳನ್ನು ಕೇಳಿದರೆ, ಅದಕ್ಕೆ ಅವರದೇ ಆದ ರೀತಿಯಲ್ಲಿ ಉತ್ತರವನ್ನು ನೀಡುವಂತಹ ಕೆಲಸವನ್ನು ಮಾಡುತ್ತಾರೆ. ವಿಶೇಷವಾಗಿ ಕಂದಾಯ ಇಲಾಖೆ ಮತ್ತು ಭೂ ದಾಖಲೆ ಇಲಾಖೆಯಲ್ಲಿ ತುಂಬಾ ಸಮಸ್ಯೆಗಳಿವೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳು ಸರ್ಕಾರದ ವತಿಯಿಂದ ಆಡಳಿತದಲ್ಲಿ ಆಗಬೇಕಾಗಿರುವಂತಹ ಅಮೂಲಾಗ್ರ ಬದಲಾವಣೆಗಳ ನಿಟ್ಟಿನಲ್ಲಿ ನಾವು ಕೆಲಸವನ್ನು ಮಾಡುವಂಥದ್ದು ಆಗಬೇಕೆಂದು, ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರುತ್ತೇನೆ. ನೀವು ನನಗೆ ಇನ್ನು ಹೆಚ್ಚಿನ ಸಮಯವನ್ನು ನೀಡಿದ್ದರೆ, ಅವರು ಮಾತನಾಡಿರುವಂತಹ ಹಲವಾರು ವಿಷಯಗಳಿಗೆ ಉತ್ತರವನ್ನು ನೀಡಬೇಕಾಗಿತ್ತು. ಉದಾಹರಣೆಗೆ: ಮಾನ್ಯ ವಿರೋಧ ಪಕ್ಷದ ಸದಸ್ಯರು ಹೇಳಿದರು, ಹನ್ನೊಂದು ಲಕ್ಷ ಕೋಟಿ ಕಾರ್ಪೊರೇಟ್ ಕಂಪನಿಗಳ ಸಾಲವನ್ನು ಕೇಂದ್ರ ಸರ್ಕಾರ ಮನ್ನಾ ಮಾಡಿದೆ ಎಂದು. ಕೇಂದ್ರ ಸರ್ಕಾರದವರು ಎಲ್ಲಿ ಮನ್ನಾ ಮಾಡಿದ್ದಾರೆ. ಆ ರೀತಿ ಮನ್ನಾ ಮಾಡಿರುವುದಕ್ಕೆ ಏನಾದರೂ ದಾಖಲೆಗಳಿವೆಯೇ? ಈಗ ಹನ್ನೊಂದು ಲಕ್ಷ ಕೋಟಿ ಸಾಲ ಕೊಟ್ಟಿರುವುದು 2004 ರಿಂದ 2014ರ ಮಧ್ಯದಲ್ಲಿ ಮಾನ್ಯ ಮನಮೋಹನ್ ಸಿಂಗ್ ದೇಶದ ಪ್ರಧಾನ ಮಂತ್ರಿಗಳಾಗಿಂದತಹ ಸಂದರ್ಭದಲ್ಲಿ ನೀಡಿರುವಂತಹ ಸಾಲ. ಆದರೆ, ಮಾನ್ಯ

ಪ್ರಧಾನ ಮಂತ್ರಿಗಳಾದ ಮಾನ್ಯ ಶ್ರೀ ನರೇಂದ್ರ ಮೋದಿಯವರ ಸರ್ಕಾರ ಪ್ರತಿಯೊಂದು ರೂಪಾಯಿಯನ್ನು ವಸೂಲು ಮಾಡುವಂತಹ ಕೆಲಸವನ್ನು ಮಾಡುತ್ತಿದೆ. ಅದು ಮಾನ್ಯ ವಿಜಯ್ ಮಲ್ಯರವರು ಮಾಡಿರುವಂತಹ ಸಾಲ, ಮಾನ್ಯ ಮೆಹುಲ್ ಚೋಕ್ಸಿ ಮಾಡಿರುವಂತಹ ಸಾಲ ಮತ್ತು ಮಾನ್ಯ ಲಲಿತ್‌ಮೋದಿಯವರು ಮಾಡಿರುವಂತಹ ಸಾಲದ ಎಲ್ಲಾ ಹಣವನ್ನು ವಾಪಸ್ಸು ತರುವಂತಹ ಕೆಲಸವನ್ನು ಕೇಂದ್ರ ಸರ್ಕಾರದವರು ಮಾಡುತ್ತಿದ್ದಾರೆ. ಮತ್ತೆ ಅವರು ಕ್ರಮಕೈಗೊಂಡು ಅವರ ಆಸ್ತಿ-ಪಾಸ್ತಿಗಳನ್ನು ಜಪ್ತಿ ಮಾಡಿ, ಹರಾಜು ಹಾಕುತ್ತಿದ್ದಾರೆ. ಅವರಿಗೆ ಸಾಲ ನೀಡಿರುವುದು ಮಾನ್ಯ ಮನಮೋಹನ್ ಸಿಂಗ್‌ರವರ ಸರ್ಕಾರದಲ್ಲಿ. ಈ ರೀತಿಯ ಹೇಳಿಕೆಗಳನ್ನು ಸದನದಲ್ಲಿ ಕೊಡುವಾಗ ಅವುಗಳ ಸಾಕ್ಷ್ಯವನ್ನು ಸಹ ಒದಗಿಸಬೇಕು. ಈಗ ಯಾರಿಗೆ ಸಂಬಂಧಪಟ್ಟ ಹನ್ನೊಂದು ಲಕ್ಷ ಕೋಟಿ ರೂಪಾಯಿಗಳ ಸಾಲವನ್ನು ಮನ್ನಾ ಮಾಡಿರುವುದು. ಯಾವ ಕಾರ್ಪೋರೇಟ್ ಕಂಪನಿಗಳ ಸಾಲ ಮನ್ನಾವಾಗಿದೆ. ಅವರು ಮಾತನಾಡುವುದಕ್ಕಿಂತ ಮುಂಚೆ ಯಾವ ಕಾರ್ಪೋರೇಟ್ ಕಂಪನಿಯ ಹಣವನ್ನು ಕೇಂದ್ರ ಸರ್ಕಾರ ಮಾಫಿ ಮಾಡಿದೆ ಎನ್ನುವುದರ ಸಾಕ್ಷ್ಯವನ್ನು ನೀಡಬೇಕು. ಅದೇ ರೀತಿ ಮಾನ್ಯ ಪ್ರಧಾನ ಮಂತ್ರಿಗಳು ಇದ್ದಂತಹ ಒಬ್ಬ ದಲಿತ ಮಂತ್ರಿಯನ್ನು ತೆಗೆಯುವಂತಹ ಕೆಲಸವನ್ನು ಮಾಡಿದರು ಎಂದು ಹಿರಿಯ ಸದಸ್ಯರಾದ ಮಾನ್ಯ ಆರ್.ಬಿ.ತಿಮ್ಮಾಪೂರ ಸಾಹೇಬರು ಹೇಳಿದರು. ಅದಕ್ಕೆ ಮಾನ್ಯ ಸಭಾಪತಿಯವರ ಮುಖಾಂತರ ಮಾನ್ಯ ಆರ್.ಬಿ.ತಿಮ್ಮಾಪೂರರವರ ಗಮನಕ್ಕೆ ತರುವಂತಹ ಕೆಲಸವನ್ನು ಮಾಡುತ್ತೇನೆ. ಮಾನ್ಯ ಪ್ರಧಾನ ಮಂತ್ರಿಯವರು ಪ್ರಥಮವಾಗಿ ಸುಮಾರು 48 ಜನ ದಲಿತ ಮತ್ತು ಹಿಂದುಳಿದ ವರ್ಗದವರನ್ನು ಮಂತ್ರಿಗಳನ್ನಾಗಿ ಮಾಡಿದರು. ಆದರೆ, ಸದನದಲ್ಲಿ ಅವರನ್ನು ಪರಿಚಯ ಮಾಡುವುದಕ್ಕೆ ಕಾಂಗ್ರೆಸ್ ಪಕ್ಷದವರು ಬಿಡಲಿಲ್ಲ. ಇಡೀ ದೇಶದ ಮೂಲೆ ಮೂಲೆಯಲ್ಲಿರುವಂತಹ ದಲಿತ ಸಂಸದರುಗಳನ್ನು ಕೇಂದ್ರ ಸಚಿವರನ್ನಾಗಿ ಮಾಡಿದರು. ಆದರೆ, ಅವರು ಒಬ್ಬರನ್ನೂ ಸಹ ಪರಿಚಯ ಮಾಡಿಸುವುದಕ್ಕೆ ಬಿಡಲಿಲ್ಲ.

**ಶ್ರೀ ಆರ್.ಬಿ.ತಿಮ್ಮಾಪೂರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸದನಕ್ಕೆ ಹೊಸಬರು.

**ಮುಂದು.**

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(415) 17-03-2022 12-40 **bkp-rn** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ನಾವು ಅದಕ್ಕೋಸ್ಕರ ಜನಾಶೀರ್ವಾದ ಯಾತ್ರೆಯ ಮೂಲಕ ಇಡೀ ದೇಶದಲ್ಲಿ ಸಚಿವರನ್ನು ಪರಿಚಯ ಮಾಡಿಸುವಂತಹ ಕೆಲಸವನ್ನು ಜನರ ಮುಂದೆ ಮಾಡಿದ್ದೇವೆ. ಇವತ್ತಿನ ದಿವಸ ನಮ್ಮ ದೇಶದ ರಾಷ್ಟ್ರಪತಿಯವರು ಕೂಡ ಒಬ್ಬ ದಲಿತರು. ನಮ್ಮ ರಾಜ್ಯದ ರಾಜ್ಯಪಾಲರು ಕೂಡ ಒಬ್ಬ ದಲಿತರು. ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಅತಿ ಹೆಚ್ಚು ದಲಿತ ಮತ್ತು ಸಂಸದರನ್ನು ಹೊಂದಿರುವ ಏಕೈಕ ಪಕ್ಷ ಭಾರತೀಯ ಜನತಾ ಪಕ್ಷ, ಹಿಂದುಳಿದ ವರ್ಗ, ಎಸ್.ಸಿ./ಎಸ್.ಟಿ.ಯ ಎಲ್ಲಾ ಜಾತಿಯವರಿಗೂ ಆದ್ಯತೆ ಕೊಡುವಂತಹ ಕೆಲಸವನ್ನು ಮಾನ್ಯ ನರೇಂದ್ರ ಮೋದಿಯವರು, ಮಾನ್ಯ ಬಿ.ಎಸ್.ಯಡಿಯೂರಪ್ಪಯವರು ಮತ್ತು ಮಾನ್ಯ ಬಸವರಾಜ ಎಸ್. ಬೊಮ್ಮಾಯಿಯವರು ಮಾಡಿದ್ದಾರೆ. ಇವತ್ತು ವಿರೋಧ ಪಕ್ಷದವರು ಮಾತನಾಡಿರುವುದು ಪತ್ರಿಕೆಯಲ್ಲಿ ವರದಿಯಾಗಿದೆ. ಅಂದರೆ, ಒಬ್ಬ ದಲಿತ ಸಚಿವರನ್ನು ಅಧಿಕಾರದಿಂದ ತೆಗೆಯುವಂತಹ ಕೆಲಸವಾಗಿದೆ ಎಂದು ಬಂದಿದೆ. ಪ್ರಧಾನ ಮಂತ್ರಿಗಳ ಸೂಚನೆ ಮೇರೆಗೆ ತೆಗೆದಿದ್ದಾರೆನ್ನುವ ಮಾಹಿತಿಯನ್ನು ಕೊಡುತ್ತಾರೆ. ಎಲ್ಲಿದೆ ಮಾಹಿತಿ? ನಾವು 48 ಸಚಿವರನ್ನು ಏಕ ಕಾಲದಲ್ಲಿ ಮಾಡಿದ್ದೇವೆ. ಈ ರೀತಿಯಲ್ಲಿ ವಿರೋಧ ಪಕ್ಷದ ನಾಯಕರು ಹೇಳಿಕೆ ಮಾಡುತ್ತಾರೆ. ನಾನು ಈ ವಿಷಯದ ಬಗ್ಗೆ ಚರ್ಚೆ ಮಾಡುತ್ತಿದ್ದೇನೆ. ಅಂದರೆ, ಹಿಂದೆ ಪಂಡಿತ್ ಜವಾಹರ್‌ಲಾಲ್ ನೆಹರು ಮತ್ತು ಇವರು ಏನು ಮಾಡಿದ್ದರು ಎಂದು. ಇವತ್ತು "ಕಾಶ್ಮೀರ್ ಫೈಲ್ಸ್ ಫಿಲ್ಮ್" ಬಗ್ಗೆ...

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಜೆಟ್ ಮೇಲೆ ಚರ್ಚೆ ಮಾಡಲಿ. ಅವರು ಮಾನ್ಯ ವಿರೋಧ ಪಕ್ಷದ ನಾಯಕರ ಬಗ್ಗೆ ಮಾತನಾಡಬಾರದು. ಮಾನ್ಯ ಸದಸ್ಯರು ಬಜೆಟ್ ಕುರಿತು ಮಾತನಾಡಲಿ. ಈಗ ವಿರೋಧ ಪಕ್ಷದ ನಾಯಕರ ಬಗ್ಗೆ ಮಾತನಾಡುವುದಾದರೆ, ಅದೇ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳೋಣ. ನಾವು ಮಾತನಾಡುವುದಕ್ಕೆ ರೆಡಿ ಇದ್ದೇವೆ.

**ಸಭಾಪತಿಯವರು:–** ಈಗ ವಿಷಯವನ್ನು divert ಮಾಡುವುದು ಬೇಡ. ಅವರು ಬಜೆಟ್ ಕುರಿತು ಮಾತನಾಡಲಿ.

**ಶ್ರೀ ಎಂ.ಕೆ.ಪ್ರಾಣೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವರು ಮಾತನಾಡಿರುವುದರಿಂದ, ಇವರು ಸಹ ಮಾತನಾಡುತ್ತಿದ್ದಾರೆ. ಇಲ್ಲದೇ ಇದ್ದರೆ ಮಾತನಾಡುತ್ತಿರಲಿಲ್ಲ. ಹಾಗಾಗಿ, ಅವರು ಮಾತನಾಡುವುದಕ್ಕೆ ಅವಕಾಶ ನೀಡಿ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ನಾವು ಅವಕಾಶವನ್ನು ಕೇಳುತ್ತಿಲ್ಲ. ಅವರೇ ಅವಕಾಶವನ್ನು ತೆಗೆದುಕೊಳ್ಳಲಿ. ಈಗ ವಿರೋಧ ಪಕ್ಷದ ನಾಯಕರನ್ನು ಕುರಿತು ಮಾತನಾಡುವುದಾದರೆ, ಅದನ್ನೇ ಮಾತನಾಡುವುದಕ್ಕೆ ನಾವೂ ಸಹ ಸಿದ್ಧರಿದ್ದೇವೆ. ಅವರು ಮಾತನಾಡಲಿ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಾನು ಹೇಳಿರುವುದು ಸತ್ಯ. ಅದನ್ನು ಅವರು ಒಪ್ಪಿಕೊಳ್ಳುತ್ತಿದ್ದಾರೆ. ನಾವು ಅದನ್ನೇ ಹೇಳುತ್ತಿರುವುದು. ಅವರು ಆರ್.ಎಸ್.ಎಸ್. ಅನ್ನು ಕೇಳಿಕೊಂಡು ಮಾಡುತ್ತಿದ್ದಾರೆಂದು ಹೇಳುತ್ತಿದ್ದೇನೆ. ಅವರು ಅದನ್ನೇ ಹೇಳುತ್ತಿದ್ದಾರೆ. ಅದಕ್ಕೆ ಅವರಿಗೆ ಸ್ವಾಗತ ಕೋರುತ್ತೇನೆ.

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ಆ ಹಿನ್ನೆಲೆಯಲ್ಲಿ ನಾವು ಅಧಿಕಾರಕ್ಕೆ ಬಂದಿದ್ದೇವೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸದಸ್ಯರೆ, ತಾವು ತಮ್ಮ ಮಾತನ್ನು ಮುಂದುವರೆಸಿ.

**ಶ್ರೀ ಪ್ರಕಾಶ್ ಕೆ. ರಾಥೋಡ್ (ವಿರೋಧ ಪಕ್ಷದ ಮುಖ್ಯಸಚೇತಕರು):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**(ಗೊಂದಲ)**

**ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸಮಾಜದಲ್ಲಿ ಏನೆಲ್ಲಾ ಘಟನೆ ನಡೆದಿದೆ ಎಂಬ ನೈಜಚಿತ್ರವನ್ನ ಪ್ರಶ್ನಿಸುತ್ತಿಲ್ಲ. ಅಲ್ಲಿ ಯಾವುದೂ ಇಲ್ಲ.

**(ಗೊಂದಲ)**

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ತಾವು ಹೇಳಿದರೂ ಸಹ, ಮೊದಲನೆ ಬಾರಿಗೆ ಮಾನ್ಯ ಸದಸ್ಯರು ತಮ್ಮನೇ ಪ್ರಶ್ನಿಸುತ್ತಿದ್ದಾರೆ. ತಾವು ಸ್ವಲ್ಪ ಅವರಿಗೆ ಹೇಳಬೇಕು. ಅವರು ಹಾಗೆಯೇ ಮಾತನಾಡಿಕೊಂಡು ಹೋದರೆ....

**(ಗೊಂದಲ)**

**ಶ್ರೀ ಕೆ.ಎಸ್.ನವೀನ್:–** ಮಾನ್ಯ ಸಭಾಪತಿಯವರೇ, ಸಮಾಜದಲ್ಲಿ ಏನು ನಡೆದಿದೆ ಎಂಬ ವಾಸ್ತವಾಂಶ ತಿಳಿಸುವಂತಹ ಕೆಲಸವನ್ನು ಮಾಡಿದ್ದಾರೆ. ಆದರೆ, "ಕಾಶ್ಮೀರ್ ಫೈಲ್ಸ್" ಸಿನಿಮಾಗೆ ಸಂಬಂಧಿಸಿದಂತೆ ಹೇಳುವಂತಹ ಸಂದರ್ಭದಲ್ಲಿ. ನೀವು ಆ ಚಿತ್ರ ನೋಡಬೇಕು, ಈ ಚಿತ್ರ ಮಾಡಬೇಕು, ಇನ್ನೊಂದು ಚಿತ್ರ ನೋಡಬೇಕು ಎಂದು ಹೇಳುವುದಾದರೆ, ಅದಕ್ಕೆ ನಾವು "ಕರ್ನಾಟಕ ಫೈಲ್ಸ್" ಎಂಬ ಚಿತ್ರವನ್ನು ತೆಗೆಯುತ್ತೇವೆಂದು ಹೇಳುತ್ತೇವೆ. ಮಾನ್ಯ ಸಿದ್ದರಾಮಯ್ಯನವರ ಸರ್ಕಾರದ ಸಮಯದಲ್ಲಿ ಸುಮಾರು 23 ಅಮಾಯಕರ ಹಿಂದೂ ಕಾರ್ಯಕರ್ತರ ಹತ್ಯೆಯಾದಂತಹ ಸಂದರ್ಭದಲ್ಲಿ ಅವರು ಏನು ಮಾಡುತ್ತಿದ್ದರು? ಇವತ್ತು ನಾವು "ಕರ್ನಾಟಕ ಫೈಲ್ಸ್" ಎನ್ನುವಂತಹ ಚಿತ್ರವನ್ನು ತೆಗೆಯುತ್ತೇವೆ.

**ಶ್ರೀ ಸುನಿಲ್‌ಗೌಡ ಬಿ.ಪಾಟೀಲ್:** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈ ರೀತಿ ಮಾತನಾಡುತ್ತಿದ್ದರೆ. ನಾವೂ ಸಹ ಮಾತನಾಡಬೇಕಾಗುತ್ತದೆ ಮತ್ತು ಗೋದ್ರಾ ಹತ್ಯಾಕಾಂಡದ ಬಗ್ಗೆ ಹೇಳಬೇಕಾಗುತ್ತದೆ.

**(ಗೊಂದಲ)**

**ಶ್ರೀ ಕೆ.ಎಸ್.ನವೀನ್:–** ಮಾನ್ಯ ಸಭಾಪತಿಯವರೇ, ನಾವು ಬಜೆಟ್ ಮೇಲೆ ಮಾತನಾಡುವಂತಹ ಸಂದರ್ಭದಲ್ಲಿ, ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡುವಂತಹ ಕೆಲಸವನ್ನು ಮಾಡಲಾಯಿತು.

**(ಗೊಂದಲ)**

**ಶ್ರೀ ಸುನಿಲ್‌ಗೌಡ ಬಿ.ಪಾಟೀಲ್:** ಮಾನ್ಯ ಸಭಾಪತಿಯವರೇ, ಗುಜರಾತ್‌ನಲ್ಲಿ ಏನ್ನೆಲ್ಲಾ ಅಯಿತು ಎಂದು ಅದರ ಬಗ್ಗೆ ಮಾತನಾಡಬೇಕಾಗುತ್ತದೆ.

**(ಗೊಂದಲ)**

**ಶ್ರೀ ಕೆ.ಎಸ್.ನವೀನ್:–** ಮಾನ್ಯ ಸಭಾಪತಿಯವರೇ, ನಾನು ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**(ಗೊಂದಲ)**

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ನಾವು ಸಹ ಗುಜರಾತ್‌ನಲ್ಲಿ ಏನೆಲ್ಲಾ ಆಯಿತು ಎಂದು ಮಾತನಾಡಬೇಕಾಗುತ್ತದೆ.

**ಶ್ರೀ ಕೆ.ಎಸ್.ನವೀನ್:–** ಮಾನ್ಯ ಸಭಾಪತಿಯವರೇ, ಇವತ್ತು ಮಂಡಿಸಿರುವಂತಹ ಬಜೆಟ್ ಏನಿದೆ, ಅದು ಎಲ್ಲಾ ವರ್ಗದ ಜನರಿಗೆ ಮತ್ತು ವಿಶೇಷವಾಗಿ ಮಹಿಳೆಯರಿಗೆ, ಎಸ್.ಸಿ./ಎಸ್.ಟಿ ಮತ್ತು ಹಿಂದುಳಿದ ವರ್ಗದವರಿಗೆ ತಲುಪಿಸುವಂತಹ ಕೆಲಸವನ್ನು ನಮ್ಮ ಮುಖ್ಯಮಂತ್ರಿಗಳು ಮಾಡಿದ್ದಾರೆ.

**ಶ್ರೀ ಪ್ರಕಾಶ್ ಕೆ. ರಾಥೋಡ್ (ವಿರೋಧ ಪಕ್ಷದ ಮುಖ್ಯಸಚೇತಕರು):–** ಮಾನ್ಯ ಸಭಾಪತಿಯವರೇ, ತಾವು ಹೇಳಿದರೂ ಸಹ ಮಾನ್ಯ ಸದಸ್ಯರು ಟೇಪ್ ರೆಕಾರ್ಡರ್ ರೀತಿ ಮಾತನಾಡಿಕೊಂಡು ಹೋದರೆ, ತಾವು ಸ್ವಲ್ಪ ಅವರಿಗೆ ಹೇಳಿ.

**(ಗೊಂದಲ)**

**ಶ್ರೀ ಕೆ.ಎಸ್.ನವೀನ್:–** ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರ ಮುಂದಿನ ವರ್ಷ ಮಾಡುವಂತೆ ಆಗುತ್ತದೆ.

**(ಗೊಂದಲ)**

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ಅವರು ಯಾರ ಮಾತನ್ನು ಸಹ ಕೇಳುತ್ತಿಲ್ಲ.

**(ಗೊಂದಲ)**

**ಶ್ರೀ ಕೆ.ಎಸ್.ನವೀನ್:–** ಮಾನ್ಯ ಸಭಾಪತಿಯವರೇ, ಇದು ಕೊನೆಯ ಬಜೆಟ್.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಕೆ.ಎಸ್.ನವೀನ್‌ರವರೆ, ನಾನು ಹೇಳುವುದನ್ನು ಕೇಳಿ. ನೀವು ಏನು ಮಾತನಾಡಬೇಕೆಂಬುದನ್ನು ಯೋಚನೆ ಮಾಡಿ ಮಾತನಾಡಿ. ಸಭಾಪತಿಯವರನ್ನು ಪ್ರಶ್ನೆ ಮಾಡುವುದಕ್ಕೆ ಹೋಗಿ ನೀವು ಏನು ಬೇಕಾದರೂ ಮಾತನಾಡಿದರೆ, ಅದನ್ನು ಸಹಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಆ ರೀತಿ ಪ್ರಶ್ನೆ ಮಾಡಿ ಹೇಳುವುದಕ್ಕೆ ನೀವು ಯಾರು? ಸಭಾಪತಿಯವರನ್ನು ಪ್ರಶ್ನೆ ಮಾಡಿದರೆ ಏನೆಂದು ಹೇಳುತ್ತೇನೆ. ಇದರ ಬಗ್ಗೆ ನಿಮ್ಮ ಮೇಲೆ ಬಹಳ ಗಂಭೀರವಾಗಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

**ಶ್ರೀ ಕೆ.ಎಸ್.ನವೀನ್:–** ಮಾನ್ಯ ಸಭಾಪತಿಯವರೇ, ನನ್ನನ್ನು ಕ್ಷಮಿಸಿ. ನಾನು ತಮ್ಮನ್ನು ಪ್ರಶ್ನೆ ಮಾಡುವಂತಹ ಕೆಲಸವನ್ನು ಮಾಡಿಲ್ಲ.

**ಡಾ॥ ವೈ.ಎ.ನಾರಾಯಣಸ್ವಾಮಿ(ಸರ್ಕಾರಿ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಅವರು ಪ್ರಶ್ನೆ ಮಾಡಲೇಬೇಕು. ಆದರೆ, ಮಾನ್ಯ ಸದಸ್ಯರು ನಿಮಗೆ ಪ್ರಶ್ನೆ ಮಾಡಿಲ್ಲ.

**ಸಭಾಪತಿಯವರು:–** ಒಂದು ನಿಮಿಷ ತಡೆಯಿರಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಅವರು ಆ ರೀತಿ ಕೇಳಿದ್ದು, ಪ್ರಶ್ನೆ ಮಾಡಿದಂತೆ ಅಲ್ಲವೇ?

**(ಗೊಂದಲ)**

**ಡಾ॥ ವೈ.ಎ.ನಾರಾಯಣಸ್ವಾಮಿ (ಸರ್ಕಾರಿ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಸುಮಾರು ನೂರು ಬಾರಿ ಪೀಠಕ್ಕೆ ಪ್ರಶ್ನೆ ಮಾಡಿದ್ದಾರೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಭಾನಾಯಕರೆ, ಈ ರ

ಈತಿ ಆದರೆ ಆಗುವುದಿಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಆಯಿತು. ಮತ್ತೆ ಈ ರೀತಿ ಆಗುವುದಿಲ್ಲ.

**ಶ್ರೀ ಕೆ.ಎಸ್.ನವೀನ್:–** ಮಾನ್ಯ ಸಭಾಪತಿಯವರೇ, ನಾನು ಪೀಠವನ್ನು ಪ್ರಶ್ನೆ ಮಾಡುತ್ತಿಲ್ಲ.

**ಸಭಾಪತಿಯವರು:–** ಮಾನ್ಯ ಸಭಾನಾಯಕರೆ, ತಮಗೆ ಹೇಳುತ್ತಿದ್ದೇನೆ ಕೇಳಿ. ಈ ರೀತಿ ಏನಾದರೂ ಮಾತನಾಡಿದರೆ ನಾನೂ ಸಹ tolerate ಮಾಡುವುದಕ್ಕೆ ಆಗುವುದಿಲ್ಲ. ನೀವುಗಳೇ ಹೇಳಿ, ಈ ರೀತಿ ನೀವುಗಳೇ ಮಾತನಾಡುತ್ತೀರಿ. ಅದಕ್ಕೆ ಬೆಲೆ ಇಲ್ಲವೆ? ಮಾತನಾಡುವುದಕ್ಕೆ ನಾನು ಬೇಕಾದಷ್ಟು ಸಮಯವನ್ನು ನೀಡುತ್ತೇವೆ. ಬೇರೆ ಯಾರಿಗೆ ಹೆಚ್ಚಿಗೆ ಸಮಯವನ್ನು ನೀಡಿದ್ದೇನೆ. ನೀವು

ಹೇಳಿದಂತೆ 20 ನಿಮಿಷ ನೀಡಿದ್ದೇನೆ. ಆದರೆ, ಅವರು ಸುಮಾರು 30 ನಿಮಿಷದವರೆಗೆ ಮಾತನಾಡುತ್ತಿದ್ದಾರೆ. ಮತ್ತೆ ಅವರು ಪೀಠವನ್ನು ಪ್ರಶ್ನೆ ಮಾಡುತ್ತಾರೆ.

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ನಾನು ತಮ್ಮನ್ನು ಪ್ರಶ್ನೆ ಮಾಡುತ್ತಿಲ್ಲ.

**ಸಭಾಪತಿಯವರು:-** ಮಾನ್ಯ ಕೆ.ಎಸ್.ನವೀನ್‌ರವರೆ, ನೀವು ಸಭಾಪತಿ ಪೀಠಕ್ಕೆ ಪ್ರಶ್ನೆ ಮಾಡಿದರೆ, ಅದರ ಪರಿಣಾಮ ಬೇರೆಯಾಗುತ್ತದೆ.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪೀಠಕ್ಕೆ ಕ್ಷಮೆ ಕೋರಬೇಕು.

**(ಗೊಂದಲ)**

**ಸಭಾಪತಿಯವರು:-** ನಾನು ಯಾರಿಗೆ ಕಾಯಿಸಿದ್ದೇನೆಂದು ಹೇಳಲಿ.

**(ಗೊಂದಲ)**

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಎಸ್.ನವೀನ್‌ರವರು ಮೊದಲ ಬಾರಿಗೆ ಮಾತನಾಡುತ್ತಿದ್ದಾರೆ. ಸುಮ್ಮನೆ ಏನೇನೋ ಮಾತನಾಡಿ ಮೈಮೇಲೆ ಎಳೆದುಕೊಳ್ಳುವುದು ಬೇಡವೆಂದು ಹೇಳಿ. ಅವರು ಪೀಠಕ್ಕೆ ಕ್ಷಮೆ ಕೋರಲಿ.

**(ಗೊಂದಲ)**

**ಸಭಾಪತಿಯವರು:-** ಆಯಿತು ಎಲ್ಲರೂ ಕುಳಿತುಕೊಳ್ಳಿ. ನಾನು ಸರಿಯಾಗಿ ಲೆಕ್ಕ ಮಾಡಿ, ಬಜೆಟ್ ಮೇಲೆ ಮಾತನಾಡುವುದಕ್ಕೆ 20 ರಿಂದ 25 ನಿಮಿಷ ಕಾಲಾವಕಾಶವನ್ನು ನೀಡಿದ್ದೇನೆ. ಆದರೆ, ಯಾರೂ ಸಹ ನನ್ನ ಮಾತನ್ನು ಕೇಳಲಿಲ್ಲ. ಈಗ ಪೀಠದಲ್ಲಿ ಶ್ರೀಮತಿ ಭಾರತಿ ಶೆಟ್ಟಿ, ಮಾನ್ಯ ಕೆ.ಟಿ.ಶ್ರೀಕಂಠೇಗೌಡ ಮತ್ತು ಡಾ॥ ತೇಜಸ್ವಿನಿ ಗೌಡರು ಕುಳಿತ್ತಿದ್ದರು. ಅವರು ಪೀಠದಲ್ಲಿ ಕುಳಿತುಕೊಂಡಾಗ ಮಾನ್ಯ ಸದಸ್ಯರು ಹೆಚ್ಚಿಗೆ ಮಾತನಾಡಿರಬಹುದು. ಈಗ ಮಾತನಾಡುವಾಗ ಎಲ್ಲವನ್ನು ಇಷ್ಟೇ ಸಮಯವೆಂದು ಹೇಳುವುದಕ್ಕೆ ಆಗುವುದಿಲ್ಲ. ಐದು ನಿಮಿಷ ಹೆಚ್ಚು

ಕಡಿಮೆಯಾಗುತ್ತದೆ. ಅದರೆ, ಮಾನ್ಯ ಕೆ.ಎಸ್.ನವೀನ್‌ರವರು ಏನು ಹೇಳಿದರು ಎಂದರೆ, ಬೇಕಾದವರಿಗೆ ಮಾತನಾಡಲು ಹೆಚ್ಚಿನ ಸಮಯ ನೀಡಿದರು, ನಾನು ಸರಿಯಾಗಿ ಮಾತನಾಡುತ್ತೇನೆ. ಬೇರೆ ಸದಸ್ಯರು ಏನೇ ಹೇಳಿದರೂ ಸಹ ತಾವು ಸುಮ್ಮನಿದ್ದೀರಿ ಎನ್ನುವುದು ಪದ್ಧತಿಯಲ್ಲವೆಂದು ಹೇಳುತ್ತೇನೆ. ಮಾನ್ಯ ಸದಸ್ಯರು ಸದನಕ್ಕೆ ಹೊಸದಾಗಿ ಬಂದಿದ್ದಾರೆ. ಈ ರೀತಿ ಮಾತನಾಡಬಾರದು. ಆಯಿತು, ಈಗ ತಾವು ಮಾತನಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೊಸ ಸದಸ್ಯರು ಅವರು ತಮ್ಮ ಅನುಮತಿ ಪಡೆದು ಮಾತನಾಡುತ್ತಿದ್ದಾರೆ. ಈಗ ಚರ್ಚೆ ಇರುವುದು ಏನೆಂದರೆ, ಅವರಿಗೆ ಸಮಯ ಕಡಿಮೆ ನೀಡುತ್ತಿದ್ದೀರಿ, ಮೊದಲು ಮಾತನಾಡಿದಂತಹವರಿಗೆ ಒಂದೂವರೆ ಘಂಟೆಯ ಸಮಯವನ್ನು ನೀಡಿದ್ದಾರೆ. ನನಗೂ ಸಹ ಅಷ್ಟೆ ಸಮಯವನ್ನು ನೀಡಿ ಎಂದು ಮಾನ್ಯ ಸದಸ್ಯರ ಆಗ್ರಹವಿತ್ತು. ಈ ಮಧ್ಯೆ ತಾವು ಆಕ್ಷೇಪ ಮಾಡಿದಾಗ, ಮಾನ್ಯ ಸದಸ್ಯರು ಹೇಳಿದರು, ನನ್ನಿಂದ ಏನಾದರೂ ಆಗಿದ್ದರೆ ಕ್ಷಮೆ ಕೇಳುತ್ತೇನೆಂದು ಹೇಳಿದ್ದಾರೆ. ಹಾಗಾಗಿ, ಅದರಲ್ಲಿ ಏನೂ ಸಹ ಗೊಂದಲವಿಲ್ಲ. ಅವಕಾಶವಿದ್ದರೆ ಅವರಿಗೆ ಇನ್ನು ಹೆಚ್ಚಿನ ಸಮಯ ನೀಡಬಹುದು.

**ಸಭಾಪತಿಯವರು:–** ಮಾನ್ಯ ಸಭಾನಾಯಕರೆ, ನಾನು ಈ ಸದನಕ್ಕೆ ಬಂದು ಸುಮಾರು 42 ವರ್ಷಗಳಾಗಿವೆ. ಅದು ನನಗೆ ಗೊತ್ತಾಗುತ್ತದೆ. ಆದರೆ, ಮಾತನಾಡುವಾಗ ಅವರಿಗೆ ಸ್ವಲ್ಪ ಬದ್ಧತೆ ಇರಬೇಕು. ಆಯಿತು, ಮಾನ್ಯ ಸದಸ್ಯರು ಮಾತನಾಡಿ.

**ಶ್ರೀ ಕೆ.ಎಸ್.ನವೀನ್:–** ಮಾನ್ಯ ಸಭಾಪತಿಯವರೇ, ತಾವು ಹೇಳಿದಂತೆ, ನಾನು ತಮ್ಮನ್ನು ಪ್ರಶ್ನೆ ಮಾಡಿಲ್ಲ. ಆದರೂ ಸಹ ನಾನು ತಮ್ಮನ್ನು ಕ್ಷಮೆ ಕೋರುತ್ತೇನೆ. ಬಜೆಟ್‌ಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಈಗಾಗಲೇ ಸಾಕಷ್ಟು ಯೋಜನೆಗಳನ್ನು ಜಾರಿಗೆ ತರುವಂತೆ ತಿಳಿಸಿದ್ದೇನೆ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡುವುದೇನೆಂದರೆ, ದಯಮಾಡಿ ಈ ಯೋಜನೆಗಳನ್ನು ಪೂರ್ಣಗೊಳಿಸುವಂತಹ ಕೆಲಸಗಳನ್ನು ಮಾಡಬೇಕು. ವಿಶೇಷವಾಗಿ ಹಿಂದುಳಿದ ಜಿಲ್ಲೆ ಚಿತ್ರದುರ್ಗ ಜಿಲ್ಲೆಯ ಸುತ್ತಮುತ್ತಲಿನ ಪ್ರದೇಶಗಳಿಗೆ ನೀಡಿರುವ ಅನುದಾನ ಮತ್ತು ಸರ್ಕಾರಿ ಮೆಡಿಕಲ್ ಕಾಲೇಜ್ ನೀಡಿರುವುದನ್ನು ಸಹ ನಾನು ಸ್ವಾಗತ ಮಾಡುತ್ತೇನೆ. ಏಕೆಂದರೆ, ಅದು ಬಹಳ ವರ್ಷಗಳ

ಬೇಡಿಕೆಯಾಗಿತ್ತು. ಇದನ್ನು ಈ ಬಾರಿಯ ಬಜೆಟ್‌ನಲ್ಲಿ ಸೇರಿಸಲಾಗಿದೆ. ಅದಕ್ಕೆ ನಾನು ಸರ್ಕಾರಕ್ಕೆ ನಮ್ಮ ಜಿಲ್ಲೆಯ ಜನರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತಾ, ನಾನು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಕ್ತಾಯಗೊಳಸುತ್ತೇನೆ. ನಮಸ್ಕಾರ.

**ಶ್ರೀ ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬಜೆಟ್ ಮೇಲೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಣೆ ಮಾಡುತ್ತಾ, ಈಗಾಗಲೇ ಬಜೆಟ್ ಮೇಲೆ ಸಾಕಷ್ಟು ಚರ್ಚೆಗಳಾಗಿವೆ. ಮಾನ್ಯ ಮುಖ್ಯಮಂತ್ರಿಗಳಾದ ಮಾನ್ಯ ಬಸವರಾಜ ಬೊಮ್ಮಾಯಿಯವರು ಮಂಡಿಸಿದಂತಹ ಬಜೆಟ್ ಏನಿದೆ, ಅದು "ಸಿಹಿಯಿಲ್ಲದ, ರುಚಿಯಿಲ್ಲದ ಬಾಂಬೆ ಮಿಠಾಯಿ" ಬಜೆಟ್ ಅನ್ನು ಮಂಡಿಸಿದ್ದಾರೆ. ಇದು ಚುನಾವಣೆಯ ಗಿಮಿಕ್ ಬಜೆಟ್. ಈ ಬಜೆಟ್‌ನಲ್ಲಿ ಅಲ್ಪಸಂಖ್ಯಾತರಿಗೆ, ಮಹಿಳೆಯರಿಗೆ, ಯುವಕರಿಗೆ ಮತ್ತು ಬಡವರಿಗೆ ಅನ್ಯಾಯವಾಗಿದೆ.

**ಮುಂದು.**

**(416) 17.03.2022 12.50 ಎಸ್‌ವಿ-ವಿಕೆ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಸಲೀಂ ಅಹಮದ್ (ಮುಂದು):-**

ಇವರು ಮಂಡಿಸಿರುವ ಬಜೆಟ್ ಸಾಲದ ಬಜೆಟ್. ಸುಮಾರು 72 ಸಾವಿರ ಕೋಟಿ ರೂಪಾಯಿಗಳ ಸಾಲವನ್ನು ಮಾಡಿದ್ದಾರೆ. 2023ರಲ್ಲಿ ಈ ಸರ್ಕಾರದ ಅವಧಿ ಮುಗಿಯುವ ಹೊತ್ತಿಗೆ ರಾಜ್ಯದ ಸಾಲದ ಪ್ರಮಾಣ ರೂ.5,18,000 ಕೋಟಿಗಳಾಗಿರುತ್ತದೆ. ಒಂದು ಮಗು ಹುಟ್ಟಿದರೆ ರೂ.72,000ಗಳ ಸಾಲದ ಹೊರೆಯನ್ನು ಹೊರಬೇಕಾಗುತ್ತದೆ. ಈ ಸಾಲದ ಬಜೆಟ್ ರಾಜ್ಯಕ್ಕೆ ಒಳ್ಳೆಯ ಬಜೆಟ್ ಅಲ್ಲ ಎನ್ನುವ ಮಾತನ್ನು ಹೇಳಬಯಸುತ್ತೇನೆ.

**(ಈ ಹಂತದಲ್ಲಿ ಮಾನ್ಯ ಭಾರತಿ ಶೆಟ್ಟಿ ಅವರು ಪೀಠವನ್ನು ಅಲಂಕರಿಸಿದರು)**

"ಸಬ್ ಕಾ ಸಾಥ್ ಸಬ್ ಕಾ ವಿಕಾಸ್ ಸಬ್ ಕಾ ವಿಶ್ವಾಸ್ ಸಬ್ ಕಾ ಪ್ರಯಾಸ್" - ಇದು ಇವರ ಹೇಳಿಕೆಗಳು. "ಸಬ್ ಕಾ ವಿಕಾಸ್" ಎಲ್ಲಿ ಆಗಿದೆ ಎಂದು ನಾನು ಕೇಳಬಯಸುತ್ತೇನೆ. "ಸಬ್ ಕಾ

ಪ್ರಯಾಸ್" ಎಲ್ಲಿ ಆಗಿದೆ? ಇದು ಕೇವಲ ಘೋಷಣೆ ಆಗಿಯೇ ಉಳಿದಿದೆ. ವಿಶ್ವಾಸವನ್ನು ಎಲ್ಲಿ ಗಳಿಸಿಕೊಂಡಿದ್ದಾರೆ? ಎಲ್ಲರ ವಿಶ್ವಾಸವನ್ನು ಕಳೆದುಕೊಂಡಿದ್ದಾರೆ. ಜಾತಿ ವ್ಯವಸ್ಥೆಯಲ್ಲಿ ಸಮಾನತೆಗಾಗಿ ಹೋರಾಟ ಮಾಡಿದಂತಹ ಬಸವಣ್ಣನವರು ಇವ ನಾರವ ಇವ ನಾರವ ಎಂದೆಣಿಸದಿರಯ್ಯಾ, ಇವ ನಮ್ಮವ, ಇವ ನಮ್ಮವ, ನಮ್ಮ ಮನೆಯ ಮಗ ಎಂದು ಹೇಳಿದ್ದಾರೆ. ಆದರೆ ಈ ಬಜೆಟ್‌ನಲ್ಲಿ ನೀವು ನಮ್ಮವರಲ್ಲ ಎನ್ನುವ ರೀತಿಯಲ್ಲಿ ಬಜೆಟ್ ಅನ್ನು ಮಂಡಿಸಿದ್ದಾರೆ. "ಸಬ್ ಕಾ ಸಾಥ್ ಸಬ್ ಕಾ ವಿಕಾಸ್" ಎಲ್ಲಿ ಆಗಿದೆ? ನಾನು ಹೆಚ್ಚು ಮಾತನಾಡಲಿಕ್ಕೆ ಹೋಗುವುದಿಲ್ಲ. ಮೂರ್ನಾಲ್ಕು ವಿಷಯಗಳ ಬಗ್ಗೆ ಹೇಳಬಯಸುತ್ತೇನೆ.

ಈ ಬಾರಿಯ ಬಜೆಟ್ ಮೂಗಿಗಿಂತ ಮೂಗುತಿಯ ಭಾರವೇ ಹೆಚ್ಚು ಎನ್ನುವಂತಿದೆ. ಆದಾಯಕ್ಕಿಂತ ಸಾಲವೇ ಹೆಚ್ಚು. ಯಾವುದೇ ಹೊಸ ಯೋಜನೆಗಳಿಲ್ಲ. ಸರ್ಕಾರದ ಬೊಕ್ಕಸದಲ್ಲಿ ಹಣವಿಲ್ಲ. "ಸಬ್ ಕಾ ಸಾಥ್ ಸಬ್ ಕಾ ವಿಕಾಸ್" ಎಂದು ಡಂಗೂರ ಬಾರಿಸುತ್ತಿದ್ದಾರೆ. ನಮ್ಮ ಸರ್ಕಾರ ಇರುವಾಗ ಅಲ್ಪಸಂಖ್ಯಾತರಿಗೆ ರೂ.೩,೦೦೦ ಕೋಟಿ ಅನುದಾನ ಇಡಲಾಗುತ್ತಿತ್ತು. ಈ ಬಜೆಟ್‌ನಲ್ಲಿ ಕೇವಲ ರೂ.1,೦೦೦ ಕೋಟಿ ಇಡಲಾಗಿದೆ. ಏಕೆ ಈ ತರಹ ಅನ್ಯಾಯ? ಹಲವಾರು ಕಾರ್ಯಕ್ರಮಗಳನ್ನು ಘೋಷಿಸಿದ್ದಾರೆ. ಅನುದಾನ ಕಡಿಮೆ ಮಾಡಿದ್ದಾರೆ. ಪ್ರಧಾನ ಮಂತ್ರಿ ಜನವಿಕಾಸ್ ಕಾರ್ಯಕ್ರಮ ಇರಬಹುದು, Karnataka Minorities Development Corporation Limited ಗೆ ಅನುದಾನ ಇರಬಹುದು, ಸ್ಕಾಲರ್‌ಶಿಪ್ ಇರಬಹುದು, ವಿದ್ಯಾಭ್ಯಾಸಕ್ಕಾಗಿ ವಿದೇಶಕ್ಕೆ ಹೋಗಲು ನೀಡುತ್ತಿದ್ದ ಸಾಲ ಇವೆಲ್ಲವನ್ನೂ ನಿಲ್ಲಿಸಲಾಗಿದೆ. ಹೀಗೆ ಬೇರೆ ಬೇರೆ ರೀತಿಯಲ್ಲಿ ಅಲ್ಪಸಂಖ್ಯಾತರಿಗೆ ಈ ಬಜೆಟ್‌ನಲ್ಲಿ ಅನ್ಯಾಯವಾಗಿದೆ. ಬಸವಣ್ಣನವರು ಹೇಳಿರುವಂತೆ ಇವ ನಮ್ಮವ ಇವ ನಮ್ಮವ ಎನ್ನುವ ರೀತಿಯಲ್ಲಿ ಸರ್ಕಾರ ನಡೆಯುತ್ತಿಲ್ಲ. ನಾನು ಮಾನ್ಯ ಬಸವರಾಜ ಬೊಮ್ಮಾಯಿಯವರು ಈ ರೀತಿಯ ಬಜೆಟ್ ಅನ್ನು ಕೊಡುತ್ತಾರೆ ಎಂದು ನಿರೀಕ್ಷಿಸಿರಲಿಲ್ಲ. ನನಗೆ ಅವರಲ್ಲಿ ವಿಶ್ವಾಸವಿತ್ತು. ಏಕೆಂದರೆ ನಾನು ರಾಜ್ಯ ವಿದ್ಯಾರ್ಥಿ ಕಾಂಗ್ರೆಸ್ ಅಧ್ಯಕ್ಷನಾಗಿದ್ದಾಗ ದಿವಂಗತ ಎಸ್.ಆರ್.ಬೊಮ್ಮಾಯಿಯವರು ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ಆ ಸಂದರ್ಭದಲ್ಲಿ ಅವರು ನಮಗೆ ಸಾಕಷ್ಟು ಪ್ರೇರಣೆಯನ್ನು

ಕೊಡುತ್ತಿದ್ದರು. ಆದರೆ ಈ ಬಜೆಟ್‌ನಲ್ಲಿ ಇಂತಹ ಯಾವುದೇ ಒಳ್ಳೆಯ ರೀತಿಯಿಂದ ಅಲ್ಪಸಂಖ್ಯಾತರಿಗೆ ರಕ್ಷಣೆಯನ್ನು ಕೊಟ್ಟಿಲ್ಲ. ಅಲ್ಪಸಂಖ್ಯಾತರಿಗಾಗಿ ಹಲವಾರು ಕಾರ್ಯಕ್ರಮ ಇತ್ತು. ಶಾದಿ ಭಾಗ್ಯ ಇರಬಹುದು, ಅರಿವು ಯೋಜನೆಯಿರಬಹುದು, ಸಮುದಾಯ ಭವನಗಳಿರಬಹುದು ಇವೆಲ್ಲವುಗಳನ್ನೂ ತೆಗೆಯಲಾಗಿದೆ. ಏಕೆ ತೆಗೆದಿದ್ದಾರೆ ಎಂದು ನನಗೆ ಅರ್ಥವಾಗುತ್ತಿಲ್ಲ. ಸಬ್ ಕಾ ಸಾಥ್, ಸಬ್ ಕಾ ವಿಕಾಸ್ ಎಂದು ಹೇಳುತ್ತಾರೆ. ಏಕೆ ಈ ರೀತಿ ಅಲ್ಪಸಂಖ್ಯಾತರಿಗೆ ಅನ್ಯಾಯ ಮಾಡಲಾಗಿದೆ ಎಂದು ಸರ್ಕಾರ ಉತ್ತರವನ್ನು ಕೊಡಬೇಕು.

ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಯುವಕರಿಗೆ ಪ್ರತಿವರ್ಷ ಎರಡು ಕೋಟಿ ಉದ್ಯೋಗಗಳನ್ನು ಕೊಡುತ್ತೇನೆಂದು ಘೋಷಣೆ ಮಾಡಿದ್ದರು. ಏಳು ವರ್ಷಗಳು ಕಳೆದಿವೆ, ಅಂದರೆ, 14 ಕೋಟಿ ಉದ್ಯೋಗಾವಕಾಶಗಳು ಲಭ್ಯವಾಗಬೇಕಿತ್ತು. ಸಿಗುವುದು ಬಿಡಿ, 14 ಕೋಟಿ ಉದ್ಯೋಗಗಳನ್ನು ನಾವು ಕೊರೋನಾ ಸಂದರ್ಭದಲ್ಲಿ ಕಳೆದುಕೊಂಡಿದ್ದೇವೆ.

ಮಾನ್ಯ ಮುಖ್ಯಮಂತ್ರಿಯವರನ್ನು ಕೇಳಬಯಸುತ್ತೇನೆ. ಯುವಕರ ಬಗ್ಗೆ ಭಾಷಣ ಮಾಡುವಿರಿ, ನಿಮ್ಮ ರಾಷ್ಟ್ರ ನಾಯಕರು ಯುವಕರ ಬಗ್ಗೆ ಹೇಳುತ್ತಾರೆ. ಆದರೆ ಯುವಕರಿಗೆ ಯಾವುದೇ ಒಂದು ಒಳ್ಳೆಯ ಕಾರ್ಯಕ್ರಮ ಕೊಟ್ಟಿಲ್ಲ. ನಿರುದ್ಯೋಗ ಸಮಸ್ಯೆಯ ಬಗ್ಗೆ ಯಾವುದೇ ಒಂದು ಕಾರ್ಯಕ್ರಮ ಕೊಟ್ಟಿರುವುದಿಲ್ಲ. ಯುವಕರು ಉದ್ಯೋಗವನ್ನು ಕೇಳಿದರೆ ಪಕೋಡ ಮಾರಾಟ ಮಾಡಿ ಎನ್ನುವ ಬಾಲಿಶ ಹೇಳಿಕೆಯನ್ನು ನಿಮ್ಮ ನಾಯಕರು ನೀಡುತ್ತಾರೆ. ಇದನ್ನು ನಾವು ಖಂಡಿಸುತ್ತೇವೆ. ಏಕೆಂದರೆ ಕೇಂದ್ರ ಸರ್ಕಾರವಿರಬಹುದು ಅಥವಾ ರಾಜ್ಯ ಸರ್ಕಾರವಿರಬಹುದು, ಯುವಜನತೆ ದೊಡ್ಡ ಶಕ್ತಿ ಎಂದು ತಿಳಿದಿದೆ. ಯುವಕರು ಈ ಸರ್ಕಾರದಿಂದ ಭ್ರಮ ನಿರಸನರಾಗಿದ್ದಾರೆ. ಕೊರೋನಾ ಸಂದರ್ಭದಲ್ಲಿ ಲಕ್ಷಾಂತರ ಜನ ಕೆಲಸವನ್ನು ಕಳೆದುಕೊಂಡಿದ್ದಾರೆ. ಆದರೆ ಈ ಸರ್ಕಾರ ಯುವಕರ ಬಗ್ಗೆ ಯಾವುದೇ ಚಿಂತನೆಯನ್ನು ಮಾಡುತ್ತಿಲ್ಲ.

ಮಾನ್ಯ ಸಭಾಪತಿಯವರೇ, ತಾವು ಪೀಠದಲ್ಲಿ ಕುಳಿತಿದ್ದೀರಿ. ತಾವು ಹೇಳಿ. ಈ ಸರ್ಕಾರ ಯಾವ ರೀತಿಯ ಕಾರ್ಯಕ್ರಮಗಳನ್ನು ಕೊಟ್ಟಿದೆ? ತಾಯಿಯಾಗಿ, ಮಗಳಾಗಿ, ಸೊಸೆಯಾಗಿ ಎಲ್ಲಾ ಹಂತಗಳಲ್ಲಿ ಮನೆಯನ್ನು ನಿರ್ವಹಣೆ ಮಾಡುವ ಮಹಿಳೆಯರ ಬಗ್ಗೆ ಎಲ್ಲಿಯಾದರೂ

ಕಾರ್ಯಕ್ರಮಗಳನ್ನು ಕೊಡಲಾಗಿದೆಯೇ? ಸಬ್ ಕಾ ವಿಕಾಸ್ ಎಂದು ಹೇಳುತ್ತಾರೆ, ವಿಕಾಸ ಎಲ್ಲಿ ಆಗಿದೆ? ಏನು ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆ. ಇಂದು ಅಡುಗೆ ಅನಿಲದ ಬೆಲೆ ರೂ.400 ರಿಂದ ರೂ.1000 ಗಳಿಗೆ ತಲುಪಿದೆ. ಮಹಿಳೆಯರಿಗೆ ಎಷ್ಟು ಕಷ್ಟ ಆಗಿದೆ? ಸರ್ಕಾರ ಅರ್ಥ ಮಾಡಿಕೊಳ್ಳಬೇಕಲ್ಲವೆ? ಈ ಬಜೆಟ್‌ನಲ್ಲಿ ಅಂತಹ ಯಾವುದೇ ಒಳ್ಳೆಯ ಕಾರ್ಯಕ್ರಮಗಳನ್ನು ಮಹಿಳೆಯರಿಗೆ ಕೊಡಲಿಲ್ಲ.

ವಿದ್ಯಾರ್ಥಿಗಳಿಗೆ, ಯುವಕರಿಗೆ ಒಳ್ಳೆಯ ಕಾರ್ಯಕ್ರಮಗಳನ್ನು ಕೊಡಬಹುದು, ಹೊಸ ಮನ್ವಂತರಕ್ಕೆ ನಾಂದಿ ಹಾಡಬಹುದು, ರಾಜ್ಯದ ಮುಂದಿನ ಭವಿಷ್ಯವಾಗಿರುವ ಯುವಕರಿಗೆ ಒಂದು ಸಂದೇಶ ಹೋಗಬಹುದು ಎಂದು ನಿರೀಕ್ಷೆ ಮಾಡಿದ್ದೆವು. ಅಂತಹ ಯಾವುದೇ ಕಾರ್ಯಕ್ರಮ ಈ ಆಯವ್ಯಯದಲ್ಲಿ ಕೊಟ್ಟಿರುವುದಿಲ್ಲ. ಅದೇ ರೀತಿಯಾಗಿ ಎಸ್.ಸಿ./ಎಸ್.ಟಿ.ಗಳಿಗೆ ಅನುದಾನ ಕಡಿಮೆ ಮಾಡಿದ್ದಾರೆ. ಹಿಂದುಳಿದ ವರ್ಗಗಳಿಗೆ ಅನುದಾನ ಕಡಿಮೆ ಮಾಡಿದ್ದಾರೆ. ಒಟ್ಟಾರೆ ಎಲ್ಲಾ ಸಮಾಜದವರಿಗೆ ಈ ಬಜೆಟ್‌ನಲ್ಲಿ ಅನ್ಯಾಯವಾಗಿದೆ ಎಂದು ಹೇಳಬಯಸುತ್ತೇನೆ.

ಈಗಾಗಲೇ ಹಲವು ಮಾನ್ಯ ಸದಸ್ಯರು ಗುಣಗಾನ ಮಾಡಿದರು. ಭಾರತೀಯ ಜನತಾ ಪಕ್ಷದ ಪ್ರಣಾಳಿಕೆಯಲ್ಲಿ ಅಧಿಕಾರಕ್ಕೆ ಬಂದರೆ ಒಂದು ಲಕ್ಷ ಕೋಟಿ ನೀರಾವರಿಗಾಗಿ ಖರ್ಚು ಮಾಡುವುದಾಗಿ ಹೇಳಿದ್ದರು. ಎಷ್ಟು ಹಣವನ್ನು ಕೊಟ್ಟಿದ್ದಾರೆ? ಕೇವಲ ರೂ.20,000 ಕೋಟಿಗಳನ್ನು ಕೊಟ್ಟಿದ್ದಾರೆ. ಅದು ಕೂಡ ನಾವು ಮೇಕೆದಾಟು ಯೋಜನೆಗಾಗಿ ಹೋರಾಟ ಮಾಡಿ ಒತ್ತಾಯ ಮಾಡಿದ್ದಕ್ಕೆ ರೂ.1,000 ಕೋಟಿ ನೀಡಿದ್ದಾರೆ. ಕೇವಲ ರೂ.1,000 ಕೋಟಿ ಇಟ್ಟರೆ ಸಾಲುವುದಿಲ್ಲ. ಅದಕ್ಕೆ Environmental Clearance ತೆಗೆದುಕೊಳ್ಳಬೇಕು. ರಾಜಕೀಯ ಇಚ್ಛಾಶಕ್ತಿ ಬೇಕು. 25 ಲೋಕಸಭಾ ಸದಸ್ಯರಿದ್ದಾರೆ, 5 ಕೇಂದ್ರ ಮಂತ್ರಿಗಳಿದ್ದಾರೆ; ಡಬಲ್ ಇಂಜಿನ್ ಸರ್ಕಾರವಿದ್ದರೂ ಕೂಡ ಮೂರು ವರ್ಷಗಳು ಕಳೆದಿದ್ದು, ಇದುವರೆವಿಗೂ ಅನುಮತಿ ಸಿಕ್ಕಿರುವುದಿಲ್ಲ. ಅದಕ್ಕಾಗಿ ನಾವು ಜನಪರ ಹೋರಾಟವನ್ನು ಮಾಡಿದ್ದೆವು. ಪಕ್ಷಾತೀತವಾದ ಪಾದಯಾತ್ರೆಯನ್ನು ಮಾಡಿದ್ದೆವು. ನಮ್ಮ ಮೇಲೆ 5, 6, 7 ಕೇಸುಗಳನ್ನು ದಾಖಲಿಸಲಾಯಿತು. ಆದರೆ ಕಾಂಗ್ರೆಸ್ ಪಕ್ಷ ಯಾವತ್ತೂ ಇದಕ್ಕೆ ಹೆದರುವುದಿಲ್ಲ. ನೀರಿಗಾಗಿ ನಾವು ಜನಪರ ಹೋರಾಟ ಮಾಡಿದೆವು. ಕೊನೆಗೆ ಆ ಹೋರಾಟವನ್ನು ನೋಡಿ

ಮುಖ್ಯಮಂತ್ರಿಯವರು ರೂ.1,000 ಕೋಟಿ ಹಣವನ್ನು ಬಿಡುಗಡೆ ಮಾಡಿದರು. ನಮ್ಮ ಮುಂದಿನ ಹೋರಾಟ ಮಹದಾಯಿ, ಕಳಸಾ ಬಂಡೂರಿಯ ಕಡೆಗೆ ಎಂದು ಹೇಳಿದ್ದೆವು. ಕಲ್ಯಾಣ ಕರ್ನಾಟಕ ಭಾಗದಲ್ಲಿ ಆಗುತ್ತಿರುವ ಅನ್ಯಾಯಕ್ಕೆ ನಾವು ಹೋರಾಟ ಮಾಡುತ್ತೇವೆಂದು ಹೇಳಿದ್ದೆವು. ಹಾಗಾಗಿ ಮಹದಾಯಿಗೂ ಕೂಡ ರೂ.1,000 ಕೋಟಿ ಅನುದಾನವನ್ನು ಇಟ್ಟರು. ಹೀಗಾಗಿ ನೀರಾವರಿಗೆ ಹೆಚ್ಚಿನ ಒತ್ತನ್ನು ಕೊಡುವಂತಹ ಕೆಲಸವನ್ನು ಸರ್ಕಾರ ಮಾಡುತ್ತಿಲ್ಲ. ಕೇವಲ ರೂ.20,000 ಕೋಟಿ ಇಟ್ಟಿದ್ದಾರೆ. ಹೆಚ್ಚಿನ ರೀತಿಯಲ್ಲಿ ಅನುದಾನವನ್ನು ಇಟ್ಟು ರಾಜ್ಯದ ಎಲ್ಲಾ ನೀರಾವರಿ ಕಾರ್ಯಕ್ರಮಗಳಿಗೆ ಹೆಚ್ಚಿನ ಒತ್ತನ್ನು ಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

ಭ್ರಷ್ಟಾಚಾರದ ಬಗ್ಗೆ ಮಾತನಾಡಬೇಕಿದೆ. 'The Party with a Difference' ಸಿದ್ಧಾಂತವಾದಿ ಪಕ್ಷ ಎಂದು ಹೇಳಿ ಅಧಿಕಾರಕ್ಕೆ ಬಂದರು. ಅಧಿಕಾರಕ್ಕೆ ಬರಲಿಲ್ಲ, ಆಪರೇಷನ್ ಕಮಲದಿಂದ ಅಧಿಕಾರಕ್ಕೆ ಬಂದಿದ್ದಾರೆ. ಅದು ಬೇರೆಯ ಪ್ರಶ್ನೆ. ಸರ್ಕಾರದಲ್ಲಿ ಭ್ರಷ್ಟಾಚಾರ ಇದೆ ಎಂದು ಆರೋಪ ಮಾಡಿದ್ದೆವು. ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಕೊರೊನಾ ಸಂದರ್ಭದಲ್ಲಿ ಖರೀದಿಸಲಾದ ಬೆಡ್, ವೆಂಟಿಲೇಟರ್, ಆಮ್ಲಜನಕ ಮುಂತಾದವುಗಳ ಕುರಿತು ಚರ್ಚಿಸಿ, ಸರ್ಕಾರದ ಮೇಲೆ ಗಂಭೀರವಾದ ಆರೋಪವನ್ನು ಮಾಡಲಾಗಿತ್ತು. ಎರಡು ಸಾವಿರ ಕೋಟಿ ರೂಪಾಯಿಗಳ ಭ್ರಷ್ಟಾಚಾರದ ಆರೋಪವನ್ನು ಮಾಡಿದ್ದು, ಇಂದಿನವರೆಗೆ ಅದಕ್ಕೆ ಉತ್ತರ ಬಂದಿರುವುದಿಲ್ಲ. ಯಾವುದೇ ಲೆಕ್ಕವನ್ನು ಕೊಟ್ಟಿಲ್ಲ. ಸರ್ಕಾರ ಭ್ರಷ್ಟಾಚಾರ ನಿಯಂತ್ರಣದ ಕುರಿತು ಚಿಂತನೆ ಮಾಡಬೇಕಿತ್ತು. ಆದರೆ ಮಾಡುತ್ತಿಲ್ಲ. ಇತಿಹಾಸದಲ್ಲಿ ಇಲ್ಲ. ಒಬ್ಬ ಗುತ್ತಿಗೆದಾರರು ಮಾನ್ಯ ಪ್ರಧಾನ ಮಂತ್ರಿಯವರಿಗೆ ಪತ್ರವನ್ನು ಬರೆಯುತ್ತಾರೆ.

**(...ಮುಂದು)**

**(417) 17-03-2022 (1.00) ಕೆಜಿ-ಬಿಎನ್‌ಎಸ್ (ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಸಲೀಂ ಅಹಮದ್ (ಮುಂದು):-**

ಈ ಸರ್ಕಾರದಲ್ಲಿ 40% commission ಕೊಡಬೇಕಾಗುತ್ತದೆ ಎಂದು Karnataka State Contractors Association, President ರವರಾದ ಮಾನ್ಯ ಕೆಂಪಣ್ಣ ಎಂಬುವರು ಕೇಂದ್ರಕ್ಕೆ ಪತ್ರ ಬರೆದಿದ್ದಾರೆ. ನಾವು expect ಮಾಡಿದ್ದೇವು, ಮಾನ್ಯ ಪ್ರಧಾನ ಮಂತ್ರಿಯವರು "ನ ಖಾವುಂಗಾ, ನ ಖಾನೆ ದುಂಗಾ" ಎಂದು ಹೇಳಿದ್ದಾರೆ. ಮಾನ್ಯ ಸಭಾಪತಿಯವರೇ, ನಾನು yield ಆಗುತ್ತಿಲ್ಲ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಯಾವುದಾದರೊಂದು CAG report ಬಂದಿದೆಯೇ ಅಥವಾ CID report ಇದೆಯೇ? ಸುಮ್ಮನೆ ಅವರು ಹೇಳಿದ್ದೆಲ್ಲವೂ ಸತ್ಯವಾಗಲು ಸಾಧ್ಯವಿಲ್ಲ.

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ರವಿಕುಮಾರ್‌ರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ. ಸಲೀಂರವರೇ, ತಾವು ಮಾತನಾಡಿ.

**(ಗೊಂದಲ)**

**(ಈ ಹಂತದಲ್ಲಿ ಎರಡೂ ಕಡೆಯ ಸದಸ್ಯರು ಒಮ್ಮೆಲೆ ಎದ್ದು ನಿಂತು ಮಾತನಾಡ ತೊಡಗಿದರು)**

**ವೈಸ್ ಛೇರ್ಮನ್:-** ಈ ಹಂತದಲ್ಲಿ ಮಾತನಾಡಿದ ಯಾವುದೇ ನಡವಳಿ ಕಡತಕ್ಕೆ ಹೋಗಬಾರದು.

(ಈ ಹಂತದಲ್ಲಿ ವೈಸ್ ಛೇರ್ಮನ್‌ರವರು ಯಾರೇ ಸದಸ್ಯರು ಮಾತನಾಡಿದರು ಕಡತಕ್ಕೆ ಹೋಗಬಾರದೆಂದು ತಿಳಿಸಿದ್ದರಿಂದ ಸದಸ್ಯರುಗಳು ಮಾತನಾಡಿದ್ದನ್ನು ರೇಕಾರ್ಡ್ ಮಾಡಿರುವುದಿಲ್ಲ)

**(ಗೊಂದಲ)**

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ನಾವು ಮಾತನಾಡುವಂತಹ ಸಂದರ್ಭದಲ್ಲಿ ದಯವಿಟ್ಟು ಅವರು ಸುಮ್ಮನೆ ಕೇಳಬೇಕು. ಮಾನ್ಯ ಪ್ರಧಾನ ಮಂತ್ರಿಯವರು "ನ ಖಾವುಂಗಾ, ನ ಖಾನೆ ದುಂಗಾ" ಎಂದು ಹೇಳಿದರು. ಇಂತಹ ಘಟನೆ ಯಾವ ದೇಶದಲ್ಲಿಯೂ ಆಗಿಲ್ಲ. Karnataka State Contractors Association, President ರವರಾದ ಮಾನ್ಯ ಕೆಂಪಣ್ಣನವರು 40% ಕಮಿಷನ್ ಕೇಳುತ್ತಾರೆಂದು ಪತ್ರ ಬರೆದಿದ್ದಾರೆ. ಇದು ನಮ್ಮ ರಾಜ್ಯದ ದುರಂತ, ದುರ್ದೈವ. ಮಾನ್ಯ ಪ್ರಧಾನ ಮಂತ್ರಿಯವರು ಇದರ ಬಗ್ಗೆ ತಕ್ಷಣವೇ CBI enquiry ಮಾಡಿಸುತ್ತಾರೆ, ಇಲ್ಲವೆಂದರೆ ED ರವರಿಗೆ ಕೊಡಿಸುತ್ತಾರೆಂದು ನಾವು expect ಮಾಡಿದ್ದೇವು. ಆದರೆ, ಪ್ರಧಾನ ಮಂತ್ರಿಯವರು ಆ ರೀತಿ ಯಾವುದೇ ಕೆಲಸವನ್ನು ಮಾಡಲಿಲ್ಲ. ನಾನು ಸರ್ಕಾರದ ಮೇಲೆ ಆರೋಪ ಮಾಡುತ್ತಿದ್ದೇನೆ. ನಾವು ತಲೆತಗ್ಗಿಸುವಂತಹ ವರದಿಗಳು ಬರುತ್ತವೆ. ಕಾಸು ಕೊಟ್ಟರಷ್ಟೇ police boss. PSI ಗೆ 10 ಲಕ್ಷ ದಿಂದ 30 ಲಕ್ಷ ರೂಪಾಯಿಗಳು. Inspector ಗೆ 20 ಲಕ್ಷ ದಿಂದ 1 ಕೋಟಿ ರೂಪಾಯಿಗಳು. ACP ಗೆ 25 ಲಕ್ಷ ದಿಂದ 1 ಕೋಟಿ ರೂಪಾಯಿ, DySP 25 ಲಕ್ಷದಿಂದ 1 ಕೋಟಿ ರೂಪಾಯಿಗಳು. SP ಗೆ 50 ರಿಂದ 1 ಕೋಟಿ ರೂಪಾಯಿಗಳು. DSP ಗೆ 1 ಕೋಟಿ ಯಿಂದ 5 ಕೋಟಿ ರೂಪಾಯಿಗಳು. ಇದು ಎಲ್ಲಿಗೆ ಹೋಗುತ್ತಿದೆ? ಇದು ಪತ್ರಿಕೆಗಳಲ್ಲಿ ಬಂದರೆ, ಕಳ್ಳಕಾಕರು ಮತ್ತು ದಂಧೆಕೋರರು ಸಂತೋಷ ಪಡುತ್ತಾರೆ. ಏಕೆಂದರೆ, ಇವರು ಹಣ ತೆಗೆದುಕೊಳ್ಳುತ್ತಾರೆ, ಹಾಗಾದರೆ, ನಾವು ಹಣ ಕೊಟ್ಟು ಕೆಲಸ ಮಾಡಿಕೊಳ್ಳಬಹುದೆಂದು ಅವರ ಕೆಲಸಗಳನ್ನು ಅವರು ಮಾಡುತ್ತಾರೆ. ಇಂತಹ ಘಟನೆಗಳು ಬೇಕೇ?

ಮಾನ್ಯ ಸಭಾಪತಿಯವರೇ, ನಾನು ಇವತ್ತಿನ ದಿವಸ ಮಾನ್ಯ ಸಿ.ಟಿ.ರವಿಯವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಏಕೆಂದರೆ, ಮಾನ್ಯ ಮುಖ್ಯಮಂತ್ರಿಯವರೇ, ಯಾರು ಪ್ರಮಾಣಿಕವಾಗಿಲ್ಲ, ಅಂತವರನ್ನು ಬದಲಾವಣೆ ಮಾಡಿ ಸಂಪುಟಕ್ಕೆ ಸರ್ಜರಿಯನ್ನು ಮಾಡಿ

ಎನ್ನುವಂತಹ ಮಾತನ್ನು ಹೇಳಿದರು. ಅವರ ಪಕ್ಷದ ಮುಖಂಡರು ಅಂತಹವರನ್ನು ಸಂಪುಟದಿಂದ ತೆಗೆಯಿರಿ ಎಂದು ಹೇಳಿದ್ದಾರೆ. ಅಂತಹ ಸಂದರ್ಭದಲ್ಲಿ ಎಲ್ಲೋ ಒಂದು ಕಡೆ ರಾಜ್ಯದಲ್ಲಿ ಭ್ರಷ್ಟಚಾರ ಇದೆ ಮತ್ತು ಭ್ರಷ್ಟ ರಾಜಕಾರಣಿಗಳು ಇದ್ದಾರೆಂದು ಚಿಂತನೆ ಮಾಡುತ್ತಾರೆ. ಹಾಗಾಗಿ, ಸರ್ಕಾರ ಅಂತಹವರನ್ನು ಕೂಡಲೇ ತೆಗೆಯುವಂತಹ ಕೆಲಸವನ್ನು ಮಾಡಬೇಕಾಗಿದೆ.

ಮಾನ್ಯ ಸಭಾಪತಿಯವರೇ, ಅದೇರೀತಿ ಕಾನೂನು ಸುವ್ಯವಸ್ಥೆ ಬಗ್ಗೆ ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಕೆಲವು ಸಮಸ್ಯೆಗಳು ಆಗಿವೆ. ಈಗಾಗಲೇ ಮಾನ್ಯ ಉಚ್ಛ ನ್ಯಾಯಾಲಯ ಹಿಜಾಬ್ ವಿಚಾರದ ಬಗ್ಗೆ ತೀರ್ಪನ್ನು ಸಹ ಕೊಟ್ಟಿದೆ. ಮಾನ್ಯ ಉಚ್ಛ ನ್ಯಾಯಾಲಯ ಸರ್ಕಾರ ಮಾಡಿರುವಂತಹ Notification ಸರಿ ಎನ್ನುವಂತಹ ಮಾತನ್ನು ಹೇಳಿದೆ. ಈಗ ಏಕೆ ಈ ರೀತಿ ಆಯಿತು ಎಂಬ ಬಗ್ಗೆ ಸದನದಲ್ಲಿ ಚರ್ಚೆ ಮಾಡಬೇಕಾಗಿದೆ. ನಮ್ಮ ರಾಜ್ಯದಲ್ಲಿ ಹಲವಾರು ವರ್ಷಗಳಿಂದ ಯಾವುದೇ ಸಮಸ್ಯೆಗಳು ಇರಲಿಲ್ಲ. ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ, ಏಕೆ ಈ ರೀತಿ ಆಗುತ್ತಿದೆ? ಬುರ್ಖಾ ಇರಬಹುದು, ನಿಖಾಬ್ ಇರಬಹುದು, ಹಿಜಾಬ್ ಇರಬಹುದು ಇವು ನೂರಾರು ವರ್ಷಗಳಿಂದ ನಡೆದುಕೊಂಡು ಬಂದಿರುವಂತಹ ಪದ್ದತಿ. ಇಂತಹ ಪದ್ಧತಿಗಳ ವಿರುದ್ಧ ಸರ್ಕಾರ ಕೆಲವು ನಿರ್ಣಯಗಳನ್ನು ತೆಗೆದುಕೊಂಡಿದೆ. ಇವತ್ತಿನ ದಿವಸ ದುಃಖವಾಗುತ್ತಿದೆ.

**(ಗೊಂದಲ)**

**ಶ್ರೀ ಕೋಟ ಶೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಸರ್ಕಾರ.,

**(ಗೊಂದಲ)**

**(ಈ ಹಂತದಲ್ಲಿ ಎರಡೂ ಕಡೆಯ ಸದಸ್ಯರು ಒಮ್ಮೆಲೆ ಎಂದು ನಿಂತು ಮಾತನಾಡ ತೊಡಗಿದರು)**

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ನಾನು yield ಆಗುವುದಿಲ್ಲ. ನನಗೆ ನೀಡಿರುವಂತಹ ಸಮಯ ಸುಮ್ಮನೆ ವ್ಯಯವಾಗುತ್ತಿದೆ. ತಾವು ಅವರಿಗೆ ಮಾತನಾಡುವುದಕ್ಕೆ ನೀಡುತ್ತಿರುವ ಸಮಯವನ್ನು ಕಳೆದು ನನಗೆ ಇನ್ನು ಹೆಚ್ಚಿಗೆ ಸಮಯ ಕೊಡಿ.

**(ಗೊಂದಲ)**

**ಶ್ರೀ ಕೋಟ ಶೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾವು ಮಾನ್ಯ ಸದಸ್ಯರಾದ ಸಲೀಂರವರ ವಿರುದ್ಧ ಯುದ್ಧ ಮಾಡುವುದಕ್ಕೆ ಹೋಗುತ್ತಿಲ್ಲ. ಇಲ್ಲಿ ಒಂದು ಸಣ್ಣ ವಿಚಾರದ ಇದೆ. ಹಾಗಾಗಿ, ಸರ್ಕಾರ ಮಧ್ಯೆ ಪ್ರವೇಶ ಮಾಡಬೇಕಾಗುತ್ತದೆ. ಇಲ್ಲಿಯವರೆಗೆ ಹಿಜಾಬ್ ಬಗ್ಗೆ ವಿಚಾರಗಳು ಇರಲಿಲ್ಲ. ಅವರವರ ಧಾರ್ಮಿಕ ಪದ್ಧತಿಗಳನ್ನು ಅವರು ಅನುಸರಿಸತ್ತಿದ್ದರು. ಈ ಸರ್ಕಾರ ಬಂದಾಗ, ಇದು ಏಕೆ ಬಂತು ಎಂಬುದು ಮಾನ್ಯ ಸದಸ್ಯರಾದ ಸಲೀಂರವರ ಪ್ರಶ್ನೆ ಇರಬಹುದು. ಇದಕ್ಕೆ ನಮ್ಮಲ್ಲಿ ಸ್ಪಷ್ಟತೆ ಇದೆ. ಅವರವರ ಧಾರ್ಮಿಕ ಆಚಾರ ವಿಚಾರಗಳನ್ನು ಅವರವರ ಬದುಕಿನಲ್ಲಿ ಅಳವಡಿಸಿಕೊಳ್ಳುವುದಕ್ಕೆ ತೊಂದರೆ ಇಲ್ಲ. ಅದಕ್ಕೆ ಅವರ ಮನೆ ಇರುತ್ತದೆ, ಧಾರ್ಮಿಕ ಕೇಂದ್ರ ಇರುತ್ತದೆ ಅಂತಹ ಕಡೆಗಳಲ್ಲಿ ಆಚರಣೆ ಮಾಡಿಕೊಳ್ಳಬಹುದು. ಆದರೆ, ಸರ್ಕಾರಿ ಶಾಲೆಗಳಲ್ಲಿ, ಅನುದಾನಿತ ಶಾಲೆಗಳಲ್ಲಿ ಅಥವಾ ಯಾವುದೇ ಶಿಕ್ಷಣ ಸಂಸ್ಥೆಗಳಲ್ಲಿ ಸಮವಸ್ತ್ರವನ್ನು ಕಡ್ಡಾಯಗೊಳಿಸಿ ಎನ್ನುವುದಷ್ಟೇ ಸರ್ಕಾರದ ನಿಲುವಾಗಿತ್ತು. ಈಗ ಅದನ್ನು ಮಾನ್ಯ ಗೌರವಾನ್ವಿತ ಉಚ್ಛ ನ್ಯಾಯಾಲಯ ಸಹ ಒಪ್ಪಿಕೊಂಡಿದೆ. ಮಾನ್ಯ ಸದಸ್ಯರಾದ ಸಲೀಂರವರು ಬಹಳ ವಿಸ್ತಾರವಾಗಿ ಯೋಚನೆ ಮಾಡುತ್ತಾರೆ. ನಾನು ತಮ್ಮ ಮೂಲಕ ಅವರಿಗೆ ಮತ್ತು ಅವರ ಪಕ್ಷದ ಮುಖಂಡರಲ್ಲಿ ವಿನಂತಿ ಮಾಡುವುದೇನೆಂದರೆ, ಮಾನ್ಯ ಗೌರವಾನ್ವಿತ ಉಚ್ಛ ನ್ಯಾಯಾಲಯ ನೀಡಿರುವಂತಹ ತೀರ್ಪಿನಲ್ಲಿ ಅವರ ನಿಲುವು ಏನು, ಅವರು ಅದನ್ನು ಒಪ್ಪುತ್ತಾರೆಯೋ ಅಥವಾ ವಿರೋಧಿಸುತ್ತಾರೆಯೋ ಎಂದು ಕೇಳುವ ಆಸೆ ಅಷ್ಟೇ. ಇದು ಅವರಿಗೆ ಪ್ರಶ್ನೆಯಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):–**ಮಾನ್ಯ ಸಭಾಪತಿಯವರೇ, ನಮ್ಮ ನಿಲುವು ಏನು, ಏನಿಲ್ಲ ಎನ್ನುವುದು Supreme Court ವರೆಗೂ ಹೋಗಿದೆ. ನಾವು ಅಲ್ಲಿ ಉತ್ತರ ಕೊಡುತ್ತೇವೆ. ಇವರು ಕೇಳುವಂತಹ ಪ್ರಶ್ನೆಗೆ ನಾವು ಉತ್ತರ ಕೊಡಬೇಕಾಗಿಲ್ಲ. ಮೊದಲು ಅವರಿಗೆ

ಮಾನ್ಯ ಸದಸ್ಯರು ಹೇಳುತ್ತಿರುವುದನ್ನು ಕೇಳುವುದಕ್ಕೆ ಹೇಳಿ. ಒಬ್ಬ ಸದಸ್ಯರು yield ಆಗಿಲ್ಲವೆಂದರೆ, ಸಭಾನಾಯಕರಿಗೆ ಹಾಗೂ ವಿರೋಧ ಪಕ್ಷದ ನಾಯಕರಿಗೆ ಕೊಂಬುಗಳು ಇಲ್ಲ. ಒಂದು ವೇಳೆ, ಮಾತನಾಡುತ್ತಿರುವಂತಹವರು yield ಆಗಿಲ್ಲವೆಂದರೆ, ಅವರು ಮಾತನಾಡುವಂತಿಲ್ಲ.

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಮಾನ್ಯ ಸದಸ್ಯರು yield ಆಗಿದ್ದರಿಂದ ಸಭಾನಾಯಕರು ಮಾತನಾಡಿದ್ದಾರೆ. ಸಭಾನಾಯಕರೇ, ಮಾನ್ಯ ಸದಸ್ಯರು yield ಆದರೆ, ಮಾತನಾಡಿ. ಅವರು yield ಆಗಿಲ್ಲವೆಂದರೆ, ಮಾತನಾಡಬೇಡಿ.

**(ಗೊಂದಲ)**

**(ಈ ಹಂತದಲ್ಲಿ ಎರಡೂ ಕಡೆಯ ಸದಸ್ಯರು ಒಮ್ಮೆಲೆ ಎದ್ದು ನಿಂತು ಮಾತನಾಡತೊಡಗಿದರು)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾಪತಿಯವರು ಪೀಠದಲ್ಲಿ ಇದ್ದಿದ್ದರೆ, ನಾನು ಇದರ ಬಗ್ಗೆ provision ಅನ್ನು ಕೇಳುತ್ತಿದ್ದೆ. It is nowhere in the Rules book.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಇಲ್ಲಿ ಕೊಂಬು ಪ್ರಶ್ನೆ ಬರುವುದಿಲ್ಲ. ಕೆಲವು ವಿಚಾರದಲ್ಲಿ ಸದಸ್ಯರು ಆರೋಪವನ್ನು ಸರ್ಕಾರದ ವಿರುದ್ಧ ಮಾಡುತ್ತಾರೆ. ಅಂತಹ ಸಂದರ್ಭದಲ್ಲಿ ಪೀಠದ ಅನುಮತಿಯೊಂದಿಗೆ ಸರ್ಕಾರ ಎದ್ದು ತಮ್ಮ ಭಾವನೆಗಳನ್ನು ಹೇಳಬೇಕಾಗುತ್ತದೆ. ಕೆಲವು ಸಾಂದರ್ಭಿಕ ಸಂದರ್ಭಗಳಲ್ಲಿ ವಿರೋಧ ಪಕ್ಷದ ನಾಯಕರು ಎದ್ದು ನಿಲ್ಲುತ್ತಾರೆ. ಆಗ ಅವರ ಮಾತನ್ನು ಆಲಿಸಿದ ನಂತರ, ಸರ್ಕಾರ ಅದಕ್ಕೆ ಉತ್ತರ ಕೊಡುತ್ತದೆ. ಇಲ್ಲಿ ಕೊಂಬಿನ ಪ್ರಶ್ನೆಯಲ್ಲ. ಇದು ನಿಯಮದಲ್ಲೂ ಸಹ ಇದೆ. ಇದನ್ನು

ಪಾಲಿಸಿಕೊಂಡು ಬಂದಿರುವಂತಹ ರೀತಿಯೂ ಸಹ ಆಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಇದರ ಬಗ್ಗೆ ಸ್ವಲ್ಪ ಗಮನಕೊಡಬೇಕಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಸುಮ್ಮನೆ ಕೋಪ ಮಾಡಿಕೊಂಡರೆ ಏನು ಅರ್ಥ?

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಇದು ಮೊದಲಿನಿಂದಲೂ ನಡೆದುಕೊಂಡು ಬಂದಿರುವಂತಹ ಸಂಪ್ರದಾಯಗಳು. ಇದರಲ್ಲಿ Rules ಬರುವುದಿಲ್ಲ. ತಾವು ಸಹ ಒಮ್ಮೆಮ್ಮೆ ಎದ್ದು ಮಾತನಾಡುತ್ತೀರಿ. ಅದೇರೀತಿ ಸಭಾನಾಯಕರು ಸಹ ಒಮ್ಮೆಮ್ಮೆ ಮಾತನಾಡುತ್ತಾರೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಸಭಾನಾಯಕರು ಸದಸ್ಯರು yield ಆಗಲಿಲ್ಲವೆಂದರೆ, ಮಾನ್ಯ ಸಭಾನಾಯಕರಿಗಾಗಲಿ ಅಥವಾ ವಿರೋಧ ಪಕ್ಷದ ನಾಯಕರಿಗಾಗಲಿ ಮಾತನಾಡುವಂತಹ ಹಕ್ಕು ಇಲ್ಲವೆಂದು ಹೇಳಿದರು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಆ ರೀತಿ ಇಲ್ಲ.ಇದೆ.

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಮೊದಲಿನಿಂದಲೂ ನಡೆದುಕೊಂಡು ಬಂದಂತಹ ಸಂಪ್ರದಾಯದ ಪ್ರಕಾರ ಸಭಾನಾಯಕರು ಮಾತನಾಡುತ್ತಾರೆ. Rules ಬಗ್ಗೆ ನಾನು ಹೇಳುತ್ತಿಲ್ಲ. ಆ ರೀತಿ ಸಂಪ್ರದಾಯ ನಡೆದುಕೊಂಡು ಬಂದಿದೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅದು ನಿಯಮದಲ್ಲಿ ಇದ್ದರೆ ನಾನು ಒಪ್ಪಿಕೊಳ್ಳುತ್ತೇನೆ. ಅದು ನಿಯಮದಲ್ಲಿ ಇಲ್ಲದಿರುವುದರಿಂದ ಸದಸ್ಯರು yield ಆಗಿಲ್ಲವೆಂದರೆ, ಮಾತನಾಡಬಾರದು

**(ಗೊಂದಲ)**

. **ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ಎಂದರೆ, ಇಡೀ ಸರ್ಕಾರವನ್ನು ಇಕ್ಕಟ್ಟಿಗೆ ಸಿಕ್ಕಿಸಿ ಸಮಾಜಕ್ಕೆ ನ್ಯಾಯವನ್ನು ಕೊಡಿಸುವವರು. ಅವರು ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಬೇಕು. ಅದು ತಪ್ಪಲ್ಲ. ಹಾಗಾಗಿ, ವಿರೋಧ ಪಕ್ಷದ ನಾಯಕರು ಎದ್ದು ನಿಂತಾಗ ಪೀಠ ಅದನ್ನು ಅಂಗೀಕರಿಸುತ್ತದೆ. ಅದೇರೀತಿ ವಿರೋಧ ಪಕ್ಷದ ನಾಯಕರು ಎದ್ದು ನಿಂತಿದ್ದಾರೆ ಎನ್ನುವ ಕಾರಣಕ್ಕೆ ಎಲ್ಲರನ್ನೂ ಕುಳಿಸುವಂತಹ ಸಂಪ್ರದಾಯಗಳು ಇವೆ. ಸರ್ಕಾರದ ಪರವಾಗಿ ಎದ್ದು ನಿಲ್ಲುವಾಗಲೂ ಅದೇ ಸೌಜ್ಯನಗಳು ಇರುತ್ತವೆ.

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ತಾವು ನನಗೆ ನೀಡಿದಂತಹ ಸಮಯದಲ್ಲಿ ಈಗ 10 ನಿಮಿಷಗಳ ಕಾಲ ಹೋಯಿತು. ಮತ್ತೆ ಈ 10 ನಿಮಿಷಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಕ್ಕೆ ಹೋಗಬೇಡಿ.

**ವೈಸ್ ಛೇರ್ಮನ್:–** ಮಾನ್ಯ ಸಲೀಂ ಅಹಮದ್‌ರವರೇ, ಇಲ್ಲ. ಮೂರು ನಿಮಿಷಗಳು ಮಾತ್ರ ಹೋಗಿದೆ. ನಾನು ಲೆಕ್ಕ ಮಾಡಿದ್ದೇನೆ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾನ್ಯ ವಿರೋಧ ಪಕ್ಷದ ನಾಯಕರು ಕೊಂಬು ಎಂದು ಹೇಳಿದ್ದರಿಂದ ಇಷ್ಟು ರಾಮಾಯಣ ಆಯಿತು.

(**ಗೊಂದಲ)**

**ವೈಸ್ ಛೇರ್ಮನ್:–** ಮಾನ್ಯ ರವಿಕುಮಾರ್‌ರವರೇ, ತಾವು ಮಾತನಾಡುವಾಗ ಇದನ್ನು ಉಲ್ಲೇಖ ಮಾಡಿ. ಈಗ ತಾವು ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ಇದು ಗೌರವ ಅಲ್ಲ.

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ರವಿಯವರೇ, ತಾವು ಮಾತನಾಡುತ್ತೀರಿ, ಎಲ್ಲರೂ ಮತನಾಡುತ್ತೀರಿ, ಈ ರೀತಿ ಎಲ್ಲರೂ ಎದ್ದು ನಿಂತು ಮಾತನಾಡಿದರೆ, ಹೇಗೆ? ರವಿಯವರೇ, ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ನನಗೆ ಹೇಳುವ ಬದಲು, ತಾವು ಅವರಿಗೆ ಹೇಳಿ.

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ರವಿಯವರೇ, ನಿಮಗೂ ಹೇಳುತ್ತೇನೆ. ಅವರಿಗೂ ಹೇಳುತ್ತೇನೆ. ತಾವು ಅವರಿಗೆ ಹೇಳಿ ಎಂದು ಪೀಠಕ್ಕೆ ಹೇಳಬೇಡಿ. ಯಾರಿಗೆ ಏನು ಹೇಳಬೇಕೆಂದು ಪೀಠ ಹೇಳುತ್ತದೆ. ತಾವು ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ನಮ್ಮನ್ನು ನ್ಯಾಯಾಲಯದ ತೀರ್ಪನ್ನು ಒಪ್ಪುತ್ತೀರಾ ಎಂಬ ಪ್ರಶ್ನೆಯನ್ನು ಕೇಳಿದರು. ಗೌರವ್ವಾನಿತ ನ್ಯಾಯಾಲಯದ ತೀರ್ಪನ್ನು ಪ್ರತಿಯೊಬ್ಬರು ಒಪ್ಪುತ್ತಾರೆ. ಎಲ್ಲರೂ ಒಪ್ಪಲೇಬೇಕು. ಆದರೆ, ನಾವು ಸಂವಿಧಾನಕ್ಕೆ ಗೌರವ ಕೊಡುತ್ತೇವೆ. ನಮ್ಮೆಲ್ಲರ ಮೇಲೆ ದೊಡ್ಡ ಹೊಣೆಗಾರಿಕೆ ಮತ್ತು ಜವಾಬ್ದಾರಿ ಇದೆ. ಆದರೆ, ಆ ಘಟನೆ ಹೇಗೆ ಆಯಿತು, ಏಕೆ ಆಯಿತು ಎಂದು ಚರ್ಚೆ ಮಾಡಬೇಕು. ಈ ಪದ್ದತಿ ಹಲವಾರು ವರ್ಷಗಳಿಂದ ನಡೆದುಕೊಂಡು ಬಂದಿದೆ. ಈಗ ಏಕೆ ಈ ರೀತಿ ಆಯಿತು?

**(ಮುಂದು.,)**

**(418) 17-03-2022 (1.10) ಎಂ.ವಿ-ಬಿಎನ್‌ಎಸ್ (ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಸಲೀಂ ಅಹಮದ್ (ಮುಂದು):-**

ರಾತ್ರೋರಾತ್ರಿ ಲಕ್ಷಾಂತರ ಕೇಸರಿ ಶಾಲುಗಳನ್ನು ಹಾಕಿಕೊಂಡು ಶಾಲೆಗಳಿಗೆ ಹೋಗುತ್ತಾರೆ. ಮುಂಚೆ ಈ ರೀತಿಯ ಪದ್ಧತಿ ಇತ್ತೇ? ಇವತ್ತು ಇದನ್ನು ಬಹಳ ದುಃಖದಿಂದ ಹೇಳಬೇಕಾಗುತ್ತದೆ. ಅವರು ಶಾಲೆಗಳಲ್ಲಿ ಅಣ್ಣ-ತಮ್ಮಂದಿರ ರೀತಿ ಇದ್ದರು. ಆದರೆ, ಇವತ್ತು ಒಬ್ಬರು ಇನ್ನೊಬ್ಬರ ಮುಖ ನೋಡದಂತಹ ಸ್ಥಿತಿ ನಿರ್ಮಾಣವಾಗಿದೆ. ಅದಕ್ಕೆ ಸರ್ಕಾರ ನೇರವಾಗಿ ಹೊಣೆ ಎಂದು ನಾನು ಆರೋಪ ಮಾಡುತ್ತೇನೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ,...

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ನಾನು yield ಆಗುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾಡಿದಂತಹ ಆರೋಪಕ್ಕೆ ಸರ್ಕಾರ ಉತ್ತರ ನೀಡಬೇಕಾಗುತ್ತದೆ. ನೆಮ್ಮದಿಯಿಂದ ಇದ್ದ ಶಾಲೆಗೆ ಇವರು ಚಿತಾವಣೆ ಮಾಡಿ, ಆ ಮುಗ್ಧ ಮಕ್ಕಳ ಮನಸ್ಸಿನಲ್ಲಿ ಹಿಜಾಬ್‌ನ ಮಂತ್ರವನ್ನು ತುಂಬಿದರು.

**(ಗೊಂದಲ)**

**ಡಾ|| ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಸರ್ಕಾರದವರು ಇದನ್ನೆಲ್ಲಾ ಬರೆದುಕೊಂಡು, ಉತ್ತರ ನೀಡುವಾಗ ಅದನ್ನು ಹೇಳಲಿ.

**(ಗೊಂದಲ)**

**ಶ್ರೀ ಪ್ರಕಾಶ್ ಕೆ. ರಾಥೋಡ್ (ವಿರೋಧ ಪಕ್ಷದ ಮುಖ್ಯ ಸಚೇತರು):–** ಮಾನ್ಯ ಸಭಾಪತಿಯವರೇ, ಅವರು ಎಲ್ಲವನ್ನು ಸಹ ಬರೆದುಕೊಳ್ಳಲಿ.

**(ಗೊಂದಲ)**

**ವೈಸ್ ಛೇರ್ಮನ್:–** ಮಾನ್ಯ ಪ್ರಕಾಶ ಕೆ. ರಾಥೋಡ್‌ರವರೆ ತಾವು ಕುಳಿತುಕೊಳ್ಳಿ. ಮಾನ್ಯ ಸಲೀಂ ಅಹಮದ್‌ರವರೆ, ಇದಕ್ಕೆ ಮೂರು ನಿಮಿಷವಾಯಿತು. ಆದರೆ, ಈಗಾಗಲೇ ನೀವು ಮಾತನಾಡುವುದಕ್ಕೆ ಶುರು ಮಾಡಿ ಇಪ್ಪತ್ತು ನಿಮಿಷವಾಗಿದೆ. ತಾವು ಬೇಗನೆ ಮಾತನಾಡಿ ಮುಗಿಸಿ.

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ಅವರು ನನಗೆ disturb ಮಾಡುತ್ತಿದ್ದಾರೆ. ಈಗ ಉಡುಪಿಯಲ್ಲಿ ನಡೆದ ಒಂದೇ ಒಂದು ಘಟನೆ ಇಡೀ ರಾಜ್ಯಕ್ಕೆ ಹರಡಿ, ಕೋಮುಸಾಮರಸ್ಯಕ್ಕೆ ಧಕ್ಕೆಯಾಗಿದೆ. ನಾವು ಅದು ಮಾಡಿದ್ದೇವೆ, ಇದು ಮಾಡಿದ್ದೇವೆ. ಇಷ್ಟು ಕೋಟಿ ಹಣ ಕೊಟ್ಟಿದ್ದೇವೆ ಎನ್ನುವುದನ್ನು ಬಿಡಲಿ. ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವಂತಹ ಹೊಣೆಗಾರಿಕೆ ಮತ್ತು ಜವಾಬ್ದಾರಿ ಸರ್ಕಾರಕ್ಕೆ ಸಂಬಂಧಪಟ್ಟಿದ್ದು. ಆದರೆ, ಅವರು ಅದರಲ್ಲಿ ವಿಫಲರಾಗಿದ್ದಾರೆ. ನಾನು ಹೇಳಿದಂತೆ, ಶಾಲಾ– ಕಾಲೇಜುಗಳಲ್ಲಿ ಯಾವುದೇ ಜಾತಿ ಜನಾಂಗದ ಬಗ್ಗೆ ಗೊತ್ತಿಲ್ಲದಂತಹ ವಿದ್ಯಾರ್ಥಿಗಳಲ್ಲಿ ಬೇದಭಾವ ತಂದಿದ್ದಾರೆ. ಇದಕ್ಕೆ ಯಾರು ಕಾರಣ? ಇದರ ಹಿಂದೆ ಯಾರ ಕಾಣದ ಕೈಗಳಿವೆ ಎಂದು ಅದನ್ನು ಅವರು ಪತ್ತೆ ಹಚ್ಚಬೇಕು. ಕಳೆದ ಬಾರಿಯ ಸಭೆಯಲ್ಲಿ ಈ ವಿಚಾರಗಳನ್ನೆಲ್ಲಾ ತಿಳಿಸಿದ್ದೇವೆ. ಈಗ ಯಾವುದೇ ಸಂಘಟನೆ ಇರಲಿ. ಅದು ಹಿಂದೂ ಸಂಘಟನೆ ಇರಲಿ ಅಥವಾ ಮುಸಲ್ಮಾನ್ ಸಂಘಟನೆ ಇರಲಿ. ಯಾರು ಸಮಾಜಕ್ಕೆ ಕಂಟಕ ತರುತ್ತಾರೆ ಅಂತಹವರನ್ನು ಬ್ಯಾನ್ ಮಾಡುವುದಕ್ಕೆ ಈ ಸರ್ಕಾರಕ್ಕೆ ಧೈರ್ಯ ಮತ್ತು ಬದ್ಧತೆ ಇದೆಯೇ? ಅವುಗಳನ್ನು ಬ್ಯಾನ್ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಮಾನ್ಯ ಗೃಹ ಸಚಿವರು ಹೇಳುತ್ತಾರೆ,

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಈಗ ಹಿಜಾಬ್ ಧರಿಸದಿದ್ದರೆ ಏನಾಗುತ್ತದೆಂದು ಅದರ ಬಗ್ಗೆ...

**(ಗೊಂದಲ)**

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ಅವರಿಗೆ ಧೈರ್ಯ ಮತ್ತು ಬದ್ಧತೆ ಇದ್ದರೆ, ಅಂತಹ ಸಂಘಟನೆಗಳನ್ನು ಬ್ಯಾನ್ ಮಾಡಲಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಈ ರೀತಿಯ ಬೇಜವಾಬ್ದಾರಿ ಮಾತುಗಳು ಸರಿಯಲ್ಲ. ಏಕೆಂದರೆ, ಅವರು ಆ ಮಕ್ಕಳ ಮನಸ್ಸಿನಲ್ಲಿ ಹಿಜಾಬ್‌ನ ವಿಷಬೀಜ ಬಿತ್ತಿ, ಆ ಶಾಲೆಯ ಮಕ್ಕಳಿಗೆ ಪ್ರೇರಣೆ ನೀಡಿದವರು. ಮಾನ್ಯ ಸದಸ್ಯರು ಹೈಕೋರ್ಟ್ ನೀಡಿರುವಂತಹ ತೀರ್ಪನ್ನು ಒಪ್ಪುತ್ತಾರೋ, ವಿರೋಧಿಸುತ್ತಾರೋ?

**(ಗೊಂದಲ)**

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ಇವತ್ತು "ಸಬ್ ಕಾ ಸಾಥ್, ಸಬ್ ಕಾ ವಿಕಾಸ್" ಎಂದು ಹೇಳುತ್ತಾರೆ. ಅದು ಏಕೆ ಸ್ವಾಮಿ? ಶಿವಮೊಗ್ಗ ಜಿಲ್ಲೆಯಲ್ಲಿ ಒಬ್ಬ ಹುಡುಗನ ಹತ್ಯೆಯಾಗುತ್ತದೆ. ಇಡೀ ರಾಜ್ಯದ ಮಂತ್ರಿಗಳು ಹೋಗಿ, ಒಂದು ವಾರದಲ್ಲಿ ಅವರ ಕುಟುಂಬದವರಿಗೆ ಇಪ್ಪತ್ತೈದು ಲಕ್ಷ ರೂಪಾಯಿಗಳನ್ನು ನೀಡುತ್ತಾರೆ. ಅದೇ ರೀತಿ ಗದಗ್ ಜಿಲ್ಲೆಯಲ್ಲಿ ಶ್ರೀ ಸಮೀರ್ ಶಹಾಪುರ್ ಎಂಬ ಬಡ ಯುವಕನನ್ನು ಕೊಚ್ಚಿ ಸಾಯಿಸುತ್ತಾರೆ. ಒಂದೂವರೆ ತಿಂಗಳಾದರೂ ಸಹ ಯಾವುದೇ ರೀತಿಯ ಪರಿಹಾರವನ್ನು ನೀಡಿಲ್ಲ. ಅವರಿಗೆ ಏಕೆ ಇಪ್ಪತ್ತೈದು ಲಕ್ಷ ರೂಪಾಯಿಗಳನ್ನು ನೀಡಲಿಲ್ಲ. ಇದೇನಾ "ಸಬ್ ಕಾ ಸಾಥ್, ಸಬ್ ಕಾ ವಿಕಾಸ್".

**ವೈಸ್ ಛೇರ್ಮನ್:–** ಮಾನ್ಯ ಸಲೀಂ ಅಹಮದ್‌ರವರೆ ಪೀಠವನ್ನು ನೋಡಿಕೊಂಡು ಮಾತನಾಡಿ.

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ಈ ಸರ್ಕಾರದವರು "ಸಬ್ ಕಾ ಸಾಥ್ ಅಲ್ಲ, ಇವರು ಸಬ್ ಕಾ ವಿನಾಶ್! ಮಾಡಿದ್ದಾರೆ. ಆ ಹಿನ್ನೆಲೆಯಲ್ಲಿ ಅವರು ಮಾತನಾಡುವುದನ್ನು

ಕಳೆದುಕೊಂಡಿದ್ದಾರೆ. ಏಕೆಂದರೆ, ನಾನು ಇದನ್ನು ನೊಂದುಕೊಂಡು ಹೇಳುತ್ತಿದ್ದೇನೆ. ನಮ್ಮ ಭಾವನೆಗಳನ್ನು ಸರ್ಕಾರ ಕೇಳಬೇಕು, ಅರ್ಥ ಮಾಡಿಕೊಳ್ಳಬೇಕು ಮತ್ತು ಅದಕ್ಕೆ ಪರಿಹಾರ ಹುಡುಕಬೇಕು. ಇನ್ನು ಹಲವಾರು ವಿಚಾರಗಳು ಇದ್ದರೂ ಕೂಡ, ಅದನ್ನು ತಿಳಿಸುವುದಕ್ಕೆ ಸಮಯ ಕಡಿಮೆ ಇದೆ. ನಾನು ಸಾಕಷ್ಟು ತಯಾರಿ ಮಾಡಿದ್ದೆನು. ನಾನು ಪೀಠಕ್ಕೆ ಅಗೌರವ ತೋರಿಸುವುದಿಲ್ಲ. ಬೇರೆಯವರ ರೀತಿ ನಾನು ಪ್ರಶ್ನೆ ಮಾಡುವುದಿಲ್ಲ. ತಾವು ಕೊಟ್ಟಂತಹ ಸಮಯದಲ್ಲಿ ನಮ್ಮ ವಿಚಾರಗಳನ್ನು ಮಂಡಿಸುವಂತಹ ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತೇವೆ. ಬೆಳ್ತಂಗಡಿಯಲ್ಲೂ ಕೂಡ ಒಬ್ಬ ದಲಿತನಿಗೆ ಇದೇ ರೀತಿಯಾಗಿದೆ.

**(ಗೊಂದಲ)**

**ಶ್ರೀ ಎಂ.ಕೆ.ಪ್ರಾಣೇಶ್:-** ಮಾನ್ಯ ಸಭಾಪತಿಯವರೇ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಗೋಹತ್ಯೆ ಮಾಡಿದಂತಹ ಒಬ್ಬ ಕಳ್ಳ ಸತ್ತಾಗ ಹತ್ತು ಲಕ್ಷ ರೂಪಾಯಿಗಳನ್ನು ನೀಡಿದರು.

**(ಗೊಂದಲ)**

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ಅವರು "ಸಬ್ ಕಾ ಸಾಥ್, ಸಬ್ ಕಾ ವಿಕಾಸ್" ಎಂದು ಭಾಷಣ ಮಾಡಿಕೊಂಡು ಹೋಗುವುದು ಬೇಡ. ಅವರು ಎಲ್ಲರ ವಿಕಾಸವನ್ನು ಮಾಡುತ್ತಿಲ್ಲ. ಅವರು ಅನ್ಯಾಯ ಮಾಡುತ್ತಿದ್ದಾರೆ. ಅವರು ಸಮಾಜ ಒಡೆಯುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಆ ಹಿನ್ನೆಲೆಯಲ್ಲಿ ಈ ಮಾತನ್ನು ಹೇಳಿದೆ. ತಾವು ಹೇಳಿದಂತೆ ಸಮಯ ಕಡಿಮೆ ಇರುವುದರಿಂದ ನಾನು ಇನ್ನು ಐದು ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ. ಆದುದರಿಂದ ಈ ಸರ್ಕಾರ ಮಂಡಿಸಿರುವ ಬಜೆಟ್‌ನಲ್ಲಿ ಯಾವುದೇ ರೀತಿಯ ಹುರುಳಿಲ್ಲ. ನಾನು ಹಲವಾರು ವಿಷಯಗಳನ್ನು ಚರ್ಚೆ ಮಾಡಬೇಕೆಂದು ಬಂದಿದ್ದೆ. ಇನ್ನು ಹಲವಾರು ಅನುದಾನಗಳನ್ನು ಕಡಿಮೆ ಮಾಡಿದ್ದಾರೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಮತ್ತು ಕಾರ್ಮಿಕ ಇಲಾಖೆ ಈ ಎಲ್ಲಾ ಇಲಾಖೆಗಳಿಗೆ ಅನುದಾನವನ್ನು ಕಡಿಮೆ ಮಾಡಿ, ಇವತ್ತು ಒಂದು ಸಾಲದ ಬಜೆಟ್

ಅನ್ನು ಮಂಡಿಸಿದ್ದಾರೆ. ಇವತ್ತು ಬೆಲೆ ಏರಿಕೆ ಮತ್ತು ಇನ್ನು ಹಲವಾರು ವಿಚಾರಗಳ ಕುರಿತು ಜನರು ಸರ್ಕಾರದ ಬಗ್ಗೆ ಭ್ರಮನಿರಸನರಾಗಿದ್ದಾರೆ. ಈಗಾಗಲೆ ರಾಜ್ಯದ ಜನರು ಒಂದು ಸಂದೇಶವನ್ನು ನೀಡಿದ್ದಾರೆ. ಅವರು ರಾಜ್ಯದಲ್ಲಿ ಬದಲಾವಣೆಯನ್ನು ಬಯಸುತ್ತಿದ್ದಾರೆ. ಇವತ್ತು ಎಷ್ಟಾದರೂ ಹೇಳಬಹುದು, out of lotus operation ಮೂಲಕ ಬಂದ ಈ ಸರ್ಕಾರಕ್ಕೆ ಬದ್ಧತೆ ಇಲ್ಲ. ಕಾರ್ಯಕ್ರಮಗಳ ಅನುಷ್ಠಾನಕ್ಕೆ ರಾಜಕೀಯ ಇಚ್ಛಾಶಕ್ತಿ ಇಲ್ಲದಂತಹ ಸರ್ಕಾರವಿದು. ಜನರು ಬದಲಾವಣೆಯನ್ನು ತೋರಿಸುತ್ತಾರೆ. ಆ ಹಿನ್ನೆಲೆಯಲ್ಲಿ ಕೊನೆಯದಾಗಿ ಕೆಲವು ಬೇಡಿಕೆಗಳನ್ನು ಸರ್ಕಾರದ ಮುಂದಿಡುತ್ತೇನೆ. ನಾವು ಒಂದು ಗಂಟೆ ಮಾತನಾಡಬೇಕಾಗಿತ್ತು. ಆದರೆ, ತಾವು ಅದಕ್ಕೆ ಅವಕಾಶವನ್ನು ನೀಡುತ್ತಿಲ್ಲ. ಈಗ ರಾಜ್ಯದ ಅಭಿವೃದ್ಧಿ ಯೋಜನೆಗಳಿಗೆ ಈ ಸರ್ಕಾರ ಹೆಚ್ಚು ಅನುದಾನಗಳನ್ನು ನೀಡಬೇಕು. ಕಳಸ-ಬಂಡೂರಿ ಕಾಮಗಾರಿಗೆ ಆದಷ್ಟು ಬೇಗ ಕ್ರಮ ಜರುಗಿಸಬೇಕು. ಅದೇ ರೀತಿ ಮೇಕೆದಾಟು ಯೋಜನೆ ಏನಿದೆ ಅದನ್ನು ಈಗ ಇರುವಂತಹ ಡಬಲ್ ಎಂಜಿನ್ ಸರ್ಕಾರ ಕೂಡಲೇ environment clearance ಪಡೆದು, ಕಾಮಗಾರಿಯನ್ನು ಪ್ರಾರಂಭ ಮಾಡಬೇಕು. ಬಹುಶಃ ಈ ಡಬಲ್ ಎಂಜಿನ್ fail ಆಗಿಬಿಟ್ಟಿದೆ. ಆದರೂ ಕೂಡ ಈ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ನೀರಾವರಿ ಯೋಜನೆಗಳಿಗೆ ಅನುದಾನ ನೀಡುವುದರ ಜೊತೆಗೆ ಕೇಂದ್ರ ಸರ್ಕಾರ ಅಡತಡೆಗಳನ್ನು ಪರಿಹರಿಸಿ, ಕಾಮಗಾರಿಗಳನ್ನು ಪ್ರಾರಂಭ ಮಾಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಹಿಂದುಳಿದ ವರ್ಗದವರು, ಮಹಿಳೆಯರು, ದಲಿತರು ಮತ್ತೆ ಎಲ್ಲರಿಗೂ ಹೆಚ್ಚು ಒತ್ತನ್ನು ನೀಡಿ, ಅನುದಾನ ಹೆಚ್ಚಿಸಬೇಕು. ವಿಶೇಷವಾಗಿ ಅಲ್ಪಸಂಖ್ಯಾತರಿಗೆ ಏನು ಅನುದಾನವನ್ನು ಕಡಿತ ಮಾಡಿದ್ದಾರೆ, ಅದನ್ನು ಮತ್ತೆ ವಾಪಸ್ಸು ಕೊಡುವುದರ ಮುಖಾಂತರ ಅಲ್ಪಸಂಖ್ಯಾತರಿಗೆ ಹೆಚ್ಚು ಹಣ ಸಹಾಯ ಮಾಡಬೇಕು. ಅದೇ ರೀತಿ ವಿದ್ಯಾರ್ಥಿ ವೇತನ, ವಿದೇಶದಲ್ಲಿ ವ್ಯಾಸಂಗ ಮಾಡುವುದಕ್ಕೆ ನೀಡುವಂತಹ ಹಣದ ಸಹಾಯವನ್ನು ಕೊಡಬೇಕು. ವಸತಿ ಯೋಜನಯಲ್ಲಿ ಮನೆಗಳನ್ನು ಕಟ್ಟುವುದಕ್ಕೆ ಹೆಚ್ಚು ಧನಸಹಾಯ ನೀಡಬೇಕು ಮತ್ತು ನೀಡುವಂತಹ ಮೊತ್ತವನ್ನು ಸಹ ಹೆಚ್ಚಿಗೆ ಮಾಡಬೇಕು.

ಈಗಾಗಲೇ ಪಂಚಾಯಿತಿ ವ್ಯವಸ್ಥೆಯ ಬಗ್ಗೆ ಮಾತನಾಡಿದ್ದೇವೆ. ಪಂಚಾಯಿತಿ ಸದಸ್ಯರಿಗೆ ಕೇವಲ ಒಂದು ಸಾವಿರ ರೂಪಾಯಿಗಳನ್ನು ನೀಡುತ್ತಿದ್ದಾರೆ. ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಪಂಚಾಯಿತಿ ಸದಸ್ಯರಿಗೆ ಕನಿಷ್ಠಪಕ್ಷ ಹತ್ತು ಸಾವಿರ ರೂಪಾಯಿಗಳನ್ನು ನೀಡಬೇಕು. ಉಚಿತ ಬಸ್ ಪಾಸ್ ನೀಡಬೇಕು. ಅವರಿಗೆ ಅನಾರೋಗ್ಯದಿಂದ ಏನಾದರೂ ತೊಂದರೆಯಾದರೆ ವೈದ್ಯಕೀಯವಾಗಿ ಸಹಾಯ ಮಾಡುವುದು. ಏಕೆಂದರೆ, ಅವರು ತುಂಬಾ ಬಡವರು. ರಾಜ್ಯದಲ್ಲಿ ಸುಮಾರು 91 ಸಾವಿರ ಜನ ಪಂಚಾಯಿತಿ ಸದಸ್ಯರಿದ್ದಾರೆ. ಅವರಿಗೆ ವೈದ್ಯಕೀಯ ಸಹಾಯ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಮೂರು ಜಿಲ್ಲೆಗಳಗೆ ಸೇರಿದಂತೆ ಎರಡು ಕೋಟಿ ರೂಪಾಯಿಗಳನ್ನು ನೀಡುತ್ತಾರೆ. ದಯವಿಟ್ಟು ಅದನ್ನು ಎರಡು ಕೋಟಿ ರೂಪಾಯಿಗಳಂದ ಐದು ಕೋಟಿ ರೂಪಾಯಿಗಳಗೆ ಹೆಚ್ಚಿಗೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಈಗ ಎಲ್ಲಾ ಗ್ರಾಮಗಳಲ್ಲೂ ಸ್ಮಶಾನದ ಭೂಮಿಗೆ ಸಂಬಂಧಪಟ್ಟಂತೆ ಸಾಕಷ್ಟು ಸಮಸ್ಯೆ ಇದೆ. ಇದರಿಂದ ಸಾಕಷ್ಟು ತೊಂದರೆಗಳಾಗುತ್ತಿವೆ. ಅದಕ್ಕೆ ಸರ್ಕಾರ ಪ್ರತಿಯೊಂದು ಗ್ರಾಮಗಳಗೂ ಕೂಡ ಸರ್ಕಾರಿ ಭೂಮಿ ಇಲ್ಲದೇ ಇದ್ದರೆ, ಭೂಮಿಯನ್ನು ಖರೀದಿ ಮಾಡಿ, ಸ್ಮಶಾನ ಭೂಮಿಗೆ ಅವಕಾಶ ಮಾಡಿಕೊಡಬೇಕು. ಕಾನೂನು ಸುವ್ಯವಸ್ಥೆಗೆ ಸಂಬಂಧಪಟ್ಟಂತೆ ಹೆಚ್ಚು ಒತ್ತನ್ನು ನೀಡಬೇಕು ಎಂಬ ಮಾತನ್ನು ಹೇಳುತ್ತೇನೆ. ವಿಶೇಷವಾಗಿ ಹಾವೇರಿ, ಗದಗ ಮತ್ತು ಧಾರವಾಡ ಜಿಲ್ಲೆಗಳಗೆ ಹೆಚ್ಚು ಅನುದಾನ ನೀಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿಯವರಿಗೆ ಕೇಳಕೊಳ್ಳುತ್ತೇನೆ. ದಿವಂಗತ ಅಶ್ವಥ್‌ರವರು ಹಾಡಿದಂತಹ ಹಾಡಿನ ಸಾಲುಗಳನ್ನು ಹೇಳುತ್ತಾ, “ಪ್ರೀತಿ, ಪ್ರೇಮ ಹಂಚಿ ನೀ ಹೋಗಬೇಕು ಅಲ್ಲಿ, ಸತ್ತ ಮೇಲೆ ನಿನಗೆ ಹೆಸರು ಉಂಟು ಇಲ್ಲಿ, ಒಳತು ಮಾಡು ಮನುಷ್ಯ ನೀನು ಇರುವುದು ಮೂರೇ ದಿವಸ”. ಅವರು ಇದನ್ನು ಅರ್ಥ ಮಾಡಿಕೊಳ್ಳಲಿ. ಇವತ್ತು ಮಾನ್ಯ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿಯವರಿಗೆ ಅವಕಾಶ ಸಿಕ್ಕಿದೆ. ಮಾನ್ಯ ಮುಖ್ಯಮಂತ್ರಿಗಳ ಭಾವನೆಗಳಗೆ ಅವಕಾಶವಿಲ್ಲ. ಆದರೆ, ಅವರ ಕರ್ತವ್ಯ ಅವರ ಮುಂದೆ ಇದೆ. ಆ ಕರ್ತವ್ಯಗಳನ್ನು ಅವರು ಮಾಡಬೇಕೆಂದು ಹೇಳುತ್ತೇನೆ. ಒಂದು ಒಳ್ಳೆಯ ಕೆಲಸವನ್ನು ಮಾಡಿದರೆ, ಜನರು ಅವರನ್ನು ನೆನಪಿಸಿಕೊಳ್ಳುತ್ತಾರೆ. ನಾವು ಹೆಜ್ಜೆಯ ಗುರುತುಗಳನ್ನು ಬಿಟ್ಟು ಹೋಗಬೇಕು. ಅವರು ಹೋದ ಮೇಲೂ ಸಹ ಜನ ಅವರನ್ನು ಅರ್ಥ ಮಾಡಿಕೊಳ್ಳುತ್ತಾರೆ. ಅಂದರೆ, ಮಾನ್ಯ ಬಸವರಾಜ ಬೊಮ್ಮಾಯಿಯವರು ಒಳ್ಳೆಯ ಕೆಲಸವನ್ನು ಮಾಡಿದರು ಎಂದು ಜನರು ಹೇಳುತ್ತಾರೆ. ನಾವು ವಿಶೇಷವಾಗಿ ಮಾನ್ಯ ಪಂಡಿತ್ ಜವಾಹರ್‌ಲಾಲ್ ನೆಹರುರವರನ್ನು ನೆನಪಿಸಿಕೊಳ್ಳಬೇಕು. ಏಕೆಂದರೆ, ಪಂಚವಾರ್ಷಿಕ ಯೋಜನೆಯ ಮೂಲಕ ಈ ರಾಷ್ಟ್ರಕ್ಕೆ ಹಲವಾರು ಕಾರ್ಯಕ್ರಮಗಳನ್ನು ನೀಡಿದರು. ಅದಕ್ಕೆ ಇವತ್ತು ಜನರು ಅವರನ್ನು

ನೆನಪಿಸಿಕೊಳ್ಳುತ್ತಾರೆ. ಶ್ರೀಮತಿ ಇಂದಿರಾಗಾಂಧಿಯವರು ಈ ರಾಷ್ಟ್ರಕ್ಕೆ ತ್ಯಾಗ ಮಾಡಿ, ಬಲಿದಾನ ಕೊಟ್ಟರು. ಅವರು 20 ಅಂಶಗಳ ಕಾರ್ಯಕ್ರಮದಲ್ಲಿ "ಗರೀಬಿ ಹಠಾವೋ" ಕಾರ್ಯಕ್ರಮವನ್ನು ತಂದರು. ದೇಶದ ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಿದರು. "ಉಳುವವನೇ ಭೂಮಿಯ ಒಡೆಯ" ಎಂಬುದು ಇತಿಹಾಸದ ಪುಟಗಳಲ್ಲಿ ಬರೆದಿದೆ. ಯುವನಾಯಕ ಮಾಜಿ ಪ್ರಧಾನಮಂತ್ರಿಗಳಾದ ಮಾನ್ಯ ರಾಜೀವ್ ಗಾಂಧಿಯವರು ಸಹ ಈ ದೇಶದ ಐಕ್ಯತೆಗೆ ತಮ್ಮ ಪ್ರಾಣವನ್ನು ಅರ್ಪಣೆ ಮಾಡಿದರು. ಅವರು ಸಂಪರ್ಕ ಕ್ರಾಂತಿ ತಂದರು. ಇವತ್ತಿನ ಮೊಬೈಲ್ ಮತ್ತು ಲ್ಯಾಪ್‌ಟಾಪ್ ಇವುಗಳೆಲ್ಲವೂ ಸಹ ಅವರ ಕೊಡುಗೆಯಾಗಿದೆ.

**(ಮುಂದು)**

(419) 17.03.2022 01.20 LL-BNS

**(ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಸಲೀಂ ಅಹಮದ್(ಮುಂದು)**

ಅದೇ ರೀತಿ 18 ವರ್ಷದ ಯುವಕರಿಗೆ ಮತದಾನದ ಹಕ್ಕನ್ನು ಕೊಟ್ಟಿದ್ದು ಶ್ರೀ ರಾಜೀವ್ ಗಾಂಧಿಯವರ ಕೊಡುಗೆ. ಗ್ರಾಮ ಪಂಚಾಯಿತಿಯಲ್ಲಿ 73 ಮತ್ತು 74 ನೇ ತಿದ್ದುಪಡಿಯನ್ನು ತರುವ ಮೂಲಕ ಗ್ರಾಮ ಪಂಚಾಯಿತಿಗಳಿಗೆ ಹೆಚ್ಚು ಶಕ್ತಿ ಕೊಡುವ ಕೆಲಸವನ್ನು ಅವರು ಮಾಡಿದ್ದಾರೆ. ಅದೇ ರೀತಿ ಶ್ರೀ ಮನಮೋಹನ್ ಸಿಂಗ್‌ರವರು ಪ್ರಧಾನ ಮಂತ್ರಿಯಾದಂತಹ ಸಂದರ್ಭದಲ್ಲಿ ಶ್ರೀಮತಿ ಸೋನಿಯಾ ಗಾಂಧಿಯವರು ಪ್ರಧಾನ ಮಂತ್ರಿಯಾಗಬೇಕೆಂದು ಎಲ್ಲಾ ಎಂ.ಪಿ.ಗಳು ಒತ್ತಾಯ ಮಾಡಿದರು. ಆದರೂ ಸಹ, ಆ ತಾಯಿ ಪ್ರಧಾನ ಮಂತ್ರಿಯಾಗುವುದಕ್ಕೆ ಒಪ್ಪಲಿಲ್ಲ. ಆದರೆ, ಒಬ್ಬ ಆರ್ಥಿಕ ತಜ್ಞರಾದಂತಹ ಶ್ರೀ ಮನಮೋಹನ್ ಸಿಂಗ್‌ರವರನ್ನು ಈ ದೇಶದ ಪ್ರಧಾನ ಮಂತ್ರಿಯನ್ನಾಗಿ ಮಾಡಿದರು. ಇದು ಇತಿಹಾಸದ ಪುಟಗಳಲ್ಲಿ ಇದೆಲ್ಲವೂ ಸಹ ಇದೆ. ಒಬ್ಬ ಆರ್ಥಿಕ ತಜ್ಞ ಶ್ರೀ ಮನಮೋಹನ್ ಸಿಂಗ್‌ರವರು ಒಳ್ಳೆಯ ಸರ್ಕಾರ ಕೊಟ್ಟರು ಮತ್ತು ಆರ್ಥಿಕ ವ್ಯವಸ್ಥೆಯನ್ನು ಒಳ್ಳೆಯ ರೀತಿಯಲ್ಲಿ ಮಾಡಿದರು ಎನ್ನುವ ಮಾತನ್ನು ಹೇಳುತ್ತೇನೆ. ಇಂತಹ ಎಲ್ಲಾ ವಿಚಾರಗಳನ್ನು ತಮ್ಮ ಮೂಲಕ ಸರ್ಕಾರಕ್ಕೆ ಹೇಳಬಯಸುತ್ತೇನೆ. ಆ ಹಿನ್ನೆಲೆಯಲ್ಲಿ ಈ ಸರ್ಕಾರ ಘೋಷಣೆ ಮಾಡಿರುವ ಬಜೆಟ್‌ನಲ್ಲಿ ಬದಲಾವಣೆ ಮಾಡಿದರೆ, ಜನ ಅವರಿಗೆ ಶಕ್ತಿ ಕೊಡುತ್ತಾರೆ. ಕಾನೂನು ಸುವ್ಯವಸ್ಥೆ ಇರಬಹುದು ಅಥವಾ ಇತರೆ ಇಲಾಖೆ ಇರಬಹುದು ಒಳ್ಳೆಯ ರೀತಿಯಲ್ಲಿ ಅವುಗಳಿಗೆ ವಿಶೇಷವಾಗಿ ಹೆಚ್ಚಿನ ಒತ್ತು ಕೊಡಬೇಕು. ಎಲ್ಲಿ

ಅನ್ಯಾಯವಾಗಿದೆ ಹಾಗೂ ಎಲ್ಲಾ ಬಡವರಿಗೆ ಮತ್ತು ಶೋಷಿತ ವರ್ಗದವರಿಗೆ ಹೆಚ್ಚು ಶಕ್ತಿ ಕೊಡಬೇಕು. ಆಗ ಜನ ತಮ್ಮನ್ನು ನೆನಪಿಸಿಕೊಳ್ಳುತ್ತಾರೆ. ಈ ಸರ್ಕಾರ ಮುಂದೆ ಅಧಿಕಾರದಲ್ಲಿ ಇರುತ್ತದೋ, ಇಲ್ಲವೋ ಅದು ಬೇರೆ ವಿಚಾರ. ಆದರೆ, ಇವೊತ್ತಿನ ದಿವಸ ಅಧಿಕಾರ ಇರುತ್ತದೆ, ಈ ದಿನ ಒಳ್ಳೆಯ ಕೆಲಸಗಳನ್ನು ಮಾಡಿ, ಹೆಜ್ಜೆ ಗುರುತುಗಳನ್ನು ಬಿಟ್ಟು ಹೋಗಲಿ ಎಂದು ಹೇಳಿ ನನ್ನ ಮಾತನ್ನು ಮುಕ್ತಾಯಗೊಳಿಸುತ್ತೇನೆ.

**ಶ್ರೀ ಶಂಕರ್ ಬಿ. ಪಾಟೀಲ ಮುನೇನಕೊಪ್ಪ(ಜವಳಿ ಮತ್ತು ಸಕ್ಕರೆ ಸಚಿವರು):-** ಮಾನ್ಯ ಸಭಾಪತಿಯವರೇ, ಈಗ ತಾನೆ ಮಾನ್ಯ ಸಲೀಂ ಅಹಮದ್‌ರವರು ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಅದರ ಜೊತೆಗೆ, ಕಳಸಾ ಭಂಡೂರಿ ಮತ್ತು ಮಹಾದಾಯಿ ವಿಚಾರಗಳ ಬಗ್ಗೆ ಸರ್ಕಾರದ ಮೇಲೆ ಒಂದು ಒಳ್ಳೆಯ ಅಭಿಪ್ರಾಯವನ್ನು ಹೇಳಿರುತ್ತಾರೆ. ಆದರೆ, ಈ ವಿಚಾರದಲ್ಲಿ ಕೆಲವು ಗೊಂದಲಗಳಿರುತ್ತವೆ. ಅದೇನೆಂದರೆ, ಕಳಸಾ ಭಂಡೂರಿ ಮತ್ತು ಮಹಾದಾಯಿ ವಿಚಾರದಲ್ಲಿ ಅವರ ಪಕ್ಷದ ನಿಲುವನ್ನು ಸ್ಪಷ್ಟಪಡಿಸಿದರೆ ಒಳ್ಳೆಯದಾಗುತ್ತದೆ. ಏಕೆಂದರೆ…

**ಶ್ರೀ ಸಲೀಂ ಅಹಮದ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ,..

**ಶ್ರೀ ಶಂಕರ್ ಬಿ. ಪಾಟೀಲ ಮುನ್ನೇನಕೊಪ್ಪ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ, ಇದು ಬಹಳ ಪ್ರಮುಖವಾಗಿರುತ್ತದೆ.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ನನ್ನ ಹೆಸರು ಉಲ್ಲೇಖ ಮಾಡಿರುವುದರಿಂದ ನಾನು ಮಾತನಾಡಬೇಕಲ್ಲವೇ? ಈ ಬಗ್ಗೆ ಚರ್ಚೆ ಮಾಡಬೇಕೆಂದರೆ ಬೇರೆ ಚರ್ಚೆ ಮಾಡಲಿ.

**ಶ್ರೀ ಶಂಕರ್ ಬಿ. ಮುನ್ನೇನಕೊಪ್ಪ:-** ಮಾನ್ಯ ಸಭಾಪತಿಯವರೇ, ಕಳಸಾ ಭಂಡೂರಿ ಮತ್ತು ಮಹದಾಯಿ ವಿಚಾರದಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ದ್ವಂದ್ವ ನಿಲುವು ಇರುತ್ತದೆ. ಹಾಗಾಗಿ, ಅದನ್ನು ಸರಿಪಡಿಸಿ ಕಾಂಗ್ರೆಸ್ ಪಕ್ಷ ನಿರ್ಧಾರಕ್ಕೆ ಬಂದರೆ ಈ ರಾಜ್ಯಕ್ಕೆ ಒಳ್ಳೆಯದಾಗುತ್ತದೆ. ಏಕೆಂದರೆ, ಅವರದ್ದೇ ಪಕ್ಷದ

ವರಿಷ್ಠರು ಕರ್ನಾಟಕ ರಾಜ್ಯಕ್ಕೆ ಒಂದು ಹನಿ ನೀರು ಬಿಡುವುದಿಲ್ಲವೆಂದು ಹೇಳಿಕೆ ನೀಡುತ್ತಾರೆ. ಅದನ್ನು ಅವರು ಸಹ ತಮ್ಮ ಪಕ್ಷದ ವೇದಿಕೆಯಲ್ಲಿ ಚರ್ಚೆ ಮಾಡಲಿ.

**(ಗೊಂದಲ)**

ಗೋವಾ ರಾಜ್ಯದ ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯಲ್ಲಿ ಏನು ಹೇಳಿದ್ದಾರೆಂದು ಅದನ್ನು ಸಹ ಅವರು ತರಿಸಿಕೊಂಡು ನೋಡಲಿ ಮತ್ತು ಕೇಂದ್ರದ ನಾಯಕರುಗಳು ಮಹದಾಯಿ ಮತ್ತು ಕಳಸಾ ಭಂಡೂರಿ ಯೋಜನೆಗಳಿಗೆ ನಮ್ಮ ಸಹಕಾರ ಇಲ್ಲ ಎನ್ನುವುದನ್ನು ಅವರ ಪಕ್ಷದ ಕೇಂದ್ರದ ನಾಯಕರೇ ಹೇಳುತ್ತಿದ್ದಾರೆ. ಮಾನ್ಯ ಸಲೀಂ ಅಹಮದ್‌ರವರು ಆ ಭಾಗದ ಒಬ್ಬ ಜನಪ್ರತಿನಿಧಿಯಾಗಿದ್ದು, ಅವರ ಬಗ್ಗೆ ನನಗೆ ಹೆಚ್ಚು ಗೌರವವಿದೆ. ಏಕೆಂದರೆ, ಕಳಸಾ ಭಂಡೂರಿ ಮತ್ತು ಮಹದಾಯಿ ಹೋರಾಟದಿಂದ ನಾನು ಬಂದಿರುತ್ತೇನೆ. ಹಿಂದಿನ ಸರ್ಕಾರಗಳಲ್ಲಿಯೂ ಸಹ ಈ ರೀತಿಯ ದ್ವಂದದ ಹೇಳಿಕೆ ನೀಡಿದ್ದು, ಈಗಲೂ ಸಹ ಆ ರೀತಿ ದ್ವಂದದ ಹೇಳಿಕೆ ನೀಡುವುದು ಬೇಡ. ಹಾಗಾಗಿ, ಕಳಸಾ ಭಂಡೂರಿ ಮತ್ತು ಮಹದಾಯಿ ವಿಚಾರದಲ್ಲಿ ಆ ಪಕ್ಷದ ಬದ್ಧತೆ ಏನು ಎನ್ನುವುದನ್ನು ರಾಜ್ಯದ ಜನರಿಗೆ ಗೊತ್ತಾದರೆ ಒಳ್ಳೆಯದು ಎಂದು ಹೇಳುತ್ತೇನೆ.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ,...

**ವೈಸ್ ಚೇರ್ಮನ್:-** ಮಾನ್ಯ ಲಹರ್ ಸಿಂಗ್‌ರವರೇ, ತಾವು ಮಾತನಾಡಿ.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ನನ್ನ ಹೆಸರನ್ನು ಹೇಳಿದ್ದಾರೆ. ಹಾಗಾಗಿ, ನಾನು ಮಾತನಾಡಬೇಕು.

**ವೈಸ್ ಚೇರ್ಮನ್:-** ಮಾನ್ಯ ಸಲೀಂ ಅಹಮದ್‌ರವರೇ, ತಾವು ನಂತರ ಮಾತನಾಡಿ.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನಮ್ಮ ನಿಲುವು ಏನೆಂದು ಕೇಳಿದ್ದಾರೆ. ಹಾಗಾಗಿ, ನಾನು ನಮ್ಮ ನಿಲುವನ್ನು ಹೇಳಲೇಬೇಕು.

**ವೈಸ್ ಚೇರ್ಮನ್:-** ಆಯಿತು ಹೇಳಿ.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ಕಳಸಾ ಭಂಡೂರಿ ಮತ್ತು ಮಹದಾಯಿ ಯೋಜನೆ ವಿಚಾರದಲ್ಲಿ ನಮ್ಮ ನಿಲುವು ಆ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಬೇಕು. ಇದರಲ್ಲಿ ಯಾವುದೇ ದ್ವಂದ್ವ ನಿಲುವು ಇರುವುದಿಲ್ಲ. ಕಳಸಾ ಭಂಡೂರಿ ಮತ್ತು ಮಹದಾಯಿ ನಮ್ಮ ರಾಜ್ಯದ ಹಕ್ಕು. ಗೋವಾ ರಾಜ್ಯದಲ್ಲಿ ಏನು ಹೇಳಿಕೆ ನೀಡುತ್ತಾರೆಂದರೆ, ಅದು ಆ ರಾಜ್ಯದ ಕಾಂಗ್ರೆಸ್ ಪಕ್ಷದ ತೀರ್ಪು, ಅವರ ಹೋರಾಟ. ಆದರೆ, ನಾವೆಲ್ಲರೂ ಕರ್ನಾಟಕದ ಕಾಂಗ್ರೆಸ್ ಪಕ್ಷದವರು, ಕಳಸಾ ಭಂಡೂರಿ ಮತ್ತು ಮಹದಾಯಿ ಪರವಾಗಿ ನಾವು ಹೋರಾಟ ಮಾಡುತ್ತೇವೆ. ಈ ಬಗ್ಗೆ ಸರ್ಕಾರದ ಇಚ್ಛಾಶಕ್ತಿ ಏನೆಂದು ಹೇಳಲಿ. ಇವೊತ್ತಿನ ದಿವಸ ಗೋವಾ ರಾಜ್ಯದಲ್ಲಿ ಡಬಲ್ ಇಂಜಿನ್ ಸರ್ಕಾರ ಅಧಿಕಾರದಲ್ಲಿರುತ್ತದೆ. ಹಾಗಾಗಿ, ಈ ಕಾರ್ಯಕ್ರಮವನ್ನು ಅನುಷ್ಠಾನ ಮಾಡುವಂತಹ ಕೆಲಸ ಮಾಡಿ.

**ವೈಸ್ ಚೇರ್ಮನ್:-** ಮಾನ್ಯ ಸಲೀಂ ಅಹಮದ್‌ರವರೇ, ಆಯಿತು ದಯಮಾಡಿ ಕುಳಿತುಕೊಳ್ಳಿ. ತಾವು ಪೀಠದ ಕಡೆ ನೋಡಿ ಮಾತನಾಡಿ. ಆ ಕಡೆ ಏತಕ್ಕೆ ನೋಡುತ್ತೀರಿ? ಮಾನ್ಯ ಸಚಿವರು ಕೂಡ ಪೀಠದ ಕಡೆ ನೋಡಿ ಮಾತನಾಡಿರುತ್ತಾರೆ. ತಾವು ಸಹ ಪೀಠದ ಕಡೆ ನೋಡಿ ಮಾತನಾಡಿ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ತಮ್ಮ ಸರ್ಕಾರದ ಇಂಜಿನ್ ಫೇಲ್ ಆಗಿರುತ್ತದೆಯೆಲ್ಲಾ?

**(ಗೊಂದಲ)**

**ಶ್ರೀ ಲಹರ್ ಸಿಂಗ್ ಸಿರೋಯಾ(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಅವಕಾಶ ನೀಡಿದ್ದಕ್ಕಾಗಿ ತಮಗೆ ಧನ್ಯವಾದಗಳು.

**(ಗೊಂದಲ)**

**ವೈಸ್ ಚೇರ್ಮನ್:-** ಮಾನ್ಯ ಲಹರ್‌ಸಿಂಗ್‌ರವರೇ ತಾವು ಸ್ವಲ್ಪ ಗಟ್ಟಿಯಾಗಿ ಮಾತನಾಡಿ. ಇಲ್ಲದಿದ್ದರೆ ಮಧ್ಯೆ ಮಧ್ಯೆ ಬೇರೆ ಬೇರೆ ಸದಸ್ಯರು ಮಾತನಾಡುತ್ತಾರೆ.

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ, ನನ್ನದು ವಿಶೇಷ ಪರಿಸ್ಥಿತಿ ಇರುತ್ತದೆ. ಹೇಗೆ ಎಂದರೆ, ಈ ವಿಧಾನ ಪರಿಷತ್ತಿಗೆ ಕೆಲವು ಸದಸ್ಯರು ಶಿಕ್ಷಕರ ಕ್ಷೇತ್ರ, ಪದವೀಧರರ ಕ್ಷೇತ್ರ, ನಾಮನಿರ್ದೇಶಿತರು ಮತ್ತು ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಆಯ್ಕೆಯಾಗಿ ಬಂದಿರುತ್ತಾರೆ. ಆದರೆ, ಕಾಂಗ್ರೆಸ್ ಪಕ್ಷ ಮತ್ತು ಬಿ.ಜೆ.ಪಿ. ಪಕ್ಷ ಎರಡೂ ಪಕ್ಷಗಳು ಸೇರಿ ನನ್ನನ್ನು ಆಯ್ಕೆ ಮಾಡಿರುತ್ತಾರೆ. ಆ ಕಾರಣಕ್ಕಾಗಿ ನಾನು ಸರ್ಕಾರದ ಪರವಾಗಿ ಮಾತನಾಡಬೇಕೋ ಅಥವಾ ವಿರೋಧವಾಗಿ ಮಾತನಾಡಬೇಕೋ ಅದು ನನಗೆ ಗೊತ್ತಾಗುತ್ತಿಲ್ಲ. ಅಲ್ಲದೇ, ನನ್ನದು ಮಧ್ಯ ಪಕ್ಷ ಆಗಿರುತ್ತದೆ. ಅಂದರೆ, ನಾನು ಆಡಳಿತ ಪಕ್ಷದ ಸದಸ್ಯನು ಅಲ್ಲ ಹಾಗೂ ವಿರೋಧ ಪಕ್ಷದ ಸದಸ್ಯನು ಅಲ್ಲ. ಅದಕ್ಕಾಗಿ, ನಮಗೆ ಅವಕಾಶವನ್ನು ಸಹ ಜಾಸ್ತಿ ಮಾಡಿಕೊಡಬೇಕು. ನಾನು ಈ ಮನೆಯ ಸದಸ್ಯನಾಗಿ 12ನೇ ವರ್ಷವಾಗಿದ್ದು, ಬಹುಶಃ ಇದು ನನ್ನ ಕೊನೆಯ ವರ್ಷ ಇರಬಹುದು. ಏಕೆಂದರೆ, ನನ್ನ ಪಕ್ಷ ಸೌಜನ್ಯಪೂರ್ವಕವಾಗಿ 2 ಬಾರಿ ನನಗೆ ಅವಕಾಶ ನೀಡಿರುತ್ತದೆ. ನಾನು 3ನೇ ಬಾರಿಗೆ ಆಯ್ಕೆ ಮಾಡಬೇಕೆಂದು ಆಸೆ ಪಡುವುದಿಲ್ಲ. ಏಕೆಂದರೆ, ಹೊಸಬರಿಗೆ ಹಾಗೂ ಯುವಕರಿಗೆ ಅವಕಾಶ ಕೊಡಬೇಕೆಂದು ನಾನು ಇಚ್ಛೆಪಡುತ್ತೇನೆ. ಇದು ಕೊನೆಯ ಅಧಿವೇಶನವಾಗಿದ್ದು, ಇದು ನನ್ನ ಕೊನೆಯ ಭಾಷಣ ಸಹ ಆಗಿರಬಹುದು.

**(ಗೊಂದಲ)**

**ವೈಸ್ ಚೇರ್ಮನ್:–** ಮಾನ್ಯ ಲಹರ್ ಸಿಂಗ್ ಸಿರೋಯಾರವರೇ, ತಾವು ಮಾತನಾಡಿ.

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ, ನನ್ನ ಭಾಷಣದಲ್ಲಿ ನನ್ನ ಭಾವನೆಯನ್ನು 3 ವಾಕ್ಯಗಳಲ್ಲಿ ವ್ಯಕ್ತಪಡಿಸುತ್ತೇನೆ. ಅದಕ್ಕಾಗಿ ತಾವು ಅವಕಾಶ ಕೊಡಬೇಕು. ಅದರ translation ಕನ್ನಡದಲ್ಲಿ, ಇಂಗ್ಲೀಷ್‌ನಲ್ಲಿ ಮತ್ತು ಹಿಂದಿಯಲ್ಲಿಯೂ ಸಹ ಮಾತನಾಡುತ್ತೇನೆ. ಅದಕ್ಕೆ ತಾವು ಅವಕಾಶ ಕೊಡಬೇಕು.

**(ಗೊಂದಲ)**

**ವೈಸ್ ಚೇರ್ಮನ್:–** ಮಾನ್ಯ ಸದಸ್ಯರು ಇಂಗ್ಲೀಷ್‌ನಲ್ಲಿ ಮಾತನಾಡುವುದಕ್ಕೆ ಒಪ್ಪಿದ ಮೇಲೆ ಹಿಂದಿಯಲ್ಲಿ ಮಾತನಾಡುವುದಕ್ಕೆ ಏತಕ್ಕೆ ಬೇಡವೆಂದು ಹೇಳುತ್ತಿದ್ದೀರಿ?

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ, ನನ್ನ ಭಾವನೆಯನ್ನು ನಾನು ಮೊದಲು ಕನ್ನಡದಲ್ಲಿ ವ್ಯಕ್ತಪಡಿಸುತ್ತೇನೆ. (ಗೊಂದಲ)

**ವೈಸ್ ಚೇರ್ಮನ್:–** ಮಾನ್ಯ ಲಹರ್ ಸಿಂಗ್ ಸಿರೋಯಾರವರೇ, ತಾವು ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ ಮಾತನಾಡಿ. ತಾವು ಹಿಂದಿಯಲ್ಲಿ ಮಾತನಾಡಿದ್ದನ್ನು ರೆಕಾರ್ಡ್ ಮಾಡುವುದಕ್ಕೆ ನಮ್ಮಲ್ಲಿ ಹಿಂದಿ ವರದಿಗಾರರು ಇರುವುದಿಲ್ಲ.

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯನಾಗುವ ಗೌರವವನ್ನು ನನಗೆ ನೀಡಿದ ನನ್ನ ಪಕ್ಷದ ನಾಯಕತ್ವಕ್ಕೆ ಮತ್ತು ಕರ್ನಾಟಕದ ವಿಶಾಲ ಹೃದಯದ ಜನತೆಗೆ ನನ್ನ ಹೃತ್ಪೂರ್ವಕ ಕೃತಜ್ಞತೆಯನ್ನು ವ್ಯಕ್ತಪಡಿಸಲು ಬಯಸುತ್ತೇನೆ. ಈ ಗೌರವಾನ್ವಿತ ಮನೆಯ ಪ್ರತಿಯೊಬ್ಬ ಸದಸ್ಯರಿಗೂ ಅಭಿಮಾನ ಪೂರ್ವಕ ಕೃತಜ್ಞತೆಗಳು. ನೀವು ನನ್ನನ್ನು ನಿಮ್ಮ ಸಹೋದರನಂತೆ ಸ್ವೀಕರಿಸಿದ್ದೀರಿ. ನನಗೆ ಮಾತನಾಡಲು ಅವಕಾಶವನ್ನು ನೀಡಿದ್ದೀರಿ ಮತ್ತು ನಿಮ್ಮ ಬಾಂಧವ್ಯಕ್ಕೆ ಅರ್ಹ ಎಂದು ಪರಿಗಣಿಸಿದ್ದೀರಿ.

ಈ ಸದನದಲ್ಲಿ ಸಾಕಷ್ಟು ಕಲಿಯುವ ಅವಕಾಶ ನನಗೆ ದೊರಕಿದೆ. ನಾನು ಮತ್ತೊಮ್ಮೆ ನಿಮ್ಮೆಲ್ಲರಿಗೂ ಮತ್ತು ಕರ್ನಾಟಕದ ಜನತೆಗೂ ಹೃತ್ಪೂರ್ವಕವಾಗಿ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ. ಧನ್ಯವಾದಗಳು. ಮಾನ್ಯ ಸಭಾಪತಿಯವರೇ, ನಾನು ಈ ಮಾತುಗಳನ್ನು ಹಿಂದಿಯಲ್ಲಿ ಹೇಳಿದರೆ ನನಗೆ ತೃಪ್ತಿಯಾಗುತ್ತದೆ. ಹಾಗಾಗಿ, ತಾವು ದಯಮಾಡಿ ನನಗೆ ಅವಕಾಶ ಮಾಡಿಕೊಡಿ.

**(ಗೊಂದಲ)**

**ವೈಸ್ ಚೇರ್ಮನ್:–** ಮಾನ್ಯ ಲಹರ್ ಸಿಂಗ್ ಸಿರೋಯಾರವರೇ, ತಾವು ಇಲ್ಲಿ ಹಿಂದಿಯಲ್ಲಿ ಮಾತನಾಡಿದರೆ ಅದನ್ನು ರೆಕಾರ್ಡ್ ಮಾಡುವುದಕ್ಕೆ ಆಗುವುದಿಲ್ಲ.

**(ಗೊಂದಲ)**

**ಶ್ರೀ ಲಹರ್ ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೇ, ಹಿಂದಿಯಲ್ಲಿ ಹೇಳಿದರೆ ನನಗೆ ಒಂದು ಸಮಾಧಾನವಾಗುತ್ತದೆ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಲಹರ್ ಸಿಂಗ್ ಸಿರೋಯಾರವರು ಮೇಲ್ಕಂಡ ಹೇಳಿಕೆಯನ್ನು ಹಿಂದಿ ಭಾಷೆಯಲ್ಲಿಯೂ ಸಹ ಹೇಳಿದರು)**

ಮಾನ್ಯ ಸಭಾಪತಿಯವರೇ, ಇದನ್ನು ಇಂಗ್ಲೀಷ್‌ನಲ್ಲಿಯೂ ಸಹ ಹೇಳಲೇ?

**ವೈಸ್ ಚೇರ್ಮನ್:-** ಬೇಡ ಸಾಕು.

**ಶ್ರೀ ಲಹರ್ ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೇ, ಇದುವರೆವಿಗೂ ಬಜೆಟ್ ಮೇಲೆ ಏನೇನು ವಿಷಯಗಳ ಚರ್ಚೆ ನಡೆದಿದೆ, ಬಜೆಟ್‌ಗೆ ಸಂಬಂಧ ಇಲ್ಲದೇ ಇರುವಂತಹ ವಿಷಯಗಳ ಬಗ್ಗೆ ಚರ್ಚೆ ನಡೆದಿದೆ. ರಾಜಸ್ಥಾನದ ವಿಷಯ ಮತ್ತು ಕೇರಳ ರಾಜ್ಯದ ವಿಷಯ ಕೂಡ ಬಂದಿರುತ್ತದೆ. ಪದೇ ಪದೇ ಶ್ರೀ ನರೇಂದ್ರ ಮೋದಿಯವರ ಹೆಸರು ಹಾಗೂ ಅಮೇರಿಕಾದ ಹ್ಯೂಸ್ಟನ್‌ನಲ್ಲಿ ನಡೆದಂತಹ 'Howdy Modi' ಕಾರ್ಯಕ್ರಮದ ಬಗ್ಗೆಯೂ ಸಹ ಪ್ರಸ್ತಾಪ ಆಗಿರುತ್ತದೆ. ಇನ್ನು ಅನೇಕ ವಿಚಾರಗಳ ಬಗ್ಗೆಯೂ ಸಹ ಪ್ರಸ್ತಾಪ ಆಗಿರುತ್ತದೆ. ಇದು ನನಗೆ ಅರ್ಥವಾಗಿರುವುದಿಲ್ಲ. ಇದರಿಂದಾಗಿ, ನನಗೆ ಎರಡು-ಮೂರು ವಿಚಾರಗಳಲ್ಲಿ ಬಹಳ ನೋವಾಗಿರುತ್ತದೆ. ಏಕೆಂದರೆ, ರಾಜ್ಯಪಾಲರ ಭಾಷಣದ ಮೇಲೆ ಬಹಳ ಸಿದ್ಧತೆ ಮಾಡಿಕೊಂಡು ಜನರಿಗೆ ಏನೇನು ಸಮಸ್ಯೆಗಳು ಇವೆ, ಸರ್ಕಾರದಿಂದ ಏನೇನು ಸಾಧನೆಗಳು ಇವೆ, ಏನೇನು ಸೌಲಭ್ಯ ಕೊಡುತ್ತಿದೆ ಎಂದು ನಾನು ಬಹಳ ಸಿದ್ಧತೆ ಮಾಡಿಕೊಂಡಿರುತ್ತೇನೆ. ಅದು ಯಾವ ಕಾರಣಕ್ಕೆ ನನಗೆ ಅರ್ಥವಾಗಲಿಲ್ಲ. ಏತಕ್ಕಾಗಿ, ನಮ್ಮನ್ನು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವುದಕ್ಕೆ ಅವಕಾಶ ನೀಡಿರುವುದಿಲ್ಲ ಎಂಬ ವಿಷಯದ ಬಗ್ಗೆ ನಾನು ವಾದ ಮಾಡುವುದಕ್ಕೆ ಹೋಗುವುದಿಲ್ಲ. ಅದನ್ನು ಅವರಿಗೆ ಬಿಟ್ಟಿದ್ದೇನೆ. ಆದರೆ, ಒಂದು ಸೆಂಟರ್ ಬಗ್ಗೆ ಮತ್ತು ಬೇರೆ ಬೇರೆ ವಿಷಯಗಳ ಬಗ್ಗೆ ಚರ್ಚೆಯಾಗಿದೆ, ಅದಕ್ಕೆ ಸಂಬಂಧಪಟ್ಟಂತೆ ಒಂದು

ಕರ್ನಾಟಕ ಬಜೆಟ್ ಅನ್ನು ಕೋಟ್ ಮಾಡುತ್ತೇನೆ. ಅದನ್ನು ದಯಮಾಡಿ ಎಲ್ಲರೂ ತಾಳ್ಮೆಯಿಂದ ಕೇಳಬೇಕೆಂದು ಕೋರುತ್ತೇನೆ.

**(ಗೊಂದಲ)**

(ಮುಂದು)

(420) 17.03.2022 1.30 ವೈಎಲ್-ಕೆಎಸ್ (ವೈಸ್‌ಛೇರ್ಮನ್‌ರವರ ಉಪಸ್ಥಿತಿ)

**SRI LAHAR SINGH SIROYA (contd.):-**

The relevant portion of the Budget for the year 1995-96 reads as follows ;

*"2. The people of Karnataka have blessed us with an unprecedented opportunity to form the Government by removing the previous Congress regime. I consider this as my good fortune and heartily thank the voters of Karnataka. We will fulfil the expectations of the people and we will be responsive to their problems and will try to live up to the trust reposed by the people in us.*

*3. A number of pro-people programmes, which had been stopped after 1989 will be re-started now. In between the experiment conducted by us about the decentralisation of power has been distorted and has suffered a setback. Many Programmes formulated for the uplift of the poor and the rural people have remained as mere assurances and in files. There has been a big gap between Promise and the performance. An*

*environment has been created where the credibility of the Government is suspect, because of unrealistic programmes, lack of political will to implement the formulated schemes and the lethargy in the system."*

ಸಮಿಶ್ರ ಸರ್ಕಾರದ ಅಸ್ತಿತ್ವದಲ್ಲಿ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಉಪ ಮುಖ್ಯಮಂತ್ರಿಗಳಾಗಿ ಆರ್ಥಿಕ ಇಲಾಖೆಯ ಸಚಿವರಾಗಿದ್ದ ಸಂದರ್ಭದಲ್ಲಿ ಮೊದಲನೇ ಬಾರಿ ಬಜೆಟ್ ಮಂಡನೆ ಮಾಡಿರುವುದಾಗಿದೆ. ಕಾಂಗ್ರೆಸ್ ಪಕ್ಷದ ಮೇಲೆ ಆರೋಪ ಮಾಡಿದ್ದಾರೆ, 6 ವರ್ಷಗಳವರೆಗೂ ಕೆಲಸ ಮಾಡಲು ಬಿಟ್ಟಿಲ್ಲವೆಂದು ಯೋಜನೆಗಳೆಲ್ಲಾ ಹಾಳು ಮಾಡಿದ್ದಾರೆ ಎಂದು ಹೇಳಿದ್ದು, ಅದರ ಬಗ್ಗೆ ನಾನು ಸಹ ಹೆಚ್ಚು ವಾದ ಮಾಡಲು ಹೋಗುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಇಂಗ್ಲಿಷ್‌ನಲ್ಲಿ ಓದಿದರೆ ನಮಗೆ ಹೇಗೆ ಅರ್ಥವಾಗಬೇಕು. ಕನ್ನಡದಲ್ಲಿ ವರ್ಗಾವಣೆ ಮಾಡಿ ಹೇಳಲ್ಲಿ.

**ಶ್ರೀ ಲಹರ್ ಸಿಂಗ್ ಸಿರೋಯಾ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ನಾನು ಸತ್ಯವನ್ನೇ ಹೇಳುತ್ತಿದ್ದೇನೆ. Budget speech copy ನ್ನೇ ಕೊಡುತ್ತೇನೆ.

**ಶ್ರೀ ಎಂ.ಕೆ.ಪ್ರಾಣೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ಆಗಲೇ ಇಂಗ್ಲಿಷ್‌ನಲ್ಲಿಯೇ ಮಾತನಾಡಿದ್ದರು. ಆಗ ಮಾನ್ಯ ಎಸ್.ರವಿರವರು ಏನು ಮಾತನಾಡಲಿಲ್ಲ. ಆದರೆ, ಈಗ ಮಾನ್ಯ ಲಹರ್ ಸಿಂಗ್ ಸಿರೋಯಾರವರು ಸ್ವಲ್ಪ ಇಂಗ್ಲಿಸ್‌ನಲ್ಲಿ ಮಾತನಾಡಿದ್ದಕ್ಕೆ ಈ ರೀತಿ ಹೇಳುತ್ತಿದ್ದಾರೆ.

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ನಮಗೂ ಅವರಿಗೂ ಒಂದೆಯೇ? ನಮಗೆ ಹೇಗೆ ಅರ್ಥವಾಗಬೇಕು.

**ಸಭಾಪತಿಯವರು:–** ಒಂದು ನಿಮಿಷ. ಕನ್ನಡ ಅಥವಾ ಇಂಗ್ಲಿಷ್ ಯಾವ ಭಾಷೆನಲ್ಲಿಯಾದರೂ ಮಾತನಾಡಬಹುದು.

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ನಮಗೆ ಕನ್ನಡದಲ್ಲಿ ವರ್ಗಾವಣೆ ಮಾಡಿ ಹೇಳಲ್ಲಿ.

**ಸಭಾಪತಿಯವರು:–** ತಮಗೆ ಕನ್ನಡ ಭಾಷೆಯಲ್ಲಿ ಬೇಕಾದರೆ ನಂತರ ಪತ್ರವನ್ನು ತೆಗೆದುಕೊಂಡು ತರ್ಜುಮೆ ಮಾಡಿಕೊಳ್ಳಿ.

**ಶ್ರೀ ಲಹರ್ ಸಿಂಗ್ ಸಿರೋೕಯಾ:–** ಮಾನ್ಯ ಸಭಾಪತಿಯವರೇ, ನನಗೆ ಅಷ್ಟು ಚೆನ್ನಾಗಿ ಕನ್ನಡ ಭಾಷೆ ಬರುವುದಿಲ್ಲ. ಒಂದೇ ವೇಳೆ ಕನ್ನಡದಲ್ಲಿ ಹೇಳಬೇಕೆಂದರೆ ಬಹಳ ಸಮಯವಾಗುತ್ತದೆ. ಹಾಗಾಗಿ ನಾನು ಇಂಗ್ಲಿಷ್ ಭಾಷೆಯಲ್ಲಿ ಹೇಳುತ್ತಿದ್ದೇನೆ.

**ಸಭಾಪತಿಯವರು:–** ಆಯಿತು. ನೀವು ಇಂಗ್ಲಿಷ್‌ನಲ್ಲಿಯೇ ಮಾತನಾಡಿ.

**ಶ್ರೀ ಲಹರ್ ಸಿಂಗ್ ಸಿರೋೕಯಾ:–** ಮಾನ್ಯ ಸಭಾಪತಿಯವರೇ, I am quoting the Budget speech of Karnataka State, not the budget speech of Kerala or Rajasthan. ಮಾನ್ಯ ವಿರೋಧ ಪಕ್ಷದ ನಾಯಕರು ಸದನದಲ್ಲಿಲ್ಲ. ಆದರೆ, ಮಾನ್ಯ ಕೆ.ಗೋವಿಂದರಾಜುರವರು ಇದ್ದಾರೆ ಸಾಕು. The relevant portion of Budget Speech for the year 1995-96 reads as follows:

*"12. The Central Government has been unilaterally increasing the rate of interest on various central loans to the State. For instance, the rate of interest of central plan assistance and additional assistance for externally aided projects has gone up from 12 to 13%. The interest rate*

*on market borrowing of the State Government has also gone up from 12 .5 percent in 1994-95 to 14% during 1995-96. Further, the direct borrowings from financial institutions like LIC has also attracted increased rate of interest of 13%. Thus, there is an overall trend of increase in the interest rates on loans meant for funding the state plan. The average cost of debt to the state is continuously increasing. The ever increasing interest burden on state's loans is putting strain on the resources of most of the states. There is need for a national debate on the appropriate interest rate structure for such loans advanced by the Centre for financing the State's development plans."*

I am quoting the points from the Karnataka State Budget for the year 1995-96 presented by Sri. Siddaramaiah.

**ಸಭಾಪತಿಯವರು:-** ಮಾನ್ಯ ಸದಸ್ಯರೆ, ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರ ಸರ್ಕಾರದ ಬಗ್ಗೆ ಮಾತನಾಡುವುದು ಬಿಟ್ಟು. ತಾವು ಈ ಬಜೆಟ್ ಮೇಲೆ ಮಾತನಾಡಿ.

**ಶ್ರೀ ಅರುಣ್ ಶಹಾಪೂರ:-** ಮಾನ್ಯ ಸಭಾಪತಿಯವರೇ, ಅದರ ಮೇಲೆ ಮಾತನಾಡಲು ಬರುತ್ತಿದ್ದಾರೆ.

**ಶ್ರೀ ಲಹರ್ ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೇ, ನನಗೆ ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರ ಮೇಲೆ ಬಹಳ ಗೌರವ ಇದೆ. He is from a socialist background. He is also instrumental to me to become a member of this House. I have great respect for him. Hence, I am quoting his Budget speech.

**ಶ್ರೀ ಕೆ.ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಲಹರ್ ಸಿಂಗ್ ಸಿರೋಯಾರವರು ಬಜೆಟ್ ಮೇಲೆ ಮಾತನಾಡುವುದನ್ನು ಬಿಟ್ಟು, ಕಥೆಯನ್ನು ಹೇಳುತ್ತಿದ್ದಾರೆ.

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ಲಹರ್ ಸಿಂಗ್ ಸಿರೋಯಾರವರು ಇರುವ ವಿಚಾರವನ್ನು ಹೇಳುತ್ತಿದ್ದಾರೆ.

**ಸಭಾಪತಿಯವರು:–** ಮಾನ್ಯ ಕೆ.ಗೋವಿಂದರಾಜ್‌ರವರೆ ಸುಮ್ಮನೆ ಕುಳಿತುಕೊಂಡು ಮಾನ್ಯ ಲಹರ್ ಸಿಂಗ್ ಸಿರೋಯಾರವರು ಮಾತನಾಡುವುದನ್ನು ಕೇಳಿಸಿಕೊಳ್ಳಿ.

**ಶ್ರೀ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, "ಇದ್ದದ್ದು ಇದ್ದಂತೆ ಹೇಳಿದರೆ, ಎದ್ದು ಬಂದು ಎದೆಗೆ ಒದ್ದಂತೆ" ಎನ್ನುವ ಹಾಗೆ ಏತಕ್ಕೆ ಮಾತನಾಡುತ್ತಾರೆ. ಮಾನ್ಯ ಲಹರ್ ಸಿಂಗ್ ಸಿರೋಯಾರವರು ಎಲ್ಲಾ ಮಾಹಿತಿಯನ್ನಿಟ್ಟುಕೊಂಡು ಕೋಟ್ ಮಾಡಿ ಹೇಳುತ್ತಿದ್ದಾರೆ. ಸುಳ್ಳು ಹೇಳುತ್ತಿಲ್ಲ.

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ, ಮತ್ತೊಂದು ನೋವಿನ ಸಂಗತಿಯೇನೆಂದರೆ, ನಾನು ಪ್ರಾಥಮಿಕ ಶಾಲೆಯಿಂದ ಪ್ರೌಢ ಶಾಲೆಗೆ ಬಂದಾಗ ನನ್ನ ತಂದೆಯು ಒಬ್ಬ ಸರ್ಕಾರಿ ಕಛೇರಿಯಲ್ಲಿ ಗುಮಾಸ್ತನಾಗಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದರು. ನಾನು ಆಗ ಪ್ರೌಢ ಶಾಲಾ ವಿದ್ಯಾಭ್ಯಾಸಕ್ಕಾಗಿ ರಾಜಸ್ತಾನದಲ್ಲಿರುವ ಹಾಸ್ಟೆಲ್‌ನಲ್ಲಿ ಸೇರಿಕೊಂಡೇನು. ಆ ಹಾಸ್ಟೆಲ್‌ನಲ್ಲಿ ಎಲ್ಲಾ ಜಾತಿಯವರು ಇದ್ದರು. ನನಗೆ ಮುಸ್ಲಿಂಮರು, ದಲಿತರು ಹಾಗೂ ಇತರೆ ಜಾತಿಯ ಸ್ನೇಹಿತರಿದ್ದರು. ನಾವೆಲ್ಲರೂ ಒಂದೇ ಕಡೆ ಇರುತ್ತಿದ್ದೇವು, ಒಂದೇ ತಟ್ಟೆಯಲ್ಲಿ ಊಟ ಮಾಡುತ್ತಿದ್ದೇವು. ನಮ್ಮಲ್ಲಿ ಜಾತಿ ಎಂಬ ಭೇದ–ಭಾವ ಇರಲಿಲ್ಲ.

**ಸಭಾಪತಿಯವರು:–** ಮಾನ್ಯ ಲಹರ್ ಸಿಂಗ್ ಸಿರೋಯಾರವರೆ, ರಾಜಸ್ಥಾನದಲ್ಲಿ ಓದಿಕೊಂಡು ಬಂದು ಈ ರಾಜ್ಯದಲ್ಲಿ ಎರಡು ಬಾರಿ ಎಂ.ಎಲ್.ಸಿ. ಆಗಿ ಆಯ್ಕೆಯಾಗಿದ್ದೀರಿ ಎಂದರೆ, ನೀವೇ ಬುದ್ಧಿವಂತರಾಗಿದ್ದೀರಿ.

**ಶ್ರೀ ಲಹರ್ ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೇ, ಆಗಲೇ ನಾನು ಕೆಲವು ವಿಚಾರದ ಬಗ್ಗೆ ಮಾತನಾಡುವಾಗ ತಾವು ಈ ಸದನದಲ್ಲಿರಲಿಲ್ಲ. I am here because of the great people of this state of Karnataka. ಕರ್ನಾಟಕದ ಜನತೆಯು ನನ್ನನ್ನು ಇಲ್ಲಿಗೆ ಆಯ್ಕೆ ಮಾಡಿ ಕಳುಹಿಸಿಕೊಟ್ಟಿದ್ದು, ಆ ಜನರ ಪರ ಮಾತನಾಡುವುದು ನಮ್ಮ ಕರ್ತವ್ಯವಾಗಿದೆ. ವಿದ್ಯಾಭ್ಯಾಸದ ಮೇಲೆ ಚರ್ಚೆ ಮಾಡುವ ಮೊದಲು ಒಂದೇ ಹಾಸ್ಟೆಲ್‌ನಲ್ಲಿ ಆ ಮಕ್ಕಳು ಬೆಳೆಯುವಂತೆ ಮಾಡಬೇಕು. We may provide free education to SC students, half fee concession for OBC and full fee payment from Creamy layer students. Irrespective of fee concession, ಅವರು ಒಂದೇ ಹಾಸ್ಟೆಲ್‌ನಲ್ಲಿದ್ದು ವಿದ್ಯಾಭ್ಯಾಸವನ್ನು ಕಲಿತರೆ ಬಹಳ ಅನುಕೂಲವಾಗುತ್ತದೆ. ಏಕೆಂದರೆ, ಅಲ್ಲಿ ಜಾತಿಗಳ ಪ್ರಶ್ನೆ ಬರುವುದಿಲ್ಲ.

**Mr. CHAIRMAN:-** Hon'ble member has raised a good point.

**ಶ್ರೀ ಲಹರ್ ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೇ, 1965ನೇ ಸಾಲಿನಲ್ಲಿ ನಾನು ಕರ್ನಾಟಕ ರಾಜ್ಯಕ್ಕೆ ಬಂದೆ. I lived in Thigalarpet. ಆಗ ನನಗೆ ಗೌಡರು ಎಂದರೇನು, ಒಕ್ಕಲಿಗ ಎಂದರೇನು ಎಂಬುದು ಗೊತ್ತೇ ಆಗುತ್ತಿರಲಿಲ್ಲ. ನಾವು ಎಲ್ಲಾ ಜಾತಿಯವರೊಂದಿಗೆ ಇದ್ದೆವು. ಆದರೆ, ಈ ಬಜೆಟ್‌ನಲ್ಲಿ ಜಾತಿಗಳ ಹೆಸರನ್ನು ನೋಡಿ ನನಗೆ ಆಶ್ಚರ್ಯವಾಗಿತ್ತು. Hon'ble Chief Minister Basavaraj Bommai also presented State Budget this year. He is also from socialistic background. ಮಾದರಿಯಾಗಿ ಏನಾದರೂ ಬದಲಾವಣೆ ತರುತ್ತಾರೆ ಎಂದು ಭಾವಿಸಿದ್ದೇನು. ಆದರೆ, ಅಂತಹ ಬದಲಾವಣೆಯನ್ನು ಅವರು ಮಾಡಿರಲಿಲ್ಲ. ಅದು ಸಹ caste basis ಮೇಲೆ ಇದೆ. ಆಗಾಗಿ ಅದನ್ನು ಅಂತಿಮಗೊಳಿಸಬೇಕಲ್ಲವೇ? ಎಲ್ಲದಕ್ಕೂ board ಮಾಡಲಾಗಿದೆ. Professionals ಯಾರು ಸಲಹೆ ಕೊಟ್ಟಿದ್ದಾರೆ, ಅವರಿಂದ ಸಲಹೆ ಪಡೆದುಕೊಂಡು ಕೊನೆ ಮಾಡಬೇಕು. ಈ ಸರ್ಕಾರ ಆ ಸರ್ಕಾರವೆಂಬ ಪ್ರಶ್ನೆಯಲ್ಲಿ ಎಲ್ಲಿಯಾದರೂ ಸಹ ಈ ವ್ಯವಸ್ಥೆ ಕೊನೆ ಆಗಬೇಕಲ್ಲವೇ. ಮಾನ್ಯ ದೇವರಾಜ್ ಅರಸುರವರು ಕೇವಲ ಎರಡು ಜಾತಿಗಳಿವೆ ಎಂದಿದ್ದರು. ಅವರ ಎಲ್ಲಾ ಯೋಜನೆಗಳು ಬಡವರ ಪರವಾಗಿಯೇ ಇತ್ತು. ಮಾಜಿ ಪ್ರಧಾನ ಮಂತ್ರಿಗಳಾದ ಡಾ.

ಮನಮೋಹನ್ ಸಿಂಗ್‌ರವರು ಹೇಳಿದ ಮಾತನ್ನು ನಾನು ಸಹ quote ಮಾಡಲು ಬಯಸುತ್ತೇನೆ. I have a great respect for him. He was an honest Prime Minister and Finance Minister. Former PM Manmohan Singh had said that the first right over the resources of the Country is of Muslims. I still cannot understand that, how a Prime Minister can make such statement? ಅವರು ಬಡವರು ಇರಬಹುದು. ಯಾರು ಬಡವರು ಇರುತ್ತಾರೆ ಅವರಿಗೆ resources ನ್ನು ಹಂಚೋಣ. ಇದನ್ನು ನಾನು ಒಪ್ಪುತ್ತೇನೆ. ಇದನ್ನು ಅವರು ಮಾತನಾಡಬೇಕೇ? ಇದನ್ನು ಯಾರು objection ಮಾಡಲಿಲ್ಲ. I do not want to debate to lower level. As, I have to many things to speak on the lacunas of the budget. **(ಗೊಂದಲ)** ಯಾರು ಬಡವರಿದ್ದಾರೆ, ಅವರಿಗೆ ನೀಡೋಣ. ಜಾತಿಗೆ schemes ಮಾಡುವುದು ಹಾಗೂ ಬೋರ್ಡ್ ಮಾಡುವುದು... ಜಾತಿ ಮೇಲೆ ಬಜೆಟ್ ನೀಡಿದರೆ, ಅದನ್ನು ಕೊನೆಗೊಳಿಸುವವರು ಯಾರು? ಈ ಮನೆಯು ಚಿಂತಕರ ಚಾವಡಿಯಾಗಿದ್ದು, ಸಂಪೂರ್ಣವಾಗಿ ಜಾತಿ ಮೇಲೆ ಚರ್ಚೆ ಮಾಡಿ, ಅದಕ್ಕೆ ಅಂತಿಮ ಕಾಣಿಸಲಿಲ್ಲವೆಂದರೆ, ಎಲ್ಲಿಯವರೆಗೆ ಮುಟ್ಟಬಹುದು? ಅಧಿಕಾರಿಗಳ ಮೇಲೆ ಸಹ ಕ್ರಮ ತೆಗೆದುಕೊಳ್ಳಬೇಕು. ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಕಾಗೋಡು ತಿಮ್ಮಪ್ಪನವರು ಈ ಸದನದಲ್ಲಿ ಕುಳಿತುಕೊಂಡು ಮಾತನಾಡುವ ಸಂದರ್ಭದಲ್ಲಿ ನಾನು ಏನಾದರೂ ತಪ್ಪಿತಸ್ಥ ಅಧಿಕಾರಿ ಮೇಲೆ ಕ್ರಮ ತೆಗೆದುಕೊಂಡರೆ, ಅವರು ಜಾತಿಯನ್ನಾಧಾರವಾಗಿಟ್ಟುಕೊಂಡು ಬೇರೆ ಬೇರೆ ಕಾರಣಕ್ಕೆ ಕರೆ ಮಾಡುತ್ತಾರೆ ಎಂದು ಹೇಳಿದ್ದರು. ನಾನು ಬೆಳಗಾವಿ ಅಧಿವೇಶನದಲ್ಲಿ ಒಂದು ಸಂಗತಿ ಕುರಿತು ನಾಚಿಕೆ ಹಾಗೂ ದುಂಖವನ್ನು ಸಹ ಪಡುತ್ತೇನೆ. Corrupt officer ಮೇಲೆ ಚರ್ಚೆ ಮಾಡಿದಾಗ, I do not want to name anyone. ನಮ್ಮ ಪಾರ್ಟಿಯ ಒಬ್ಬ ಹಿರಿಯ ಸದಸ್ಯರು ಬಂದು, ಮಾನ್ಯ ಸದಸ್ಯರಾದ ಡಾ॥ ವೈ.ಎ.ನಾರಾಯಣಸ್ವಾಮಿಯವರು ಇದ್ದು, ಅದರ ಮೇಲೆ ಚರ್ಚೆ ಮಾಡಬೇಡಿ ಎಂದು ಹೇಳಿದರು. ನಾನು ಏತಕ್ಕೆ ಉದಾಹರಣೆಯನ್ನು ನೀಡುತ್ತಿದ್ದೇನೆ ಎಂದರೆ, ಒಂದು ಉದಾಹರಣೆಯಿಂದ politics ಕಾಣಿಸಬಹುದೆಂದು ಹೇಳುತ್ತಿದ್ದೇನೆ. ಹಾಗಾಗಿ ಅದಕ್ಕೆ ಎಲ್ಲರೂ ಕಾರಣಕರ್ತರು.

(421) 17.03.2022/1.40/ಎಸ್‌ಕೆ-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**SRI LAHAR SINGH SIROYA (contd.):-**

All the parties are responsible for defending the corrupt officials based on Caste. ಅಭಿವೃದ್ಧಿಗಾಗಿ ಹಣವನ್ನು ಕೊಡುತ್ತೇವೆ. ಅಭಿವೃದ್ಧಿಗೆ ಕೊಟ್ಟಂತಹ ಹಣ ಶೇಕಡ ೯೦ ರಷ್ಟು ಭಾಗ ಹಗರಣವಾಗುತ್ತದೆ. ಅಧಿಕಾರಿಗಳಿಗೆ ಯಾರೂ ಕೇಳುವವರು, ಹೇಳುವವರಿಲ್ಲದಂತಾಗಿದೆ. ಯಾರು ಯಾರನ್ನೋ chairman ಆಗಿ ಮಾಡಿಬಿಡುತ್ತೇವೆ. ಮಾನ್ಯ ಸಭಾಪತಿಯವರೇ, ತಾವು ಕೂಡ ಒಂದು ಭರವಸೆ ಸಮಿತಿಗೆ ಆಧ್ಯಕ್ಷರಾಗಿದ್ದಿರಿ. ಸಮಿತಿ ಸಭೆಯಲ್ಲಿ ಇಂತಹ ಹಗರಣಗಳ ಬಗ್ಗೆ ಸಾಕಷ್ಟು ಬಾರಿ ಚರ್ಚೆಯಾಗಿದೆ. ಭ್ರಷ್ಟಾಚಾರ ಮಾಡಿದ ಅಧಿಕಾರಿಗಳ ಮೇಲೆ ಪ್ರಕರಣ ದಾಖಲಾಗಿದ್ದರೂ ಕೂಡ, ಅವು ಇಪ್ಪತ್ತು ವರ್ಷಗಳಿಂದ ಇತ್ಯರ್ಥವಾಗದೇ ಹಾಗೆಯೇ ಉಳಿದುಕೊಂಡಿದೆ. ಆ ಕೇಸ್‌ಗಳು ಏನಾಗಿದೆ ಎಂದು ಕೇಳಿದರೆ, ಲೋಕಾಯುಕ್ತಕ್ಕೆ ಕಳುಹಿಸಿದ್ದೇವೆ ಮತ್ತು ಬೇರೆ ಕಡೆ ಕಳುಹಿಸಿದ್ದೇವೆ; ಅದರ ಬಗ್ಗೆ ವಿಚಾರಣೆ ಮಾಡುತ್ತಿದ್ದೇವೆಂದು ಹೇಳುತ್ತಾರೆ. ಅವುಗಳನ್ನು ಇತ್ಯರ್ಥ ಮಾಡಿ, ತೀರ್ಮಾನಕ್ಕೆ ಬಂದಿಲ್ಲ. ಪ್ರತಿಯೊಂದು corporate sectors ಸಹ... ಎಲ್ಲವು ಸಹ ನಷ್ಟದಲ್ಲೇ ಇವೆ. ಆ ತರಹವಾಗಿರುವುದರಿಂದ ಲೂಟಿ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತಿದ್ದೇವೆಯೇ ವಿನಃ ಬಡವರು ಮಾತ್ರ ಉದ್ಧಾರವಾಗುವುದಿಲ್ಲ. ಇದು ಜಾತಿ ಆಧಾರದ ಮೇಲೆ ಮಾಡಿರುವಂತಹ ಬಜೆಟ್. ಇದು ಕೊನೆಯಾಗಬೇಕೆಂದರೆ, ಮಾನ್ಯ ಸದಸ್ಯರೆಲ್ಲರೂ ಕೂಡ ಇದಕ್ಕೆ ಕೈಜೋಡಿಸಬೇಕು. ಅದಕ್ಕೆ 110 ವರ್ಷವಾದರೂ.... We must give a new dimension to the nation. ಹೇಗೆ ಕೆಲಸ ಮಾಡಬೇಕು?

ಮಾನ್ಯ ಸಭಾಪತಿಯವರೇ, ಕರೋನಾ ಸಮಯದಲ್ಲಿ, covid management ಕುರಿತು ಈ ಬಜೆಟ್‌ಗೆ ನೂರಕ್ಕೆ ನೂರರಷ್ಟು ನಾನು ಬೆಂಬಲವನ್ನು ಸೂಚಿಸುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಯವರು ಬಹಳ ತಾಳ್ಮೆ, ಮತ್ತು ಚಿಂತನೆಯಿಂದ, fiscal discipline ನ್ನು plan ಮಾಡಿ, ಚರ್ಚೆ ಮಾಡಿ ಒಳ್ಳೆಯ ಬಜೆಟ್‌ನ್ನು ಕೊಟ್ಟಿದ್ದಾರೆ. He has given the reasonable budget in the current situation. ಬೇರೆ ಬೇರೆ steps ನ್ನು ತೆಗೆದುಕೊಳ್ಳಬಹುದಾಗಿತ್ತು. ಅವರಿಗೆ ಆ ಧೈರ್ಯ

ಬಂದಿಲ್ಲ, as it is compulsory in Government. The structure of the House is like that. No government or Chief Minister can work with his will power. ಮಾನ್ಯ ಸಭಾಪತಿಯವರೇ, ಅದು ಕರೋನಾ ಮ್ಯಾನೇಜ್‌ಮೆಂಟ್ ಹೇಗೆ? ಈ ಜಮ್ಮು-ಕಾಶ್ಮೀರ ಎಂದರೆ ಜಮ್ಮು-ಕಾಶ್ಮೀರವೇ ಅಲ್ಲ. I am not talking about the Kashmir Files. I am talking about the Budget proposals for Jammu and Kashmir. ಬಜೆಟ್ ಕೊಟ್ಟಿದ್ದೀರಾ. ಆ ಬಜೆಟ್‌ನಲ್ಲಿ ಕೋವಿಡ್ ಮ್ಯಾನೇಜ್‌ಮೆಂಟ್‌ಗೆ ಸಂಬಂಧಪಟ್ಟಂತೆ ಕೊಟ್ಟಿರುವ ಅನುದಾನದ ಒಂದೇ ಒಂದು ಪ್ಯಾರಾವನ್ನು ಓದುತ್ತೇನೆ. ಆದರೆ ಇದರಲ್ಲಿ ನನ್ನ ರಾಜಕೀಯವಲ್ಲ. ಕೋವಿಡ್-19 ಗೆ ಸಂಬಂಧಪಟ್ಟಂತೆ ಓದುತ್ತೇನೆ. The relevant portion of Budget proposals for Jammu and Kashmir for 2022-23 reads as follows;

*"The education department has been allocated the highest Rs 11,832.77 crore followed by Rs.10,831.18 crore for the home department (for Jammu & Kashmir)*

*COVID Management- Jammu and Kashmir has emerged as a model for the entire country in the management of the COVID 19 pandemic. With 100% vaccination of the eligible population, Union Territory of J&K has crossed the 20 million vaccine dose mark. The vaccination in respect of 15-17 age group has been started all across the Union Territory and 100% target will be achieved soon. Two 500 bedded hospitals were setup by DRDO in Jammu and Srinagar to fight covid-19 pandemic.*

*Government of India and Government of Jammu and Kashmir are taking serious efforts to accelerate the pace of development in the Union Territory of Jammu and Kashmir."*

ನನಗೆ ಬಹಳ ನೋವಾಗಿ, ಅಳು ಬರುತ್ತದೆ. ಜಮ್ಮು-ಕಾಶ್ಮೀರದಲ್ಲಿ ಇಪ್ಪತ್ತು ವರ್ಷಗಳಾದರೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಯಾವುದೇ ಸವಲತ್ತನ್ನು ನೀಡಿಲ್ಲ. ಈ ನಮ್ಮ ಸರ್ಕಾರ ಬಂದ ಮೇಲೆ reservation ಕೊಟ್ಟಿದ್ದಾರೆ. ಆಗ ಅವರು ನೋವುಪಟ್ಟಿದ್ದರು, ಈಗ ಅವರು ನೋವು ಪಡಬೇಕಾಗಿಲ್ಲ.

ಮಾನ್ಯ ಸಭಾಪತಿಯವರೇ, ನೋವು ಪಡಬೇಕಾಗಿರುವ ವಿಚಾರವನ್ನು ಹೇಳುತ್ತೇನೆ. ನಿನ್ನೆ ನಮ್ಮ ಸ್ನೇಹಿತರು ಒಬ್ಬ ಹೆಣ್ಣುಮಗಳ ಬಗ್ಗೆ ಹೇಳಿದರು. ಆ ಹೆಣ್ಣುಮಗಳ ಹೆಸರನ್ನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಅವರ ಹೆಸರನ್ನು ಹೇಳಿದರೆ, ನನ್ನ ಸಮಯವನ್ನು ಅವರು ತೆಗೆದುಕೊಂಡು ಮಾತನಾಡುವುದಕ್ಕೆ ನಿಂತುಬಿಡುತ್ತಾರೆ. ಆಗ ನಾನು yield ಆಗಬೇಕಾಗುತ್ತದೆ. ಮಾನ್ಯ ಸಭಾಪತಿಯವರೇ, ತಾವು ಒಂದು ವಿಚಾರವನ್ನು ಕೇಳಿದರೆ, ನಾವೆಲ್ಲರೂ ನೋವು ಪಡಬೇಕಾಗುತ್ತದೆ. ಮೂವತ್ತು ವರ್ಷಗಳ ಮುಂಚೆ ನೋವು ಪಟ್ಟಿದ್ದರೆ, ಸಮಾಜಕ್ಕೆ ಈ ತರಹ ಪರಿಸ್ಥಿತಿ ಬರುತ್ತಿರಲಿಲ್ಲ. ಆ ಹೆಣ್ಣು ಮಕ್ಕಳಿಗೆ ಆ ತರಹ ಆಗುತ್ತಿರಲಿಲ್ಲ. ಶ್ರೀಮತಿ ಸ್ನೇಹಲತಾ ರೆಡ್ಡಿ ಎನ್ನುವವರ ಬಗ್ಗೆ ಜ್ಞಾಪಕವಿದೆಯಾ ಅಥವಾ ಮರೆತಿದ್ದೀರಾ? ಶ್ರೀಮತಿ ಸ್ನೇಹಲತಾ ರೆಡ್ಡಿ ಎಂಬುವವಳನ್ನು Emergency ನಲ್ಲಿ ಎರಡು ವರ್ಷಗಳ ಕಾಲ ಜೈಲಿನಲ್ಲಿ ಹಾಕಿ, ಅವರನ್ನು torcher ಮಾಡಿ, she died in the jail. ಅದನ್ನು ಕೇಳಿದರೆ, ನೋವು ಪಡುವಂತಾಗುತ್ತದೆ. ಇಂತಹ ಎಷ್ಟು ಹೆಣ್ಣುಮಕ್ಕಳಿಗೆ ಏನೇನೆಲ್ಲಾ ನೋವು ಕೊಟ್ಟಿದ್ದಾರೆಂಬ ಬಗ್ಗೆ ನಾನು ಇಲ್ಲಿ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ನಮ್ಮ ಕರ್ನಾಟಕ ರಾಜ್ಯದ ನಟಿಯಾಗಿರುವಂತಹ ಶ್ರೀಮತಿ ಸ್ನೇಹಲತಾ ರೆಡ್ಡಿ ಎನ್ನುವವರು ಯಾವ ಮಟ್ಟಕ್ಕೆ acting ಮಾಡಿದರು ಎಂಬ ಬಗ್ಗೆ ಹೇಳಬೇಕಾಗಿಲ್ಲ. ಅದಕ್ಕಿಂತ ಜಾಸ್ತಿ ತಮಗೆಲ್ಲರಿಗೂ ಗೊತ್ತಿದೆ. ಆಗ ನೋವು ಪಡಬೇಕಾಗಿರುವಂತಥದ್ದರ ಬಗ್ಗೆ ನಾನು ಹೇಳುತ್ತಿದ್ದೇನೆಯೇ ಹೊರತು, ಈಗ ನೋವು ಪಡೆಬೇಕಾಗಿರುವುದು ಯಾವುದೂ ಇಲ್ಲ. ಮಾನ್ಯ ಸಭಾಪತಿಯವರೇ, I will come to education.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ತಮಗೆ ಮಾತನಾಡಲು ಎಷ್ಟು ಸಮಯಾವಕಾಶ ಬೇಕಾಗುತ್ತದೆ.

**ಶ್ರೀ ಲಹರ್ ಸಿಂಗ್ ಸಿರೋಯಾ:–** ನನ್ನದು ಆ ಪಕ್ಷ ಅಲ್ಲ, ಈ ಪಕ್ಷ ಅಲ್ಲ. ನನ್ನದು ಮಧ್ಯದಲ್ಲಿರುವ ಪಕ್ಷ.

**ಸಭಾಪತಿಯವರು:–** ಅದು ಹೇಗೆ ಆಗುತ್ತದೆ?

**ಶ್ರೀ ಆರ್.ಬಿ. ತಿಮ್ಮಾಪೂರ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸದಸ್ಯರು ಆ ಕಡೆಯೂ ಇಲ್ಲ, ಈ ಕಡೆಯೂ ಇಲ್ಲ. ಅವರು ಒಂದೇ ಕಡೆ ಎಂದು ಹೇಳುವಂತಹದ್ದು.

**ಶ್ರೀ ಲಹರ್ ಸಿಂಗ್ ಸಿರೋಯಾ:–** ಶಿಕ್ಷಕರ ಕ್ಷೇತ್ರ ಮತ್ತು ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಸದಸ್ಯರು ಆಯ್ಕೆಯಾಗಿ ಬಂದಿದ್ದಾರೆ. ನನ್ನನ್ನು ಕಾಂಗ್ರೆಸ್ ಮತ್ತು ಬಿ.ಜೆ.ಪಿ. ಇವೆರಡು ಪಕ್ಷಗಳು ಆಶೀರ್ವಾದ ಮಾಡಿ, ಇಲ್ಲಿಗೆ ಆಯ್ಕೆ ಮಾಡಿ ಕಳುಹಿಸಿದ್ದಾರೆ. ನಾನು ಆ ಪಕ್ಷದ ಮತ್ತು ಈ ಪಕ್ಷದ ಪರವಾಗಿ ಮಾತನಾಡುವುದಿಲ್ಲ. ಈಗ ಸದನದಲ್ಲಿ ಮಾನ್ಯ ಶ್ರೀಕಂಠೇಗೌಡರು ಇಲ್ಲ. ಮಾನ್ಯ ಮರಿತಿಬ್ಬೇಗೌಡರು, ಡಾ. ವೈ.ಎ. ನಾರಾಯಣಸ್ವಾಮಿಯವರು ಶಿಕ್ಷಕರ ಸಂಬಳದ ಬಗ್ಗೆ ಮಾತನಾಡುತ್ತಾರೆ. ಹೌದು, ನಿಜವಾಗಲೂ ಕೂಡ ಮಾತನಾಡಬೇಕಾಗಿದೆ. ಏಕೆಂದರೆ, ನಾವು ಶಾಲೆಯಲ್ಲಿದ್ದಾಗ, ಶಿಕ್ಷಕರನ್ನು ದೇವರ ಸಮಾನವಾಗಿ ಕಾಣುತ್ತಿದ್ದೆವು. ಶಿಕ್ಷಕರ ಮುಂದೆ ನಾವು ಹೊರಗಡೆ ಎಲ್ಲಿಯೂ ಒಂದು ವೇಳೆ ಹೊರಗಡೆ ಆಕಸ್ಮಿಕವಾಗಿ ಕಾಣಿಸಿಕೊಳ್ಳುತ್ತಿರಲಿಲ್ಲ. ಅವರನ್ನು ನೋಡಿದರೆ ಕೂಡಲೇ ಮನೆಗೆ ಓಡಿ ಹೋಗುತ್ತಿದ್ದೆವು. ನಾವೆಲ್ಲ ಸರ್ಕಾರಿ ಶಾಲೆಯಲ್ಲಿ ಓದಿದವರು. ನಮ್ಮ ಮಕ್ಕಳಿಗೆ ವರ್ಷಕ್ಕೆ ಶಾಲೆಯ ಶುಲ್ಕ ಆರೂಕಾಲು ರೂಪಾಯಿಗಳು ಇರುತ್ತಿತ್ತು. My son did his schooling in Bangalore. ಐದು ರೂಪಾಯಿ ಶುಲ್ಕವಾದರೆ, ಉಳಿದ ಒಂದ್ಕಾಲು ರೂಪಾಯಿಗಳು ಇನ್ನಿತರ ಶುಲ್ಕ ಇರುತ್ತಿತ್ತು. ಆಗ ಇಷ್ಟೊಂದು fees ಇರಲಿಲ್ಲ. ಸರ್ಕಾರಿ ಶಾಲೆಯಲ್ಲಿ ಗುಣಮಟ್ಟ ಶಿಕ್ಷಣ ಕೊಡುವುದು ನಮ್ಮೆಲ್ಲರ ಕರ್ತವ್ಯವಲ್ಲವೇ? ಶಿಕ್ಷಕರ ಕೇತ್ರದಿಂದ ಆಯ್ಕೆಯಾಗಿ ಬಂದಂತಹ ಪ್ರತಿನಿಧಿಗಳಾದ ತಾವು ಶಿಕ್ಷಕರ ಬಗ್ಗೆ ಹೋರಾಟ ಮಾಡುತ್ತೀರಿ.

ಅಧಿಕಾರಿಗಳು ಮತ್ತು ರಾಜಕಾರಣಿಗಳು ಶಾಮೀಲಾಗಿ ಏನು ಮಾಡುತ್ತಾರೆಂದರೆ, infrastructure ಗೆ ಹಣವನ್ನು allot ಮಾಡಿ, ಅದರ ಕೆಲಸವನ್ನು ಬೇಗ ಬೇಗ ಮುಗಿಸಿ ಎಂದು

ಹೇಳುತ್ತಾರೆ. ಏಕೆಂದರೆ, ಕಟ್ಟಡಗಳ ಕಾಮಗಾರಿಯನ್ನು ಮುಗಿಸಿದರೆ, ಅದರಲ್ಲಿ ಹಣವನ್ನು ಲಪಾಟಾಯಿಸಬಹುದು. ಪಾತ್ರೆಗಳ ಖರೀದಿಯಲ್ಲಿ ಹಣವನ್ನು ಲಪಾಟಾಯಿಸಬಹುದು. ಹಣವನ್ನು ಬೇಗ allot ಮಾಡಿ ಎಂದು ಹೇಳುತ್ತಾರೆ. ಆದರೆ, ಗುಣಮಟ್ಟದ ಶಿಕ್ಷಣದ ಬಗ್ಗೆ ಯಾರೂ ಕೂಡ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಇದರ ಬಗ್ಗೆ ನೆನಪಿಸಿಕೊಂಡರೆ ತುಂಬಾ ನೋವಾಗುತ್ತದೆ. I am telling this with deep anxious. I am not blaming any political party. ಮಾನ್ಯ ಸಭಾಪತಿಯವರೇ, ತಾವು ಮನಸ್ಸು ಮಾಡಬೇಕು. ಇದರ ಬಗ್ಗೆ ಒಂದು ಚರ್ಚೆಯಾಗಬೇಕು. ಸರ್ಕಾರಿ ಶಾಲೆಗಳನ್ನು ಹೇಗೆ ಅಭಿವೃದ್ಧಿ ಮಾಡಬೇಕು ಎಂಬ ಬಗ್ಗೆ ಚಿಂತನೆ ನಡೆಯಬೇಕು. ಇಲ್ಲವಾದರೂ ಬಡವರು ಎಲ್ಲಿಗೆ ಹೋಗಬೇಕು? So, that we can provide quality of education for the children of the State. ನಾನು ಕೂಡ ಶಾಮೀಲಾಗಿದ್ದೇನೆ. ಏಕೆಂದರೆ, ನಿಮ್ಮಗಳ ಕೃಪೆಯಿಂದ ಬಂದಿದ್ದೇನೆ. What about the poor people? ದೇವರ ಆಣೆಗೂ ನನಗೆ ತುಂಬಾ ನೋವಾಗುತ್ತದೆ. ಏಕೆಂದರೆ ನಾವು ಬಹಳ ವರ್ಷಗಳಿಂದ ಇದ್ದೇವೆ. My father was earning Rs.105 per month. ಆ ಸಂದರ್ಭದಲ್ಲಿ ಶಿಕ್ಷಣ ಇಷ್ಟು expensive ಆಗಿದ್ದರೆ, ನಮ್ಮ ಶಿಕ್ಷಣ ಹೇಗೆ ನಡೆಯುತ್ತಿತ್ತು? ಆದರೆ ಈಗ ಬಡವರ ಪರಿಸ್ಥಿತಿ ಏನು? ಮಾನ್ಯ ಸಲೀಂರವರೇ ತಾವು ಇದನ್ನು ಗಮನಬೇಕು. ನಾನು ಒಂದು ಉದಾಹರಣೆಯನ್ನು ಹೇಳಬಯಸುತ್ತೇನೆ. ಶ್ರೀ ಎ.ಪಿ.ಜೆ. ಅಬ್ದುಲ್ ಕಲಾಂರವರು ಶಿಕ್ಷಣ ಪಡೆದಿರುವುದರಿಂದ ನಮ್ಮ ದೇಶದ ಬಡ ಜನರಿಗೆ ಶಿಕ್ಷಣಕ್ಕೆ ಹೆಚ್ಚಿನ ಕೊಡುಗೆಯನ್ನು ನೀಡಿದ್ದಾರೆ. ಅದೇ ರೀತಿ ಹೆಣ್ಣು ಮಕ್ಕಳಿಗೆ.... Dr. APJ Abdul Kalam a single person took nation to great heights. ಡಾ॥ ಎ.ಪಿ.ಜೆ. ಅಬ್ದುಲ್ ಕಲಾಂರವರಂತಹವರು ನೂರು ಜನ ಇದ್ದಿದ್ದರೆ, ಈ ದೇಶ ಏನಾಗುತ್ತಿತ್ತು? ಇದರಲ್ಲಿ talent ಒಂದೇ ಅಲ್ಲ, ಅವರು ಅಪ್ರತಿಮ ದೇಶಭಕ್ತರಾಗಿದ್ದರು. I have lived in Bamboo Bazaar. I know the integrity of Muslims. ಅವರು ಎಷ್ಟೊಂದು ಕಷ್ಟಪಟ್ಟು ಶ್ರಮವನ್ನು ವಹಿಸುತ್ತಾರೆ. ಕೆಲವು ಪ್ರಸಂಗಗಳಿಂದ ಹಾಳಾಗುತ್ತದೆ. ಈ ರೀತಿ ಪ್ರತಿನಿಧಿಗಳು ಹಣವನ್ನು ಲೂಟಿ ಮಾಡಿದರೆ ಹೇಗೆ. ಅದು ಎಲ್ಲರಿಗೂ ತಿಳಿದಿರುವ ವಿಷಯ. ಮುಸ್ಲಿಂ ಬಡವರ ಜೊತೆ ನಾವಿದ್ದೇವೆ. ಶ್ರೀಮಂತ ಮುಸ್ಲಿಂ ಬಗ್ಗೆ ಮಾತನಾಡುತ್ತೀರಿ. ಶ್ರೀ ಸಲೀಂ ಆಹಮದ್ ಅವರಿಗೆ ಇಲ್ಲಿಯ ತನಕ ಏತಕ್ಕೆ

ಅವಕಾಶ ಸಿಕ್ಕಿಲ್ಲ? ಮುಸ್ಲಿಂ ವಿದ್ಯಾರ್ಥಿನಿ ಬುಶ್ರಾ ಮತಿನ್ ಎಂಬ ಹೆಸರು ಗೊತ್ತಿದೆಯಾ. ಅವರಿಗೆ ವಿ.ಟಿ.ಯು.ನಲ್ಲಿ ಹದಿನಾರು ಚಿನ್ನದ ಪದಕ ಸಿಕ್ಕಿದೆ. Bushra Mateen is a 22-year-old civil engineering graduate from SLN College of Engineering, Raichur. She holds a bachelor's degree in Civil Engineering; she has won 16 gold medals, winning first place in 16 different categories. She has secured 16 gold medals, the highest won by a student from Visvesvaraya Technological University.

(ಮುಂದು)

(422) 17-03-2022 1.50 ಟಿಸಿಹೆಚ್-ಕೆಎಸ್ (ಸಭಾಪತಿಯರವರ ಉಪಸ್ಥಿತಿ)

**(ಗೊಂದಲ)**

**ಶ್ರೀ ಲಹರ್ ಸಿಂಗ್ ಸಿರೋಯಾ (ಮುಂದು)**:-

ಡಾಕ್ಟರ್ ಸಾಹೇಬರೇ, don't distract me. Already I am poor in speaking.

**ಸಭಾಪತಿಯವರು:-** ಮಾನ್ಯ ಲಹರ್ ಸಿಂಗ್ ಸಿರೋಯಾ ರವರು ಮಾತನಾಡಲು ಬಿಡಿ.

**ಶ್ರೀ ಲಹರ್ ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೇ, she has secured 16 gold medals the highest won by a student from Visveswaraya Technological University – at the university's 21st Annual Convocation program which was held on March 10th at the campus of Jnanasangama. Bushra Mateen, with 16 gold medals, would have created a new record, which is the first record in the history of VTU. The Chancellor of the University has said that to date the record for the maximum number of gold medals won was 13. ಇಂತಹ ಮುಸ್ಲಿಂ ಹೆಣ್ಣು ಮಕ್ಕಳು ಕೂಡ ಇದ್ದಾರೆ.

**ಶ್ರೀ ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಲಹರ್ ಸಿಂಗ್ ಸಿರೋಯಾ ರವರೇ, ತಾವು ಏಕೆ ಅಲ್ಲಿ ಕುಳಿತುಕೊಂಡಿದ್ದೀರಿ, ನೀವು ಈ ಕಡೆ ಬನ್ನಿ. 'ಸಬ್ ಕಾ ಸಾಥ್, ಸಬ್ ಕಾ ವಿಕಾಸ್' ಎಂದು ಹೇಳುತ್ತಿದ್ದಾರಲ್ಲಾ. ಎಲ್ಲಿದೆ ವಿಶ್ವಾಸ, ಎಲ್ಲಿದೆ ವಿಕಾಸ? ಅನ್ಯಾಯ ಮಾಡುತ್ತಿದ್ದಾರೆ. ನೀವು ಅಲ್ಲಿ ಇರಬೇಡಿ, ಇಲ್ಲಿಗೆ ಬನ್ನಿ.

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಕಾಂಗ್ರೆಸ್‌ನವರ ಪಾರ್ಟಿಯಿಂದ ಲಹರ್ ಸಿಂಗ್ ಸಿರೋಯಾ ರವರಿಗೆ ಒಳ್ಳೆಯದಾಗಿಲ್ಲ. **(ಗೊಂದಲ)** ಇತ್ತೀಚೆಗೆ ನಾವು ತಲಾಕ್ ಪದ್ದತಿಯನ್ನು ಜಾರಿಗೆ ತಂದೆವು. ಆ ಮುಸ್ಲಿಂ ಹೆಣ್ಣು ಮಕ್ಕಳು ಕಣ್ಣೀರು ಹಾಕುತ್ತಿದ್ದರು. ನಾವು ಆ ತಲಾಕ್ ಪದ್ಧತಿಯನ್ನು ನಿಲ್ಲಿಸಿದ್ದೇವೆ. ಮಾನ್ಯ ಸಲೀಂ ಅಹಮದ್ ರವರು ಬೇಕಾದರೆ ಇಲ್ಲಿಗೆ ಬರಬೇಕು.

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ, ಅಕ್ಕ ಒಂದು ನಿಮಿಷ. ನಾನು ಅವರಿಗೆ ಯೀಲ್ಡ್ ಆಗಿದ್ದೇನೆ. Because, I have got respects for Sri Saleem Ahmed. ಅದಕ್ಕೆ ಮಾನ್ಯ ಸಲೀಂ ಅಹಮದ್ ರವರು ಮಾತನಾಡಿದರು. He has given a good point. ನಾನು ಖಂಡಿತವಾಗಿಯು ಬರುತ್ತೇನೆ. I will tell you.

**(ಗೊಂದಲ)**

**ಸಭಾಪತಿಯವರು:–** ಯಾವ ಸದಸ್ಯರು ಮಾತನಾಡಬೇಡಿ, ಮಾನ್ಯ ಲಹರ್ ಸಿಂಗ್ ಸಿರೋಯಾ ರವರು ಮಾತನಾಡುತ್ತಾರೆ.

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ, ಏಕೆಂದರೆ ಕಪಿಲ್ ಸಿಬಲ್ ಅವರ ಒಂದು ಸ್ಟೇಟ್‌ಮೆಂಟ್ ಟ್ವಿಟರ್‌ನಲ್ಲಿ ಬಂದಿದೆ. ಅದನ್ನು ತಾವು ನೋಡಬಹುದು. It reads:

"Leadership in cuckoo land.... I want a Sab ki Congress.
Some want a Ghar ki Congress."

ಸಬ್ ಕಿ ಕಾಂಗ್ರೆಸ್ ಆದಲ್ಲಿ ಖಂಡಿತವಾಗಿಯೂ ನಾನು ಅವರ ಹತ್ತಿರ ಹೋಗುತ್ತೇನೆ. ಅದನ್ನು ಅವರು ಏಕೆ ಹೇಳಿದ್ದಾರೆಂದರೆ. . .

**ಶ್ರೀ ಆರ್.ಬಿ.ತಿಮ್ಮಾಪೂರ (ವಿಧಾನ ಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಲಹರ್ ಸಿಂಗ್ ಸಿರೋಯಾ ರವರೇ, ಮಾನ್ಯ ಎಲ್.ಕೆ.ಅಡ್ವಾಣಿಯವರು ಏನು ಹೇಳಿದ್ದಾರೋ ಅದನ್ನೂ ಹೇಳಬಿಡಿ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಲಹರ್ ಸಿಂಗ್ ಸಿರೋಯಾರವರನ್ನು ಮಾತನಾಡಲು ಬಿಡಿ.

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ, ಮಾನ್ಯ ಕಪಿಲ್ ಸಿಬಲ್ ರವರು ಟ್ವಿಟರ್‌ನಲ್ಲಿ "Leadership in cuckoo land…." ಎಂದು ಹೇಳಿದ್ದಾರೆ. I don't know what is the meaning of 'cuckoo land'. ಮುಂದುವರೆದು ಅವರು ಏನು ಹೇಳಿದ್ದಾರೆಂದರೆ: "I want a Sab ki Congress. Some want a Ghar ki Congress." ಈ ರೀತಿ ಕಪಿಲ್ ಸಿಬಲ್‌ರವರು ಮೊನ್ನೆ ಟ್ವೀಟ್ ಮಾಡಿದ್ದಾರೆ.

**(ಗೊಂದಲ)**

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ಮಾನ್ಯ ಲಹರ್ ಸಿಂಗ್ ಸಿರೋಯಾ ರವರೇ, ಮಾನ್ಯ ಎಲ್.ಕೆ.ಅಡ್ವಾಣಿಯವರು ಏನು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ, ಅದನ್ನೂ ಹೇಳಿ.

**(ಈ ಹಂತದಲ್ಲಿ ಆಡಳಿತ ಪಕ್ಷದವರು ಹಾಗೂ ವಿರೋಧ ಪಕ್ಷದವರು ಒಮ್ಮೆಲೆ ಎದ್ದು ನಿಂತು ಮಾತನಾಡಿದರು)**

**ಸಭಾಪತಿಯವರು:–** ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಲಹರ್ ಸಿಂಗ್ ಸಿರೋಯಾ ರವರಿಗೆ ಮಾತನಾಡಲು ಬಿಡಿ.

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ಪಾಪ, ಮಾನ್ಯ ಮುರಳಿ ಮನೋಹರ್ ಜೋಷಿ ಹಾಗೂ ಶ್ರೀ ಎಲ್.ಕೆ.ಅಡ್ವಾಣಿಯವರ ಬಗ್ಗೆ ಯೋಚನೆ ಮಾಡುತ್ತಿಲ್ಲ. ಇವತ್ತಿನ ದಿವಸ ಅವರನ್ನೆಲ್ಲಾ ಮನೆಯಲ್ಲೇ ಕೂರಿಸಿದ್ದಾರೆ. ಇವತ್ತು ಬಿಜೆಪಿ ಪಕ್ಷ ಹಿರಿಯರುಗಳಿಗೆ ಗೌರವ ಕೊಡುತ್ತಿಲ್ಲ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಲಹರ್ ಸಿಂಗ್ ಸಿರೋಯಾ ರವರನ್ನು ಮಾತನಾಡಲು ಬಿಡಿ.

**ಶ್ರೀ ಲಹರ್ ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೇ, ಇದು ಸನ್ಮಾನ್ಯ ಹೆಚ್.ಡಿ.ದೇವೇಗೌಡರು ಇಲ್ಲಿ ಎಷ್ಟು ವರ್ಷಕ್ಕೆ ವಿರೋಧ ಪಕ್ಷದ ನಾಯಕರಾಗಿದ್ದರೆಂದು ಯಾರಿಗಾದರೂ ಗೊತ್ತಿದೆಯೇ? ಅವರು ಸುಮಾರು 39 ವರ್ಷಕ್ಕೆ he had become Leader of Opposition in Karnataka. ಆಮೇಲೆ Sri Ramakrishna Hegde became Finance Minister at the age of 42. ಅದೇ ರೀತಿ ಬೇರೆಯವರರು ಕೂಡ they came to such positions in forties and fifties. ಸನ್ಮಾನ್ಯ ಎಲ್.ಕೆ.ಅಡ್ವಾನಿಯವರಿಗೆ 75 ರಿಂದ 80 ವರ್ಷವಾಗಿದ್ದರೂ ಕೂಡ they don't want to promote youngsters. ಹಾಗಾಗಿ ನನಗೆ ಹೊಟ್ಟೆಹುರಿಯಿತು, ನೋವಾಯಿತು ಅದಕ್ಕೆ ನಾನು ವಾದ ಮಾಡಿದ್ದು. ಇವತ್ತಿನ ದಿವಸ youngsters ಬರದಿದ್ದರೆ ಕಾಂಗ್ರೆಸ್ ಉದ್ಧಾರವಾಗುವುದಿಲ್ಲ. ನಾವೂ ಕೂಡ ಉದ್ಧಾರವಾಗುವುದಿಲ್ಲ. Aam Aadmi Party ಯವರು ಬರುತ್ತಾರೆ ಅಷ್ಟೆ. **(ಗೊಂದಲ)** ಮಗನಿಗೆ ಮಳೆ ತರುವುದಕ್ಕೆ ತಂದೆ ಕೆಲಸ ಮಾಡುತ್ತಾರೆ. ಆ ರೀತಿ ಅವರೇ ರಾಜ್ಯಭಾರ ಮಾಡುವುದಕ್ಕೆ ಬರುವುದಿಲ್ಲ. ಇದನ್ನು ಅರ್ಥ ಮಾಡಿಕೊಳ್ಳಿ. ನಮ್ಮೆಲ್ಲರಿಗೂ ಕರ್ನಾಟಕದಲ್ಲಿ ಈ ಗತಿ ಏಕೆ ಬಂದಿದೆಯೆಂದರೆ ನಾವು ಯಾರೂ ಹಳೆಯ leadership ನ್ನು ಬಿಟ್ಟುಕೊಡುತ್ತಿಲ್ಲ. ಬಿಜೆಪಿ, ಜೆಡಿಎಸ್ (ಜಾ) ಮತ್ತು ಕಾಂಗ್ರೆಸ್ ಇರಬಹುದು. ಈ ಪಕ್ಷಗಳಿಗೆ youngsters ಬರಬೇಕು. ಇಲ್ಲದಿದ್ದರೆ ದೆಹಲಿಯಲ್ಲಿ Aam Aadmi Party ಯವರು ಬಂದು ಗೆದ್ದಂತೆ, ನಮ್ಮ ಕರ್ನಾಟಕದಲ್ಲೂ ಕೂಡ ಈ ಮೂರು ನ್ಯಾಷನಲ್ ಪಾರ್ಟಿಗಳನ್ನು ಮುಗಿಸುತ್ತಾರೆ. We have to bring new leadership in the State. For this, ನಾನು ಇದನ್ನು ಓಪನ್ ಆಗಿ ಹೇಳುತ್ತಿದ್ದೇನೆ. ಏಕೆಂದರೆ ನಾನು ಮಧ್ಯೆ ಪಕ್ಷ. ಈ ಪಕ್ಷ ಇಲ್ಲದಿದ್ದರೆ, ಆ ಪಕ್ಷ. ಆಮೇಲೆ ಬಜೆಟ್‌ಮೇಲೆ ಮಾತನಾಡುವಾಗ ಸನ್ಮಾನ್ಯ ನರೇಂದ್ರ ಮೋದಿಯವರ ಹೆಸರನ್ನು ಪದೇ ಪದೇ ಹೇಳಿದರು. ನಾವೆಲ್ಲಾ ಸನ್ಮಾನ್ಯ ಮೋದಿಯವರ ಅಭಿಮಾನಿ ಎಂದು ತಿಳಿದುಕೊಳ್ಳುತ್ತಾರೆ.

**ಸಭಾಪತಿಯವರು:-** ಮಾನ್ಯ ಲಹರ್ ಸಿಂಗ್ ಸಿರೋಯಾ ರವರೇ, 5 ನಿಮಿಷಗಳಲ್ಲಿ ಮಾತನಾಡಿ ಮುಗಿಸಿ.

**ಶ್ರೀ ಲಹರ್ ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೇ, ನಾವೆಲ್ಲಾ ಭಾರತೀಯರು ಆ ಒಂದು ಸಂಗತಿಗೆ ನೋವು ಪಡಬೇಕಿದೆ. ಆ ಹಿನ್ನೆಲೆಯಲ್ಲಿ ನಾನು ಒಂದು ಲೆಟರ್ ಓದುತ್ತೇನೆ. ಅದಕ್ಕೆ

ತಾವು ದಯವಿಟ್ಟು ಅವಕಾಶ ಕೊಡಬೇಕು. ಸನ್ಮಾನ್ಯ ನರೇಂದ್ರ ಮೋದಿಯವರ ಬಗ್ಗೆ ಕೆಲವು ಸದಸ್ಯರು ಹಾಗೂ ಮಾನ್ಯ ವಿರೋಧ ಪಕ್ಷದ ನಾಯಕರು ಸನ್ಮಾನ್ಯ ನರೇಂದ್ರ ಮೋದಿಯವರ ಬಗ್ಗೆ ಏಕೆ ಏನೇನೊ ಮಾತನಾಡಿದರು. ನಾನು ಸನ್ಮಾನ್ಯ ನರೇಂದ್ರ ಮೋದಿಯವರ ಬಗ್ಗೆ ಹೊಗಳುವುದಿಲ್ಲ. Modi is doing his job. ನಮ್ಮ ಮಾನ್ಯ ಪ್ರಧಾನ ಮಂತ್ರಿಯವರು ಕೆಲಸ ಮಾಡಿದಂತೆ ನಾವು ಕೂಡ ಮಾಡುತ್ತಿದ್ದೇವೆ. ನಾನು ಅವರಿಗೆ ಬಹಳ ಪ್ರಶಂಸೆ ಮಾಡಬೇಕಾಗಿಲ್ಲ. ನಾನು ಕನ್ನಡ ಮಾತನಾಡಿ ಅಭ್ಯಾಸವಿಲ್ಲ. ನಾನು ಕನ್ನಡದಲ್ಲಿ ಮಾತನಾಡದಿದ್ದರೆ ಮಾನ್ಯ ಎಸ್.ರವಿಯವರು ಕೋಪ ಮಾಡಿಕೊಳ್ಳುತ್ತಾರೆ. ಅವರು ನಿಮಗಿಂತ ನಮಗೆ ಹತ್ತಿರದ ಸ್ನೇಹಿತರಿದ್ದಾರೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಲಹರ್ ಸಿಂಗ್ ಸಿರೋಯಾ ರವರೇ, ತಾವು ಈ ಕಡೆ ನೋಡಿಕೊಂಡು ಮಾತನಾಡಿ. ಅವರನ್ನು ಮಾತನಾಡಲು ಬಿಡಿ.

**(ಗೊಂದಲ)**

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ, I have got one more letter. This was written . . . . ಅದು ನಮ್ಮ ಯಾರ ಲೆಟರ್ ಅಲ್ಲ. It reads thus:

"Dear Dr. Mitra,
I have your letter of the 18th December.
I share your concern. I too am unhappy that neither you who were born in Kashmir, nor I whose forefathers came from there can own a small piece of land or home. But at the moment, the matter is not in my hands ….."

ಯಾರು ಹೇಳುತ್ತಾರೆಂದು ತಾವೆಲ್ಲಾ ಆಶ್ಚರ್ಯಪಡುತ್ತೀರಿ. ಈಗ ನಾವೆಲ್ಲಾ ಹುಷಾರಾಗಬೇಕು. It further reads thus:

"…. and the Indian press, ….."

ಮಾನ್ಯ ಸಭಾಪತಿಯವರ ಮೂಲಕ ನಾನು ಎಲ್ಲರಿಗೂ ತಿಳಿಸುತ್ತಿದ್ದೇನೆ, ತಾವೆಲ್ಲರೂ ಕೇಳಿಸಿಕೊಳ್ಳಿ. It further reads thus:

" … Indian press, along with its foreign counterpart are so busy depicting me as authoritarian that that makes it all the more difficult to do necessary things.

I shall enquire into your niece's case. …."

Niece ಎಂದರೆ ಅವರ ಅಕ್ಕನ ಮಗಳು. It further reads thus:

"... But the Kashmiri Pandits and the Buddhiss in Ladakh are being very unfairly treated and discriminated against."

ಶ್ರೀಮತಿ ಇಂದಿರಾಗಾಂಧಿಯವರು ಸನ್ಮಾನ್ಯ ಪ್ರಧಾನ ಮಂತ್ರಿಗಳಾಗಿದ್ದರು. I have got lot of respects on her. ಮಾನ್ಯ ವಾಜಪೇಯಿಯವರು ಅವರನ್ನು 'ದುರ್ಗಾ' ಎಂದು ಕರೆದಿದ್ದಾರೆ. ನಾನು ಕೂಡ ಅವರಿಗೆ ಗೌರವದಿಂದ ಕೈಮುಗಿಯುತ್ತೇನೆ. I respect that lady. Smt. Indira Gandhi had become so helpless. ಇವತ್ತಿನ ದಿವಸ ಅದು ರೆಕಾರ್ಡ್‌ನಲ್ಲಿದೆ, ತಾವು ಬೇಕಾದರೆ ನೋಡಬಹುದು. She wrote a letter and she was very unhappy and helpless, because the Indian media and their foreign counterparts had projected her as authoritarian. ಆದರೆ ಅವರು ನಮ್ಮಿಂದ ಎಲೆಕ್ಟ್ ಆಗಿಲ್ಲ. ಅವರು ಬಡಜನರಿಂದ ಎಲೆಕ್ಟ್ ಆಗಿದ್ದರು. ನಮ್ಮ ಬಿಜೆಪಿ ಸರ್ಕಾರ ಕೂಡ ಬಡಜನರಿಂದ ಅಧಿಕಾರಕ್ಕೆ ಬಂದಿದೆ. ಆದರೆ ನಮ್ಮವರು ಸರಿಯಾಗಿ ಕೆಲಸ ಮಾಡಿಲ್ಲ. ಯಾರ್ಯಾರ ಜೊತೆ ಸೇರಿಕೊಂಡು ಏನೇನು ಮಾಡಿದ್ದಾರೆಂದು ನಮಗೆ ಗೊತ್ತಿದೆ. ಅದಕ್ಕಾಗಿ ನಾನು ಮನವಿ ಮಾಡುವುದೇನೆಂದರೆ, ವಿಧಾನ ಪರಿಷತ್ತು ಒಂದು 'ಚಿಂತಕರ ಚಾವಡಿ'. ಸನ್ಮಾನ್ಯ ನರೇಂದ್ರ ಮೋದಿಯವರ ಬಗ್ಗೆ ಪದೇ ಪದೇ ಏಕೆ ಆ ರೀತಿ ಹೇಳುತ್ತಾರೆ? He is doing a good job. ನೀವು ಕೂಡ ಯೋಚನೆ ಮಾಡಿ. ಇಲ್ಲವೆಂದರೆ ತಿದ್ದುಪಡಿ ಮಾಡಬೇಕೆಂದರೆ ಚರ್ಚೆ ಮಾಡಿ ಕಳುಹಿಸೋಣ. ಸುಮ್ಮನೆ ಏಕೆ ಆ ರೀತಿ ಮಾತನಾಡುತ್ತೀರಿ? That's why I tell you, even Smt. Indira Gandhi ...

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾನು ತಮ್ಮ ಹತ್ತಿರ ಒಂದು ರೂಲಿಂಗ್ ಕೇಳಬೇಕಾಗಿದೆ, ಅದಕ್ಕಾಗಿ ಮಾನ್ಯ ಲಹರ್ ಸಿಂಗ್ ಸಿರೋಯಾ ರವರೇ ತಾವು ಯೀಲ್ಡ್ ಆಗುತ್ತೀರಾ?

**ಶ್ರೀ ಲಹರ್ ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೇ, I am quoting. ಏನೇನು quote ಮಾಡಿದ್ದಾರೆ. ಯಾವ್ಯಾವ ಸಂಧರ್ಭವನ್ನು quote ಮಾಡಿದ್ದಾರೆ . . . .

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಲಹರ್ ಸಿಂಗ್ ಸಿರೋಯಾ ರವರೇ, ತಾವು ಯೀಲ್ಡ್ ಆಗುತ್ತೀರಾ ಅಥವಾ ಇಲ್ಲವೇ?

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ, ಇಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನಿನ್ನೆ ದಿವಸ ಮಾನ್ಯ ಶಾಸಕರಾದ ಶ್ರೀ ಆರ್.ಬಿ.ತಿಮ್ಮಾಪೂರ ರವರು ಚರ್ಚೆಯಲ್ಲಿ ಮಾತನಾಡುವಾಗ ತಮ್ಮ ಪೀಠದಲ್ಲಿ ತಾವು ಇರಲಿಲ್ಲ. ತಾವು ಯಾರನ್ನು ಕೂರಿಸಿದ್ದರೋ ಅವರು ಇದ್ದರು. ಅವರು ಒಂದು ಹೇಳಿಕೆ ಕೊಟ್ಟರು. ಮಾನ್ಯ ಸಭಾನಾಯಕರು ನಿಂತುಕೊಂಡಾಗ, ಯಾವುದೇ ಶಾಸಕರು ಯೀಲ್ಡ್ ಆಗದಿದ್ದರೂ ಕೂಡ ಅವರು ಮಾತನಾಡಬಹುದು ಎಂದು ಹೇಳಿದರು. ಆದ್ದರಿಂದ ದಯವಿಟ್ಟು ತಾವು ಒಂದು ರೂಲಿಂಗ್ ಕೊಡಿ. ಮಾನ್ಯ ಸಭಾನಾಯಕರು ಅಥವಾ ವಿರೋಧ ಪಕ್ಷದ ನಾಯಕರು ಯಾರಾದರೂ ಮಾತನಾಡುವಾಗ ಯೀಲ್ಡ್ ಆಗದಿದ್ದರೂ ಕೂಡ ಮಾತನಾಡಬಹುದೇ, ಇಲ್ಲವೇ ಎಂದು ಒಂದು ರೂಲಿಂಗ್ ಕೊಟ್ಟುಬಿಡಿ.

**(ಗೊಂದಲ)**

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. . .

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾನ್ಯ ಲಹರ್ ಸಿಂಗ್ ಸಿರೋಯಾರವರೇ, ನಾನು ನಿಮ್ಮ ಬಗ್ಗೆ ಏನೂ ಮಾತನಾಡುತ್ತಿಲ್ಲ.

**ಸಭಾಪತಿಯವರು:–** ಅದು ನಮ್ಮ ನಿಯಮದಲ್ಲಿ ಇಲ್ಲ. ಪ್ರಶ್ನೆ ಬಂದಿರುವುದು ಏನೆಂದರೆ, ಮಾನ್ಯ ಮುಖ್ಯಮಂತ್ರಿಯವರು, ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು. ಇದು ರೂಲ್ ಇದೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು. ರೂಲ್ ಇದೆ ಸರಿ.

**ಸಭಾಪತಿಯವರು:–** ಮಾನ್ಯ ಬಿ.ಕೆ.ಹರಿಪ್ರಸಾದ್ ರವರೇ, ಅಂದರೆ ಅದು ರೂಲ್ ಅಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರು ಹಾಗೂ ಮಾನ್ಯ ಮುಖ್ಯಮಂತ್ರಿಗಳು ನಿಂತುಕೊಂಡಾಗ ನಾವು ಯಾವಾಗ ಬೇಕಾದರೂ ಯೀಲ್ಡ್ ಆಗುತ್ತೇವೆ. ಮಾನ್ಯ ಸಭಾನಾಯಕರು

ಹಾಗೂ ಮಾನ್ಯ ವಿರೋಧ ಪಕ್ಷದ ನಾಯಕರು ಸಮಾನವಾಗಿರತಕ್ಕಂಥವರು. ಅವರಿಗೆ ಮಾತ್ರ ಯೀಲ್ಡ್ ಆಗಬೇಕು, ನನಗೆ ಯೀಲ್ಡ್ ಆಗಬಾರದು ಎನ್ನುವ ಪ್ರಶ್ನೆ ಇಲ್ಲ.

**(ಮುಂದು)**

**(423)17.3.2022/2.00/ಎಂ.ಎಂ-ಜಿ.ಆರ್**

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಿ.ಕೆ. ಹರಿಪ್ರಸಾದ್ (ಮುಂದು):-**

ಏಕೆಂದರೆ by force ಅವರನ್ನು ಕೂರಿಸುತ್ತಿದ್ದರು. ನಾನು ಈಗ ಮಾತನಾಡಿದರೆ ಜಾತಿ ಬಗ್ಗೆ ಬರುತ್ತದೆ.

**ಶ್ರೀ ಲಹರ್ ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ಮುಗಿಸಿ ಬಿಡುತ್ತೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಈಗ ಅವರು ಮಾತನಾಡುತ್ತಿದ್ದಾರೆ ನಾನು ಯೀಲ್ಡ್ ಆಗಿಲ್ಲ, ಯೀಲ್ಡ್ ಆದಾಗ ಅವಕಾಶ ಕೊಡುತ್ತೀರಾ?

**ಸಭಾಪತಿಯವರು:-** ಇಲ್ಲ.

**ಶ್ರೀ ಬಿ.ಕೆ. ಹರಿಪ್ರಸಾದ್:-** ನಿನ್ನೆ ಅವರು ಯೀಲ್ಡ್ ಆಗುವುದಿಲ್ಲ ಎಂದರು. ಸಭಾನಾಯಕರು ಹೇಗೆ ಮಾತನಾಡಿದರು? ಎಲ್ಲವನ್ನೂ ಕಡತದಿಂದ ತೆಗೆಯಬೇಕಾಗುತ್ತದೆ.

**ಸಭಾಪತಿಯವರು:-** ಯೀಲ್ಡ್ ಆದಾಗ ಮಾತ್ರ ಮಾತನಾಡಬೇಕು.

**ಶ್ರೀ ಬಿ.ಕೆ. ಹರಿಪ್ರಸಾದ್:-** ಅವರು ಯೀಲ್ಡ್ ಆಗಿರಲಿಲ್ಲ. ಆದ್ದರಿಂದ ತಮ್ಮ ರೂಲಿಂಗ್ ಬಹಳ ಸ್ಪಷ್ಟವಾಗಿರಲಿ.

**ಸಭಾಪತಿಯವರು:-** ಸರಿ ಅವರು ಯೀಲ್ಡ್ ಆದಾಗ ಮಾತನಾಡಬೇಕು.

**ಡಾ: ವೈ.ಎ. ನಾರಾಯಣಸ್ವಾಮಿ(ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಸಭಾನಾಯಕರು ಸರ್ಕಾರದ ಪರ ಕ್ಲಾರಿಫಿಕೇಷನ್ ಕೊಡುವುದಕ್ಕೆ ಅವಕಾಶ ಇದೆ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಇಲ್ಲ.

**ಡಾ: ವೈ.ಎ. ನಾರಾಯಣಸ್ವಾಮಿ:–** ಅವಕಾಶ ಇದೆ. ಸರ್ಕಾರ ಡಿಫೆಂಡ್ ಮಾಡಿಕೊಳ್ಳಬೇಕಾದರೆ

(**ಗೊಂದಲ**)

**ಶ್ರೀ ಬಿ.ಕೆ. ಹರಿಪ್ರಸಾದ್:–** ಅದು ಅವರು ಯೀಲ್ಡ್ ಆದಾಗ ಮಾತ್ರ. (**ಗೊಂದಲ**)

**ಸಭಾಪತಿಯವರು:–** ಅವರನ್ನು ಮಾತನಾಡುವುದಕ್ಕೆ ಬಿಡಿ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನಾನು ಅವರ ಬಗ್ಗೆ ಏನೂ ಮಾತನಾಡುತ್ತಿಲ್ಲ. ಅವರು ಮಾತನಾಡಲಿ. ಅವರು ಹೇಳಿದ್ದಕ್ಕೆಲ್ಲಾ ನಾನು ಉತ್ತರ ಕೊಡಬಹುದು. ಆದರೆ ನಾನು ಉತ್ತರ ಕೊಡುವುದಕ್ಕೆ ಹೋಗುವುದಿಲ್ಲ. ಕಾಶ್ಮೀರದಲ್ಲಿ ಏನಾಗಿದೆ ಅದರ ಬಗ್ಗೆ ಇಲ್ಲಿ ಚರ್ಚೆಯೂ ಆಗಬೇಕಾಗುತ್ತದೆ. ಅಷ್ಟು ಸುಲಭ ಅಲ್ಲ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, (**ಗೊಂದಲ**) ಚರ್ಚೆಯಾಗಲಿ

**ಶ್ರೀ ಬಿ.ಕೆ. ಹರಿಪ್ರಸಾದ್:–** ತಾವೂ ಸಹಿ ಮಾಡಿ, ನಾನೂ ಸಹಿ ಮಾಡುತ್ತೇನೆ.

**ಶ್ರೀಮತಿ ಭಾರತಿ ಶೆಟ್ಟಿ:–** ಚರ್ಚೆಯಾಗಲಿ. ನಾನೂ ಸಹಿ ಮಾಡುತ್ತೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಆದ್ದರಿಂದ ದಯವಿಟ್ಟು ರೂಲಿಂಗ್ ಮಾತನಾಡುತ್ತಿದ್ದವರು ಯೀಲ್ಡ್ ಆಗಲಿಲ್ಲ ಎಂದರೆ ಸಭಾನಾಯಕರಾಗಲೀ, ವಿರೋಧಪಕ್ಷದವರಾಗಲೀ ಮಾತನಾಡುವ ಹಾಗಿಲ್ಲ ಎಂದು ರೂಲಿಂಗ್ ಕೊಡಿ. ನಾನು ಅದಕ್ಕೆ ಒಪ್ಪಿಕೊಳ್ಳುತ್ತೇನೆ.

**ಸಭಾಪತಿಯವರು:–** ಇಲ್ಲ, ನೋಡಿ ನಮ್ಮಲ್ಲಿ ಒಂದು ಪದ್ಧತಿ . . .

**ಶ್ರೀ ಬಿ.ಕೆ. ಹರಿಪ್ರಸಾದ್:–** ಈಗ ತಾವೇ ಸ್ಪಷ್ಟವಾಗಿ ಹೇಳಿದಿರಿ, ಯೀಲ್ಡ್ ಆಗಿಲ್ಲ ಎಂದರೆ ಮಾತನಾಡುವ ಹಾಗಿಲ್ಲ.

**ಸಭಾಪತಿಯವರು:–** ಸಭಾನಾಯಕರು ಮತ್ತು ವಿರೋಧಪಕ್ಷದ ನಾಯಕರು, ಮುಖ್ಯಮಂತ್ರಿಗಳು ಮಾತನಾಡಬೇಕಾದಾಗ ಉಳಿದ ಸದಸ್ಯರುಗಳು ಯೀಲ್ಡ್ ಆಗಬೇಕು.

**ಶ್ರೀ ಬಿ.ಕೆ. ಹರಿಪ್ರಸಾದ್:–** ಹಾಗಾದರೆ ಈಗ ಯೀಲ್ಡ್ ಆಗುವುದಕ್ಕೆ ಹೇಳಿ.

**ಸಭಾಪತಿಯವರು:–** ಮಾನ್ಯ ಲಹರ್‌ಸಿಂಗ್‌ರವರೇ, ಕುಳಿತುಕೊಳ್ಳಿ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಅವರ ಭಾಷಣದಲ್ಲಿ ಕಾಶ್ಮೀರದಲ್ಲಿ ಏನೇನು ನಡೆಯುತ್ತಿದೆ, ಇವರಿಗೆ ಕಣ್ಣಲ್ಲಿ ನೀರು ಬರಲಿಲ್ಲ ಎಂದು ಪೇಪರ್‌ನಲ್ಲಿ ಮತ್ತು ದೂರದರ್ಶನದಲ್ಲಿ ನೋಡುತ್ತಿದ್ದೆ. ಇವರಿಗೆ ಬೇಸರವಾಗಿರುವುದು ಮಹಿಳೆಯರ ಬಗ್ಗೆ. ಜಮ್ಮು ಹತ್ತಿರ "ಕಟುವಾ" ಎಂಬ ಪ್ರದೇಶವಿದೆ. ಅಲ್ಲಿ **'ಅಸೀಫಾ'** ಎನ್ನುವ ಏಳು ವರ್ಷದ ಮಗುವಿನ ಮೇಲೆ ಎಂಟು ಜನ ರೇಪ್ ಮಾಡುತ್ತಾರೆ. ಆಗ ಅವರ ಮೇಲೆ ಕೇಸ್ ಹಾಕಿದರೆ ಅವರ ವಿರುದ್ಧ ಕೇಸ್ ಹಾಕಬಾರದೆಂದು ಭಾರತೀಯ ಜನತಾ ಪಾರ್ಟಿಯ ಒಬ್ಬ ಮಂತ್ರಿ ನಿಲ್ಲುತ್ತಾರೆ. ಅವರಿಗೆ ಕಣ್ಣಿಲ್ಲವೇ? 18–21 ವರ್ಷ ಮೇಲಿದ್ದವರು ಏನು ಬೇಕಾದರೂ ಮಾಡಲಿ ನಾನು ಒಪ್ಪಿಕೊಳ್ಳುತ್ತೇನೆ. ಅದು ಅಸಿಫಾ ಎಂಬ ಏಳು ವರ್ಷದ ಮಗು. ಇವತ್ತಿಗೂ ಆ ಕೇಸ್ settle ಆಗಿಲ್ಲ. ಇಂದಿರಾಗಾಂಧಿ, ಲಡಾಕ್ ಎಂದು ಮಾತನಾಡುತ್ತಾರಲ್ಲಾ, ಮಾನ್ಯ ಸುಧಾಕರ್ ಎನ್ನುವ ಸಚಿವರು ಬುದ್ಧಿಸ್ಟ್ ಬಗ್ಗೆ ಏನು ಮಾತನಾಡಿದ್ದಾರೆ? ಇವತ್ತು ಸಹ ಅವರು ಬುದ್ಧಿಸ್ಟ್ ಬಗ್ಗೆ ಮಾತನಾಡಿದ್ದಾರೆ. ಇದು ಮೊಸಳೆ ಕಣ್ಣೀರು ಎಂದು ಹೇಳುವುದು ಬೇಕಾಗಿಲ್ಲ. ಇತಿಹಾಸವನ್ನು ತಿದ್ದುವ ಕೆಲಸ ಮಾಡಬಾರದು. ಇವರು ಹೇಳಿದ್ದಕ್ಕೆ ನಾನು ಎಲ್ಲದಕ್ಕೂ ಸಹ ಉತ್ತರ ಕೊಡುತ್ತೇನೆ. ಕಾಶ್ಮೀರದಲ್ಲಿ ಸಂವಿಧಾನದ ಅನುಚ್ಛೇದ 370 ಹೋದ ತಕ್ಷಣ ಉಗ್ರವಾದಿ, terrorism ನಿಂತುಹೋಗುತ್ತದೆ ಎಂದು ಹೇಳಿ, ಒಂದು ದಿವಸಕ್ಕೆ ceasefire ಎಷ್ಟಾಗುತ್ತಿದೆ ಗೊತ್ತೇ? ಲಡಾಕ್ ಬಗ್ಗೆ ಮಾತನಾಡುತ್ತಾರಲ್ಲಾ, ಚೈನಾದವರು 1800 ಚದರ ಅಡಿಯನ್ನು ತೆಗೆದುಕೊಂಡಿದ್ದಾರೆ. ಯಾರ ಕಣ್ಣಲ್ಲಿ ನೀರು ಹೋಗುತ್ತಿದೆ?

(ಗೊಂದಲ)

**ಶ್ರೀಮತಿ ಭಾರತಿ ಶೆಟ್ಟಿ:-** ಯಾವುದರ ಬಗ್ಗೆ ಮಾತನಾಡಿದ್ದೇವೆ (**ಗೊಂದಲ**) ನಮಗೆ ಎಲ್ಲಾ ಗೊತ್ತಿದೆ. (**ಗೊಂದಲ**)

**ಶ್ರೀ ಬಿ.ಕೆ. ಹರಿಪ್ರಸಾದ್:-** ನಾನು ಹೇಳಿದ್ದು ಅಲ್ಲ (**ಗೊಂದಲ**)

**ಡಾ: ವೈ.ಎ. ನಾರಾಯಣಸ್ವಾಮಿ:-** ಮಾಜಿ ಪ್ರಧಾನ ಮಂತ್ರಿ(**ಗೊಂದಲ**)

**ಶ್ರೀಮತಿ ಭಾರತಿ ಶೆಟ್ಟಿ:** ಬಿ.ಜೆ.ಪಿ., ಅವರ (**ಗೊಂದಲ**) ಶಿಕ್ಷೆಯಾಗಬೇಕು, ಕಾಶ್ಮೀರಕ್ಕೆ ಹೋಲಿಕೆ ಮಾಡಬೇಡಿ. (ಗೊಂದಲ)

(**ಗೊಂದಲ**)

**ಶ್ರೀಮತಿ ಭಾರತಿ ಶೆಟ್ಟಿ:-** ಅವರು ಯೀಲ್ಡ್ ಆಗಿಲ್ಲ. ಕಾಶ್ಮೀರ ಈ ಸ್ಥಿತಿಗೆ ಬರುವುದಕ್ಕೆ ಕಾರಣವೇ ಕಾಂಗ್ರೆಸ್ ಪಕ್ಷ.

(**ಗೊಂದಲ**)

**ಶ್ರೀ ಬಿ.ಕೆ. ಹರಿಪ್ರಸಾದ್:-** ಸಭಾಪತಿಯವರು ಬೇಡ ಎಂದರೆ ನಾನು ಮಾತನಾಡುವುದಿಲ್ಲ. ಅವರು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ನಾನು ಮಾತನಾಡುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಭಾರತಿ ಶೆಟ್ಟಿಯವರೇ, . . . ಸಾಕು

(**ಗೊಂದಲ**)

**ಶ್ರೀ ಬಿ.ಕೆ. ಹರಿಪ್ರಸಾದ್:-** ಲಡಾಕ್, ಜಮ್ಮು ಕಾಶ್ಮೀರದ ಬಗ್ಗೆ ಮಾತನಾಡುವುದು ಬೇಡ. ಅದಕ್ಕೆ ಅದರದ್ದೇ ಆದ ಇತಿಹಾಸವಿದೆ. (**ಗೊಂದಲ**)

**ಸಭಾಪತಿಯವರು:-** ಮಾನ್ಯ ಲಹರ್‌ಸಿಂಗ್‌ರವರೇ, ಮಾತನಾಡಿ.

**ಶ್ರೀ ಅರುಣ ಶಹಾಪೂರ:-** ಜಮ್ಮು, ಕಾಶ್ಮೀರ, ಲಡಾಕ್ ಇವನ್ನೆಲ್ಲಾ ನಾವು ಮಾತನಾಡುವುದು

(**ಗೊಂದಲ**)

**ಶ್ರೀ ಲಹರ್‌ಸಿಂಗ್ ಸಿರೋಯಾ:-** ನಾನು ಶಿಕ್ಷಣದ ಬಗ್ಗೆ ಬೇಕಾದಷ್ಟು ಮಾತನಾಡಬೇಕಾಗಿದೆ.

**ಸಭಾಪತಿಯವರು:-** ಮಾನ್ಯ ಲಹರ್‌ಸಿಂಗ್‌ರವರೇ, ಮುಗಿಸಿ ಕೊನೆಯದಾಗಿ ಎರಡು ನಿಮಿಷವಿದೆ.

**ಶ್ರೀ ಲಹರ್‌ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೇ, ನಾನಿನ್ನೂ ಬೆಂಗಳೂರಿನ ಮೂಲಸೌಕರ್ಯಗಳ ಬಗ್ಗೆ ಮಾತನಾಡಿಲ್ಲ. ಊಟದ ನಂತರ ಮತ್ತೆ ಹತ್ತು ನಿಮಿಷ ಅವಕಾಶ ಕೊಡಿ.

**ಸಭಾಪತಿಯವರು:-** ನೀವು 1 ಗಂಟೆ 20 ನಿಮಿಷಕ್ಕೆ ಪ್ರಾರಂಭ ಮಾಡಿದ್ದೀರಿ, ಈಗಾಗಲೇ 45 ನಿಮಿಷವಾಯಿತು. ಕೊನೆಯದಾಗಿ ಐದು ನಿಮಿಷ ಮಾತನಾಡಿ.

**ಶ್ರೀ ಲಹರ್‌ಸಿಂಗ್ ಸಿರೋಯಾ:-** ಊಟ ಆದ ಮೇಲೆ ಅವಕಾಶ ಕೊಡಿ.

**ಶ್ರೀ ಅರುಣ ಶಹಾಪೂರ:-** ಸಭಾಪತಿಯವರೇ, ಮಾನ್ಯ ಲಹರ್‌ಸಿಂಗ್‌ರವರಿಗೆ ಊಟದ ನಂತರ ಮಾತನಾಡಲು ಅವಕಾಶ ಕೊಡಿ.

**ಸಭಾಪತಿಯವರು:-** ಮಾನ್ಯ ಅರುಣ್ ಶಹಾಪುರರವರೇ, ಕುಳಿತುಕೊಳ್ಳಿ. ವಿನಾಕಾರಣ ಏತಕ್ಕೆ ಮಾತನಾಡುತ್ತೀರಿ. ಸುಮ್ಮನೆ ಕುಳಿತುಕೊಳ್ಳಿ.

**ಶ್ರೀ ಲಹರ್ ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೇ, ಊಟದ ನಂತರ ಅವಕಾಶ ಕೊಡಿ.

**ಸಭಾಪತಿಯವರು:-** ಐದು ನಿಮಿಷ ಮಾತನಾಡಿ.

**ಶ್ರೀ ಲಹರ್ ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೇ, ದಯವಿಟ್ಟು ಊಟದ ನಂತರ ಅವಕಾಶ ಕೊಡಿ ಹತ್ತು ನಿಮಿಷ ಮಾತನಾಡುತ್ತೇನೆ.

**ಸಭಾಪತಿಯವರು:-** ಈಗ ಸದನವನ್ನು 03 ಗಂಟೆಯವರೆಗೆ ಮುಂದೂಡಲಾಗುವುದು.

**(ಭೋಜನ ವಿರಾಮಕ್ಕಾಗಿ ಸದನವು 02 ಗಂಟೆ 04 ನಿಮಿಷದಿಂದ 03.00 ಗಂಟೆಯವರೆಗೆ ಮುಂದೂಡಲ್ಪಟ್ಟಿತು)**

(424) 17.03.2022 3.30 hv.ak

**(ಭೋಜನ ವಿರಾಮಕ್ಕಾಗಿ ಮುಂದೂಡಲ್ಪಟ್ಟಿದ್ದ ಸದನವು, ಪುನಃ ಮಧ್ಯಾಹ್ನ 3 ಗಂಟೆ 32 ನಿಮಿಷಗಳಿಗೆ ಸಮಾವೇಶಗೊಂಡಿತು**

**(ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ವಿತ್ತೀಯ ಕಾರ್ಯಕಲಾಪ**

**2022-23ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ**

**ಶ್ರೀ ಲಹರ್ ಸಿಂಗ್ ಸಿರೋಯಾ(ವಿಧಾನಸಭೆಯಿಂದ ಚುನಾಯಿತರಾದವರು):-** ಸನ್ಮಾನ್ಯ ಸಭಾಪತಿಯವರೇ, ಆಯವ್ಯಯದ ಮೇಲೆ ನನ್ನ ಮಾತುಗಳನ್ನು ಮುಂದುವರಿಸುವುದಕ್ಕೆ ಅವಕಾಶವನ್ನು ನೀಡಿದ ತಮಗೆ ವಂದಿಸಿ ನನ್ನ ಮಾತುಗಳನ್ನು ಪ್ರಾರಂಭಿಸುತ್ತಿದ್ದೇನೆ. ಹಾಸ್ಟೆಲ್‌ಗಳು ಮತ್ತು ಸರ್ಕಾರಿ ಶಾಲಾ-ಕಾಲೇಜುಗಳ ಅಭಿವೃದ್ಧಿ ವಿಚಾರವನ್ನು ನಾನು ಸರ್ಕಾರದ ವಿವೇಚನೆಗೇ ಬಿಡುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ತಾವು ಈ ಸದನದಲ್ಲಿ ಶಿಕ್ಷಣ ವ್ಯವಸ್ಥೆಯ ಬಗ್ಗೆ ಮತ್ತು ಸರ್ಕಾರಿ ಶಾಲೆಗಳನ್ನು ಯಾವ ರೀತಿಯಲ್ಲಿ ಅಭಿವೃದ್ಧಿಪಡಿಸಬಹುದು ಎನ್ನುವುದರ ಬಗ್ಗೆ ಗಮನಹರಿಸುತ್ತೀರಿ ಎನ್ನುವ ಭರವಸೆ ನನಗಿದೆ.

**ಸಭಾಪತಿಯವರು:-** ಎಲ್ಲಾ ಶಾಸಕರು ಒಂದೊಂದು ಸರ್ಕಾರಿ ಶಾಲೆಯನ್ನು ದತ್ತು ತೆಗೆದುಕೊಂಡರೆ, ಅವುಗಳ ಅಭಿವೃದ್ಧಿಯಾಗುತ್ತದೆ.

**ಶ್ರೀ ಎಸ್.ರುದ್ರೇಗೌಡ:-** ಸನ್ಮಾನ್ಯ ಸಭಾಪತಿಯವರೇ, ನಾನು ಮೂರು ಸರ್ಕಾರಿ ಶಾಲೆಗಳನ್ನು ದತ್ತು ತೆಗೆದುಕೊಂಡಿದ್ದೇನೆ.

**ಡಾ॥ ತೇಜಸ್ವಿನಿಗೌಡ:–** ಸನ್ಮಾನ್ಯ ಸಭಾಪತಿಯವರೇ, ತಮ್ಮ ಸಲಹೆಗೆ ನನ್ನ ಸಹಮತವಿದೆ.

**ಶ್ರೀ ಲಹರ್ ಸಿಂಗ್ ಸಿರೋಯಾ:–** ಸನ್ಮಾನ್ಯ ಸಭಾಪತಿಯವರೇ, ಈ ವಿಚಾರದ ಮೇಲೆ ಬೇರೊಂದು ಸಂದರ್ಭದಲ್ಲಿ ಮಾತನಾಡುತ್ತೇನೆ. ಈಗ ಗೃಹ ಇಲಾಖೆಗೆ ಸಂಬಂಧಪಟ್ಟಂತೆ ಮತ್ತು ಬೆಂಗಳೂರು ಮೂಲಸೌಲಭ್ಯಗಳ ಬಗ್ಗೆ ಒಂದೆರಡು ಮಾತುಗಳನ್ನಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ಉಕ್ರೇನ್‌ನಲ್ಲಿ ನಮ್ಮ ರಾಜ್ಯದ ವಿದ್ಯಾರ್ಥಿಯೊಬ್ಬ ಮೃತಪಟ್ಟಿರುವುದಕ್ಕೆ ಇಡೀ ದೇಶವೇ ಸಂತಾಪವನ್ನು ಸೂಚಿಸಿದೆ. ಮಾದಕ ವಸ್ತು ವ್ಯಸನದಿಂದಾಗಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಪ್ರತಿ ಗಂಟೆಗೊಬ್ಬ ಯುವಕ drug addiction and related crimesನಿಂದಾಗಿ ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಿದ್ದಾನೆ. ಇದರಿಂದಾಗಿ ಎಷ್ಟು ಜನ ಯುವ ಜನಾಂಗದವರು ತಮ್ಮ ಪ್ರಾಣವನ್ನು ಕಳೆದುಕೊಳ್ಳುತ್ತಿದ್ದಾರೆ ಎನ್ನುವುದರ ಬಗ್ಗೆ ಸರ್ಕಾರದ ಗೃಹ ಇಲಾಖೆ ಗಂಭೀರವಾಗಿ ಚಿಂತನೆ ಮಾಡಬೇಕಾಗಿದೆ. ಇನ್ನೂ ಎರಡು ರಾಜ್ಯಗಳನ್ನು ಕಾಪಾಡುವಷ್ಟು ನಮ್ಮ ರಾಜ್ಯ ಸಂಪದ್ಭರಿತವಾಗಿದೆ. ಭ್ರಷ್ಟಾಚಾರ ಮತ್ತು ಅವ್ಯವಹಾರ ಮತ್ತು ಹಗರಣಗಳಿಂದಾಗಿ ಎಲ್ಲಾ ಹಾಳಾಗುತ್ತಿದೆ. We have often heard the allegation that there is a step–motherly treatment from Central Government to South Indian States in revenue sharing. Sir, let me remind the House that Karnataka is a resourceful state. We have plenty of mineral ores from iron to gold. Karnataka has huge potential in tourism and hospitality sector. We have around ೩೦೦ kms of coastal line with eight major beaches. We have beautiful and scenic tourist destination in our Western Ghats. We have UNESCO World Heritage sites like Hampi. We have huge wildlife sanctuaries and national parks. Karnataka is home to the largest elephant population in India and second highest in tiger population. God in nature has blessed the State of Karnataka with plenty of avenues to create jobs for our youth and generate revenue for the

government. We should be a giving state and not a begging state. Ours is a resourceful state. Government should always work for the poor and needy. According to me, government has two important duties. One is providing health care and the other is providing education.

ಸನ್ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿನ ಆರೋಗ್ಯ ವ್ಯವಸ್ಥೆಯ ಬಗ್ಗೆ ಹೇಳಬೇಕಾದರೆ, ಹಲವಾರು ಸರ್ಕಾರಿ ಅಧಿಕಾರಿಗಳ ಮನೆ ಮತ್ತು ಕಛೇರಿಯ ಮೇಲೆ ಏಕಕಾಲಕ್ಕೆ ಎ.ಸಿ.ಬಿ. ದಾಳಿ ನಡೆಸಿರುವುದನ್ನು ಈ ದಿನದ ದಿನಪತ್ರಿಕೆಯಲ್ಲಿ ನಾವೆಲ್ಲರೂ ಓದಿದ್ದೇವೆ. ಕೆಲವು ಅಧಿಕಾರಿಗಳ ಮನೆಯಲ್ಲಿ ಈಜುಕೊಳ ಮತ್ತು ಜಿಮ್ ಎಲ್ಲವೂ ಇವೆ. ನಾವುಗಳು ಸುಮಾರು 2-3 ಕೋಟಿ ರೂಪಾಯಿಗಳಷ್ಟು ಬೆಲೆಬಾಳುವ ಕಾರಿನಲ್ಲಿ ಓಡಾಡುತ್ತೇವೆ. ಆದರೆ, ಯಾರೂ ಸಹ ಬೆಂಗಳೂರು ನಗರದ ಸಿಟಿ ಮಾರ್ಕೆಟ್‌ನಲ್ಲಿರುವ ವಿಕ್ಟೋರಿಯಾ ಆಸ್ಪತ್ರೆಗೆ ಭೇಟಿ ನೀಡಿ ಅಲ್ಲಿನ ಪರಿಸ್ಥಿತಿಯನ್ನು ಅವಲೋಕಿಸಿಲ್ಲ. ಈ ಆಸ್ಪತ್ರೆಯಲ್ಲಿ ಬಡವರದು ಶೋಚನೀಯ ಪರಿಸ್ಥಿತಿಯಾಗಿದೆ. ಬೇಕಾದರೇ, ನಾವು ಒಂದು ನಾಲ್ಕೈದು ಜನರು ಹೋಗಿ ಆ ಆಸ್ಪತ್ರೆಗೆ ಭೇಟಿ ನೀಡಿ ಬರೋಣ. ವಿಕ್ಟೋರಿಯಾ ಆಸ್ಪತ್ರೆ ಸಾಕ್ಷಾತ್ ನರಕವಾಗಿದೆ. ಈ ಆಸ್ಪತ್ರೆಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು ಸರ್ಕಾರದ ಕರ್ತವ್ಯ ಅಲ್ಲವೇ? ಯಾರೇ ಆರೋಗ್ಯ ಸಚಿವರು ಬಂದರೂ ಸಹ ಈ ವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ಸಾಧ್ಯವಾಗಿಲ್ಲ. ವಿಕ್ಟೋರಿಯಾ ಆಸ್ಪತ್ರೆಗೆ ಎಲ್ಲ ಧರ್ಮಕ್ಕೆ ಸೇರಿದ ಬಡವರು ಹೋಗುತ್ತಾರೆ. ಆರೋಗ್ಯ ಇಲಾಖೆಯವರು ಕೇವಲ ಅನುದಾನ ಕೊಟ್ಟು ಸುಮ್ಮನಾಗುವುದು ಸರಿಯಾದ ಕ್ರಮವಲ್ಲ. ಅದರ ನಿರ್ವಹಣೆ ಸರಿಯಾದ ರೀತಿಯಲ್ಲಿ ಆಗುತ್ತಿದೆಯೇ ಎನ್ನುವುದನ್ನು ನೋಡಬೇಕಾಗುತ್ತದೆ. ಪ್ರತಿಯೊಬ್ಬ ಶಾಸಕರು ಒಂದೊಂದು ಸರ್ಕಾರಿ ಆಸ್ಪತ್ರೆಯ ಜವಾಬ್ದಾರಿಯನ್ನು ತೆಗೆದುಕೊಂಡು ಪ್ರತಿದಿನ ಅಲ್ಲಿಗೆ ಭೇಟಿ ನೀಡಿ ಬಂದರೆ ಸ್ವಲ್ಪ ಮಟ್ಟಿಗೆ ವ್ಯವಸ್ಥೆ ಸರಿ ಹೋಗಬಹುದು ಎನ್ನುವುದು ನನ್ನ ಅನಿಸಿಕೆಯಾಗಿದೆ.

**ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಹಿಂದೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ 20 ವರ್ಷಗಳ ಹಿಂದೆ ಕೆ.ಎಲ್.ಸಿ.ಮೂರ್ತಿ ಎನ್ನುವವರು ಕಣ್ಣಿನ ಶಸ್ತ್ರ ಚಿಕಿತ್ಸೆಯನ್ನು ಉಚಿತವಾಗಿ ಮಾಡುತ್ತಿದ್ದರು. ಹೊರ ಊರುಗಳಂದ ಬರುವಂತಹ ರೋಗಿಗಳು ಮತ್ತು ಅವರ ಸಂಬಂಧಿಕರು ಫುಟ್‌ಪಾತ್ ಮೇಲೆ ಮಲಗುತ್ತಿದ್ದರು. ನಾನು, ಮಾನ್ಯ ರೆಹಮಾನ್ ಖಾನ್‌ರವರು ಮತ್ತು ಶ್ರೀ ಜಾಫರ್ ಷರೀಫ್‌ರವರು ಸೇರಿಕೊಂಡು MPLADS (Member of Parliament Local Area Development Scheme) ಫಂಡ್ಸ್‌ನಿಂದ ಒಂದು ಧರ್ಮಶಾಲೆಯನ್ನು ಕಟ್ಟಿಸಿದ್ದೇವೆ. ಅದೇ ರೀತಿಯಲ್ಲಿ ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿಯೂ ಸಹ ಒಂದು ದೊಡ್ಡ ವಾರ್ಡ್ ಕಟ್ಟಿಸಿದ್ದೇವೆ. ಈ ರೀತಿ ಜನ ಉಪಯೋಗಿ ಕೆಲಸಗಳನ್ನು ಅನುಷ್ಠಾನಗೊಳಿಸಿದ್ದೇವೆ. ಸಂಪೂರ್ಣವಾಗಿ ಏನೂ ಮಾಡಿಲ್ಲವೆಂದು ಹೇಳುವುದು ಸರಿಯಲ್ಲ.

**ಶ್ರೀ ಲಹರ್ ಸಿಂಗ್ ಸಿರೋಯಾ:–** ಸನ್ಮಾನ್ಯ ಸಭಾಪತಿಯವರೇ, ನಾನು ಸಹ ಎಂ.ಎಲ್.ಸಿ. ಫಂಡ್ ನಿಂದ 3 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇನೆ. ಆದರೆ, ಅದು ಯಾವುದಕ್ಕೂ ಸಾಕಾಗುವುದಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಸನ್ಮಾನ್ಯ ಸಭಾಪತಿಯವರೇ, ಈ ವಿಚಾರದ ಬಗ್ಗೆ ಅವರ ಸಲಹೆ ಸೂಚನೆಗಳು ಏನಿವೆ ಅವುಗಳನ್ನು ನೀಡಲಿ. ಆ ಬಗ್ಗೆ ನನ್ನ ಅಭ್ಯಂತರವಿಲ್ಲ. ನಾವು contribute ಮಾಡೋಣ. ಆದರೆ, ಏನೂ ಮಾಡಿಲ್ಲ ಎನ್ನುವುದನ್ನು ನಾನು ಒಪ್ಪುವುದಿಲ್ಲ.

**ಶ್ರೀ ಲಹರ್ ಸಿಂಗ್ ಸಿರೋಯಾ:–** ಸನ್ಮಾನ್ಯ ಸಭಾಪತಿಯವರೇ, ಏನೂ ವ್ಯತ್ಯಾಸವಾಗಿಲ್ಲ. ಒಂದೊಂದು ಟೇಬಲ್‌ನಲ್ಲಿ 3–4 ಜನ ಡಾಕ್ಟರ್‌ಗಳು ಕುಳಿತುಕೊಂಡಿರುತ್ತಾರೆ. ಬಹಳ ಉದ್ದವಾದ ರೋಗಿಗಳ ಕ್ಯೂ ಇರುತ್ತದೆ. ನಾನು ಯಾರ ಮೇಲೂ ಆರೋಪ ಮಾಡುತ್ತಿಲ್ಲ. ನಾನು ನನ್ನ ಪಕ್ಷದ ಸರ್ಕಾರದ ವಿರುದ್ಧವೇ ಮಾತನಾಡುತ್ತಿದ್ದೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಏನೂ ಆಗಿಲ್ಲವೆಂದು ಹೇಳುವುದು ಸರಿಯಲ್ಲ. ಒಂದೊಂದೇ ಹೆಜ್ಜೆ ಇಟ್ಟುಕೊಂಡು ಮುಂದೆ ಹೋಗುತ್ತಿದ್ದೇವೆ.

**ಶ್ರೀ ಲಹರ್ ಸಿಂಗ್ ಸಿರೋಯಾ:–** ಸನ್ಮಾನ್ಯ ಸಭಾಪತಿಯವರೇ, ಇದು ಯಾವುದಕ್ಕೂ ಸಾಕಾಗುವುದಿಲ್ಲ. ಸರ್ಕಾರಿ ಅಧಿಕಾರಿಗಳು ತಮ್ಮ ಮನೆಗಳಲ್ಲಿ ಈಜುಕೊಳ, ಜಿಮ್‌ಗಳನ್ನು ಕಟ್ಟಿಸಿಕೊಳ್ಳುತ್ತಿದ್ದಾರೆ. ಲಕ್ಷಾಂತರ ಜನ ಭೇಟಿ ಕೊಡುವಂತಹ ಆಸ್ಪತ್ರೆ ಎಂತಹ ದುಃಸ್ಥಿತಿಯಲ್ಲಿದೆ ಎನ್ನುವುದನ್ನು ಒಮ್ಮೆ ಅಲ್ಲಿಗೆ ಭೇಟಿ ಕೊಟ್ಟು ನೋಡಬೇಕಾಗಿದೆ. ಐ.ಟಿ. ಸಿಟಿ ಎಂದು ಹೆಸರಾಗಿರುವ ಬೆಂಗಳೂರು ನಗರದಲ್ಲಿ ಎಂತಹ ದೊಡ್ಡದೊಡ್ಡ ಕಟ್ಟಡಗಳು, ಐಷಾರಾಮಿ ಕಟ್ಟಡಗಳು ಇವೆ. ಆದರೆ, ನಾವು ಈ ಆಸ್ಪತ್ರೆಯ ಬಗ್ಗೆ ಗಮನವನ್ನೇ ಹರಿಸಿಲ್ಲ. ಸರ್ಕಾರಿ ಆಸ್ಪತ್ರೆಯ ಪರಿಸ್ಥಿತಿ ಈ ರೀತಿ ಇದ್ದರೆ, ಬಡ ಜನರು ಎಲ್ಲಿಗೆ ಹೋಗಬೇಕು? ಒಂದಿಬ್ಬರು ಶಾಸಕರನ್ನು ಆ ಆಸ್ಪತ್ರೆಗೆ ಕಳುಹಿಸಿಕೊಟ್ಟು ಎಷ್ಟು ಅಭಿವೃದ್ಧಿಯಾಗಿದೆ ಇಲ್ಲ ಎನ್ನುವುದರ ಬಗ್ಗೆ ತನಿಖೆ ನಡೆಸಬೇಕಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಪ್ರತಿಯೊಂದು ಜಿಲ್ಲೆಗಳಲ್ಲಿ ಉತ್ತಮ ಗುಣಮಟ್ಟದ ಆಸ್ಪತ್ರೆಗಳನ್ನು ನಿರ್ಮಾಣ ಮಾಡಲೇಬೇಕಾಗಿದೆ. ಇದನ್ನು ಸರ್ಕಾರವೇ ಮಾಡಬೇಕಾಗಿದೆ. ಭ್ರಷ್ಟಾಚಾರವನ್ನು ನಿಲ್ಲಿಸದ ಹೊರತು ಸರ್ಕಾರ ಎಷ್ಟೇ ಅನುದಾನವನ್ನು ನೀಡಿದರೂ ಏನೂ ಪ್ರಯೋಜನವಾಗುವುದಿಲ್ಲ. ಎಲ್ಲೆಲ್ಲಿ ಎಷ್ಟೆಷ್ಟು ಭ್ರಷ್ಟಾಚಾರವಾಗುತ್ತಿದೆ ಎನ್ನುವುದರ ಬಗ್ಗೆ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. Because the system has become corrupt. ನೀವು ಬೇಡ ಎಂದರೆ ನಿಮ್ಮ ಹೆಸರಿನಲ್ಲಿ ಬೇರೆಯವರು ತಿಂದುಬಿಡುತ್ತಾರೆ.

ಸನ್ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರದ ಮೂಲಸೌಕರ್ಯದ ಬಗ್ಗೆ ಹೇಳಬೇಕಾದರೆ, ಈಜಿಪುರ ಫ್ಲೈಓವರ್ ಕಾಮಗಾರಿ ಸುಮಾರು 4 ವರ್ಷಗಳಿಂದ ನೆನಗುದಿಗೆ ಬಿದ್ದಿದೆ.

(ಮುಂದುವರಿದಿದೆ)

(425) 17.3.2022 3.40 ಪಿಕೆ:ಆರ್‌ಎನ್

**ಶ್ರೀ ಲಹರ್ ಸಿಂಗ್ ಸಿರೋಯಾ** (ಮುಂದು):

ಇದರ ಜವಾಬ್ದಾರಿಯನ್ನು ಯಾರು ವಹಿಸಬೇಕು? ಕಾನೂನು–ಕಾಯಿದೆ ಯಾವುದೂ ಇಲ್ಲವೇ? ಅವರು ಕಟ್ಟಿದರೂ ಸರಿ, ಕಟ್ಟದೇ ಇದ್ದರೂ ಸರಿ, ದುಡ್ಡು ಬರುತ್ತದೆ ಹೋಗುತ್ತದೆ; ಅಲ್ಲಿ ಯಾವುದೇ

accountability ಇಲ್ಲ. ಶಿವಾನಂದ ಸ್ಟೋರ್ ಬಳಿ ಮೇಲ್ಸೇತುವೆ ಕಟ್ಟುತ್ತಿದ್ದಾರೆ. ಈಗಿನ ತಂತ್ರಜ್ಞಾನದಲ್ಲಿ ಅದನ್ನು ಕಟ್ಟುವುದಕ್ಕೆ ಇಷ್ಟೊಂದು ವರ್ಷಗಳು ಬೇಕೇ? ಈಗಿರುವ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು 14 ತಿಂಗಳಲ್ಲಿ 15 ಮಹಡಿಗಳುಳ್ಳ ಕಟ್ಟಡವನ್ನು ಕಟ್ಟಿಬಿಡುತ್ತಾರೆ. ಹೀಗಿರುವಾಗ ಒಂದು ಮೇಲ್ಸೇತುವೆ ಕಟ್ಟಲು ಇಷ್ಟೊಂದು ಕಾಲಾವಧಿ ಬೇಕೇ? ಇದಕ್ಕೆ ಯಾರು ಜವಾಬ್ದಾರರು? ಈ ರೀತಿ ವಿಳಂಬವಾಗುವುದಕ್ಕೆ ಕಾರಣಕರ್ತರು ಯಾರು? ಇಂತಹ ಪರಿಸ್ಥಿತಿಗೆ ಆ ಸರ್ಕಾರ ಈ ಸರ್ಕಾರ ಎಂದು ಕಾರಣ ಹೇಳಿದರೆ ಪ್ರಯೋಜನವಿಲ್ಲ. ಮಾನ್ಯ ಸಭಾಪತಿಗಳೆ, ರಸ್ತೆ ಮಾಡುವ ನೆಪದಲ್ಲಿ ಎಷ್ಟು ದುಡ್ಡು ತಿನ್ನುತ್ತಾರೆ ಎನ್ನುವುದು ದೇವರಿಗೆ ಗೊತ್ತು. ಇಂತಹ ವಿಷಯಗಳು ದಿನ ಪತ್ರಿಕೆಗಳಲ್ಲಿ ಬರುವುದನ್ನು ನೋಡುತ್ತಲೇ ಇರುತ್ತೇವೆ. ಮತ್ತೆ, ಇದಕ್ಕೆ ನೂರಾರು ದಾಖಲೆಗಳೂ ಕೂಡ ಇವೆ. ಇನ್ನೊಂದು ಆತಂಕ ವಿಷಯ ಇದೆ. ರಸ್ತೆಯ ಅಗಲೀಕರಣ ಆಗುತ್ತಿರುವುದರಿಂದ Airport elevated ರಸ್ತೆ ಕೂಡ ಹೋಗುತ್ತದೆ. ಹೆಬ್ಬಾಳ ವೃತ್ತ ಏನಿದೆ, it become the big bottleneck. ಹೆಬ್ಬಾಳ ಮೇಲ್ಸುತೆಗೆ ಸಂಬಂಧಪಟ್ಟಂತೆ ನಾವು ತಕ್ಷಣ ಗಮನ ಕೊಡದೇ ಇದ್ದರೆ, ಇಂಜಿನಿಯರ್‌ಗಳನ್ನು accountable ಆಗಿ ಮಾಡದೇ ಇದ್ದರೆ, because Chief Engineers become a long to themselves. ಅವರು ಯಾರ ಮಾತನ್ನೂ ಕೇಳುವುದಿಲ್ಲ. ಅವರು ಯಾವುದ್ಯಾವುದೋ ಕಾರಣಕ್ಕೆ ಬಂದಿರುತ್ತಾರೆ, ಏನೇನೋ ಅಜೆಂಡಾ ತೆಗೆದುಕೊಂಡು ಬರುತ್ತಾರೆ. ಯಾರಿಗೆ pre–bidding tender ಕೊಟ್ಟರೆ, ಎಷ್ಟು ಪರ್ಸೆಂಟ್ ಸಿಗುತ್ತದೆ ಎಂದು ನೋಡುತ್ತಿರುತ್ತಾರೆ. ದುಡ್ಡನ್ನು ಯಾರು ತಿನ್ನುತ್ತಾರೆ? ಅಧಿಕಾರಿಗಳು ತಿನ್ನುತ್ತಾರೋ ಅಥವಾ ಗುತ್ತಿಗೆದಾರರು ತಿನ್ನುತ್ತಾರೋ ತಿಳಿಯುವುದೇ ಇಲ್ಲ. ಇದರ ಬಗ್ಗೆ ಗಮನ ಕೊಡಬೇಕಾಗುತ್ತದೆ. ಮೊನ್ನೆ ದಿನ ರಸ್ತೆ ಗುಂಡಿ ಬಿದ್ದಿದ್ದ ಕಾರಣದಿಂದ ಒಬ್ಬ ಯುವಕ ಪ್ರಾಣ ಕಳೆದುಕೊಂಡ. ಈ ರೀತಿ ಆಗಬಾರದು, ರಸ್ತೆ ಸರಿ ಮಾಡಬೇಕು ಎಂದು ಪ್ರತಿಯೊಂದಕ್ಕೂ ಹೈಕೋರ್ಟ್ ಸೂಚನೆ ಕೊಡುವಂತಾಗಬೇಕೇ? ಇದರಲ್ಲಿ ರಾಜಕಾರಣಿಗಳ ಕರ್ತವ್ಯ ಇಲ್ಲವೇ? ಅಧಿಕಾರಿಗಳ ಜವಾಬ್ದಾರಿ ಇಲ್ಲವೇ? ಇಂತಹ ವಿಚಾರದ ಬಗ್ಗೆ ಯಾರು ಗಮನ ಕೊಡಬೇಕು?

ಮಾನ್ಯ ಸಭಾಪತಿಗಳೆ, ಸುಮಾರು 10-15 ವರ್ಷಗಳಿಂದ ಪೋಲೀಸ್ ವ್ಯವಸ್ಥೆ ಹಾಳಾಗಿ ಹೋಗಿದೆ. ಯಾವುದೇ ಸರ್ಕಾರ ಇರಲಿ ಪೋಲೀಸರು ಅಥವಾ ಪೋಲೀಸ್ ಇನ್ಸ್‌ಪೆಕ್ಟರ್‌ಗಳು ವರ್ಗಾವಣೆ ಎನ್ನುವುದು ದುಡ್ಡಿನ ಹಿನ್ನೆಲೆಯಲ್ಲಿಯೇ ಆಗುತ್ತದೆ. ಇದನ್ನು ದಾಖಲೆ ಮೂಲಕ ಹೇಳುವುದಕ್ಕಾಗದೇ ಇದ್ದರೂ ದುಡ್ಡಿನ ಆಧಾರದ ಮೇಲೆ ವರ್ಗಾವಣೆ ನಡೆಯುವುದು ವಾಸ್ತವ ಸಂಗತಿಯಾಗಿದೆ. ದುಡ್ಡನ್ನು ಯಾರೋ ಒಬ್ಬ ಪುಢಾರಿ ತಿನ್ನುತ್ತಾನೋ ಅಥವಾ ಸೀನಿಯರ್ ಆಫೀಸರ್ ತಿನ್ನುತ್ತಾನೋ ಗೊತ್ತಾಗುವುದಿಲ್ಲ. ಇಲ್ಲಿ ಯಾರ ಮೇಲೂ ಗೂಬೆ ಕೂರಿಸುವುದಕ್ಕೆ ಆಗುವುದಿಲ್ಲ. ಪೋಲೀಸ್ ಇಲಾಖೆ ಎಷ್ಟು ಶೋಚನೀಯ ಸ್ಥಿತಿಯಲ್ಲಿದೆ ಎನ್ನುವುದು ದಿನ ಪತ್ರಿಕೆಗಳ ಮೊದಲ ಪುಟಗಳಲ್ಲಿ ಬರುತ್ತದೆ. ಇದನ್ನು ಯಾರು ಸುಧಾರಿಸಬೇಕು? ನಮ್ಮ ರಾಜ್ಯಕ್ಕೆ ಈಗ ಮಾನ್ಯ ಆರಗ ಜ್ಞಾನೇಂದ್ರ ಅವರಂತಹ ಒಳ್ಳೆಯ ಗೃಹ ಮಂತ್ರಿಗಳು ಸಿಕ್ಕಿದ್ದಾರೆ. ಅವರಿಗೆ empower ಮಾಡಬೇಕು. ಅವರೂ ಕೂಡ, ಪೋಲೀಸ್ ವ್ಯವಸ್ಥೆ ಹಾಳಾಗಿರುವುದರ ಬಗ್ಗೆ ಟೀಕೆ ಮಾಡಿದ್ದಾರೆ. ಇಂಥದ್ದಕ್ಕೆ ಆ ಸರ್ಕಾರ ಈ ಸರ್ಕಾರ ಎಂದು ಹೇಳುವುದಕ್ಕಾಗುವುದಿಲ್ಲ. ಪೋಲೀಸ್ ಇಲಾಖೆಯಲ್ಲಿ ದುಡ್ಡಿನಿಂದ, nepotism and caste basis ಮೂಲಕ ನೇಮಕಾತಿ ಆಗುತ್ತದೆ. ಇಂಥದ್ದನ್ನು ಯಾರು ಕೊನೆ ಮಾಡುತ್ತಾರೆ? ಈ ಕುರಿತು ಮೇಲ್ಮನೆಯವರು ಚಿಂತನೆ ಮಾಡದೇ ಇದ್ದರೆ ಹೇಗೆ ಸುಧಾರಣೆ ತರುವುದಕ್ಕೆ ಆಗುತ್ತದೆ?

ಮಾನ್ಯ ಸಭಾಪತಿಗಳೆ, ಬೆಂಗಳೂರು ನಗರದಲ್ಲಿ ಸುಮಾರು ಒಂದೂವರೆ ಕೋಟಿ ಜನಸಂಖ್ಯೆ ಇದೆ. ಆ ಹಿನ್ನೆಲೆಯಲ್ಲಿ ಸೂಕ್ತ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿ ಕೊಡಬೇಕಿದೆ. 110 ವರ್ಷಗಳ ಇತಿಹಾಸ ಹೊಂದಿರುವ ಈ ಚಿಂತಕರ ಚಾವಡಿಯು ಸಮಾಜಕ್ಕೆ ಮತ್ತು ದೇಶಕ್ಕೆ ಒಂದು ದಾರಿಯನ್ನು ತೋರಿಸುವಂತಾಗಬೇಕೆಂದು; ಅದರ ಜವಾಬ್ದಾರಿ ನಮ್ಮ ಮೇಲಿದೆ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಡಾ: ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಗಳೆ, ಮಾನ್ಯ ಲಹರ್ ಸಿಂಗ್ ಸಿರೋಯಾ ಅವರ ಕನ್ನಡ ತುಂಬಾ ಸುಧಾರಣೆಯಾಗಿದೆ. ನಾವು ಅವರನ್ನು ಅಭಿನಂದಿಸುತ್ತೇನೆ.

**ಶ್ರೀಮತಿ ಭಾರತಿ ಶೆಟ್ಟಿ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಗಳೆ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದನೆಗಳು. 2022-23ನೇ ಸಾಲಿನ ಈ ಆಯವ್ಯಯವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. 2008ನೇ ಸಾಲಿನ ಬಜೆಟ್ ಬಹಳ ದೊಡ್ಡ ಸಂಚಲನವನ್ನು ಉಂಟು ಮಾಡಿತು. ಅದಕ್ಕಿಂತ ಹಿಂದೆ ಬಜೆಟ್ ಎಂದರೆ ಎಲ್ಲಾ ವಸ್ತುಗಳು ಅಂದರೆ, ಬಟ್ಟೆಗೆ, ಆಭರಣಕ್ಕೆ, ಅಕ್ಕಿಗೆ, ಪೆಟ್ರೋಲ್‌ಗೆ, ಎಲೆಕ್ಟ್ರಾನಿಕ್ ವಸ್ತುಗಳಿಗೆ ಅಥವಾ ಚಪ್ಪಲಿಗಳಿಗೆ ಸಂಬಂಧಪಟ್ಟಂತೆ ತೆರಿಗೆಗಳು ಹೆಚ್ಚು ಅಥವಾ ಕಡಿಮೆ ಆಗುವಂಥದ್ದನ್ನು ನಾವು ನೋಡುತ್ತಿದ್ದೆವು. ಒಂದು ಬಜೆಟ್‌ನಲ್ಲಿ ನೀರಾವರಿಗೆ ಇನ್ನೊಂದು ಬಜೆಟ್‌ನಲ್ಲಿ ಇನ್ನಿತರ ಯೋಜನೆಗಳಿಗೆ ಆದ್ಯತೆ ಕೊಡಲಾಗುತ್ತಿತ್ತು. ಆದರೆ, 2008ನೇ ಸಾಲಿನ ಬಜೆಟ್‌ನಲ್ಲಿ ಜನ ಸಾಮಾನ್ಯರಿಗೆ ನೇರವಾಗಿ ಕೊಡುವಂತಹ ಯೋಜನೆಗಳನ್ನು ಕಂಡೆವು. ಒಂದು ಮಗು ಹುಟ್ಟಿದರೆ, "ಮಡಿಲು" ಯೋಜನೆಯಿಂದ ಹಿಡಿದು, ಹೆಣ್ಣು ಮಗು ಹುಟ್ಟಿದರೆ "ಭಾಗ್ಯಲಕ್ಷ್ಮಿ", ವಿಧವೆಯರಿಗೆ "ಸಂಧ್ಯಾ ಸುರಕ್ಷಾ ವೇತನ", ಇತ್ಯಾದಿ ಯೋಜನೆಗಳು ಬಂತು. ಒಬ್ಬ ಬಡವ ಸತ್ತರೆ ಆತನ ಶವ ಸಂಸ್ಕಾರಕ್ಕೂ ಹಣ ಕೊಡಬೇಕು ಎನ್ನುವ ಯೋಜನೆ ತಂದ ವರ್ಷ 2008. ಅಲ್ಲಿಂದ ಈ ರೀತಿಯ ಯೋಜನೆಗಳನ್ನು ಕೊಡುವುದು ಪ್ರಾರಂಭವಾಯಿತು. ಇದು ಮಾನ್ಯ ಯಡಿಯೂರಪ್ಪನವರಿಂದ ಹಿಡಿದು ಸನ್ಮಾನ್ಯ ಸಿದ್ಧರಾಮಯ್ಯನವರ ಕಾಲದಲ್ಲೂ "ಶಾದಿ ಭಾಗ್ಯ", "ಅನ್ನಭಾಗ್ಯ" ಎನ್ನುವ ಯೋಜನೆಯನ್ನು ಕೊಡಲಾಯಿತು.

ಮಾನ್ಯ ಸಭಾಪತಿಗಳೆ, ಈ ಕಾಲ ಘಟ್ಟದಲ್ಲಿ ಇಂತಹ ಬಜೆಟನ್ನು ನಾನು ನಿರೀಕ್ಷೆ ಮಾಡಿರಲಿಲ್ಲ. ಏಕೆಂದರೆ, ಕಳೆದ ವರ್ಷ ನಮ್ಮ ಆರ್ಥಿಕ ಸ್ಥಿತಿ ಹೇಗಿತ್ತು ಎನ್ನುವುದು ಗೊತ್ತಿದೆ. ಕೊರೋನಾ ಒಂದನೆ ಅಲೆ ಯಾವರೀತಿ ಇರುತ್ತದೆ, ನಾವು ಹೇಗೆ ಬದುಕುತ್ತೇವೆ ಎನ್ನುವ ನಿರೀಕ್ಷೆಯೇ ಇರಲಿಲ್ಲ. ಆ ಒಂದು ಕೊರೋನಾದಂತಹ ಮಹಾಮಾರಿಯಿಂದಾಗಿ ಅನೇಕ ಹಿರಿಯರನ್ನು ನಾವು ಕಳೆದುಕೊಂಡಿದ್ದೇವೆ. ಮನೆಯ ಕಿಟಕಿ ಬಾಗಿಲುಗಳನ್ನು ತೆರೆಯುತ್ತಿರಲಿಲ್ಲ; ಹೊರಗೆ ಹೋಗುತ್ತಿರಲಿಲ್ಲ. ತರಕಾರಿಯನ್ನು ತಂದರೆ ಅದನ್ನು ತೊಳೆಯಬೇಕು ಎಂದು ಹೇಳುತ್ತಿದ್ದರು. ಆಗಿನ ಸ್ಥಿತಿಯನ್ನು ನೆನೆಸಿಕೊಂಡರೆ ಭಯ ಆಗುತ್ತದೆ. ಅದಕ್ಕಿಂತ ಎರಡನೆ ಅಲೆ ಬಂದಾಗಂತೂ ಕೈ-ಕಾಲುಗಳು ಬಿದ್ದು ಹೋಯಿತು. ನೋಡ-ನೋಡುತ್ತಾ ಇದ್ದಹಾಗೆ, ಪಕ್ಕದ ಮನೆ, ಹಿಂದಿನ ಮನೆ, ಎಲ್ಲಾ ಕಡೆಯ ರಸ್ತೆಗಳಲ್ಲಿ ಅಂಬ್ಯುಲೆನ್ಸ್

ಹೋಗುವುದು, 40 ವರ್ಷದವರು, 50 ವರ್ಷದವರು, ಮಧ್ಯ ವಯಸ್ಸಿನವರನ್ನು ಕಳೆದುಕೊಳ್ಳುವಂಥದ್ದನ್ನು ನೋಡಿದ್ದೇವೆ. ಅಕ್ಸಿಜನ್ ಕೊರತೆ, ಬೆಡ್‌ಗಳ ಕೊರತೆ ಕಂಡು ಬರುತ್ತಿತ್ತು. ಜನ ಪ್ರತಿನಿಧಿಗಳಾದ ನಾವುಗಳು ಇಡೀ ರಾತ್ರಿಯಲ್ಲ ಕುಳಿತು ಅವಶ್ಯಕತೆ ಇದ್ದವರಿಗೆ ಬೆಡ್ ಕೊಡಿಸುವಂತಹ ಪ್ರಯತ್ನ ಮಾಡುವುದು ಇಂಥದ್ದೆಲ್ಲಾ ನಡೆದು ಹೋಯಿತು. ಸಕಾಲಕ್ಕೆ ವೈದ್ಯಕೀಯ ಸೌಲಭ್ಯ ಸಿಗದೇ ಯಾರಾದರೂ ಸತ್ತರೆ ಅದಕ್ಕೆ ನಾವೇ ಕಾರಣರೇನೋ ಎನ್ನುವಷ್ಟರ ಮಟ್ಟಿಗಿನ ವಾತಾವರಣದಲ್ಲಿ ನಾವಿದ್ದೆವು. ಒಬ್ಬ ಮನುಷ್ಯ ಸತ್ತರೆ ಆತನಿಗೋಸ್ಕರ ಯಾರು ಅಳುವುದಕ್ಕೆ ಸಂಬಂಧಿಕರು ಇರುತ್ತಿರಲಿಲ್ಲ. ನಮ್ಮ ಮನೆಯ ಕೆಳಗೆ ಇದ್ದ ಕುಟುಂಬದಲ್ಲಿ ಗಂಡನ ಸಾವಾಯಿತು. 35 ವರ್ಷದಿಂದ ಒಟ್ಟಿಗೆ ಬದುಕಿದ್ದ ಹೆಂಡತಿಗೆ ಗಂಡನ ಮುಖ ನೋಡುವುದಕ್ಕಾಗಲಿಲ್ಲ; ಹೆಣ ಮನೆಗೆ ತರಲಿಲ್ಲ. ಆಸ್ಪತ್ರೆಯಿಂದಲೇ ಸ್ಮಶಾನಕ್ಕೆ ಕರೆದುಕೊಂಡು ಹೋಗಲಾಯಿತು. ಬ್ಯಾಂಡ್ ಇಲ್ಲ, ಹಾರ ಇಲ್ಲ, ಆಕ್ರಂದನ ಇಲ್ಲ. ಯಾವುದೋ ಒಂದು ತೆರೆದಂತಹ ವಾಹನದಲ್ಲಿ ಕೊಂಡು ಹೋಗುತ್ತಾರೆ. ಅವರ ಅಂತಿಮ ಸಂಸ್ಕಾರವನ್ನು ವಿಧಿ-ವಿಧಾನಗಳಿಂದ ಮಾಡುವ ಹಾಗಿಲ್ಲ. ಎಲ್ಲಿಯೋ ಒಂದು ಕಡೆ ಹೂತು ಹಾಕುತ್ತಿದ್ದರು. ಹಿಂದಿರುಗಿ ನೋಡುವಂತೆಯೂ ಇರಲಿಲ್ಲ. ಇವೆಲ್ಲವನ್ನು ನೋಡಿದಾಗ "ಒಳಿತು ಮಾಡು ಮನುಷ್ಯ; ನೀನಿರುವುದು ಮೂರು ದಿವಸ" ಎನ್ನುವುದು ನೆನಪಾಗುತ್ತದೆ. ಆ ನಂತರ ಸರ್ಕಾರ, ಮಕ್ಕಳಿಗೆ ಕೊರೋನಾ ಬರುತ್ತದೆ ಎನ್ನುವ ವಿಷಯ ಗೊತ್ತಾದಾಗ ಜಾಗೃತವಾಯಿತು. ಮಕ್ಕಳಿಗೆ ಕೊರೋನಾ ಬರುತ್ತದೆ ಎಂದು ಹೇಳಿದ ಕೂಡಲೇ, ಮಕ್ಕಳ ಸಾವನ್ನು ಯಾವರೀತಿ ನೋಡುವುದು ಎಂದು ನೆನೆಸಿಕೊಂಡು ನಮಗೆಲ್ಲಾ ಕೈ-ಕಾಲು ನಡುಗುವುದಕ್ಕೆ ಪ್ರಾರಂಭವಾಯಿತು. ಆದರೆ ದೇವರ ದಯೆಯಿಂದ, ಆ ವೈರಸ್ ಬಲಹೀನವಾಗಿ ಅಂತಹ ಗಂಭೀರ ಸ್ಥಿತಿ ತಲುಪಲಿಲ್ಲ. ನಂತರ ಪ್ರವಾಹ ಕೂಡ ಬಂತು. ಇಂತಹ ಸಂದರ್ಭದಲ್ಲಿ ಬಜೆಟ್ ಮಂಡನೆ ಮಾಡಿದರು. ನನಗೆ ಬಜೆಟ್ ಎಂದರೆ ತುಂಬಾ ಇಷ್ಟ. ಬಜೆಟ್‌ನ್ನು ಓದುತ್ತಿರುವಾಗಲೇ ಗ್ಯಾಲರಿಗೆ ಹೋಗಿ ನೋಡುವಂಥವಳು ನಾನು. ನಾನು ಈ ಬಜೆಟ್‌ನಲ್ಲಿ ಏನಿರುತ್ತದೆ ಎಂದು ನೋಡುವುದಕ್ಕೆ ಹೋಗಲೇ ಇಲ್ಲ, ಮನೆಗೆ ಹೋದೆ. ಆದರೆ ನಂತರ ಆ ಬಜೆಟ್ ಪುಸ್ತಕ ತೆರೆದು ನೋಡಿದೆ. ರೂ. 2,65,720 ಕೋಟಿಯ ಈ ಬಜೆಟ್‌ನ್ನು ನಾನು ಸ್ವಾಗತ ಮಾಡುತ್ತೇನೆ. ಏಕೆಂದರೆ, ಇದು ಆತ್ಮನಿರ್ಭರಕ್ಕೆ ಅನುಗುಣವಾಗಿದೆ. ಕೃಷಿ ಮತ್ತು ಪೂರಕ ಚಟುವಟಿಕೆಗಳಿಗಾಗಿ ಆ ಬಜೆಟ್‌ನಲ್ಲಿ ರೂ. 33,700

ಕೋಟಿ ಅನುದಾನ ಕೊಟ್ಟಿದ್ದಾರೆ. ಇವತ್ತು ಕೃಷಿಗಾಗಿ, ಅಂದರೆ "ರೈತ ಶಕ್ತಿ"ಯೋಜನೆ ಇರಬಹುದು, "ಪಿಎಂ ಕಿಸಾನ್ ಕಾರ್ಡ್ ಯೋಜನೆ" ಇರಬಹುದು, ಇವುಗಳಿಗೆ ರಾಜ್ಯದಿಂದ ಹೆಚ್ಚುವರಿಯಾಗಿ ರೂ.1978 ಕೋಟಿಗಳ ಅನುದಾನವನ್ನು ನಗದು ರೂಪದಲ್ಲಿ ವರ್ಗಾಯಿಸುವುದು ಮಾತ್ರವಲ್ಲ ಇದನ್ನು ಮುಂದುವರೆಸಲಾಗುತ್ತದೆ ಎನ್ನುವ ಆಶ್ವಾಸನೆ ಕೊಟ್ಟಿದ್ದಾರೆ. "ಕೃಷಿಯಂತ್ರ ಧಾರೆ" ಆಗಿರಬಹುದು, ಕೃಷಿ ನಿರ್ದೇಶನಾಲಯ ಸ್ಥಾಪನೆ ಆಗಿರಬಹುದು ಇವೆಲ್ಲದರ ಕಡೆ ಗಮನ ಕೊಟ್ಟಿದ್ದಾರೆ. 2 ಲಕ್ಷ ಹೆಕ್ಟೇರ್ ಭೂಮಿಯನ್ನು ಸಾವಯವ ಬೇಸಾಯಕ್ಕೆ ಕನ್ವರ್ಟ್ ಮಾಡಲಾಗಿ, 2008ರಲ್ಲಿ ಸಾವಯವ ಕೃಷಿಗೆ ರೂ. 100 ಕೋಟಿ ಕೊಟ್ಟಿದ್ದನ್ನು ಜ್ಞಾಪಿಸಿಕೊಳ್ಳಬೇಕಾಗಿದೆ. ಇಡೀ ದೇಶದಲ್ಲಿ ನಮ್ಮ ರಾಜ್ಯ ಸಾವಯವ ಕೃಷಿಯಲ್ಲಿ 3ನೇ ಸ್ಥಾನದಲ್ಲಿದೆ.

ಮಾನ್ಯ ಸಭಾಪತಿಗಳೆ, ನಾವು ಬಳಸುವ ಎಣ್ಣೆ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಈ ಎಣ್ಣೆಯ ಬೆಲೆ ಬಹಳ ಜಾಸ್ತಿಯಾಗಿದೆ ಎನ್ನುವುದು ನಮಗೆಲ್ಲರಿಗೂ ಗೊತ್ತು. ನಾನು ಈ ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ. ಶೇಕಡ 65 ರಷ್ಟು ಎಣ್ಣೆಯನ್ನು ಆಮದು ಮಾಡಿಕೊಳ್ಳುತ್ತಿದ್ದೇವೆ. ಆ ಎಣ್ಣೆಯನ್ನು ತೆಗೆಯಬೇಕಾದರೆ ಅದಕ್ಕೆ Hexane ಎನ್ನುವ ಕೆಮಿಕಲ್ ಹಾಕುತ್ತಾರೆ. ಪೂರ್ತಿ ಎಣ್ಣೆ ಬರುವುದಿಲ್ಲ. ಶೇಕಡ 75 ರಷ್ಟು ಮಾತ್ರ ಬರುತ್ತದೆ. ಹಿಂಡಿ ಉಳಿಯುತ್ತದೆ. ಅಷ್ಟು ಮಾತ್ರವಲ್ಲದೇ ಎಣ್ಣೆಗೆ paraffin ಎನ್ನುವ ಇನ್ನೊಂದು ವಸ್ತುವನ್ನು ಹಾಕುತ್ತಾರೆ.

(ಮುಂದು . . .)

(426) ಎಸ್‌ಪಿಆರ್/ಆರ್‌ಎನ್/3:50/17/03/2022

(ಸಭಾಪತಿಯವರ ಉಪಸ್ಥಿತಿ)

**ಶ್ರೀಮತಿ ಭಾರತಿ ಶೆಟ್ಟಿ(ಮುಂದು):-**

ಪ್ರಸ್ತುತ ಅರಬ್ ದೇಶಗಳಲ್ಲಿ ಪೆಟ್ರೋಲಿಯಂನ್ನು ಉತ್ಪತ್ತಿ ಮಾಡುವ ಈ ರಾಸಾಯನಿಕವನ್ನು ಎಣ್ಣೆ ತೆಗೆಯುವುದಕ್ಕೆ ಬಳಸುತ್ತಾರೆ. ಈ ಹಿಂದಿನ 1961-62 ನೇ ಸಾಲಿನಲ್ಲಿಯೇ ಗಾಣದಿಂದ ಎಣ್ಣೆ ತೆಗೆಯುವ ವಿಧಾನವು ಸ್ಥಗಿತಗೊಂಡಿತು. ಆ ನಂತರದಲ್ಲಿ ವಿದ್ಯುತ್ ಯಂತ್ರಗಳ ಮೂಲಕ ಎಣ್ಣೆಯನ್ನು ತೆಗೆಯುವ ಕೆಲಸಗಳಾಗುತ್ತಿವೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಮ್ಮ ಭಾಗದಲ್ಲಿ ಗಾಣದಿಂದ ಎಣ್ಣೆ ತೆಗೆಯುವ ಪದ್ಧತಿ ಈಗಲೂ ಸಹ ಇದೆ. ನಮ್ಮಲ್ಲಿ ಸುಮಾರು 10–12 ಘಟಕಗಳಿವೆ. ರೈತರು ಮತ್ತು ಗ್ರಾಹಕರು ಅಲ್ಲಿಗೆ ಹೋಗಿ ಎಣ್ಣೆಯನ್ನು ತೆಗೆದುಕೊಂಡು ಬರುತ್ತಿದ್ದಾರೆ.

**ಶ್ರೀಮತಿ ಭಾರತಿ ಶೆಟ್ಟಿ(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಅಲ್ಲಿ ಎತ್ತುಗಳನ್ನು ಬಳಸುವುದಿಲ್ಲ. ಗಾಣದಲ್ಲಿ ವಿದ್ಯುತ್ ಯಂತ್ರಗಳನ್ನು ಉಪಯೋಗಿಸಿ ಎಣ್ಣೆಯನ್ನು ತೆಗೆಯುತ್ತಾರೆ.

**ಸಭಾಪತಿಯವರು:–** ಈಗ ಗಾಣದಲ್ಲಿ ಎಲ್ಲಿಯೂ ಸಹ ಎತ್ತುಗಳಿಲ್ಲ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ(ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ನೀವು ಹೇಳುವುದು ನಿಜವಾಗಿದೆ. ಹಾಲಿ ಗಾಣಗಳಲ್ಲಿ ಎತ್ತುಗಳಿಲ್ಲ ಆದರೆ ವಿದ್ಯುತ್ ಯಂತ್ರಗಳಿವೆ. ಎರಡೂ ಪ್ರಕಾರಗಳಲ್ಲಿ ಎಣ್ಣೆಯನ್ನು ತೆಗೆಯಲಿ; ಆದರೆ.....

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ನಾನೇ ಗಾಣಕ್ಕೆ ಹೋಗಿ ಎಣ್ಣೆಯನ್ನು ತರುತ್ತಿದ್ದೇನೆ.

**ಶ್ರೀಮತಿ ಭಾರತಿ ಶೆಟ್ಟಿ:–** ಶ್ರೀ ಶ್ರೀಕಂಠಗೌಡರೇ, ನೀವು ಪುಣ್ಯವಂತರಿದ್ದೀರಿ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–** ಮಾನ್ಯ ಸಭಾಪತಿಯವರೇ, ಸದಸ್ಯರ ಮಾತನ್ನು ನಾನು ಒಪ್ಪುತ್ತೇನೆ. ಇವತ್ತಿನ ದಿವಸ ಮಾರುಕಟ್ಟೆಗಳಲ್ಲಿ ಶೇಂಗಾ ಎಣ್ಣೆಯನ್ನು ಮಾರುತ್ತಿದ್ದಾರೆ. ಶೇಂಗಾವನ್ನು ನಿಮ್ಮ ಹಾಗೂ ನಮ್ಮ ಭಾಗದಲ್ಲಿಯೂ ಸಹ ಬೆಳೆಯಲಾಗುತ್ತದೆ. ಆದರೆ ಇವತ್ತಿನ ದಿವಸ ಮಾರುಕಟ್ಟೆಯಲ್ಲಿ ಒಂದು ಕೆ.ಜಿ. ಶೇಂಗಾಗೆ 100 ರೂಪಾಯಿಗಳಷ್ಟು ಬೆಲೆ ಇದೆ. ಗಾಣದಿಂದ ಒಂದು

ಲೀಟರ್ ಶೇಂಗಾ ಎಣ್ಣೆ ಬರಬೇಕೆಂದರೆ, ಅದಕ್ಕೆ 3 ಕೆ.ಜಿ.ಯಷ್ಟು ಶೇಂಗಾ ಅವಶ್ಯಕವಾಗಿದೆ. ಅಂದರೆ 3 ಕೆ.ಜಿ. ಶೇಂಗಾವನ್ನು ನುರಿಸಿದಾಗ, 1 ಕೆ.ಜಿ.ಯಷ್ಟು ಎಣ್ಣೆ ಬರುತ್ತದೆ. ಅಲ್ಲಿಗೆ ಶೇಂಗಾ ಬೆಲೆಯು 300 ರೂಪಾಯಿಗಳಷ್ಟಾಯಿತು. ಎಣ್ಣೆ ತೆಗೆದ ಮೇಲೆ ಬರುವ ಹಿಂಡಿಯನ್ನು ಗಾಣದವರು ಮಾರಾಟ ಮಾಡಿಕೊಂಡು ಲಾಭ ಮಾಡಿಕೊಳ್ಳುತ್ತಾರೆ. ಆದರೆ ನಾವು ಇವತ್ತಿನ ದಿವಸ ಎಷ್ಟು ಬೆಲೆಗೆ ಒಂದು ಲೀಟರ್ ಶೇಂಗಾ ಎಣ್ಣೆಯನ್ನು ಕೊಳ್ಳುತ್ತಿದ್ದೇವೆ? 180 – 190 ರೂಪಾಯಿಗಳನ್ನು ನೀಡಿ ನಾವು ಒಂದು ಲೀಟರ್ ಶೇಂಗಾ ಎಣ್ಣೆಯನ್ನು ಕೊಳ್ಳುತ್ತಿದ್ದೇವೆ. ಹೀಗೆ ಮಾರಾಟ ಮಾಡಿದ್ದಲ್ಲಿ ಅವರಿಗೆ ಎಲ್ಲಿಂದ ಲಾಭ ಬರುತ್ತದೆ? ಈಗಷ್ಟೇ ಶ್ರೀಮತಿ ಭಾರತಿ ಶೆಟ್ಟಿಯವರು ಪ್ರಸ್ತಾಪಿಸಿದಂತೆ, ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳುತ್ತಿರುವ ಎಣ್ಣೆಯಲ್ಲಿ ಕಚ್ಚಾ ತೈಲವಿರುತ್ತದೆ. ಇದನ್ನು ಸಂಸ್ಕರಿಸಿ, ಗಾಣದ ಎಣ್ಣೆಯೊಂದಿಗೆ ಬೆರೆಸುವುದರಿಂದ, ಇಡೀ ದೇಶದಲ್ಲಿ ಕ್ಯಾನ್ಸರ್ ಕಾಯಿಲೆಯ ರೋಗಿಗಳು ಹೆಚ್ಚಾಗಲು ಪ್ರಾರಂಭವಾಗಿದೆ. ಈ ಹಿಂದೆ ನಾವು ಸಂವಿಧಾನದ ಬಗ್ಗೆ ಯಾವ ರೀತಿಯಾದ ಚರ್ಚೆಯನ್ನು ಮಾಡಿದ್ದೇವೆಯೋ ಅದೇ ರೀತಿಯಾಗಿ ಇವತ್ತಿನ ಆಹಾರ ಪದ್ಧತಿ ಮತ್ತು ಕೃಷಿಯ ವಿಚಾರಗಳ ಬಗ್ಗೆ ಒಂದು ದಿನ ಸಂಪೂರ್ಣವಾಗಿ ಚರ್ಚಿಸೋಣವೆಂದು ಈ ಕಾರಣಕ್ಕಾಗಿಯೇ ನಾನು ಮೊನ್ನೆಯ ದಿನ ತಮ್ಮಲ್ಲಿ ವಿನಂತಿಸಿಕೊಂಡಿದ್ದೆನು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಇದು ಒಳ್ಳೆಯ ವಿಚಾರವಾಗಿದ್ದು, ಒಂದಂಶವನ್ನು ನಾನು ಹೇಳಬಯಸುತ್ತೇನೆ.

**ಸಭಾಪತಿಯವರು:–** ಬೇಡಿ, ಚರ್ಚಿಸಬೇಡಿ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಸದಸ್ಯರು ಪ್ರಸ್ತಾಪಿಸಿರುವ ಅಂಶವು ಸರಿಯಾಗಿದೆ. ವಿರೋಧ ಪಕ್ಷದ ನಾಯಕರು ಪ್ರಸ್ತುತ ಸದನದಲ್ಲಿ ಉಪಸ್ಥಿತರಿದ್ದಾರೆ. ಮಂಗಳೂರು ಬಂದರಿನಲ್ಲಿ ಪೆಟ್ರೋಲಿಯಂ ಪ್ರಕ್ರಿಯೆಯಲ್ಲಿನ ಕಡೆಯ ಉತ್ಪನ್ನವನ್ನು ಸಮುದ್ರಕ್ಕೆ ಬಿಟ್ಟುಬಿಡುತ್ತಾರೆ. ಆ ವಸ್ತುಗಳನ್ನು ತಿಂದ ಸಮುದ್ರದಲ್ಲಿನ ಮೀನುಗಳು ಸಾಯುವುದಕ್ಕೆ ಪ್ರಾರಂಭವಾಗುತ್ತದೆ. ಹೀಗಾಗಿ

ಅಂತಹ ವಸ್ತುಗಳನ್ನು ಕೇಕ್ ರೂಪದಲ್ಲಿ ಮಾಡಿ ನಮಗೆ ತಂದು ಕೊಡುತ್ತಿದ್ದಾರೆ. ಇವತ್ತಿನ ದಿವಸ ಇಂತಹ ವಸ್ತುಗಳು ಮಂಗಳೂರು ಬಂದರಿನಲ್ಲಿವೆ. ಆ ವಸ್ತುವನ್ನೇ ಪ್ಯಾರಾಫಿನ್ ಎಂದು ಕರೆಯುತ್ತಾರೆ. ಈ ವಸ್ತುವನ್ನು ಬಿಸಿ ಮಾಡಿ ಅದರಲ್ಲಿನ ಒಂದು ಲೀಟರ್ ಎಣ್ಣೆಗೆ 300 ಲೀಟರ್ ಪ್ಯಾರಾಫಿನ್‌ನ್ನು ಸೇರಿಸುತ್ತಾರೆ. ಇದರರ್ಥ ನಾವು ನೇರವಾಗಿ ಪೆಟ್ರೋಲ್‌ನ್ನೇ ಸೇವಿಸುತ್ತಿದ್ದೇವೆ. ಇದು ಪೆಟ್ರೋಲ್ ಪ್ರಕ್ರಿಯೆಯ ಕಡೆಯ ವಸ್ತುವಾಗಿದೆ. ಇದರಿಂದ ಕ್ಯಾನ್ಸರ್ ಕಾಯಿಲೆ ಮಾತ್ರವಲ್ಲದೇ, ಇನ್ನಿತರೆ ಕಾಯಿಲೆಗಳೂ ಸಹ ಬರುತ್ತವೆ. ನಾವು ಡಾ॥ ಮಂಜುನಾಥ್ ರವರ ಬಗ್ಗೆ ಮಾತನಾಡುತ್ತೇವೆ. ಈ ರೀತಿಯ ಕಲಬೆರೆಕೆಯಿಂದಾಗಿ, ಇವತ್ತಿನ ದಿವಸ 20-30 ವರ್ಷದ ಯುವಕರು ಅಂದರೆ 50 ವರ್ಷಕ್ಕೂ ಒಳಗಿರುವವರು ಕಿಡ್ನಿ ವೈಫಲ್ಯ, ಹೃದಯ ಸಮಸ್ಯೆ ಇತ್ಯಾದಿಗಳುಂಟಾಗುತ್ತಿವೆ. ಆದ್ದರಿಂದ ಸರ್ಕಾರವು ಈ ವಿಷಯದ ಬಗ್ಗೆ ಗಮನಹರಿಸಬೇಕು. ಸೂರ್ಯಕಾಂತಿ ಎಣ್ಣೆಯನ್ನು ಹೆಚ್ಚಾಗಿ ಉಕ್ರೇನ್, ರಷ್ಯಾ ಇತ್ಯಾದಿ ರಾಷ್ಟ್ರಗಳಿಂದ ಆಮದು ಮಾಡಿಕೊಳ್ಳುತ್ತೇವೆ. ಹೀಗಾಗಿ ನಾವು ಇವತ್ತಿನ ದಿವಸ ಎಣ್ಣೆ ಬೀಜಗಳನ್ನು ಹೆಚ್ಚಾಗಿ ಬೆಳೆಸುವಂತಾಗಬೇಕು. ಈ ವಿಚಾರದಲ್ಲಿ ಸರ್ಕಾರವು ಗಮನಹರಿಸಬೇಕು. ಏಕೆಂದರೆ, ಮಧ್ಯಮ ವರ್ಗದ ಜನರು ಹೆಚ್ಚು ಬೆಲೆ ಕೊಟ್ಟು ಎಣ್ಣೆಯನ್ನು ಖರೀದಿಸುವುದಕ್ಕಾಗುವುದಿಲ್ಲ. ಎಷ್ಟೆ ಬೆಲೆ ಇದ್ದರೂ ಸಹ ಶ್ರೀಮಂತರು ಖರೀದಿಸಬಹುದು. 10 ಕೆ.ಜಿ. ಶೇಂಗಾಗೆ ಕೇವಲ 3 ಲೀಟರ್ ಎಣ್ಣೆ ದೊರೆಯುತ್ತದೆ. ಅಂದರೆ ಒಂದು ಕೆ.ಜಿ. ಶೇಂಗಾ ಎಣ್ಣೆಗೆ ಗರಿಷ್ಠ 300-400 ರೂಪಾಯಿಗಳಾಗುತ್ತವೆ. ಇಷ್ಟೊಂದು ಮೊತ್ತವನ್ನು ಮಧ್ಯಮ ವರ್ಗದ ಜನರು ಕೊಡುವುದಕ್ಕಾಗುವುದಿಲ್ಲ. 120-150 ರೂಪಾಯಿಗಳವರೆಗೆ ಮಾತ್ರವೇ ಕೊಡಲು ಸಾಧ್ಯವಾಗುತ್ತದೆ. ಕೇವಲ 80 ರೂಪಾಯಿಗಳಿಗೂ ಸಹ ಕೆಲವೊಂದು ಎಣ್ಣೆಗಳು ಲಭ್ಯವಾಗುತ್ತವೆ. ಹೀಗಾಗಿ ಈ ವಿಚಾರದಲ್ಲಿ ಸರ್ಕಾರವು ಗಮನ ಹರಿಸಬೇಕೆಂದು ನಾನು ತಮ್ಮ ಮೂಲಕ ವಿನಂತಿಸುತ್ತೇನೆ.

ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ನನಗೆ ಖುಷಿ ನೀಡುವ ವಿಷಯವೇನೆಂದರೆ, ಅದು ಕೃಷಿ ಆಯವ್ಯಯವಾಗಿದೆ. ಕೃಷಿಯಲ್ಲಿನ ರೈತ ಮಹಿಳೆಯರಿಗೆ ಪ್ರೋತ್ಸಾಹ ನೀಡಲಾಗಿದೆ. ಕೃಷಿಯತ್ತ ಮಹಿಳೆಯರು ಬರಬೇಕೆನ್ನುವ ನಿಟ್ಟಿನಲ್ಲಿ ಸರ್ಕಾರವು ಕೃಷಿ ಕ್ಷೇತ್ರದಲ್ಲಿ 'ಕೃಷಿ' ಮತ್ತು 'ಕೃಷಿ ಪಂಡಿತ' ಪ್ರಶಸ್ತಿಗಳನ್ನು ಘೋಷಿಸಿದೆ. ಇದನ್ನು ನಾನು ಸ್ವಾಗತಿಸುತ್ತೇನೆ. ಇದೇ ರೀತಿಯಾಗಿ ರೇಷ್ಮೆ

ಉತ್ಪತ್ತಿಯಲ್ಲಿ ನಮ್ಮ ರಾಜ್ಯವೇ ಮೊದಲನೇ ಸ್ಥಾನದಲ್ಲಿದೆ. ಇದೇ ವಿಚಾರಕ್ಕೆ ಸಂಬಂಧಪಟ್ಟಂತೆ ನಾನು ಪ್ರಶ್ನೆಯನ್ನೂ ಸಹ ಕೇಳಿದ್ದೆನು; ಅದಕ್ಕೆ ಸರ್ಕಾರವೂ ಸಹ ಉತ್ತರಿಸಿದೆ. ಈ ವಿಚಾರದಲ್ಲಿ ನನಗೆ ಬಹಳ ಖುಷಿಯಾಗಿದೆ. ಒಂದು ರೇಷ್ಮೆ ಗೂಡಿಗೆ ಸರ್ಕಾರವು 10 ಸಾವಿರ ರೂಪಾಯಿಗಳಷ್ಟು ಪ್ರೋತ್ಸಾಹ ಧನವನ್ನು ಘೋಷಿಸಿದ್ದು, ಇದನ್ನೂ ಸಹ ನಾನು ಸ್ವಾಗತಿಸುತ್ತೇನೆ. ಇನ್ನೂ ಹಲವಾರು ಯೋಜನೆಗಳನ್ನು ಸರ್ಕಾರವು ಘೋಷಿಸಿದೆ. ನಮ್ಮ ರಾಜ್ಯದಲ್ಲಿ ತರಬೇತಿ ಕೇಂದ್ರಗಳಾಗಬೇಕೆಂದು ನಾವು ಪ್ರಶ್ನೆಗಳನ್ನು ಕೇಳಿದ್ದೆವು. ಇವುಗಳನ್ನೆಲ್ಲಾ ಸರ್ಕಾರವು ಸಾಕಾರಗೊಳಿಸಿದೆ. ಇದಕ್ಕೆ ಅವಶ್ಯವಾದ ಸಣ್ಣ ಸಣ್ಣ ಯಂತ್ರಗಳನ್ನು ಸರ್ಕಾರವು ತರಬೇಕೆಂಬ ವಿನಂತಿಯನ್ನು ತಮ್ಮ ಮೂಲಕ ಮಾಡುತ್ತೇನೆ.

ಹಾಲು ಉತ್ಪಾದಕರ ಬಗ್ಗೆ ಬಹಳಷ್ಟು ಸದಸ್ಯರು ಹೇಳಿದರು. ಪ್ರಸ್ತುತ ಆಯವ್ಯಯದಲ್ಲಿ ಪ್ರಸ್ತಾಪಿಸಿರುವ ಮಹಿಳೆಯರ ಬಗ್ಗೆ ನಾನು ಆದಷ್ಟು ಮಾತನಾಡಬಯಸುತ್ತೇನೆ. ಏಕೆಂದರೆ ಮಹಿಳೆಯರಿಗೆ ಏನೂ ಕೊಟ್ಟಿಲ್ಲವೆಂದು ಹೇಳುತ್ತಿದ್ದರು. ಇವತ್ತಿನ ದಿವಸ ರಾಜ್ಯದಲ್ಲಿ ಪ್ರಥಮ ಬಾರಿಗೆ ಹಾಲು ಉತ್ಪನ್ನಗಳಿಗಾಗಿ ಸರ್ಕಾರವು ಕ್ಷೀರ ಸಮೃದ್ಧಿ ಬ್ಯಾಂಕ್‌ಗಳನ್ನು ಸ್ಥಾಪಿಸಿದೆ. ಇದನ್ನು ನಾನು ಬಹಳ ಹೆಮ್ಮೆಯಿಂದ ಸ್ವಾಗತಿಸುತ್ತೇನೆ. ಅದೇ ರೀತಿಯಾಗಿ ಪ್ರತ್ಯೇಕವಾಗಿ ಜಿಲ್ಲಾ ಹಾಲು ಒಕ್ಕೂಟಗಳ ರಚನೆ ಮತ್ತು ಮೆಗಾ ಡೈರಿಗಳ ಸ್ಥಾಪನೆಗಳಾಗಿವೆ. ಅದರಲ್ಲೂ ವಿಶೇಷವಾಗಿ ನಾನು ಪ್ರತಿನಿಧಿಸುವ ಶಿವಮೊಗ್ಗ ಜಿಲ್ಲೆಯಲ್ಲಿಗೆ ಒಂದು ದೊರೆತಿರುವುದು ನನಗ ಬಹಳ ಸಂತೋಷವನ್ನು ತಂದಿದೆ. ಯಶಸ್ವಿನಿ ಯೋಜನೆಯ ಬಗ್ಗೆ ನಾನು ಏನನ್ನೂ ಹೇಳಬೇಕಾಗಿಲ್ಲ. ಪ್ರತಿಯೊಬ್ಬ ಸದಸ್ಯರೂ ಸಹ ಯಶಸ್ವಿನಿ ಯೋಜನೆಯಿಂದ ಬಹಳ ಸಂತೋಷಗೊಂಡಿದ್ದಾರೆ. ಈ ಹಿಂದೆ ಪ್ರತಿಯೊಬ್ಬ ರೈತರು ಅದನ್ನು ಕೇಳುವ ವ್ಯವಸ್ಥೆಯು ಇತ್ತು.

ನೀರಾವರಿ ವಿಚಾರಗಳ ಬಗ್ಗೆ ಹೇಳುವುದಾದರೆ, ಕೃಷ್ಣಾ ಮೇಲ್ದಂಡೆ ಯೋಜನೆಯ ಬಗ್ಗೆ ಬಹಳಷ್ಟು ಸದಸ್ಯರು ಮಾತನಾಡಿದರು. ಅದೇ ರೀತಿಯಾಗಿ ಮಹದಾಯಿ, ಭದ್ರಾ, ಹಾಗೂ ಎತ್ತಿನಹೊಳೆ ಯೋಜನೆಗಳ ಬಗ್ಗೆಯೂ ಸಹ ಮಾತನಾಡಿದರು. ಮೇಕೆದಾಟು ಯೋಜನೆಯ ಬಗ್ಗೆ ಮಾತನಾಡಿದ ಸದಸ್ಯರುಗಳ ಹೆಸರನ್ನು ನಾನು ಪ್ರಸ್ತಾಪಿಸುವುದಿಲ್ಲ ಏಕೆಂದರೆ ಒಂದು ವೇಳೆ ನಾನು

ಅವರ ಹೆಸರನ್ನು ಪ್ರಸ್ತಾಪಿಸಿದರೆ, ಅವರು ಎದ್ದು ನಿಂತು ಮಾತನಾಡುತ್ತಾರೆ. ಮೇಕೆದಾಟು ಯೋಜನೆಯ ಬಗ್ಗೆ ಬಹಳ ದೊಡ್ಡ ಹೋರಾಟವನ್ನು ಮಾಡಿದ್ದಾರೆ. ಈ ವಿಚಾರದಲ್ಲಿ ನನ್ನ ಅಣ್ಣನವರಾದ ಶ್ರೀ ಬಿ.ಕೆ.ಹರಿಪ್ರಸಾದ್‌ರವರನ್ನು ನನ್ನನ್ನು ಬೆಂಬಲಿಸಿದರು.

**ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಮ್ಮ ಸದನದಲ್ಲಿ ಕೇವಲ ಮೂರು ಮಹಿಳಾ ಸದಸ್ಯರಿದ್ದಾರೆ. ಹೀಗಾಗಿ ಅವರಿಗೆ ಎಷ್ಟು ಮಾತನಾಡಲು ಬೇಕಾದರೂ ಅವಕಾಶವನ್ನು ನೀಡಿ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ 'ಜೀವನಕ್ಕಾಗಿ ನೀರು' ಎನ್ನುವ ಹೋರಾಟವನ್ನು ಈಗ ಮಾಡಿದ್ದಾರೆ. ಜೀವವಿದ್ದರೆ ಜೀವನವಲ್ಲವೇ? ಈ ಹಿಂದೆ ಎರಡು ವರ್ಷಗಳ ಕಾಲ ಕೋವಿಡ್-19 ರಂತಹ ಸಾಂಕ್ರಾಮಿಕ ಕಾಯಿಲೆಯು ವ್ಯಾಪಕವಾಗಿ ಹರಡುತ್ತಿತ್ತು. ಜೀವ ಉಳಿದರೆ ಮಾತ್ರವೇ ಜೀವನವನ್ನು ನಡೆಸುವುದು. ಆ ನಂತರದಲ್ಲಿ ಜೀವನ ನಡೆಸಲು ನೀರಿನ ಅವಶ್ಯಕತೆ ಇರುತ್ತದೆ. ಜೀವವಿಲ್ಲದಿದ್ದರೆ ಜೀವನವನ್ನು ನಡೆಸುವುದಾದರೂ ಹೇಗೆ? ಕೋವಿಡ್-19 ರ ಕಾರಣಕ್ಕಾಗಿ ಹೋರಾಟವನ್ನು ಮಧ್ಯದಲ್ಲಿ ನಿಲ್ಲಿಸಿ, ಸ್ವಲ್ಪ ದಿನಗಳ ನಂತರ ಪುನಃ ಪ್ರಾರಂಭಿಸಿದರು. ವಿರೋಧ ಪಕ್ಷದವರ ಹೋರಾಟದಿಂದ ಸರ್ಕಾರಕ್ಕೆ ಹೊಟ್ಟೆ ಉರಿ ಬಂದಿತು ಎಂದು ಹೇಳಿದರು. ಆಗಲೇ ನಮ್ಮ ಮುಖ್ಯಮಂತ್ರಿಗಳು ಈ ಮೇಕೆದಾಟು ಯೋಜನೆಯನ್ನು ನಾವೇ ಮಾಡುತ್ತೇನೆ ಎಂದು ತಿಳಿಸಿ, ಅದಕ್ಕೆ ಅನುದಾನವನ್ನೂ ಸಹ ಘೋಷಿಸಿದರು. ಆದರೆ ವಿರೋಧ ಪಕ್ಷದವರು ತಾವು ಹೋರಾಟ ಮಾಡಿದ್ದಕ್ಕೆ ಸರ್ಕಾರ ಹಣ ನೀಡಿದೆ ಎಂಬುದಾಗಿ ಹೇಳುತ್ತಿದ್ದಾರೆ. ಈ ಎರಡೂ ವಿಚಾರಗಳು ಸರಿಯಾಗಿವೆ. 'ನಮ್ಮ ಪ್ರಚಾರದ ಹೊಟ್ಟೆ ಉರಿಯನ್ನು ಇವರಿಗೆ ತಾಳಲಿಕ್ಕೆ ಆಗುವುದಿಲ್ಲ' ಎಂದು ವಿರೋಧ ಪಕ್ಷದವರು ಸರ್ಕಾರವನ್ನು ಟೀಕಿಸಿದರು. ನಿಜವಾಗಿಯೂ ಹೇಳುತ್ತೇನೆ ನಾವೂ ಯಾರೂ ಸಹ ಹೊಟ್ಟೆ ಉರಿಯನ್ನು ಪಟ್ಟಿಲ್ಲ; ಈ ವಿಚಾರದಲ್ಲಿ ನಾನಂತೂ ಸಹ ಬಹಳ ಖುಷಿ ಪಟ್ಟಿದ್ದೇನೆ. ಇದಕ್ಕೆ ಕಾರಣವೇನೆಂದರೆ, ಜನಸಂಘದ ಕಾಲದಿಂದಲೂ ಸಹ ನಾವು ಹೋರಾಟಗಳನ್ನು ಮಾಡುತ್ತಲೇ ಬಂದಿದ್ದೇವೆ. ನಾವು ಬೆಲೆ ಏರಿಕೆ, ನೆರೆ ಹಾವಳಿಗಾಗಿ ಮುಷ್ಕರ, ಪೆಟ್ರೋಲ್ ಬೆಲೆ ಏರಿಕೆ ಇತ್ಯಾದಿಗಳ

ವಿರುದ್ಧ ಮನೆ ಮನೆಗಳಿಗೆ ಹೋಗಿ ಹೋರಾಟಗಳನ್ನು ಮಾಡುತ್ತಾ ಬಂದಿದ್ದೇವೆ. ನಾವು ಎಲ್ಲದಕ್ಕೂ ಮುಷ್ಕರಗಳನ್ನು ಹೂಡುತ್ತಿದ್ದೆವು. ಚುನಾವಣೆ ಸಂದರ್ಭದಲ್ಲಿಯೂ ಸಹ ನಾವು ಎಲ್ಲಾ ಕಡೆಗಳಲ್ಲಿ ಮನೆ-ಮನೆಗಳಿಗೆ ಓಡಾಡುತ್ತಿದ್ದೆವು. ಆದರೆ ನಮಗೆ ಮತಗಳೇ ದೊರೆಯುತ್ತಿರಲಿಲ್ಲ. ಆಗಿನ ಸಂದರ್ಭದಲ್ಲಿ ಮಂಗಳೂರು ಭಾಗದಲ್ಲಿ ಬಹುಮತ ಬಿಡಿ; ನಮ್ಮ ಪಕ್ಷದ ಅಭ್ಯರ್ಥಿಗಳಿಗೆ ಠೇವಣಿ ಮತಗಳೂ ಸಹ ಲಭಿಸುತ್ತಿರಲಿಲ್ಲ. ನಾವು ಎಷ್ಟೆಲ್ಲಾ ಕೆಲಸಗಳನ್ನು ಮಾಡುತ್ತೇವೆ; ಆದರೆ ಈ ಜನರಿಗೆ ಏನಾಗಿದೆ ನಮಗೆ ಮತ ನೀಡುವುದೇ ಇಲ್ಲವಲ್ಲ ಎಂದು ನಾನು ಭಾವಿಸುತ್ತಿದ್ದೆನು. ಇವತ್ತಿನ ದಿವಸ ಕಾಂಗ್ರೆಸ್ ಪಕ್ಷದಲ್ಲಿ ಇರುವ ಕಚ್ಚಾಟಗಳಂತೆ, ಅಂದಿನ ದಿನಗಳಿರಲಿಲ್ಲ; ಆಗ ಬಹಳ ಸ್ನೇಹಮಯವಾಗಿತ್ತು. ಆಗಿನ ಕಾಲದಲ್ಲಿ ಮತದಾನ ಕೋರಿ ನಾವು ಒಂದೊಂದು ಮನೆಗಳಿಗೆ ಕನಿಷ್ಠ 5-6 ಬಾರಿ ಹೋಗುತ್ತಿದ್ದೇವು. ಆಗಿನ ಕಾಲದಲ್ಲಿ ನಾವು ವಠಾರಗಳಿಗೂ ಸಹ ಹೋಗುತ್ತಿದ್ದೇವು. ಆಗ ನಮಗೆ "ಬಾಗಿಲನ್ನು ಮೆಲ್ಲಗೆ ಹಾಕಿ, ಗೇಟ್ ಹಾಕಿಕೊಂಡು ಬನ್ನಿ, ಬಡ-ಬಡ ಎಂದು ಹೊಡೆಯಬೇಡಿ" ಎಂಬುದಾಗಿ ಹೇಳುತ್ತಿದ್ದರು. ಇಂತಹ ಮಾತುಗಳನ್ನೆಲ್ಲಾ ಅನುಸರಿಸಿಕೊಂಡು ನಾವು ಮತವನ್ನು ಕೇಳುತ್ತಿದ್ದೆವು. ನಾವು ಹಲವಾರು ದಿನಗಳಿಂದ ಪ್ರಯತ್ನ ಮಾಡುತ್ತಿದ್ದರೆ, ಕಾಂಗ್ರೆಸ್ ಪಕ್ಷದವರು ಕೊನೆಯ ಎರಡು ದಿನಗಳಲ್ಲಿ ಮಾತ್ರವೇ ಚುನಾವಣಾ ಪ್ರಚಾರವನ್ನು ಕೈಗೊಂಡು ನಾವುಗಳು ಗೆದ್ದು ಬಿಡುತ್ತೇವೆ ಎಂದು ಹೇಳುತ್ತಿದ್ದರು. ನೀವು ಗೆಲ್ಲುವುದಿಲ್ಲ ; ನಾವೇ ಗೆಲ್ಲುವುದು ಎಂದು ಆಗ ನಾವು ಹೇಳುತ್ತಿದ್ದೆವು. ಆಗ ನಮ್ಮ ಪಕ್ಷದ ಚಿನ್ಹೆಯು 'ದೀಪ'ವಾಗಿದ್ದು, ನಾವು ದೀಪದ ಗುರುತಿಗೆ ಮತ ಕೇಳುತ್ತಿದ್ದೇವು. ಅವರ ಪಕ್ಷದ ಚಿನ್ಹೆಯು 'ದನಕರು' ಆಗಿದ್ದು, ಅವರು ತಮ್ಮ ಗುರುತಿಗೆ ಮತ ಕೇಳುತ್ತಿದ್ದರು. ನಾವು ಈ ರೀತಿಯ ಗಲಾಟೆಗಳನ್ನು ಮಾಡುತ್ತಿದ್ದೆವು; ಆದರೆ ವಿರೋಧ ಪಕ್ಷದವರೇ ಆಗ ಗೆಲ್ಲುತ್ತಿದ್ದರು. ಆದರೆ ಇವರು ಯಾವುದೇ ಹೋರಾಟಗಳನ್ನು ಮಾಡುತ್ತಿರಲೇ ಇಲ್ಲ. ನಾವು ಹೋರಾಟ, ಓಡಾಟಗಳನ್ನು ಮಾಡಿ ಬೆವರು ಸುರಿಸುತ್ತಿದ್ದೆವು. ಈಗ ವಿರೋಧ ಪಕ್ಷದವರು ಹೋರಾಟಗಳನ್ನು ಮಾಡುತ್ತಿರುವುದರಿಂದ ನನಗೆ ಬಹಳ ಖುಷಿಯಾಯಿತು.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ...

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ನಾವು ಅವರ ವಿಷಯವನ್ನು ಮಾತನಾಡುತ್ತಿದ್ದೇನೆ. ಅವರೇ ಅಡ್ಡಿಪಡಿಸಿಲ್ಲ. ನಾನು ನಿಮ್ಮ ವಿಷಯವನ್ನು ಮಾತನಾಡಲೇ ಇಲ್ಲ.

ಹೀಗಾಗಿ ನೀವು ಏಕೆ ಮಧ್ಯದಲ್ಲಿ ಮಾತನಾಡುತ್ತೀರಿ? ಸಾಮಾನ್ಯವಾಗಿ ಇವರಿಬ್ಬರೇ ನನ್ನನ್ನು ಟಾರ್ಗೆಟ್ ಮಾಡುವುದು.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಇವರ ಹೋರಾಟದ ಬಗ್ಗೆ ನಾನು ಎರಡು ಮಾತನಾಡಗಳನ್ನಾಡಲು ಇಚ್ಛಿಸುತ್ತೇನೆ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ನಾನು ಯೀಲ್ಡ್ ಆಗಿಲ್ಲ. ನಾವೂ ಸಹ ಪಾದಯಾತ್ರೆಯನ್ನು ಮಾಡಿದ್ದೇವೆ. ನಾವು ಆಗಿನ ಸಂದರ್ಭದಲ್ಲಿಯೇ ಸೈಕಲನ್ನು ತುಳಿದಿದ್ದೇವೆ ಹಾಗೂ ಎತ್ತಿನ ಗಾಡಿಗಳಲ್ಲಿ ಹೋಗಿದ್ದೇವೆ ಮತ್ತು ಎಲ್ಲಾ ರೀತಿಯ ಹೋರಾಟಗಳನ್ನು ಮಾಡಿದ್ದೇವೆ. ನಾವು ಎಲ್ಲಿಯೂ ಮುಗ್ಗರಿಸಲಿಲ್ಲ. ವಿರೋಧ ಪಕ್ಷದವರು ಈಗ ಹೋರಾಟ ಮಾಡುತ್ತಿದ್ದಾರೆ. 70 ವರ್ಷಗಳ ನಂತರ ಈಗ ಸೈಕಲನ್ನು ಹತ್ತಿದರೆ, ಇವರು ಮುಗ್ಗರಿಸುವುದಿಲ್ಲವೇ? ನಾವು ಬಹಳ ಹಿಂದೆಯೇ ಸೈಕಲನ್ನು ಹತ್ತಿ ಹೋರಾಟಗಳನ್ನು ಮಾಡಿದ್ದೇವೆ. ಆಗಿನ ಸಂದರ್ಭದಲ್ಲಿ ನನಗೆ ಚಪ್ಪಲಿ ಇರಲಿಲ್ಲ. ಇದು ನನಗೆ ಈಗಲೂ ಸಹ ಚೆನ್ನಾಗಿ ಜ್ಞಾಪಕವಿದೆ. ಆಗ ನನ್ನ ಕಾಲಿನ ಬೆರಳುಗಳೆಲ್ಲವೂ ಕಿತ್ತಿಕೊಂಡು ಬಂದಿದ್ದವು. ಆಗ ನಮಗೆ ಯಾರೂ ಸಹ ಕಬಾಬ್ ಊಟವನ್ನು ಕೊಡಿಸಲಿಲ್ಲ; ನಮಗೆ ಒಂದು ಲೋಟ ನೀರನ್ನು ತಂದು ಕೊಡುವುದು ಕಷ್ಟವಾಗಿತ್ತು. "ಜಾಸ್ತಿ ನೀರನ್ನು ಕುಡಿಯಬೇಡಮ್ಮ; ಹೆಚ್ಚು ನೀರು ಕುಡಿದರೆ, ಜಾಸ್ತಿ ನಡೆಯಲು ಆಗುವುದಿಲ್ಲ" ಎಂದು ನಮಗೆ ಹೇಳುತ್ತಿದ್ದರು. ಆಗಿನ ಕಾಲದಲ್ಲಿ ಅಬ್ಬಬ್ಬಾ ಎಂದರೆ ಒಂದು ಪೆಪ್ಪರ್‌ಮೆಂಟ್‌ನ್ನು ನೀಡುತ್ತಿದ್ದರು. ನಾವು ಆಗಲೇ ಬಹಳ ಕಷ್ಟ ಪಟ್ಟಿದ್ದೇವೆ. ನಾವು ಬಹಳವಾಗಿ ಸೋತು ಇವತ್ತಿನ ದಿವಸ ಗೆದ್ದದ್ದೇವೆ.

**ಸಭಾಪತಿಯವರು:–** ಶ್ರೀಮತಿ ಭಾರತಿ ಶೆಟ್ಟಿಯವರೇ, ನಿಮ್ಮನ್ನು ನೋಡಿದರೆ, ನೀವು ಸೋತಂತೆ ಕಾಣುವುದಿಲ್ಲ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಗೆದ್ದು ಗೆದ್ದು ಇವತ್ತಿನ ದಿವಸ ಸೋತಿರಬಹುದು; ಆದರೆ ನಾವು ಸೋತು–ಸೋತು ಗೆದ್ದಿದ್ದೇವೆ. ಈ ಎಲ್ಲಾ ಕಾರಣಗಳಾಗಿ ಅವರ ಹೋರಾಟವನ್ನು ನೋಡಿ ನಾನು ಹೊಟ್ಟೆ ಉರಿ ಪಟ್ಟುಕೊಂಡಿಲ್ಲ; ಪಡುವುದೂ ಇಲ್ಲ. ಇವರ ಹೋರಾಟವನ್ನು ನೋಡಿ ನನಗೆ ಬಹಳ ಖುಷಿಯಾಯಿತು.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಒಂದೇ ಒಂದು ನಿಮಿಷ; ನಾನು ಹೆಚ್ಚಿಗೆ ಮಾತನಾಡುವುದಿಲ್ಲ. ಹೊಟ್ಟೆ ಉರಿ ಎಂದು ನಾವು ಯಾವ ಕಾರಣಕ್ಕಾಗಿ ಹೇಳಿದ್ದೇವೆ ಎಂದರೆ, ಆಡಳಿತ ಪಕ್ಷಕ್ಕೆ ಸ್ವಲ್ಪ ಮಟ್ಟಿಗೆ ಬೆಂಕಿ ಬೀಳಲಿ. ನಿಮ್ಮ ಪಕ್ಷದಿಂದ 25 ಸಂಸದರು ಇದ್ದೀರಿ, ಮೇಕೆದಾಟು ಯೋಜನೆಯನ್ನು ಜಾರಿಗೊಳಿಸಲು ಪರಿಸರ ಇಲಾಖೆಯಿಂದ ಅನುಮೋದನೆಯನ್ನು ಪಡೆದುಕೊಂಡು ಬನ್ನಿ ಅಷ್ಟೇ ವಿನಃ ಬೇರೆ ಇನ್ಯಾವುದೇ ವಿಚಾರವಿಲ್ಲ. ಯೋಜನೆಯ ಅನುಷ್ಠಾನಕ್ಕಾಗಿ ಕೇವಲ ಅನುದಾನವನ್ನು ಮೀಸಲಿಟ್ಟರೆ, ಅಲ್ಲಿ ಒಂದು ರೂಪಾಯಿಯೂ ಸಹ ಖರ್ಚಾಗುವುದಿಲ್ಲ. ಪರಿಸರ ಇಲಾಖೆಯಿಂದ ಅನುಮೋದನೆ ದೊರೆಯದೇ, ಯಾವುದೇ ಕೆಲಸಗಳಾಗುವುದಿಲ್ಲ. ಹೀಗಾಗಿ ಇದನ್ನು ಮಾಡಿ ಎಂದು ನಾನು ವಿನಂತಿಸುತ್ತೇನೆ.

**ಸಭಾಪತಿಯವರು:-** ಶ್ರೀಮತಿ ಭಾರತಿ ಶೆಟ್ಟಿಯವರೇ, ನೀವು ಯೀಲ್ಡ್ ಆದರೆ, ನಾನು ನೀಡಿರುವ ಕಾಲಾವಕಾಶವನ್ನು ಕಡಿತಗೊಳಿಸುತ್ತೇನೆ.

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಸದಸ್ಯರು ಪ್ರಸ್ತಾಪಿಸಿದಂತೆ, ಬೆಂಕಿ ಬಿದ್ದರೆ, ಆರಿಸಲಿಕ್ಕೆ ಜಲ ಮಂಡಳಿ ಇಲಾಖೆಯು ಬಹಳ ಸಮರ್ಥವಾಗಿದೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಚುನಾವಣೆ ಸಂದರ್ಭದಲ್ಲಿ ಪ್ರತಿಯೊಂದು ರಾಜಕೀಯ ಪಕ್ಷಗಳು ಚುನಾವಣಾ ಪ್ರಣಾಳಿಕೆಗಳನ್ನು ಹೊರಹೊಮ್ಮಿಸುತ್ತವೆ. ಆ ಪ್ರಣಾಳಿಕೆಯಲ್ಲಿ ತಿಳಿಸಿದ್ದನ್ನು ಒಂದು ಆಯವ್ಯಯದ ಪುಸ್ತಕದ ಮುಖಾಂತರ ಹಂತ ಹಂತವಾಗಿ ಜಾರಿಗೆ ತರುವ ಪದ್ಧತಿ ಇದೆ.

(ಮುಂದು)

427/17-3-2022/4-00/bkp-vk

**ಶ್ರೀಮತಿ ಭಾರತಿ ಶೆಟ್ಟಿ(ಮುಂದು)**

ಪ್ರಣಾಳಿಕೆಯಲ್ಲಿ ಬಂದಿರುವುದನ್ನು ಬಜೆಟ್ ಮೂಲಕ ಅದನ್ನು ಹಂತ ಹಂತವಾಗಿ ಜಾರಿಗೆ ತರುವಂತಹ ಪದ್ಧತಿ ಇದೆ. ಅದರಲ್ಲಿ ಕೆಲವು ಆಗುತ್ತದೆ, ಕೆಲವು ಆಗುವುದಿಲ್ಲ. ಹೇಳಿ, ಕೇಳಿ ನಾವು ಭಾವನಾತ್ಮಕ ಜೀವಿಗಳು. ಒಬ್ಬ ಮನುಷ್ಯ ಎಂದ ಮೇಲೆ ಅವನಲ್ಲಿ ಭಾವನೆಗಳು

ಇರಬೇಕು. ಇಲ್ಲವೆಂದರೆ, ಅವನು ಮನುಷ್ಯನೇ ಅಲ್ಲ. ಯಾವಾಗ ನನ್ನಲ್ಲಿ ಭಾವನಾತ್ಮಕ ಮಾತುಗಳು ಇರುತ್ತದೋ ಆಗ ಜನರ ಕೆಲಗಳನ್ನು ಮಾಡಬೇಕೆಂದು ಹೇಳ ನಮ್ಮಲ್ಲಿ ಕಮಿಟ್‌ಮೆಂಟ್‌ಗಳು ಇರುತ್ತದೆ. ಆ ರೀತಿಯಲ್ಲಿ ನಾವು ಬೆಳೆದು ಬಂದಿದ್ದೇವೆ. ಅಧಿಕಾರ ಇಲ್ಲದಾಗ ನಾವುಗಳು ನಿರಂತರವಾಗಿ ಹೋರಾಟ ಮಾಡಿ, ನಾವು ಅದನ್ನು ಜಾರಿಗೆ ತಂದಿದ್ದೇವೆ. ಅಧಿಕಾರ ಸಿಕ್ಕಿದ ಮೇಲೆ ನಾವು ಇವತ್ತು ಇಲ್ಲಿ ಕುಳಿತುಕೊಂಡು ಮೇಕೆದಾಟು ಯೋಜನೆ ಮಾಡದೇ ಅಧಿಕಾರ ಹೋದ ಮೇಲೆ ನಾವು ಮೇಕೆದಾಟು ಯೋಜನೆ ಮಾಡುತ್ತೇವೆಂದು ಹೇಳಿದರೆ, ಯಾವ ನ್ಯಾಯ? "ಕೋತಿ ಎನನ್ನೋ ತಿಂದು ಮೇಕೆ ಬಾಯಿಗೆ" ಒರೆಸಿದಂತಾಗುತ್ತದೆ.

**ಸಭಾಪತಿಯವರು:–** ತಾವು ಬಜೆಟ್ ಮೇಲೆ ಮಾತನಾಡಿ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೆ, ನಾನು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, ರಾಜ್ಯ ಸರ್ಕಾರದಿಂದ ಕೆರೆಗಳ ಸಮಗ್ರ ಅಭಿವೃದ್ಧಿಗೆ ೫೦೦ ಕೋಟಿ ರೂಪಾಯಿಗಳನ್ನು ಕೊಡುವುದಾಗಿ ಹೇಳಲಾಗಿದೆ. ಅದರಲ್ಲಿ ಪ್ರವಾಹದಿಂದ ಆಗಿರುವುದಕ್ಕೆ ೨೦೦ ಕೋಟಿ ರೂಪಾಯಿಗಳನ್ನು ಕೊಡುವಂತಹ ವ್ಯವಸ್ಥೆ ಬಗ್ಗೆ ಹೇಳಿದ್ದೀರಿ. ಕೋಲಾರದ ಬಗ್ಗೆ ನಮ್ಮ ಮಾನ್ಯ ಸದಸ್ಯರು ಬಹಳ ಚೆನ್ನಾಗಿ ಹೇಳಿದರು. ೨ನೇ ಹಂತದ ಕೆರೆಗಳನ್ನು KC Valley ಗೆ ಕೊಟ್ಟಿರುವಂತಹದ್ದು. ರಾಜ್ಯದಲ್ಲಿ ಬಹಳಷ್ಟು ಕೆರೆಗಳಿವೆ. ಈ ಕೆರೆಗಳನ್ನೆಲ್ಲಾ ತುಂಬಿಸುವಂತಹ ಕಾರ್ಯಗಳು ಆಗಬೇಕಾಗಿದೆ . ಇವತ್ತು ನಮ್ಮದು ಡಬಲ್ ಇಂಜಿನ್ ಸರ್ಕಾರ. ಡಬಲ್ ಇಂಜಿನ್ ಸರ್ಕಾರ ಇವತ್ತೇನೂ ಹೊಸದಲ್ಲ, ಸ್ವಾತಂತ್ರ್ಯ ಬಂದು ಎಷ್ಟೋ ವರ್ಷಗಳಿಂದ ಈ ರಾಜ್ಯದಲ್ಲಿ ಡಬಲ್ ಇಂಜಿನ್ ಸರ್ಕಾರ ವ್ಯವಸ್ಥೆ ನಡೆದಿದೆ. ನಾನು ತಮ್ಮಲ್ಲಿ ಒಂದು ವಿನಂತಿಯನ್ನು ಮಾಡುವುದೇನೆಂದರೆ, ಒಂದು ಉದಾಹರಣೆಯನ್ನು ಕೊಡುವುದಾದರೆ ನಂಜುಂಡಪ್ಪ ವರದಿಯಲ್ಲಿ ಸೊರಬ ತಾಲ್ಲೂಕನ್ನು ರಾಜ್ಯದಲ್ಲಿ ಅತ್ಯಂತಹ ಹಿಂದುಳಿದ ತಾಲ್ಲೂಕು ಎಂದು ಘೋಷಿಸಲಾಗಿದೆ. ನಮ್ಮ ತಾಲ್ಲೂಕಿನಲ್ಲಿ ನೀರಾವರಿ ಯೋಜನೆಯೇ ಇರಲಿಲ್ಲ. ನಮ್ಮ ತಾಲ್ಲೂಕಿನವರು ರಾಜ್ಯದಲ್ಲಿ ಮುಖ್ಯಮಂತ್ರಿಯಾದವರು

ಇದ್ದಾರೆ. ಅಂದರೆ, ನಮ್ಮ ತಾಲ್ಲೂಕಿನಿಂದ ಆರಿಸಿ ಹೋದವರು ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ಇವತ್ತು ಮೂಗೂರು ಜಲಾಶಯ, ಮೂಗೂರಲ್ಲಿ 105 ಕೋಟಿ ರೂಪಾಯಿಗಳ ವೆಚ್ಚದ ಮೂಲಕ 31 ಕೆರೆಗಳನ್ನು ತುಂಬಿಸುವಂತಹ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಅದರ ಉದ್ಘಾಟನೆಯನ್ನು ಮಾನ್ಯ ಶ್ರೀ ಬಿ.ಎಸ್.ಯಡಿಯೂರಪ್ಪನವರು ಮಾಡಿದರು. ಅದೇ ರೀತಿಯಲ್ಲಿ ಮೂಡಿಯಲ್ಲಿ ಏನು 66 ಕೆರೆಗಳಿಗೆ ನೀರು ತುಂಬಿಸುವಂತಹ ಈ ಏತ ನೀರಾವರಿ ಯೋಜನೆ ಇವತ್ತು ಸಿದ್ಧವಾಗಿ ಪ್ರಾರಂಭೋತ್ಸವಕ್ಕೆ ನಿಂತಿದೆ. ಕಚಳ ಏತ ನೀರಾವರಿ ಯೋಜನಯು 15 ಕೆರೆಗಳಿಗೆ ನೀರು ತುಂಬಿಸುವಂತಹ ಯೋಜನೆಯನ್ನು ಸನ್ಮಾನ್ಯ ಸಿದ್ದರಾಮಯ್ಯನವರು ಮಾಡಿದರು. ಅದೂ ಸಹ ಪ್ರಗತಿಯ ಹಂತದಲ್ಲಿದೆ. ಏಕೆಂದರೆ, ಇಷ್ಟು ಕೆಲಸ ಆಗಿದೆ ಎಂದು ಹೇಳಿದರೆ, ಹೌದು, ಸರ್. ನಮ್ಮದು ಡಬಲ್ ಇಂಜಿನ್ ಸರ್ಕಾರ ಎಂದು ನಾವು ಹೇಳಬೇಕಾಗಿದೆ.

ಮಾನ್ಯ ಸಭಾಪತಿಯವರೆ, ಇವತ್ತು, ಈ ಸರ್ಕಾರದ ಈ ಬಜೆಟ್ ಅನ್ನು ಮಂಡಿಸಿರುವ ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತೇನೆ. ಏಕೆಂದರೆ, ಮಕ್ಕಳಿಗಾಗಿ, Child Budget 40 ಸಾವಿರ ಕೋಟಿ ರೂಪಾಯಿಗಳಲ್ಲಿ ಕೊಟ್ಟಿದ್ದಾರೆ. ಮಹಿಳೆಯರಿಗಾಗಿ 43ಸಾವಿರ ಕೋಟಿ ರೂಪಾಯಿಗಳನ್ನು ಮಕ್ಕಳ ಮತ್ತು ಮಹಿಳೆಯರ ರಕ್ಷಣೆಗೆ ಆರ್ಥಿಕ ಸ್ವಾವಲಂಬನೆಗಾಗಿ ಕೊಟ್ಟಿದ್ದೇವೆ. ಅದೇ ರೀತಿಯಲ್ಲಿ ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ 500 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಇದು ಬಹಳ ವಿಚಿತ್ರವಾಗಿದೆ. ಈ ಅನುದಾನದಡಿಯಲ್ಲಿ ಅಭಿವೃದ್ಧಿ ಆಕಾಂಕ್ಷಿ ತಾಲ್ಲೂಕುಗಳಿಗೆ ಆದ್ಯತೆ ನೀಡಲಾಗುವುದು ಎಂದು ಇದೆ. ಯಾವುದಾದರೂ ತಾಲ್ಲೂಕುಗಳಿಗೆ ಇದು ಬೇಡ ಎನಿಸುತ್ತದೆಯೇ ಎಂದು ನಾನು ಕೇಳಲಿಕ್ಕೆ ಬಯಸುತ್ತೇನೆ. ಪ್ರತಿಯೊಂದು ತಾಲ್ಲೂಕಿಗೆ ಬೇಕು. ಅಟಲ್ ಬಿಹಾರಿ ವಾಜಪೇಯಿಯವರ ಮೂಲಭೂತ ಸೌಕರ್ಯ ಹಾಗೂ ಸರ್ವಶಿಕ್ಷಣ ಅಭಿಯಾನದ ನಂತರ ಅನೇಕ ಶಾಲೆಗಳು ಇವತ್ತು ಕುಸಿದು ಬಿದ್ದಿವೆ. ಆದ್ದರಿಂದ, ಈ 500 ಕೋಟಿ ರೂಪಾಯಿಗಳನ್ನು ಎಲ್ಲಿಗೆ ಕೊಡುತ್ತಾರೆಂದು ಗೊತ್ತಾಗುವುದಿಲ್ಲ. ಪ್ರತಿಯೊಂದು

ತಾಲ್ಲೂಕಿಗೂ ಬೇಕು. ಅನುದಾನದ ಅಭಿವೃದ್ಧಿಗೆ ಆಕಾಂಕ್ಷಿ ತಾಲ್ಲೂಕು ಎಂದು ಕೇಳುತ್ತಾರೆ. ಇದು ಬಹಳ ವಿಚಿತ್ರವಾಗಿದೆ. ಎಲ್ಲದಕ್ಕಿಂತ ಹೆಚ್ಚು ದೊಡ್ಡ ತಲೆ ನೋವು ಅಂದರೆ, ಗೌರವಧನವನ್ನಾಗಿ ನಮ್ಮ ಅತಿಥಿ ಉಪನ್ಯಾಸಕರಿಗೆ 11 ಸಾವಿರ ರೂಪಾಯಿಗಳನ್ನು ಸಿಗುತ್ತಿತ್ತು. ಅವರು ಪ್ರತಿ ಸಾರಿ ಬಂದು ಬೇಡಿಕೊಳ್ಳುತ್ತಿದ್ದರು. ಅವರಿಗೆ ಈಗ ಗೌರವಧನವನ್ನು ಸುಮಾರು ಮೂರು ಪಟ್ಟು ನೀಡಲಾಗುತ್ತದೆ. ಗೌರವಧನವನ್ನು ಜಾಸ್ತಿ ಮಾಡಿದ್ದಾರೆ. 32,000 ರೂಪಾಯಿಗಳನ್ನು ಮಾಡಿದ್ದಾರೆ. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತೇನೆ. ಅವರು ಸುಮಾರು 18-19 ವರ್ಷಗಳಿಂದ ಅತಿಥಿ ಉಪನ್ಯಾಸಕರಾಗಿ ಕೆಲಸ ಮಾಡಿಕೊಂಡು ಬಂದಿದ್ದಾರೆ. ಇವತ್ತು ಅವರಿಗೆ ಹಣ ಸಿಗುವಂತಹ ವ್ಯವಸ್ಥೆ ಆಗಿದೆ. ಮತ್ತೆ ಪ್ರೌಢಶಾಲೆಗಳಿಗೆ ಶಿಕ್ಷಕರುಗಳನ್ನು ನೇಮಕ ಮಾಡುತ್ತೇವೆಂದು ಹೇಳಿದ್ದಾರೆ. 15 ಸಾವಿರ ಶಿಕ್ಷಕರುಗಳನ್ನು ಭರ್ತಿ ಮಾಡಲಿಕ್ಕೆ ಅನುಮೋದನೆ ಸಿಕ್ಕಿದೆ. ಆ ಕೆಲಸ ಪ್ರಗತಿಯಲ್ಲಿದೆ. ಒಂದು ಕಡೆಯಲ್ಲಿ ಇದು ಪ್ರಗತಿಯಲ್ಲಿದ್ದರೆ, ಇನ್ನೊಂದು ಕಡೆಯಲ್ಲಿ 27 ಸಾವಿರ ಅತಿಥಿ ಶಿಕ್ಷಕರುಗಳನ್ನು ನೇಮಕ ಮಾಡುವುದಾಗಿ ತಿಳಿಸಲಾಗಿದೆ. ಏಕೆಂದರೆ, ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗಬಾರದು ಎಂದು ಹೇಳಿ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಇದು ಅಂದರೆ, ಹೀಗಾಗಿ ಈ ಅತಿಥಿ ಶಿಕ್ಷಕರ ವಿಚಾರ, ಪುನಃ ನಿಮಗೆ ತಲೆ ನೋವಾಗಿ ಉದಯಿಸುತ್ತದೆ. . ಏಕೆಂದರೆ, ಸಂಬಳ ಜಾಸ್ತಿ ಮಾಡಿರುವುದರಿಂದ ನಮಗೆ ಕೆಲಸ ಕೊಡಿ ಎಂದು ಕೇಳುವಂತಹ ನಿರುದ್ಯೋಗಿ ಪದವೀಧರರ್ ಸಂಖ್ಯೆ ಹೆಚ್ಚಾಗುತ್ತದೆ.

**ಪುಟ್ಟಣ್ಣ:-** ಸಂಬಳ ಜಾಸ್ತಿ ಮಾಡಿರುವುದು ಪದವಿ ಕಾಲೇಜು ಅತಿಥಿ ಉಪನ್ಯಾಸಕರುಗಳಿಗೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೆ, ಇವರಿಗೆ ಮಾಡಿಲ್ಲ. ಇಲ್ಲಿ ನೀವು 15 ಸಾವಿರ ಹುದ್ದೆಗಳನ್ನು ಕೊಡುತ್ತಿದ್ದೀರಿ. 27 ಸಾವಿರ ಅತಿಥಿ ಉಪನ್ಯಾಸಕರಿಗೆ ಯಾವ ರೀತಿಯಲ್ಲಿ ಗೌರವಧನವನ್ನು ಇಲ್ಲಿ ಕೊಡುತ್ತೀರಿ ಎನ್ನುವುದು ಇಲ್ಲಿಯ ಪ್ರಶ್ನೆಯಾಗಿದೆ.

ಇನ್ನೊಂದು ವಿಚಾರವಾಗಿ ಹೇಳುವುದಾದರೆ, ೩೦ ಕೋಟಿ ರೂಪಾಯಿಗಳನ್ನು ನಿಗದಿಪಡಿಸಿ ಅಂಗನವಾಡಿಯಲ್ಲಿ ಬಿಸಿ ಊಟ ತಯಾರಿಸುವವರಿಗೆ ಪ್ರತಿ ತಿಂಗಳು ೧೦೦೦ ರೂಪಾಯಿಗಳನ್ನು ಕೊಡುತಿರುವುದನ್ನು ನಾನು ಸ್ವಾಗತ ಮಾಡುತ್ತಿದ್ದೇನೆ. ಅದೇ ರೀತಿ ರಾಜ್ಯದ ಪ್ರಮುಖ ನಗರಗಳಲ್ಲಿ ನಮ್ಮ ಕ್ಲಿನಿಕ್ ಅನ್ನು ಪ್ರಾರಂಭ ಮಾಡಿದ್ದೀರಿ. ಬೆಂಗಳೂರಿನ ಎಲ್ಲಾ ವಾರ್ಡ್‌ಗಳಲ್ಲಿ ಈ ವ್ಯವಸ್ಥೆ ಮಾಡಲಾಗಿದೆ. ಬೆಂಗಳೂರಿನಲ್ಲಿ ಹೆಜ್ಜೆ ಹೆಜ್ಜೆಗೂ ಒಂದೊಂದು ಆಸ್ಪತ್ರೆ ಇರುತ್ತದೆ. ಆದರೆ, ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ೩೦೦ ಮಹಿಳಾ ಸ್ವಾಸ್ಥ್ಯ ಕೇಂದ್ರಗಳನ್ನು ಏನು ಪ್ರಾರಂಭ ಮಾಡಲಾಗಿದೆ, ಇದನ್ನು ಗ್ರಾಮೀಣ ಪ್ರದೇಶದಲ್ಲಿ ಮಾಡಬೇಕು. ಇದು ನಗರ ಪ್ರದೇಶಕ್ಕೆ ಮಾತ್ರ ಮೀಸಲಾಗಿರಬಾರದು. ಇದು ಗ್ರಾಮೀಣ ಅದೇ ರೀತಿ ಡಯಾಲಿಸಿಸ್ ಬಗ್ಗೆ ಮಾನ್ಯ ಶ್ರೀ ಪ್ರದೀಪ್ ಶೆಟ್ಟರ್‌ರವರು ಪ್ರಸ್ತಾಪ ಮಾಡಿದರು. ಈಗಾಗಲೇ ಇದ್ದಂತಹ ಡಯಾಲಿಸಿಸ್‌ನ ೩೦ ಸಾವಿರ ಸೈಕಲ್‌ಗಳನ್ನು ಈಗ ೬೦ ಸಾವಿರ ಸೈಕಲ್‌ಗಳಾಗಿ ಮಾಡಿದ್ದಾರೆ. ಅದು ಸಹ ಸಾಲುವುದಿಲ್ಲ. ಡಯಾಲಿಸಿಸ್ ಸೌಲಭ್ಯ ಇಂತಹ ಆಸ್ಪತ್ರೆಗಳಲ್ಲಿ ಇಲ್ಲವೆಂದು ಹೇಳಿ ಶಾಸಕರುಗಳಿಗೆ ಫೋನ್ ಬರುತ್ತಲೇ ಇವೆ. ಈ ಕೂಗನ್ನು ನಾವು ನಿರಂತರವಾಗಿ ಕೇಳಿದ್ದೇವೆ. ಇದನ್ನು ಸಹ ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ, ಮಹಿಳೆಯರಿಗೆ ಶುಚಿ ಯೋಜನೆಯಡಿ ಸ್ಯಾನಿಟರಿ ನ್ಯಾಪ್‌ಕಿನ್ ಪೂರೈಸುವ ಅನುದಾನವನ್ನು ಬಗ್ಗೆ ಕೊಟ್ಟಿದ್ದಾರೆ. ಈ ವಿಷಯವಾಗಿ ಹಿಂದೆಯೇ ನಾನು ಮಾತನಾಡಿದ್ದೆ. ಇದನ್ನು ಸ್ವಸಹಾಯ ಗುಂಪುಗಳಿಗೆ ಕೊಟ್ಟಿರುವುದನ್ನು ನಾನು ಸ್ವಾಗತಿಸುತ್ತೇನೆ. ಅದೇ ರೀತಿ Menstrual Cups. ವಿಚಾರವಾಗಿ ನಾನು ಮೊದಲೇ ಹೇಳಿದ್ದೆ. ಇದು ಬಹಳ ಕಡಿಮೆ ವೆಚ್ಚದಲ್ಲಿ ವ್ಯವಸ್ಥೆಯಾಗುತ್ತದೆ. ಇದು ಮಧ್ಯಪ್ರದೇಶದಲ್ಲಿ ಇದೆ. ಇದನ್ನು ಮಾಡಬೇಕು. ಮತ್ತೆ ಪ್ರತಿ ಶಾಲೆಗಳಲ್ಲಿಯೂ burning machine ಗಳನ್ನೂ ಕೂಡ ಅಳವಡಿಸಬೇಕೆನ್ನುವ ವಿನಂತಿಯನ್ನು ಮಾಡುತ್ತೇನೆ. ಅದೇ ರೀತಿಯಲ್ಲಿ ಮನೆ ಬಾಗಿಲಿಗೆ ವೈದ್ಯಕೀಯ ಸೌಲಭ್ಯ ಕಲ್ಪಿಸುವ "ಮುಖ್ಯಮಂತ್ರಿಗಳ ಆರೋಗ್ಯ ವಾಹಿನಿ" ಯೋಜನೆಯನ್ನು ಸಹ ನಾನು ಸ್ವಾಗತ ಮಾಡುತ್ತೇನೆ.

**ಸಭಾಪತಿಯವರು:–** ಇನ್ನು 5 ನಿಮಿಷದಲ್ಲಿ ಮುಗಿಸಿ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೆ, 72 ಜನ ಪುರುಷ ಸದಸ್ಯರು ಮಾತನಾಡಿದ್ದಾರೆ. ನಾವು 3 ಜನ ಮಹಿಳಾ ಸದಸ್ಯರು ಮಾತನಾಡುವುದನ್ನು ಕೇಳಲಿಕ್ಕೆ ಆಗುವುದಿಲ್ಲವೆಂದರೆ ಹೇಗೆ?

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೆ, ಅವರಿಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಡಿ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೆ, ರಾಜ್ಯಪಾಲರ ಭಾಷಣದ ಮೇಲೆ ನನ್ನ ಅನುಮೋದನೆಯಾಗಿತ್ತು. ಆದರೆ, ನನಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಡಲಿಲ್ಲ. ಮಂಡನೆ ಮಾಡಿದವರು ಮಾತನಾಡಿದರು. ಅವರಾದ ಮೇಲೆ ನನಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಡಬೇಕಾಗಿತ್ತು. ಕೊಡಲಿಲ್ಲ. ಮತ್ತೆ, ನನ್ನ ಭಾವನೆಯನ್ನು ನಾನು ಯಾವಾಗ ವ್ಯಕ್ತಪಡಿಸಬೇಕು? ಪ್ರಶ್ನೋತ್ತರಕ್ಕೆ ಅವಕಾಶ ಕೊಡುತ್ತೀರಾ, ಕೊಡುವುದಿಲ್ಲ. ಅವಕಾಶವನ್ನು ಮಾನ್ಯ ಸಭಾಪತಿಗಳು ಕೊಡಬೇಕು. ಇವತ್ತು, ಆರೋಗ್ಯ ಸಂರಕ್ಷಣಾ ಯೋಜನೆಯಡಿ ಉಚಿತ ತಪಾಸಣಾ ಕೆಲಸವನ್ನು ಎಲ್ಲಾ ಸಂಘ–ಸಂಸ್ಥೆಗಳವರು ಮಾಡುತ್ತಾರೆ. ಅದರ ಜೊತೆಗೆ ನೀವು ಸಹ ಕೈಜೋಡಿಸುತ್ತಿರುವುದನ್ನು ನಾನು ಸ್ವಾಗತಿಸುತ್ತೇನೆ. "ಶ್ರವಣ ಮಿಷನ್" ಒದಗಿಸುವ ಕಾರ್ಯಕ್ರಮವನ್ನು ಕೂಡ ಇದರಲ್ಲಿ ಜೋಡಿಸಬೇಕು. ಮಧ್ಯಮ ವರ್ಗದವರಿಗೆ ಅದರಲ್ಲೂ ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ಕಿವಿ ಕೇಳದವರು ಬಹಳಷ್ಟು ಜನರಿದ್ದು, ಇದನ್ನು ಕೊಂಡುಕೊಳ್ಳಲಿಕ್ಕೆ ಅವರ ಹತ್ತಿರ ಹಣ ಇರುವುದಿಲ್ಲ. ಆದ್ದರಿಂದ, ತಮ್ಮ ಮೂಲಕ ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ಶ್ರವಣ ಮಿಷನ್ ಅನ್ನು ಕೊಡುವಂತಹ ಕೆಲಸ ಮಾಡಬೇಕು. ಶಿವಮೊಗ್ಗದಲ್ಲಿ ನೂತನವಾಗಿ ಸ್ಥಾಪಿಸಿರುವ ಆಯುಷ್ ವಿಶ್ವವಿದ್ಯಾನಿಲಯವನ್ನು ಬಲಪಡಿಸುವುದು ಎಂದು ಕೊಟ್ಟಿದ್ದಾರೆ. ಇದನ್ನು ಗಟ್ಟಿ ಮಾಡಬೇಕು. ಆಗಿನ ಕಾಲದಲ್ಲಿ ವೈದ್ಯರುಗಳು ಇರಲಿಲ್ಲ. ನಮ್ಮ ಪುರಾತನ ಕಾಲದಿಂದ ಬಂದಂತಹ ನಮ್ಮ ಆರೋಗ್ಯಕ್ಕೆ

ಶಕ್ತಿಯನ್ನು ಕೊಟ್ಟಂತಹ ಆಯುರ್ವೇದವೇ ನಮಗೆ ಜೀವದಾನ ಮಾಡಿರುವಂತಹದ್ದು. ಚುಚ್ಚುಮದ್ದನ್ನು ಚುಚ್ಚುವಂತಿಲ್ಲ, ಅಪರೇಷನ್ ಮಾಡುವಂತಿಲ್ಲ. ಗುಣವಾಗುತ್ತದೆ. ದೊಡ್ಡ ದೊಡ್ಡ ಆಯುರ್ವೇದ ಕಾಲೇಜುಗಳನ್ನು ಸರ್ಕಾರ ಪ್ರಾರಂಭ ಮಾಡಿದೆ. ಅಲ್ಲಿಂದ, ನೂರಾರು, ಸಾವಿರಾರು ವಿದ್ಯಾರ್ಥಿಗಳು ಪದವೀಧರರಾಗಿ ಹೊರಗಡೆ ಬರುತ್ತಾರೆ. ಆದರೆ, ವಿಚಿತ್ರ ಏನೆಂದರೆ, ಅವರಿಗೆ ಡೆತ್ ಸರ್ಟಿಫಿಕೇಟ್ ಕೊಡಲಿಕ್ಕೆ ಅವಕಾಶವಿಲ್ಲ. ನಾವು ಇನ್ಸೂರೆನ್ಸ್ ಕ್ಲೈಮ್ ಮಾಡುವಾಗ ಅವರ ಸಹಿ ನಡೆಯುವುದಿಲ್ಲ. ಮತ್ತೆ ಅವರುಗಳು ಯಾವ ಸೀಮೆ ಡಾಕ್ಟರ್‌ಗಳು ಆಗುತ್ತಾರೆ. ಏತಕ್ಕೆ ನಮಗೆ ವಿಶ್ವವಿದ್ಯಾನಿಲಯ ಬೇಕು, ಏತಕ್ಕೆ ನಮಗೆ ಆಯುರ್ವೇದ ಕಾಲೇಜು ಬೇಕು? ಮನುಷ್ಯನಿಗೆ ಚಿಕಿತ್ಸೆ ನೀಡುವವರು ಅವರು. ಇದು ನಮ್ಮ ಪುರಾತನ ಪದ್ಧತಿ. ಇದು ನಮ್ಮ ದೇಶದ ಮಣ್ಣು. ಇದನ್ನು ನಾವು ಮರೆಯುತ್ತೇವೆಂದು ಹೇಳಿದರೆ, ಡಾಕ್ಟರಿಗೆ ನಾವು ಹಲ್ಲು ಕಿತ್ತು ಕುಳಿತುಕೋ ಎಂದು ಹೇಳಿದಂತಾಯಿತು. ಆದ್ದರಿಂದ ಇದನ್ನು ಸರಿ ಮಾಡಬೇಕು. ಇದರಲ್ಲಿ ಎರಡು ವಿಧದಲ್ಲಿ ಆಯುರ್ವೇದ ಇರುತ್ತದೆ. ಒಂದು ವಂಶ ಪಾರಂಪರ್ಯದಿಂದ ಬಂದಿರುತ್ತದೆ. ಉದಾಹರಣೆಗೆ ಹಾವು ಕಚ್ಚಿದರೆ ಆಸ್ಪತ್ರೆಗೆ ಹೋಗುವುದಿಲ್ಲ. ಸಾಗರದ ಹೆಬ್ಬಗೋಡಿ ಎಂಬಲ್ಲಿ ಈ ಒಂದು ಸೌಲಭ್ಯವುಂಟು. ಅವರಿಗೆ ಪೋನ್ ಮಾಡಿದರೆ ಆಯಿತು ಆಥವಾ ಅವರನ್ನು ಕರೆದುಕೊಂಡು ಬಂದರೆ ಹಾವಿನ ಪೂರ್ಣ ವಿಷವನ್ನು ತೆಗೆದು ಬದುಕಿಸುವಂತಹ ಕೆಲಸವಾಗುತ್ತದೆ. ಆ ಮನೆಯಲ್ಲಿ ಯಾರಾದರೂ ಇದ್ದೇ ಇರುತ್ತಾರೆ. ಅದು ವಂಶ ಪಾರಂಪರ್ಯದಿಂದ ಬಂದಿರುತ್ತದೆ. ಮತ್ತೆ ಟಿ. ನರಸಿಪುರದಲ್ಲಿ ಈ ಕಿಡ್ನಿಗೆ ಸ್ಟೋನ್ ಆದವರು ಬಾಂಬೆ, ಮಹಾರಾಷ್ಟ್ರದಿಂದ ಬರುತ್ತಾರೆ. ಮತ್ತೆ ನಮ್ಮ ಸಾಗರಕ್ಕೂ ಸಹ ಬಂದು ಔಷಧಿಯನ್ನು ತೆಗೆದುಕೊಂಡು ಹೋಗುತ್ತಾರೆ. ಲೋಕೇಶ್ ಎನ್ನುವವರು ವಂಶ ಪಾರಂಪರ್ಯ ವೈದ್ಯರಾಗಿರುತ್ತಾರೆ. ಮಾನ್ಯ ಸದಸ್ಯರಾದ ಶ್ರೀ ಲಕ್ಷ್ಮಣ ಸವದಿಯವರು ಅವರ ಬಗ್ಗೆ ಹೇಳಿದರು. ಅವರು ಎಷ್ಟು ಒಳ್ಳೆಯ ಔಷಧಿಯನ್ನು ಕೊಟ್ಟರು ಎಂದರೆ, ಅವರಿಗೆ ಅದರಿಂದ ಆರೋಗ್ಯ ಸರಿಯಾಯಿತು ಎಂದು ಹೇಳಿದರು. ನನಗೂ ಬಹಳ ಒಳ್ಳೆಯ ಔಷಧಿಯನ್ನು ಕೊಟ್ಟರು. ಮೊದಲು ನನ್ನ ಕೈ ಮಡಿಸಲು ಆಗುತ್ತಿರಲಿಲ್ಲ. ಈಗ ಸರಿಹೋಗಿದೆ.

**428) 17.03.2022 04.10 ಎಸ್‌ವಿ-ವಿಕೆ**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀಮತಿ ಭಾರತಿ ಶೆಟ್ಟಿ (ಮುಂದು):-**
ಇಂದು ಅವರ ಔಷಧಿಯಿಂದ ನಮಗಿರುವ ತೊಂದರೆಗಳು ಸರಿಯಾಗುತ್ತದೆ ಎನ್ನುವುದಾದರೆ ಇದರ ಲಾಭವನ್ನು ಕೇವಲ ಬೆರಳೆಣಿಕೆಯಷ್ಟು ಜನರಾದ ನಾವು ತೆಗೆದುಕೊಳ್ಳುವ ಬದಲು ಅನೇಕರಿಗೆ ಇದರ ಉಪಯೋಗವಾಗಬೇಕು. ಕಳೆದ ಬೆಳಗಾವಿ ಅಧಿವೇಶನದಲ್ಲಿ ಮಾನ್ಯ ಲಕ್ಷ್ಮಣ ಸವದಿಯವರು ನಾಟಿ ವೈದ್ಯರಾದ ಶ್ರೀ ಲೋಕೇಶ್ ಟೇಕಲ್ ಅವರ ಬಗ್ಗೆ ಬೆಳಕನ್ನು ಚೆಲ್ಲಿದ್ದರು. ಆರೋಗ್ಯ ಸಚಿವರಾದ ಮಾನ್ಯ ಸುಧಾಕರ್ ಅವರು ಅದನ್ನು ನೋಡುತ್ತೇನೆಂದು ಹೇಳಿದರು.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಭಾರತಿ ಶೆಟ್ಟಿಯವರೇ, ನೋಡುತ್ತೇನೆ, ಮಾಡುತ್ತೇನೆ ಎನ್ನುವುದಲ್ಲ. ನಾವು ಸದನದ 75 ಜನರು ಸೇರಿ ಕಡ್ಡಾಯವಾಗಿ ಮನ್ನಣೆಯನ್ನು ನೀಡಬೇಕು. ನನ್ನದೊಂದು ಖಾಸಗಿ ವಿಧೇಯಕ ಇದೆ. ಅದು ಈ ಶುಕ್ರವಾರ ಬರಬಹುದು. ದಯವಿಟ್ಟು ಎಲ್ಲರೂ ಸೇರಿ ಅದನ್ನು ಸಚಿವರಿಗೆ ಮನವರಿಕೆ ಮಾಡಿಕೊಟ್ಟು, ಅದು ಆಗುವಂತೆ ಮಾಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಬಂದಂತಹ ವಿದ್ಯಾರ್ಥಿಗಳಿಗೆ ಸರಿಯಾದ ಗೌರವ ಸಿಗುವ ರೀತಿಯಲ್ಲಿ ವ್ಯವಸ್ಥೆಯಾಗಬೇಕು. ಎರಡನೆಯದಾಗಿ ವಂಶಪಾರಂಪರ್ಯ ಬಂದಿರುವ ನಾಟಿ ಔಷಧವನ್ನು ನೀಡುವ ವೈದ್ಯರಿಗೂ ಕೂಡ ಒಳ್ಳೆಯದಾಗಬೇಕು.

ಆಶಾ ಕಾರ್ಯಕರ್ತರ ಮಾಸಿಕ ಗೌರವ ಧನವನ್ನು ಹೆಚ್ಚಿಸಲಾಗಿದೆ. ಇದನ್ನು ನಾನು ಸ್ವಾಗತಿಸುತ್ತೇನೆ. ಸರ್ವರಿಗೂ ಸೂರು ಕೊಡುವ ನಿಟ್ಟಿನಲ್ಲಿ 5 ಲಕ್ಷ ಗುರಿಯನ್ನು ಹೊಂದಿದ್ದು, ಇದನ್ನು ಕೂಡ ನಾನು ಸ್ವಾಗತಿಸುತ್ತೇನೆ. ಪಿಜ್ಜಾ ಬರ್ಗರ್ ಸಂಸ್ಕೃತಿಯಿಂದ ನಾವು ಸಿರಿಧಾನ್ಯಗಳ ಕಡೆಗೆ ಮರಳಿ ಬಂದದ್ದು ನನಗೆ ಸಂತೋಷವಾಯಿತು. 5 ಕೆ.ಜಿ. ಅಕ್ಕಿಯ ಜೊತೆಗೆ ಒಂದು ಕೆ.ಜಿ. ರಾಗಿ ಅಥವಾ ಜೋಳವನ್ನು ಕೊಡುವಂತಹ ವ್ಯವಸ್ಥೆಯನ್ನು ಸರ್ಕಾರ ಮಾಡಿದೆ.

ಕಟ್ಟಡ ಕಾರ್ಮಿಕರು ಒಂದು ರೀತಿಯಲ್ಲಿ ಅಲೆಮಾರಿ ಜನಾಂಗವೇ ಆಗುತ್ತದೆ. ಅವರಿಗೆ ವಸತಿ ಯೋಜನೆಯನ್ನು ನೀಡಿರುವುದರ ಜೊತೆಗೆ ಅವರ ಮಕ್ಕಳಿಗೆ ಅಲ್ಲಿ ಶಿಕ್ಷಣದ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ವಿನಂತಿಸುತ್ತೇನೆ. ಏಕೆಂದರೆ ಸಣ್ಣ ಸಣ್ಣ ಮಕ್ಕಳು ಅವರ ಜೊತೆಯಲ್ಲಿ ಗಾರೆ ಕೆಲಸ ಮಾಡುವುದನ್ನು ನಾನು ನೋಡಿದ್ದೇನೆ.

ಹೈಟೆಕ್ ಸಂಚಾರಿ ಕ್ಲಿನಿಕ್‌ಗಳನ್ನು ಪ್ರಾರಂಭ ಮಾಡಿದ್ದು, ಇದನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಉದ್ಯೋಗ ಕೊಟ್ಟದ್ದು ಎಲ್ಲಿ ಎಂದು ವಿರೋಧಪಕ್ಷದವರು ಕೇಳುತ್ತಿರುತ್ತಾರೆ. ಇಂದು ಒಂದು ಲಕ್ಷ ಅಭ್ಯರ್ಥಿಗಳಿಗೆ ಕೌಶಲ್ಯ ತರಬೇತಿಯನ್ನು ನೀಡಲಾಗಿದೆ. 25,000 ಉದ್ಯೋಗಾವಕಾಶಗಳನ್ನು ಒದಗಿಸಲಾಗಿದೆ. ಈ ಬಾರಿ 2.5 ಲಕ್ಷ ಜನರಿಗೆ ತರಬೇತಿಯನ್ನು ಕೊಟ್ಟರೆ ಬಹುಶಃ 1 ಲಕ್ಷ ಜನರಿಗೆ ಉದ್ಯೋಗ ದೊರೆಯಬಹುದು ಎನ್ನುವ ನಿರೀಕ್ಷೆಯಿದೆ.

ಈಗ ನಾನು ನನಗೆ ಬಹಳ ಪ್ರಮುಖವೆನಿಸುವ ಘಟ್ಟಕ್ಕೆ ಬರುತ್ತಿದ್ದೇನೆ. ಸ್ವಸಹಾಯ ಗುಂಪುಗಳಿಗೆ ಸರ್ಕಾರ ಒಳ್ಳೆಯ ಯೋಜನೆಗಳನ್ನು ನೀಡಿದೆ. ದೇವರು ಕೊಟ್ಟರೂ ಪೂಜಾರಿ ಕೊಡುವುದಿಲ್ಲ ಎನ್ನುವಂತೆ ಸರ್ಕಾರದಿಂದ ರೂ.1.5 ಲಕ್ಷ ಸಾಲವನ್ನು ಕೊಟ್ಟರೂ ಬ್ಯಾಂಕ್‌ನವರು ಕೊಡುವುದಿಲ್ಲ. ರಾಷ್ಟ್ರೀಯ ಗ್ರಾಮೀಣ ಬ್ಯಾಂಕ್‌ನ ಮುಖಾಂತರ ಎಲ್ಲವನ್ನೂ ಒಂದು ಬ್ಯಾಂಕ್‌ನ ಮೂಲಕ ಮಾಡಲಾಗಿದ್ದು, ಇದನ್ನು ನಾನು ಸ್ವಾಗತಿಸುತ್ತೇನೆ. ಅನೇಕ ಉತ್ಪನ್ನಗಳಿಗೆ ಮಾರುಕಟ್ಟೆ ಲಭ್ಯವಿದೆ. 200 ಪ್ರೆಸ್‌ನ work shed ಗಳು ಸಾಲದ ಕಾರಣ 750ಕ್ಕೆ ಹೆಚ್ಚಿಸಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಸರ್ಕಾರಿ ಕಛೇರಿಗಳಲ್ಲಿ ಮಹಿಳೆಯರಿಗೆ ಕ್ಯಾಂಟೀನ್ ಮಾಡಿದ್ದು, ಜಿಲ್ಲೆಗೆ ಒಂದರಂತೆ ಮಾಡಲಾಗಿದೆ. ಇಡೀ ಜಿಲ್ಲೆಯಲ್ಲಿ 8-9 ತಾಲ್ಲೂಕುಗಳಿದ್ದು, ಹಲವು ಸರ್ಕಾರಿ ಕಛೇರಿಗಳಿರುತ್ತವೆ. ಇಲ್ಲಿ ನಾವು ಶೇ.1 ರಷ್ಟು ಕೂಡ ಮಹಿಳೆಯರು ಇಲ್ಲ. ಅಲ್ಲಿಯೂ ಇಲ್ಲ ಎಂದು ಹೇಳಿದರೆ ಸರಿಯಾಗುವುದಿಲ್ಲ. ಆದ್ದರಿಂದ ಸಂಖ್ಯೆಯನ್ನು ಜಾಸ್ತಿ ಮಾಡಬೇಕು. ಕಳೆದ ಆಯವ್ಯಯದಲ್ಲಿ ಒಂದು ಮಾತನ್ನು ಹೇಳಿದ್ದರು. ಯಾವ ಮಹಿಳೆಯೂ ಕೂಡ ಸ್ವಲ್ಪ ಹಣ ಬೇಕೆನಿಸಿದಾಗ ಗಂಡನ ಬಳಿ, ಅಣ್ಣನ ಬಳಿ, ಪಕ್ಕದ ಮನೆಯವರ ಬಳಿ ಬೇಡಬಾರದು. ಬ್ಯಾಂಕಿಗೆ ಸಾಲ ಪಡೆಯಲು ಹೋದರೆ ಏನನ್ನು ಜಾಮೀನು ಇಡುವಿರಿ ಎಂದು ಕೇಳುತ್ತಾರೆ. ನಾವು ಬ್ಯಾಂಕಿನಲ್ಲಿ ಸಾಲವನ್ನು ತೆಗೆದುಕೊಳ್ಳಲಾಗದ ಪರಿಸ್ಥಿತಿಯಿದ್ದಾಗ

ನಮ್ಮದೇ ಆದ ಒಂದು ಕೂಡುನಿಧಿಯಿರಬೇಕು. ಎಲ್ಲಾ ಹೆಣ್ಣುಮಕ್ಕಳೂ ಇದರಲ್ಲಿ ಹಣವನ್ನು ಕೂಡಿಡಬೇಕೆಂಬುದು ದಿವಂಗತ ಅಟಲ್ ಬಿಹಾರಿ ವಾಜಪೇಯಿಯವರ ಚಿಂತನೆಯಾಗಿದ್ದು, ಅವರು ಸ್ವಸಹಾಯ ಸಂಘಗಳ ಗುಂಪುಗಳನ್ನು ರಚನೆ ಮಾಡಿದರು. ಅಷ್ಟೇ ಅಲ್ಲದೆ, ಇಂದು ಸ್ತ್ರೀಶಕ್ತಿ, ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ, ಸಂಜೀವಿನಿ ಈ ರೀತಿ ಅನೇಕ ಸಂಘಗಳಾಗಿವೆ.

ಮತ್ತೊಂದು ಅಂಶವನ್ನು ಹೇಳಲು ನಾನು ಮರೆತಿದ್ದೇನೆ. ವಿಧವೆಯರಿಗೆ ಮಾಸಾಶನವನ್ನು ಹೆಚ್ಚು ಮಾಡಿದರು. ಅದರಲ್ಲಿ ಮಂಗಳಮುಖಿಯರಿಗೆ ರೂ.೬೦೦ ಇದ್ದುದನ್ನು ರೂ.೮೦೦ ಮಾಡಿದ್ದರು. ಮಾನ್ಯ ಯಡಿಯೂರಪ್ಪನವರ ಸರ್ಕಾರವಿದ್ದಾಗ ಅವರಿಗೆ ಒಂದು ಅಭಿವೃದ್ಧಿ ನಿಗಮ ಇರಬೇಕೆಂದು ಮಾಡಿದ್ದರು. ನಂತರ ಮಾನ್ಯ ಸಿದ್ದರಾಮಯ್ಯನವರ ಸರ್ಕಾರದಲ್ಲಿ ಅವರಿಗೆ ಮಾಸಾಶನ ನೀಡಬೇಕು, ಅವರಿಗೆ ಮತ ಚಲಾವಣೆಯ ಹಕ್ಕನ್ನು ನೀಡಬೇಕೆಂದು ಮಾಡಿದ್ದರು. ಬಹಳ ದೊಡ್ಡ ಹೋರಾಟವನ್ನು ಮಂಗಳಮುಖಿಯರು ಮಾಡಿದ್ದಾರೆ. ಇಂದು ಅವರ ಸ್ಥಿತಿಯನ್ನು ನೆನೆಸಿಕೊಂಡರೆ ಸಂಕಟವಾಗುತ್ತದೆ. ನಮ್ಮಂತಹ ತಾಯಂದಿರು ಹೆತ್ತ ಮಗುವೇ ಆಗಿದೆ. ನಾವೆಲ್ಲರೂ ಮನುಷ್ಯ ಜಾತಿ ಎಂದು ಹೇಳಿಕೊಳ್ಳುತ್ತೇವೆ. ಅವರಲ್ಲಿ ಎರಡು ವಿಧ. ಸೀರೆ ಉಟ್ಟವರು ಜೋಗವ್ವ. ಪ್ಯಾಂಟ್-ಶರ್ಟ್ ಹಾಕಿದವರು ಜೋಗಪ್ಪ. ಅವರಲ್ಲಿಯೂ ವಿದ್ಯಾವಂತರಿದ್ದು, ಅವರು ಎಷ್ಟು ನೋವಿನಲ್ಲಿದ್ದಾರೆಂದರೆ ಇದನ್ನು ಅಧಿಕಾರಿಗಳು ಯಾರಾದರೂ ನೋಟ್ ಮಾಡಿಕೊಳ್ಳಬೇಕು. ಈ ಸಲದ ಬಜೆಟ್‌ನಲ್ಲಿ ಅದಾಗಬೇಕಿದೆ. ಅವರು ಭಿಕ್ಷೆ ಬೇಡುತ್ತಲೇ ಇರಬೇಕೆ? ಲಿಂಗತ್ವ ಅಲ್ಪಸಂಖ್ಯಾತರಿಗೆ ಸರ್ಕಾರವು ನೀಡಲಾಗುತ್ತಿರುವ ಮಾಸಿಕ ಪಿಂಚಣಿ ಮೊತ್ತವನ್ನು ರೂ.೬೦೦ ರಿಂದ ರೂ.೮೦೦ ಗಳಿಗೆ ಹೆಚ್ಚಿಸಲಾಗುವುದು ಎಂದು ತಿಳಿಸಲಾಗಿದೆ. ಅಂದರೆ, ಭಿಕ್ಷೆಯನ್ನು ನೀಡುವುದೇ? ಅವರು ರಸ್ತೆಗಳ ಸರ್ಕಲ್‌ಗಳಲ್ಲಿ, ಟ್ರಾಫಿಕ್ ಸಿಗ್ನಲ್‌ಗಳಲ್ಲಿ ಇರುತ್ತಾರೆ. ನಮ್ಮದು ಒಂದೇ ಜಾತಿ ಮನುಷ್ಯ ಜಾತಿ, ಹರಿಯುವುದು ಒಂದೇ ರಕ್ತ ಎಂದು ಹೇಳುತ್ತಾರೆ. ಗಂಡು, ಹೆಣ್ಣು ಇವೆರಡೇ ಜಾತಿಗಳು. ಇಷ್ಟಾದರೂ ಕೂಡ ನಮ್ಮಲ್ಲಿ ಲಿಂಗಾಯತ, ಬ್ರಾಹ್ಮಣ ಎಲ್ಲವೂ ಇದೆ. ಆದರೆ ಮಂಗಳಮುಖಿಯರಿಗೆ ಜಾತಿಯೇ ಇಲ್ಲ. ನಮ್ಮ ದೇಶದಲ್ಲಿ ಯಾವುದೇ ಜಾತಿಯಿಲ್ಲದ ಮನುಷ್ಯರು ಅವರು ಮಾತ್ರ. ಅವರು ಯಾವುದೋ ಜಾತಿಯಲ್ಲಿ ಹುಟ್ಟಿರುತ್ತಾರೆ, ಮನೆ ಬಿಟ್ಟು ಬಂದಿರುತ್ತಾರೆ. ಆದ್ದರಿಂದ ಸರ್ಕಾರ ತಂದೆ ತಾಯಿ

ಸ್ಥಾನದಲ್ಲಿದ್ದು, ಎಲ್ಲರನ್ನೂ ಒಂದೇ ಕಣ್ಣಿನಿಂದ ನೋಡಬೇಕು. ಅಬ್ಬಬ್ಬಾ ಎಂದರೆ ಅವರು ಎರಡು ಲಕ್ಷ ಜನರಿರಬಹುದು. ಅವರಿಗೆ ನಮ್ಮಿಂದ ಸಹಾಯ ಮಾಡಲಿಕ್ಕೆ ಆಗಲಿಲ್ಲ ಎಂದರೆ ಹೇಗೆ? ಅವರ ಮನಸ್ಸಿನ ನೋವುಗಳನ್ನು, ಅವರ ಭಾವನೆಯನ್ನು, ಅವರ ಮುಂದಿರುವ ಸವಾಲಯಗಳನ್ನು ಅವರು ಯಾರ ಬಳಿ ಹೇಳಬೇಕು? ಅಧಿಕಾರಿಗಳ ಬಳಿ ಹೇಳಿದರೆ ಅವರಿಗೆ ಅರ್ಥವಾಗುವುದಿಲ್ಲ.

ಮಾನ್ಯ ಸಭಾಪತಿಯವರೇ, ನಿಮಗೆ ತಿಳಿದಿರಲಿ. ಮಂಗಳಮುಖಿಯರು ನನ್ನ ಬಳಿ ಬಂದು ಹೇಳಿದಾಗ ನನಗೆ ಕಣ್ಣೀರು ಬಂತು. ರೂ.3 ಲಕ್ಷಗಳನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಕೊಡುತ್ತಾರೆ. ಅವರು ಹೋಗಿ ಬ್ಯಾಂಕ್‌ನಲ್ಲಿ ಕೇಳಿದರೆ ನಿಮಗೆ ಹೇಗೆ ಕೊಡುವುದು? ನೀವು ಭಿಕ್ಷೆ ಬೇಡುವವರು. ರೂ. 3 ಲಕ್ಷ ಡೆಪಾಸಿಟ್ ಮಾಡಿ, ರೂ. 4 ಲಕ್ಷ ಡೆಪಾಸಿಟ್ ಮಾಡಿ. ಆಗ ನಾವು ದುಡ್ಡು ಕೊಡುತ್ತೇವೆಂದು ಹೇಳಿದರೆ ಅವರು ಅಷ್ಟು ಹಣವನ್ನು ಎಲ್ಲಿಂದ ತರುತ್ತಾರೆ? ಅವರಿಗೆ ಕೊಡಲೇ ಇಲ್ಲ. ಪಕ್ಕದಲ್ಲಿ ಇದ್ದಂತಹ ದೇವದಾಸಿಯರಿಗೆ ಹಣವನ್ನು ಕೊಟ್ಟರಂತೆ. ಬ್ಯಾಂಕ್‌ನವರು ಕೇಳಿದಾಗ "ನೋಡಿ, ಅವರು ದಿನಕ್ಕೆ ರೂ.500 ರಿಂದ ರೂ.1000ಗಳ ಸಂಪಾದನೆ ಮಾಡುತ್ತಾರೆ. ನೀವೇನು ಮಾಡುತ್ತೀರಿ." ಎಂದು ಕೇಳಿದರಂತೆ. ಎಷ್ಟು ಕೇವಲವಾಗಿ ನಮ್ಮ ಅಧಿಕಾರಿವೃಂದದವರು ನಡೆದುಕೊಳ್ಳುತ್ತಾರೆ. ಅವರಿಗೆ ಈ ಸೂಕ್ಷ್ಮತೆಯ ಅರಿವು ಕೂಡ ಆಗುವುದಿಲ್ಲ. ಇಷ್ಟು ದೊಡ್ಡ ಐ.ಎ.ಎಸ್., ಐ.ಪಿ.ಎಸ್. ಅಧಿಕಾರಿಗಳಿದ್ದಾರೆ. ಇವರನ್ನು ಹೇಗೆ ಬಚಾವ್ ಮಾಡಬೇಕೆಂದು ನಾವು ಹೇಳಿಕೊಡಬೇಕೆ? ಐ.ಎ.ಎಸ್/ ಐ.ಪಿ.ಎಸ್. ಓದಿದವರು ಅವರು. ನಾವು ಸಾಮಾನ್ಯರು. ಜನರ ಮಧ್ಯೆ ಜನರ ಸಮಸ್ಯೆಗಳ ಬಗ್ಗೆ ಒದ್ದಾಡುವವರು ನಾವು. ನಾವು ಅಷ್ಟು ವಿದ್ಯಾವಂತರಲ್ಲ. ಇವರನ್ನು ಮುಖ್ಯವಾಹಿನಿಗೆ ತರುವಂತಹ ವ್ಯವಸ್ಥೆಯನ್ನು ಈ ಅಧಿಕಾರಿ ವೃಂದಕ್ಕೆ ಮಾಡಲಿಕ್ಕಾಗುವುದಿಲ್ಲವೆ? ಯಾವುದೇ ಸರ್ಕಾರವಿದ್ದರೂ ಇದಕ್ಕೆ ಕಣ್ಣುಮುಚ್ಚಿ ಸಹಕಾರವನ್ನು ಕೊಡುತ್ತದೆ. ನಮಗೆಲ್ಲಾ ವಯಸ್ಸಾದ ಮೇಲೆ ನೋಡಿಕೊಳ್ಳಲು ನಮ್ಮ ಮಕ್ಕಳೋ ಯಾರಾದರೂ ಇರುತ್ತಾರೆ. ಆದರೆ ಅವರು ಮನೆ ಬಿಟ್ಟು ಹೋಗಿರುತ್ತಾರೆ. ಅರವತ್ತು ವರ್ಷಗಳ ನಂತರ ಅವರಿಗೆ ಆರೋಗ್ಯದಲ್ಲಿ ತೊಂದರೆಯಾದರೆ ಸರ್ಕಾರದಿಂದ ಏನು ವ್ಯವಸ್ಥೆ ಇದೆ? ಸಮಾಜ ಏನು ಮಾಡಿದೆ? ವಯಸ್ಸಾದ ಮೇಲೆ ಅವರನ್ನು

ನೋಡಿಕೊಳ್ಳುವವರು ಯಾರು? ಆದ್ದರಿಂದ ಈ ಬಜೆಟ್‌ನಲ್ಲಿ ಅವರಿಗೆ ಅನುಕೂಲವಾಗುವಂತಹ ವ್ಯವಸ್ಥೆಯನ್ನು ಸರ್ಕಾರ ಮಾಡಲೇಬೇಕು ಎಂದು ವಿನಂತಿ ಮಾಡುತ್ತೇನೆ.

ಕಳೆದ ಬಾರಿಯ ಬಜೆಟ್‌ನಲ್ಲಿ ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳು ಗಟ್ಟಿಯಾಗಬೇಕಾದರೆ ಅವರು ಆರ್ಥಿಕವಾಗಿ ಸ್ವತಂತ್ರರಾಗಬೇಕು ಎನ್ನುವ ಒಂದು ಆಶ್ವಾಸನೆಯನ್ನು ಕೊಡಲಾಗಿತ್ತು. ಆರ್ಥಿಕವಾಗಿ ಸ್ವತಂತ್ರರಾಗಬೇಕಾದರೆ ಸರ್ಕಾರವು ಟೆಂಡರ್ ಮೂಲಕ ಖರೀದಿಸುವ ಫಿನಾಯಿಲ್, ಚಾಕ್‌ಪೀಸ್, ಫೈಲ್‌ಗಳು, ಪೇಪರ್‌ಗಳು ಇಂತಹ ವಸ್ತುಗಳನ್ನು ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳಿಗೆ ಕೊಡಬೇಕು. ನಮ್ಮ ಗ್ರಾಮೀಣ ಹೆಣ್ಣುಮಕ್ಕಳು ಈ ಸಾಮಾನುಗಳನ್ನು ತಯಾರು ಮಾಡುತ್ತಾರೆ. ಆದರೆ ಮಾರ್ಕೆಟಿಂಗ್ ಮಾಡಲು ಬರುವುದಿಲ್ಲ. ತರಬೇತಿಯನ್ನು ನೀಡಿದರೆ ಇದನ್ನೆಲ್ಲಾ ಅವರು ತಯಾರು ಮಾಡುತ್ತಾರೆ. ಸರ್ಕಾರವೇ ಇದನ್ನು ದುಡ್ಡು ಕೊಟ್ಟು ಕೊಂಡರೆ ಅವರು ಕೂಡ ಆರ್ಥಿಕವಾಗಿ ಸದೃಢರಾಗುತ್ತಾರೆ. ಆ ಕೆಲಸವನ್ನು ಸರ್ಕಾರ ಮಾಡಬೇಕು.

ದುರ್ಬಲ ವರ್ಗದ ಕಲ್ಯಾಣಕ್ಕಾಗಿ ರೂ.6,329 ಕೋಟಿಗಳನ್ನು ಹೆಚ್ಚುವರಿಯಾಗಿ ನೀಡಿರುವುದಕ್ಕಾಗಿ ಸರ್ಕಾರವನ್ನು ಅಭಿನಂದಿಸುತ್ತೇನೆ.

ಜಲಜೀವನ್ ಮಿಷನ್ – ಇದರ ಬಗ್ಗೆ ಮಾನ್ಯ ವಿಶ್ವನಾಥ್ ಅವರು ಬಹಳ ಚೆನ್ನಾಗಿ ಹೇಳಿದರು. ನಾನು ಅದಕ್ಕಾಗಿ ಕೆಲಸ ಮಾಡಿದವಳು ಕೂಡ. ಅವರು ಶೇ.40 ಆಗಿಲ್ಲ ಎಂದು ಹೇಳಿದರು. ಮುಂಚೆ ಒಂದು ಕಾಲದಲ್ಲಿ ಒಂದು ಕೇರಿಗೆ ಒಂದೇ ನಲ್ಲಿ ಇರುತ್ತಿತ್ತು. ನಾನು ನಗರದಲ್ಲಿ ಇದ್ದವಳು, ಮದುವೆಯಾಗಿ ಹೋದ ಮೇಲೆ ಸಾಗರ ತಾಲ್ಲೂಕಿನಲ್ಲಿ ನೋಡಿದ್ದೇನೆ. ಎಲ್ಲಿಯೋ ಒಂದು ಮೂಲೆಯಲ್ಲಿ ನಲ್ಲಿ ಇರುತ್ತಿತ್ತು. ಅಥವಾ ಪಕ್ಕದ ಮನೆಯ ಬಾವಿಗೆ ಹೋಗಬೇಕಿತ್ತು. ಆಮೇಲೆ ಎರಡು ಮೂರು ನಲ್ಲಿ ಬಂದಿತು. ಇಂದು ನನಗೆ ಬಹಳ ಸಂತೋಷವಾಗುತ್ತಿದೆ. ಪ್ರತಿಯೊಂದು ಮನೆಗೂ ನಲ್ಲಿ ಕೊಡಬೇಕೆಂದು ಕೇಂದ್ರ ಸರ್ಕಾರದಿಂದ ಮಾನ್ಯ ನರೇಂದ್ರ ಮೋದಿಯವರು ರಾಜ್ಯದ 21.28 ಲಕ್ಷ ಮನೆಗಳಿಗೆ ನಳವನ್ನು ಅಳವಡಿಸುವಂತಹ ಕೆಲಸವನ್ನು ಮಾಡಿದ್ದಾರೆ. ನಾನೂ ಕೂಡ ಹೋಗಿದ್ದೇನೆ. ನಮ್ಮ ರಾಜ್ಯದ ಪ್ರತಿಯೊಂದು ಎಂ.ಪಿ.ಯವರು ಇದನ್ನು ಮಾಡಿದ್ದಾರೆ. ನಾನು ಮಾನ್ಯ ಶೋಭಾ ಕರಂದ್ಲಾಜೆಯವರ ಜೊತೆಯಲ್ಲಿ ಉಡುಪಿಯಲ್ಲಿ ಮನೆಮನೆಗೆ ಹೋಗಿ ನಲ್ಲಿ ಇಲ್ಲದಿದ್ದರೆ

ಹೆಸರು ಸೇರಿಸಿ ಎಂದು ಹೇಳ ಅಭಿಯಾನವನ್ನು ಮಾಡಲಾಗಿದೆ. ಮುಂದಿನ ದಿನಗಳಲ್ಲಿ 25 ಲಕ್ಷ ಗುರಿಯನ್ನು ತಲುಪಲಾಗುತ್ತದೆ. ಏಕೆಂದರೆ ಇದು ಡಬಲ್ ಇಂಜಿನ್ ಸರ್ಕಾರ.

**(...ಮುಂದು)**

**(429) 17-03-2022 (4.20) ಕೆಜಿ-ಬಿಎನ್ಎಸ್**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀಮತಿ ಭಾರತಿ ಶೆಟ್ಟಿ (ಮುಂದು):-**

ಮಾನ್ಯ ಸಭಾಪತಿಯವರೇ, ನೇಕಾರರ ಬಗ್ಗೆ ಹೇಳಿದ್ದಾರೆ. ನೇಕಾರರಿಗೆ ಎರಡು ಸಾವಿರ ರೂಪಾಯಿಗಳು ಇದ್ದ ಪರಿಹಾರಧನವನ್ನು 5 ಸಾವಿರ ರೂಪಾಯಿಗಳು ಮಾಡಿದ್ದನ್ನು ಸ್ವಾಗತ ಮಾಡುತ್ತೇನೆ. ಅದೇರೀತಿ ಜವಳಿ ಪಾರ್ಕಿನ ಬಗ್ಗೆ ಹೇಳಿದ್ದಾರೆ. ಜವಳಿ ಪಾರ್ಕ್ ಕೋಲಾರದಲ್ಲಿ ಎಂದು ಹೇಳಿದರು. ಇಡೀ ದೇಶದಲ್ಲಿ ಏಳು ಜವಳಿ ಪಾರ್ಕ್‌ಗಳನ್ನು ಕೊಡಬೇಕು ಎನ್ನುವ ವ್ಯವಸ್ಥೆ ಇತ್ತು. ಅದರಲ್ಲಿ ಒಂದನ್ನು ನಮ್ಮ ರಾಜ್ಯಕ್ಕೆ ಕೊಡಬೇಕೆಂದು ನಾವು ಕೇಂದ್ರ ಹಣಕಾಸು ಸಚಿವರಾದ ಶ್ರೀಮತಿ ನಿರ್ಮಲ ಸೀತರಾಮನ್‌ರವರನ್ನು ಕೇಳಿಕೊಂಡಿದ್ದೇವೆ. ಅದು ಪ್ರಗತಿಯಲ್ಲಿದೆ. Mega Textile Park ಅನ್ನು ಮಾಡಲಿಲ್ಲ. ಅದನ್ನು ಮಾಡಬೇಕೆಂಬ ವಿನಂತಿಯನ್ನು ಸರ್ಕಾರಕ್ಕೆ ಮಾಡುತ್ತಿದ್ದೇನೆ.

ಮಾನ್ಯ ಸಭಾಪತಿಯವರೇ, ಶಿವಮೊಗ್ಗ ಜಿಲ್ಲೆಯ ಸಾಗರದಲ್ಲಿ ಪ್ರತಿ ವರ್ಷ ಬಜೆಟ್‌ನಲ್ಲಿ ಜೋಗ್‌ಫಾಲ್ಸ್‌ನಲ್ಲಿ ಏನಾದರೂ ಮಾಡುತ್ತೇವೆಂದು ಹೇಳುತ್ತಾರೆ. ಕೊನೆಗೆ, ಏನು ಮಾಡುವುದಿಲ್ಲ. ಜೋಗ್‌ಫಾಲ್ಸ್‌ನಲ್ಲಿ ಕೆಳಗೆ ನಡೆದುಕೊಂಡು ಹೋದರೆ, ಅದರ ಆನಂದವೇ ಬೇರೆ, ನಾನು ನಡೆದುಕೊಂಡು ಹೋಗಿದ್ದೇನೆ. ಎಲ್ಲರಿಗೂ ಹೋಗುವುದಕ್ಕೆ ಆಗುವುದಿಲ್ಲ. Ropeway ಅನ್ನು ಮಾಡಿದರೆ ಆಗುತ್ತದೆ. ಅಲ್ಲಿ ropeway ಮಾಡುವುದರಿಂದ ಏನು ಆದಾಯ ಬರುತ್ತದೆ ಎಂದು ಯಾರೋ ಮಾನ್ಯ ಸದಸ್ಯರು ಹೇಳಿದ್ದರು. ಇದನ್ನು ಸರ್ಕಾರ ಮಾಡಿದರೆ, ಅದಕ್ಕೆ ಖರ್ಚು ಮಾಡಿರುವುದಕ್ಕಿಂತ 100 ಪಟ್ಟು ಹೆಚ್ಚಿಗೆ ಆದಾಯ ಬರುತ್ತದೆ. ಆದ್ದರಿಂದ, ಸರ್ಕಾರ ಇದನ್ನು ಕೂಡಲೇ ಮಾಡಬೇಕೆಂದು ತಮಲ್ಲಿ ವಿನಂತಿಯನ್ನು ಮಾಡುತ್ತೇನೆ.

ಮಾನ್ಯ ಸಭಾಪತಿಯವರೇ, ನಾನು ಬೇಗ ಮಾತನಾಡಿ ಮುಗಿಸುತ್ತೇನೆ. ದಯವಿಟ್ಟು ಬೈಯಬೇಡಿ. ನಾನು ದೇವದಾಸಿಯರ ಬಗ್ಗೆ ಹೇಳಿದ್ದೇನೆ. ದೇವಾದಾಸಿಯವರನ್ನು ಸಹ ಸೇರಿಸಬೇಕು. ಅವಿವಾಹಿತ, ವಿಚ್ಛೇದಿತ ಮಹಿಳೆಯರಿಗೆ ಹಾಗೂ ಲಿಂಗತ್ವ ಅಲ್ಪಸಂಖ್ಯಾತರಿಗೆ ನೀಡಲಾಗುತ್ತಿರುವ ಮಾಸಿಕ ಪಿಂಚಣಿಯನ್ನು ಕೊಡುವಂಥದ್ದನ್ನು ಮಾಡಿದ್ದಾರೆ. ಮಾನ್ಯ ಕಾನೂನು ಮಂತ್ರಿಯವರು ಸದನದಲ್ಲಿ ಇದ್ದಾರೆ. Acid ದಾಳಿಗೆ ಒಳಗಾದ ಮಹಿಳೆಯರಿಗೆ ಪ್ರಸ್ತುತ ನೀಡಲಾಗುತ್ತಿರುವ ಮಾಸಿಕ ಪಿಂಚಣಿ ಮೊತ್ತವನ್ನು ಮೂರು ಸಾವಿರ ರೂಪಾಯಿಗಳಿಂದ ಈಗ ಮೂರು ಪಟ್ಟು ಹೆಚ್ಚಿಸಿ 10 ಸಾವಿರ ರೂಪಾಯಿಗಳನ್ನು ಮಾಡಿರುವುದು ಬಹಳ ಸಂತೋಷ ತಂದಿರುವಂತಹ ವಿಚಾರ. ಅದೇರೀತಿ ಮಹಿಳೆಯರಿಗೆ ಯಾರು acid ಹಾಕುತ್ತಾರೆ, ಅವರಿಗೆ ಇನ್ನೂ ಮೂರು ಪಟ್ಟು ಹೆಚ್ಚು ಶಿಕ್ಷೆಯನ್ನು ಕೊಟ್ಟರೆ, ನಾವು ಇನ್ನೂ ಹೆಚ್ಚು ಸಂತೋಷ ಪಡುತ್ತೇವೆ. ಇದೇ ಮೊದಲ ಬಾರಿಗೆ ಕೃಷಿ ಜಮೀನಿನಲ್ಲಿ ಮತ್ತು ಇತರೆ ಸ್ವತ್ತುಗಳನ್ನು ಡ್ರೋನ್ ಆಧಾರಿತ ಸರ್ವೆ ಕಾರ್ಯವನ್ನು ರಾಜ್ಯಾದ್ಯಂತ ಕೈಗೊಂಡಿರುವುದನ್ನು ಸಹ ನಾನು ಸ್ವಾಗತಿಸುತ್ತೇನೆ. ಗ್ರಾಮ ಸಹಾಯಕರಿಗೆ ಒಂದು ಸಾವಿರ ರೂಪಾಯಿಗಳ ಮಾಸಿಕ ಗೌರವಧನ ಕೊಟ್ಟಿರುವುದನ್ನು ಸಹ ಸ್ವಾಗತಿಸುತ್ತೇನೆ. "ಭಗವಾನ್ ಕೆ ಘರ್ ಮೆ ದೆರ್ ಹೈ ಅಂಧೇರ್ ನಹೀ" ಈ ಸಾಲಿನಲ್ಲಿ ದೇವಾಲಯಗಳನ್ನು ಸರ್ಕಾರದ ನಿಯಂತ್ರಣದಿಂದ ಮುಕ್ತಗೊಳಿಸಿರುವುದಕ್ಕೆ ಒಂದು ದೊಡ್ಡ ನಮಸ್ಕಾರ. ಏಕೆಂದರೆ, ಇದರಿಂದ ಪಟ್ಟಕಷ್ಟ, ಅದರ ನೋವು, ಅದನ್ನು ಪಟ್ಟವರಿಗೆ ಗೊತ್ತು. ನಾವು ದೇವಸ್ಥಾನದ ಹುಂಡಿಗೆ ಹಣ ಹಾಕುತ್ತೇವೆ. ಆದರೆ, ಆ ಹಣವನ್ನು ದೇವಸ್ಥಾನದ ಅಭಿವೃದ್ಧಿಗೆ ತೆಗೆಯುವಂತಿಲ್ಲ. ಇದಕ್ಕೆ ಸರ್ಕಾರದ ಒಪ್ಪಿಗೆ ಬರಬೇಕು. ತಹಶೀಲ್ದಾರ್‌ರವರು ಅನುಮತಿ ಕೊಡುವುದಿಲ್ಲ. ಕೊನೆಗೆ, ನಾವು ಉಲ್ಲಾಳಾದ ದೇವಸ್ಥಾನದ ಜೀರ್ಣೋದ್ಧಾರ ಮಾಡುವುದಕ್ಕೆ ಎಲ್ಲಾ ಕಡೆಯೂ ದೇಣಿಗೆಯನ್ನು ಎತ್ತಿ ಸಾಲವನ್ನು ಮಾಡಿದ್ದೇವೆ. ದೇವಸ್ಥಾನಕ್ಕೆ ಸೇರಿದ ಹಣವನ್ನು ದೇವಸ್ಥಾನಕ್ಕೆ ಕೊಡುವುದಿಲ್ಲ. ಆದ್ದರಿಂದ, ಸರ್ಕಾರ ಇದಕ್ಕೆ ಒಂದು ಒಳ್ಳೆಯ ಮುಕ್ತಿಯನ್ನು ನೀಡಿದಕ್ಕೆ ನಾನು ಸರ್ಕಾರಕ್ಕೆ ಎರಡು ಕೈಗಳನ್ನು ಮುಗಿದು ನಮಸ್ಕಾರ ಮಾಡುತ್ತೇನೆ.

ಮಾನ್ಯ ಸಭಾಪತಿಯವರೇ, ಅದೇರೀತಿ ಸರ್ಕಾರ ಮೂರು ಲಕ್ಷ ಜನ ಹೆಣ್ಣು ಮಕ್ಕಳಿಗೆ ರಕ್ಷಣೆಯನ್ನು ಮಾಡುತ್ತದೆ ಎಂದು ಹೇಳಿದೆ. ಇದು ಸಹ ಬಹಳ ಸಂತೋಷದ ವಿಷಯ. ಸರ್ಕಾರ ವೀರ ಮಹಿಳೆ "ಶ್ರೀಮತಿ ಕಿತ್ತೂರು ರಾಣಿ ಚೆನ್ನಮ್ಮ"ನವರ ಮತ್ತು "ಶ್ರೀ ಸಂಗೊಳ್ಳಿ ರಾಯಣ್ಣ"ನವರ ಪ್ರತಿಮೆಗಳನ್ನು ಮಾಡುತ್ತೇವೆಂದು ಹೇಳಿದೆ. ಮಂಗಳೂರು ಉಲ್ಲಾಳದಲ್ಲಿ "ಅಬ್ಬಕ್ಕ ರಾಣಿ'ಯವರು ಬ್ರಿಟಿಷರ ವಿರುದ್ಧವಲ್ಲ, ಪೋರ್ಚುಗೀಸರ ವಿರುದ್ಧ ಹೋರಾಟ ಮಾಡಿದಂತಹ ಮೊಟ್ಟಮೊದಲ ಸ್ವಾತಂತ್ರ್ಯ ಮಹಿಳಾ ಹೋರಾಟಗಾರ್ತಿ. ಇವರು "ಕಿತ್ತೂರು ರಾಣಿ ಚೆನ್ನಮ್ಮ" ನಿಗಿಂತ ಮೊದಲು ಹೋರಾಟ ಮಾಡಿದಂತಹವರು. ಇವತ್ತಿನ ದಿವಸ ಅವರದ್ದು ಒಂದು ಪ್ರತಿಮೆ ಇಲ್ಲವೆಂದರೆ, ಬಹಳ ನೋವಾಗುತ್ತದೆ. ಇವರ ಪ್ರತಿಮೆಯನ್ನು ಅಲ್ಲಿ ಪ್ರತಿಸ್ಥಾಪನೆ ಮಾಡಬೇಕು.

ಮಾನ್ಯ ಸಭಾಪತಿಯವರೇ, ಅದೇರೀತಿ "ಕೆಳದಿಯ ಚೆನ್ನಮ್ಮ" ಇವರು ಶ್ರೀ ಶಿವಪ್ಪನಾಯಕನ ಸಂಸ್ಥಾನದಲ್ಲಿ 25 ವರ್ಷಗಳ ಕಾಲ ಸಾಗರ ಪ್ರಾಂತ್ಯದ ಕೆಳದಿಯನ್ನು ಆಡಳಿತ ಮಾಡಿ ಶ್ರೀ ಶಿವಾಜಿ ಮಹಾರಾಜನ ಮಕ್ಕಳಿಗೆ ರಕ್ಷಣೆ ಕೊಟ್ಟಂತಹ ವೀರ ರಾಣಿ. ಇವರು ಶ್ರೀ ಔರಂಗಜೇಬನ ವಿರುದ್ಧ ಹೋರಾಟ ಮಾಡಿದ್ದಾರೆ. ಆಕೆ ಮಳೆಗಾಲ ಬರುವವರೆಗೂ ಕಾದು ಬುದ್ಧಿವಂತಿಕೆಯಿಂದ ಆ ಸೈನ್ಯವನ್ನು ಹಿಮ್ಮೆಟ್ಟಿಸಿದ್ದಾರೆ. ನಮ್ಮದ್ದು ಚಿಕ್ಕರಾಜ್ಯ ಯಾವ ರೀತಿ ಇವರನ್ನು ಎದುರಿಸುತ್ತಾರೆಂದು ಮಂತ್ರಿಮಂಡಲದವರೆಲ್ಲರೂ ಹೆದರಿದ್ದರು. ಅವರನ್ನು ಚಳಿಯಲ್ಲಿ ಹಿಮ್ಮೆಟ್ಟಿಸಿ ಶಿವಾಜಿ ಮಹಾರಾಜನ ಮಕ್ಕಳನ್ನು ರಕ್ಷಣೆ ಮಾಡಿದಂತಹ ಮಹಿಳೆ. ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಇದನ್ನು note ಮಾಡಿಕೊಳ್ಳಬೇಕು. ಅವರ ಪ್ರತಿಮೆಯನ್ನು ಮಾಡಬೇಕು.

ಮಾನ್ಯ ಸಭಾಪತಿಯವರೇ, "ಒನಕೆ ಓಬವ್ವ" ಒಬ್ಬ ಗೃಹಿಣಿಯಾದರೂ ಸಹ ಈ ನಾಡನ್ನು ರಕ್ಷಣೆ ಮಾಡುತ್ತೇನೆಂದು ಹೇಳಿ ಹೋರಾಟ ಮಾಡಿದ ದಿಟ್ಟ ಮಹಿಳೆ. ನಾವು ಆಕೆಯ ಜಯಂತಿಯನ್ನು ಮಾಡುತ್ತಿದ್ದೇವೆ. ಕೇವಲ ಜಯಂತಿಯನ್ನು ಮಾಡಿದರೆ ಸಾಕಾಗುವುದಿಲ್ಲ. ಅದು ಕಣ್ಣಿಗೆ ಕಾಣಬೇಕು. ಇದು ತಮಾಷೆಯ ವಿಷಯವಲ್ಲ. ನಾನು ಬಹಳ ಗಂಭೀರವಾಗಿ ಹೇಳುತ್ತಿದ್ದೇನೆ. ದಯಮಾಡಿ, ಒನಕೆ ಓಬವ್ವನ ಪ್ರತಿಮೆಯನ್ನು ಸಹ ಮಾಡಬೇಕು.

**(ಗೊಂದಲ)**

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಆಯ್ಕೆಯಾದವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀಮತಿ ಭಾರತಿಶೆಟ್ಟಿಯವರು ಹೇಳುವುದು ಸರಿ ಇದೆ. ಚಿತ್ರದುರ್ಗದಲ್ಲಿ ಕನಿಷ್ಠ ಪಕ್ಷ ೫೦ ಅಡಿಗಳ ಎತ್ತರದ "ಒನಕೆ ಓಬವ್ವನ" ಪ್ರತಿಮೆಯನ್ನು ಸ್ಥಾಪನೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯಸುತ್ತೇನೆ.

**(ಈ ಹಂತದಲ್ಲಿ ವೈಸ್ ಛೇರ್ಮನ್‌ರವರಾದ ಡಾ॥ತೇಜಸ್ವಿನಿಗೌಡರವರು ಪೀಠವನ್ನು ಅಲಂಕರಿಸಿದರು)**

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಆಕೆ ಒಬ್ಬ ಗೃಹಿಣಿ. ಆಕೆ ರಾಜವಂಶದವಳಲ್ಲ. ಆಕೆ ರಾಜ ಮನೆತನಕ್ಕೆ ಸೇರಿದವಳಲ್ಲ. ಆಕೆಗೆ ಕತ್ತಿವರೆಸೆ ಕಲಿಸಿಕೊಟ್ಟಿಲ್ಲ. ಆಕೆ ಒಬ್ಬ ಗೃಹಿಣಿಯಾಗಿದ್ದರೂ ಸಹ, ಒಂದು ಹೆಣ್ಣು ಯಾವ ರೀತಿ ರಕ್ಷಣೆ ಮಾಡಬೇಕೆಂದು ತೋರಿಸಿಕೊಟ್ಟಿದ್ದಾಳೆ. ಹಾಗಾಗಿ, ಈಕೆಯ ಪ್ರತಿಮೆಯನ್ನು ಸರ್ಕಾರ ಮಾಡಬೇಕು. ನಾಗರಹಾವು ಚಲನ ಚಿತ್ರದಲ್ಲಿ ಒನಕೆ ಓಬ್ವವನ ಪಾತ್ರಕ್ಕೆ ಚಲನಚಿತ್ರ ನಟಿ ದಿವಂಗ ಶ್ರೀಮತಿ ಜಯಂತಿಯವರು ಬಹಳ ಚೆನ್ನಾಗಿ ಜೀವ ತುಂಬಿಸಿದ್ದಾರೆ. ನಟರೆಲ್ಲರೂ ಇಂತಹವರಿಗೆ ಜೀವ ತುಂಬಿಸುತ್ತಾರೆ. ಇಂತಹ ಧೀರ ಮಹಿಳೆಯರ ಪುತ್ಥಳಿಗಳನ್ನು ಮಾಡಿ ಪ್ರತಿಸ್ಥಾಪನೆ ಮಾಡಬೇಕು. .

**(ಗೊಂದಲ)**

**ಶ್ರೀ ಶಶೀಲ್‌ಜಿ ನಮೋಶಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀಮತಿ ಭಾರತಿಶೆಟ್ಟಿಯವರು ಚಿತ್ರ, ನಾಟಕ, ನಟನೆ ಮತ್ತು ಕಲೆಯ ಬಗ್ಗೆ ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಭಾರತಿ ಶೆಟ್ಟಿಯವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಹಾಗಾಗಿ, ಅವರಿಗೆ ಏಕೆ disturb ಮಾಡುತ್ತಾರೆ?

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು disturb ಮಾಡುತ್ತಿಲ್ಲ. ನಮ್ಮವರೆ disturb ಮಾಡುತ್ತಿದ್ದಾರೆ. ಯಾರು disturb ಮಾಡಬೇಕೋ ಅವರು ಮಾಡುತ್ತಿಲ್ಲ. ಯಾರು disturb ಮಾಡಬಾರದೋ ಅವರು ಮಾಡುತ್ತಿದ್ದಾರೆ,

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀಮತಿ ಭಾರತಿಶೆಟ್ಟಿಯವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಹಾಗಾಗಿ, ನಾವು ಸುಮ್ಮನೆ ಕುಳಿತುಕೊಂಡು ಕೇಳುತ್ತಿದ್ದೇವೆ.

(ಗೊಂದಲ)

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ನಾನು ಒನಕೆ ಓಬವ್ವನ ನಾಡಿನಿಂದ ಬಂದಿದ್ದೇನೆ. ಹಾಗಾಗಿ, ಒಂದು ನಿಮಿಷ ಮಾತನಾಡಿದ್ದೇನೆ. "ಒನಕೆ ಓಬ್ಬವನ" ಇತಿಹಾಸ ಹೆಜ್ಜೆ, ಹೆಜ್ಜೆಗೂ ರಾಜ್ಯಕ್ಕೆ ತಿಳಿಯಬೇಕು. ಆಕೆ ಅತ್ಯಂತ ಕೆಳ ಸಮಾಜದಿಂದ ಬಂದಿರುವಂತಹ ಮಹಿಳೆ. ಆದರೆ, ದೇಶಕ್ಕೆ, ಪ್ರಪಂಚಕ್ಕೆ ಒಬ್ಬ ಮಹಿಳೆಯು ಸೈನ್ಯವನ್ನು ಯಾವ ರೀತಿ ಹಿಮ್ಮೆಟ್ಟಿಸಬಹುದು, ದೇಶದ್ರೋಹಿಗಳನ್ನು ಯಾವ ರೀತಿ ಸೆದೆಬಡಿಯಬಹುದು ಎಂದು ತೋರಿಸಿಕೊಟ್ಟಿರುವಂತಹ ಒಬ್ಬ ಕೆಚ್ಚೆದೆಯ ಮಹಿಳೆ. ಹಾಗಾಗಿ, ಕನಿಷ್ಠ ಪಕ್ಷ 50 ಅಡಿಗಳ ಎತ್ತರದ ಒನಕೆ ಓಬವ್ವನ ಪ್ರತಿಮೆಯನ್ನು ಸ್ಥಾಪನೆ ಮಾಡಬೇಕು ಎಂದು ನಾನು ಸರ್ಕಾರವನ್ನು ಒತ್ತಾಯಸುತ್ತೇನೆ. ಇವತ್ತು ಒನಕೆ ಓಬವ್ವನ ಜಯಂತಿ ಇರುವುದರಿಂದ ಈ ಸಂದರ್ಭದಲ್ಲಿ ಆ ನಿರ್ಣಯವನ್ನು ತೆಗೆದುಕೊಳ್ಳುವುದು ಒಳ್ಳೆಯದು ಎಂದು ಈ ಸಂದರ್ಭದಲ್ಲಿ ಆಶಿಸುತ್ತೇನೆ

**ಶ್ರೀ ಶಶೀಲ್ ಜಿ ನಮೋಶಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿಯವರು ಬಹಳ ಚೆನ್ನಾಗಿ ಚಿತ್ರ, ಕಲೆ, ನಟ ಮತ್ತು ನಟಿಯರ ಬಗ್ಗೆ ಮಾತನಾಡುತ್ತಿದ್ದಾರೆ. ಹಾಗಾಗಿ, ಒನಕೆ ಓಬವ್ವನ ಹೆಸರಿನಲ್ಲಿ ಒಂದು ಸಿನಿಮಾವನ್ನು ಏಕೆ ತೆಗೆಯಬಾರದು? ಆ ಚಿತ್ರದಲ್ಲಿನ star role ಅನ್ನು ಶ್ರೀಮತಿ ಭಾರತಿ ಶೆಟ್ಟಿಯವರು ಮಾಡಬೇಕೆಂದು ಹೇಳುತ್ತೇನೆ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಶಶೀಲ್ ಜಿ ನಮೋಶಿಯವರೇ, ಈಗಾಗಲೇ ಚಲನಚಿತ್ರ ನಟಿ ದಿವಂಗತ ಶ್ರೀಮತಿ ಜಯಂತಿ ಆ ಪಾತ್ರವನ್ನು ಅಭಿನಯಿಸಿದ್ದಾರೆ.

**ವೈಸ್ ಛೇರ್ಮನ್:–** ಮಾನ್ಯ ಸದಸ್ಯರುಗಳೇ, ನಾಗರಹಾವು ಸಿನಿಮಾದಲ್ಲಿ ದಿವಂಗತ ನಟಿ ಅಭಿನಯ ಶಾರದೆ ಶ್ರೀಮತಿ ಜಯಂತಿ ಅಮ್ಮರವರನ್ನು ಬಹುಶಃ ಸೂರ್ಯ–ಚಂದ್ರರರು ಇರುವ ತನಕ ಒನಕೆ ಓಬವ್ವ ಅವರನ್ನು ಶಾಶ್ವಾತವಾಗಿ ಇಟ್ಟುಹೋಗಿದ್ದಾರೆ. ಹಾಗೆಯೇ, ಆ ಸಿನಿಮಾದಲ್ಲಿ ದಿವಂಗತ ಡಾ॥ವಿಷ್ಣುವರ್ಧನ್‌ರವರು ಸಹ ಬಹಳ ಚೆನ್ನಾಗಿ ನಟಿಸಿದ್ದಾರೆ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಹೌದು. ಖಂಡಿತವಾಗಿ. ಉಡುತಡಿಯಲ್ಲಿ ಶ್ರೀಮತಿ ಅಕ್ಕಮಹಾದೇವಿಯವರ ವಿಗ್ರಹವನ್ನು ಮಾಡುತ್ತಿದ್ದಾರೆ.

**ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿಯವರು ಆ ಪಾತ್ರವನ್ನು ಎಲ್ಲಾದರೂ ಮಾಡಿಬಿಟ್ಟಾರೋ ಎಂದು ತಮಗೆ ಎಷ್ಟು ದ್ವೇಷ ನೋಡಿ. ನಿಮಗೆ ಶ್ರೀಮತಿ ಭಾರತಿ ಶೆಟ್ಟಿಯವರ ಮೇಲೆ ಇಷ್ಟೊಂದು ದ್ವೇಷನಾ? ಎಲ್ಲಿ ಶ್ರೀಮತಿ ಭಾರತಿ ಶೆಟ್ಟಿಯವರಿಗೆ ಆ role ಕೊಟ್ಟುಬಿಡುತ್ತಾರೋ ಎಂದು ದಿವಂಗತ ನಟಿ ಅಭಿನಯ ಶಾರದೆ ಶ್ರೀಮತಿ ಜಯಂತಿಯವರು ಆ ಪಾತ್ರವನ್ನು ಜೀವಂತವಾಗಿಟ್ಟಿದ್ದಾರೆ ಎನ್ನುತ್ತೀರಿ ನೋಡಿ. ನೀವು ಏನು ಹೆಂಗಸರಮ್ಮ.

**ವೈಸ್ ಛೇರ್ಮನ್:–** ಮಾನ್ಯ ಮಾಧುಸ್ವಾಮಿ ಅಣ್ಣನವರೇ, ಮೊದಲು ರಾಣಿ ಅಬ್ಬಕ್ಕನ ಸಿನಿಮಾವನ್ನು ಮೊದಲು ಮಾಡಬೇಕಲ್ಲವೇ; ನಾವು ಅದರಿಂದ ಮೇಲೆ ಇದ್ದೇವೆ. ನಮಗೆ ಇನ್ನೂ ಸಿನಿಮಾ ಮಾಡಬೇಕಾದಂತಹ ಸ್ಥಿತಿ ಇದೆಯಲ್ಲಾ;

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾವು ಗಂಡಸರೂ ಎಷ್ಟು ಬೇಕಾದರೂ ಜಗಳವಾಡಿ ನಂತರ ಒಂದಾಗುತ್ತೇವೆ. ಆದರೆ, ಇಬ್ಬರು ಮಹಿಳೆಯರನ್ನು ಒಟ್ಟಿಗೆ ಕೂಡಿಸುವುದು ಈ ಜಗತ್ತಿನಲ್ಲಿ ಬಹಳ ಕಷ್ಟ. ಅದೀಗ ಈ ಸದನದಲ್ಲಿ ಅವರಿಗೆ ಗೊತ್ತಾಗಿದೆ.

**ವೈಸ್ ಛೇರ್ಮನ್:-** ಮಾನ್ಯ ಮರಿತಿಬ್ಬೇಗೌಡರವರೇ, ಮಾನ್ಯ ಹರಿಪ್ರಸಾದ್‌ರವರು ಪ್ರತಿಪಕ್ಷದಲ್ಲಿ ಮೂರು ಜನ ಹೆಣ್ಣು ಮಕ್ಕಳಿಗೆ support ಮಾಡಿದ ಮೇಲೆ, ಪ್ರತಿ ಪಕ್ಷದಲ್ಲಿಯೇ support ಸಿಕ್ಕಿದ ಮೇಲೆ, ಇನ್ನೂ ನಮ್ಮ ರಕ್ಷಣೆಗೆ ಎಲ್ಲರೂ ಇದ್ದೀರಿ ಎಂದು ಆಯಿತು.

**ಶ್ರೀ ಜೆ.ಸಿ.ಮಾಧುಸ್ವಾಮಿ;-** ಮಾನ್ಯ ಸಭಾಪತಿಯವರೇ, ತಾವು ತಕರಾರು ತೆಗೆದಿದ್ದೀರಿ.

**ವೈಸ್ ಛೇರ್ಮನ್:-** ಮಾನ್ಯ ಮಾಧುಸ್ವಾಮಿಯವರೇ, ನಾನು ತಕಾರಾರು ತೆಗೆಯಲಿಲ್ಲ. ಇನ್ನು ರಾಣಿ ಅಬ್ಬಕ್ಕನ ಸಿನಿಮಾ ಮತ್ತು ಕೆಳದಿ ಚೆನ್ನಮ್ಮನ ಸಿನಿಮಾ ಬರಬೇಕು. ತಾವು ಬಹಳ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದೀರಿ. ಇದನ್ನು ಬಹಳ serious ಆಗಿ ತೆಗೆದುಕೊಳ್ಳೋಣ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನಾಡು ನುಡಿಯನ್ನು ಸಾರುವಂತಹ ಈ ಎಲ್ಲಾ ಮಹಾನೀಯರ ವಿಶೇಷವಾಗಿ,.

(ಗೊಂದಲ)

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಅದನ್ನು part-1, part-2 ಎಂದು ಮಾಡೋಣ.

**ವೈಸ್ ಛೇರ್ಮನ್:-** ಮರಿತಿಬ್ಬೇಗೌಡರವರೇ, ಇಲ್ಲ ಇಲ್ಲ. ನಮ್ಮ ಮಾನ್ಯ ರವಿಕುಮಾರ್ ರವರು ಹೇಳಿದಂತೆ. "ಒನಕೆ ಓಬವ್ವನ" ಪ್ರತಿಮೆಯನ್ನು ಮಾಡೋಣ.

**ಶ್ರೀ ಎಂ.ಕೆ.ಪ್ರಾಣೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಮರಿತಿಬ್ಬೇಗೌಡರು, ನಾವುಗಳು ಪುರುಷರೆಂದು ಹೇಳಿದ್ದಾರೆ. ನಾವು ಮನೆಯಿಂದ ಹೊರಗೆ ಹೋದ ಮೇಲೆ ನಮ್ಮಂತಹ ಶೂರರೇ ಇಲ್ಲ. ಮನೆಯೊಳಗೆ ಹೋದ ಮೇಲೆ ನಮ್ಮಂತಹ ಇಲಿಗಳೇ ಇಲ್ಲ, ಏನು ಮಾಡುತ್ತೀರಾ; ಅಷ್ಟು ದರ್ಬಾರ್.

**ವೈಸ್ ಛೇರ್ಮನ್:-** ಮಾನ್ಯ ಪ್ರಾಣೇಶ್‌ರವರೇ, ಈ ರೀತಿ ಹೆಣ್ಣು ಮಕ್ಕಳನ್ನು ಉಬ್ಬಿಸಿದರೆ ನಾವು ಉಬ್ಬುವುದಿಲ್ಲ. ನಾವು ರಾಜಕಾರಣದಲ್ಲಿ 50% ಬರುವವರೆಗೂ ಈ ರೀತಿ ಉಬ್ಬುವುದಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನನ್ನ ಸಹೋದರಿ ಶ್ರೀಮತಿ ಭಾರತಿ ಶೆಟ್ಟಿಯವರು ಮಾತನಾಡುತ್ತಿರುವಾಗ ನಿಜವಾಗಲೂ ಕೇಳುವುದಕ್ಕೆ ಬಹಳ ಆನಂದವಾಗುತ್ತದೆ. ಅವರು ಮಾತನಾಡುವಂತಹ ಶೈಲಿ Parliament ನಲ್ಲಿ ಇರುವಂತಹ ಪರಂಪರೆಯಾಗಿದೆ. ಅವರು ಸರ್ಕಾರವನ್ನು ಯಾವ ರೀತಿ defend ಮಾಡಿಕೊಳ್ಳಬಹುದು ಎಂಬುದನ್ನು ನಾವೆಲ್ಲರೂ ಸಹ ಅವರಿಂದ ಕಲಿಯಬೇಕು ಎನ್ನುವ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ನಮ್ಮನ್ನು criticize ಮಾಡಿದ್ದಾರೆ. Constructive criticism. ನಾನು ಇದನ್ನು Parliament ನಲ್ಲಿ ನೋಡಿದ್ದೇನೆ. ಆದರೆ, ಮೊಟ್ಟ ಮೊದಲ ಬಾರಿಗೆ ಅದನ್ನು ಇಲ್ಲಿ ನೋಡುತ್ತಿದ್ದೇನೆ. ಹಾಗಾಗಿ, ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಈಗ ಏನಾಗಿದೆ ಎಂದರೆ, ಇತಿಹಾಸದಲ್ಲಿರುವಂತಹ ಎಲ್ಲಾ characters ಬಗ್ಗೆ act ಮಾಡಿದವರ ಪ್ರತಿಮೆಗಳು ಇವೆ. ಡಾ॥ ರಾಜ್‌ಕುಮಾರ್, ಡಾ॥ಪುನೀತ್‌ರಾಜ್‌ಕುಮಾರ್, ಡಾ॥ವಿಷ್ಣುವರ್ಧನ್‌ರವರ ಎಲ್ಲರ ಪ್ರತಿಮೆಗಳನ್ನು ಹಾಕಿದ್ದಾರೆ. ಈ ರೀತಿ ನಿಜ ನೈಜ ಸ್ವರೂಪಿಗಳ ಪ್ರತಿಮೆಗಳನ್ನು ಏಕೆ ಮಾಡುವುದಿಲ್ಲ? ಇದನ್ನು ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ನಾನು ಮಾನ್ಯ ಮುಖ್ಯಮಂತ್ರಿಯವರನ್ನು ಬಹಳ ಖುಷಿಯಿಂದ ಅಭಿನಂದಿಸುತ್ತೇನೆ.

**(ಮುಂದು.,)**

**(430) 17-03-2022 (4.30) ಎಂ.ವಿ-ಬಿಎನ್‌ಎಸ್ (ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಶ್ರೀಮತಿ ಭಾರತಿ ಶೆಟ್ಟಿ (ಮುಂದು)**

ಏಕೆಂದರೆ, "ಮುಖ್ಯಮಂತ್ರಿ ರೈತ ವಿದ್ಯಾನಿಧಿ" ಈಗ ಹತ್ತನೇ ತರಗತಿ ಪಾಸ್ ಮಾಡಿಕೊಂಡು ಹೋಗುವಂತಹ ಪ್ರಥಮ ಪಿ.ಯು.ಸಿ. ಮತ್ತು ಐ.ಟಿ.ಐ. ಹಾಗೂ ಡಿಪ್ಲೊಮಾ ಮಾಡುವಂತಹ ವಿದ್ಯಾರ್ಥಿಗಳಿಗೆ ವಾರ್ಷಿಕವಾಗಿ 2,500/- ರೂಪಾಯಿಗಳು ಮತ್ತು ವಿದ್ಯಾರ್ಥಿನಿಯರಿಗೆ 3,000/- ರೂಪಾಯಿಗಳನ್ನು ನೀಡುವುದು. ಬಿ.ಎ., ಬಿ.ಕಾಂ., ಮತ್ತು ಬಿ.ಎಸ್ಸಿ. ವಿದ್ಯಾರ್ಥಿಗಳಿಗೆ 5,000/- ರೂಪಾಯಿಗಳು, ವಿದ್ಯಾರ್ಥಿನಿಯರಿಗೆ 5,500/- ರೂಪಾಯಿಗಳನ್ನು ನೀಡುವುದು. ಎಲ್.ಎಲ್.ಬಿ.,

ಪ್ಯಾರಾಮೆಡಿಕಲ್, ಬಿ.ಫಾರ್ಮ. ಮತ್ತು ನರ್ಸಿಂಗ್ ಕೋರ್ಸ್ ಮಾಡಿದಂತಹವರಿಗೆ ವಿದ್ಯಾರ್ಥಿಗಳಿಗೆ 7,500/- ರೂಪಾಯಿಗಳು, ವಿದ್ಯಾರ್ಥಿನಿಯರಿಗೆ 8,000/- ರೂಪಾಯಿಗಳನ್ನು ನೀಡುವುದು. ಎಂ.ಬಿ.ಬಿ.ಎಸ್., ಬಿ.ಇ., ಬಿ.ಟೆಕ್., ಮತ್ತು ಸ್ನಾತಕೋತ್ತರ ಪದವಿ ಪಡೆಯುವ ವಿದ್ಯಾರ್ಥಿಗಳಿಗೆ 10,000/- ರೂಪಾಯಿಗಳು, ವಿದ್ಯಾರ್ಥಿನಿಯರಿಗೆ 11,000/- ರೂಪಾಯಿಗಳನ್ನು ನೀಡುವುದು. ಹೆಣ್ಣು ಮಕ್ಕಳಿಗೆ ಹೆಚ್ಚಿನ ಆದ್ಯತೆಯನ್ನು ನೀಡಿದಂತಹ ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ನಾನು ಯಾವಾಗಲೂ ನಾಗಪುರ ಮತ್ತು ಹಾವಿನಪುರ ಎಂಬ ಒಂದು ಮಾತನ್ನು ಕೇಳುತ್ತಿರುತ್ತೇನೆ. ನಾವು ಇಟಲಿ ಎಂದು ಹೇಳುತ್ತೇವೆ, ಅವರು ನಮಗೆ ನಾಗಪುರವೆಂದು ಹೇಳುತ್ತಾರೆ; ನನಗೂ ಗೊತ್ತು ಅವರು ಇಟಲಿ ಅಲ್ಲವೆಂದು. ಅವರಿಗೂ ಗೊತ್ತು ನಾನು ನಾಗಪುರವಲ್ಲವೆಂದು. ಆದರೆ, ಮಾತನಾಡುವಾಗ ಅದನ್ನು ಉಲ್ಲೇಖ ಮಾಡುತ್ತೇವೆ. ನಾಗಪುರದಲ್ಲಿ ನಮ್ಮನ್ನು ಹೇಗೆ ಬೆಳೆಸಿದ್ದಾರೆಂದರೆ, "ಮನುಕುಲ ಏಳಿಗೆ ಸಾಧಿಸಲು ಹೊರಟೆವು, ಪ್ರಭಾತ ಕಿರಣಗಳ ಅರಳಿಸುತ್ತಾ, ಶೋಷಿತ, ಪೀಡಿತ ದಲಿತ ಜನಾಂಗದ ಭಾಗ್ಯೋದಯವನ್ನು ನಿರ್ಮಿಸುತ್ತಾ, ಪ್ರತಿ ವ್ಯಕ್ತಿಗೆ, ಪ್ರತಿ ಪರಿವಾರಕ್ಕೆ ರೊಟ್ಟಿಯೂ, ಬಟ್ಟೆಯೂ, ವಸತಿಯೂ ಜೀವನಕ್ಕೆ ಇವು ಬೇಕೇ ಬೇಕು. ಪ್ರತಿ ವ್ಯಕ್ತಿಯೂ, ಪ್ರತಿ ಪರಿವಾರವೂ ಸುಖದಿಂದ ಇರುವುದಾದರೆ ಸಾಕು, ದೇಶದ ಮೇಲ್ಮೆಗೆ ದುಡಿಯುವವರೆಲ್ಲರೂ ಒಮ್ಮನದಲ್ಲಿ ನಗು ನಗುತಾ, ರಾಷ್ಟ್ರದ ವೈಭವ, ಗೌರವ ಪ್ರಾಣಕಿಂತ ಮಿಗಿಲಾದುದು, ಶೋಷಿತ, ಪೀಡಿತ, ದಲಿತ ಜನಾಂಗದ ಭಾಗ್ಯೋದಯವನ್ನು ನಿರ್ಮಿಸುತ್ತಾ" ಎಂದು ನಮಗೆ ನಾಗಪುರದಿಂದ ಈ ರೀತಿ ಕಲಿಸಿಕೊಟ್ಟು ಬೆಳೆಸಿದ್ದಾರೆ. ಇವತ್ತು ನಮ್ಮ ದೇಶಕ್ಕೆ ಸರ್ವಶಿಕ್ಷಣ ಅಭಿಯಾನವನ್ನು ಕೊಟ್ಟಂತಹ, ದೇಶದಲ್ಲಿ ಸ್ತ್ರಿ ಶಕ್ತಿ ಸ್ವ-ಸಹಾಯ ಗುಂಪುಗಳನ್ನು ಮಾಡಿದಂತಹ, ಶಾಲೆಯ ವಿದ್ಯಾಭ್ಯಾಸಕ್ಕೆ ಒತ್ತು ಕೊಟ್ಟು, ರಾಷ್ಟ್ರೀಯ ಹೆದ್ದಾರಿಗಳಿಗೆ ಒತ್ತು ಕೊಟ್ಟು, ಅಂತರರಾಷ್ಟ್ರೀಯ ಮಟ್ಟದಲ್ಲಿ ಇದ್ದಂತಹ ಸಾಲವನ್ನು ತೀರಿಸಿ, ಅಜಾತಶತ್ರು ಎನಿಸಿಕೊಂಡಂತಹ ಮಾನ್ಯ ಅಟಲ್ ಬಿಹಾರಿ ವಾಜಪೇಯಿ ಯವರು ಸಹ ಶಿಕ್ಷಣ ಪಡೆದಿದ್ದು ಅದೇ ನಾಗಪುರದಿಂದ.

**ವೈಸ್ ಛೇರ್ಮನ್:-** ಮಾನ್ಯ ಸದಸ್ಯರೆ, ಮತ್ತೊಂದು ಸಂದರ್ಭದಲ್ಲಿ ಇದರ ಬಗ್ಗೆ ವೈಚಾರಿಕ ಚಿಂತನೆಯಾಗಲಿ. ಇದರ ಬಗ್ಗೆ ಆರೋಗ್ಯಕರ ಚರ್ಚೆಗಳು ಆಗಬೇಕು. ಯಾವುದೋ ಒಂದು ರಾಜಕೀಯ ಪಕ್ಷ ಅಧಿಕಾರಕ್ಕೆ ಬರುವುದು ಸೈದ್ಧಾಂತಿಕ ಚಿಂತನೆಗಳ ಮೇಲೆಯೇ, ಆರೋಗ್ಯಕರವಾದ ಚರ್ಚೆಯನ್ನು ಮತ್ತೊಂದು ಬಾರಿ ಮಾಡೋಣ. ದಯಮಾಡಿ ತಾವು ಪೀಠಕ್ಕೆ ಸಹಕಾರ ನೀಡಬೇಕು. ಏಕೆಂದರೆ, ಬಹಳಷ್ಟು ಜನ ಬಜೆಟ್ ಮೇಲೆ ಮಾತನಾಡುವವರು ಇದ್ದಾರೆ. ತಾವು ತಮ್ಮ ಮಾತುಗಳನ್ನು

ಮುಗಿಸಬೇಕು. ಈಗಾಗಲೇ ತಮ್ಮ ಸಮಯ ಮುಗಿದಿದೆ. ಏಕೆಂದರೆ, ಮಾತನಾಡುವವರ ಪಟ್ಟಿ ಜಾಸ್ತಿ ಇದೆ.

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಕೇವಲ ಐದು ನಿಮಿಷ ಮಾತ್ರ ಮಾತನಾಡುತ್ತೇನೆ. ಈಗ 18 ಲಕ್ಷ ಹಳ್ಳಿಗಳಿಗೆ ವಿದ್ಯುತ್ ಮತ್ತು ಕೋಟ್ಯಂತರ ಮಹಿಳೆಯರಿಗೆ ಗ್ಯಾಸ್ ಅನ್ನು ಉಚಿತವಾಗಿ ನೀಡಿದ್ದಾರೆ. ಬಡವರು ಏನೋ ಸಾಧನೆ ಮಾಡುತ್ತಾರೆ. ಈಗ ಸಾಲುಮರದ ತಿಮ್ಮಕ್ಕನಂತಹ ಮಹಿಳೆಗೆ "ಪದ್ಮಶ್ರೀ" ಪ್ರಶಸ್ತಿಯನ್ನು ನೀಡಿರುವುದು. ವಿಶ್ವದ ಅತೀ ದೊಡ್ಡ ಪ್ರತಿಮೆಯಾದ "statue of unity" ಯನ್ನು ಏಕೆ ಮಾಡಿದರು ಎಂದು ಕೇಳಿದರು. ಏಕೆಂದರೆ, ಮಾನ್ಯ ಸರದಾರ ವಲ್ಲಭಭಾಯಿ ಪಟೇಲ್‌ರವರು ನಮ್ಮವರು ಎಂದು. ಅವರು ನಮ್ಮ ಆರ್.ಎಸ್.ಎಸ್. ಅನ್ನು ಬ್ಯಾನ್ ಮಾಡಬೇಕೆಂದು ಸಹ ಉಲ್ಲೇಖ ಮಾಡಿದರು. ಇವತ್ತು ನಾವು ಆ "statue of unity" ಯಿಂದ ಎಷ್ಟು ಆದಾಯವನ್ನು ಪಡೆಯುತ್ತಿದ್ದೇವೆ. ಅದೇ ರೀತಿ ಇಡೀ ವಿಶ್ವ ಯೋಗದ ಕಡೆಗೆ ಹೊರಳುವಂತೆ ಮಾಡಿದರು. ಪ್ರಪ್ರಥಮ ಬಾರಿಗೆ ಸಾಂಕ್ರಾಮಿಕ ರೋಗಕ್ಕೆ ಲಸಿಕೆಯನ್ನು ನೀಡಿದಂತಹವರು. ರೈತರ ಖಾತೆಗೆ ಹಣವನ್ನು ವರ್ಗಾಯಿಸುವುದು.

**ವೈಸ್ ಛೇರ್ಮನ್:–** ಮಾನ್ಯ ಸದಸ್ಯರೆ, ತುಂಬಾ ಸಮಯವಾಗಿದೆ. ನಾನು ಬೇರೆ ಸದಸ್ಯರಿಗೆ ಅವಕಾಶ ಮಾಡಿಕೊಡಬೇಕು. ನನ್ನ ಬಳಿ ಮಾತನಾಡುವವರ ಪಟ್ಟಿ ಬಹಳ ದೊಡ್ಡದಿದೆ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಶತಮಾನಗಳಿಂದ ಇದ್ದಂತಹ ರಾಮಮಂದಿರ ನಿರ್ಮಾಣ. ಬ್ಯಾಂಕ್ ಮುಖ ನೋಡಿರದಂತಹ ಅನೇಕ ಜನರಿಗೆ ಬ್ಯಾಂಕ್ ಖಾತೆಯನ್ನು ತೆರೆಯುವಂತೆ ಮಾಡಿದಂತಹ, ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಸಹ ಇಲ್ಲಿನಿಂದಲೇ ಶಿಕ್ಷಣ ಪಡೆದು ಬಂದಂತಹವರು. ಇಲ್ಲಿ ಇರುವಂತಹ ಅನೇಕ ಮಾನ್ಯ ಸದಸ್ಯರುಗಳು ನಾಗಪುರದಿಂದ ಶಿಕ್ಷಣ ಪಡೆದಿರುವುದು. ನಾಗಪುರವೆಂದರೆ ಅದು ಸುಲಭವಲ್ಲ. ಎಲ್ಲರಿಗೂ ಕರಾವಳಿ ಗೊತ್ತಿದೆ. ನಾವು ಪರಶುರಾಮನ ಸೃಷ್ಠಿಯಲ್ಲಿ ಬೆಳೆದಂತಹವರು. ನಾವು ನಾಗನಿಗೆ ಪೂಜೆ ಮಾಡುತ್ತೇವೆ. ನಾವು ಪ್ರತಿವರ್ಷ ತಂಬಿಲ ಕಟ್ಟಬೇಕು. ಸರ್ಪ ಸಂಸ್ಕಾರಕ್ಕೆ ಜಾತಿಯಿಲ್ಲ. ಸುಬ್ರಮಣ್ಯಕ್ಕೆ ಹಿಂದುಗಳು ಮಾತ್ರವಲ್ಲ, ಮುಸಲ್ಮಾನರು ಮತ್ತು ಕ್ರಿಶ್ಚಿಯನ್ನರು ಸಹ ಬರುತ್ತಾರೆ. ಎಲ್ಲಾ ಜಾತಿಯವರು ಸಹ ಬಂದು ನಾಗನಿಗೆ ಪೂಜೆಯನ್ನು ಸಲ್ಲಿಸುತ್ತಾರೆ. ನಾವು ನಾಗನಿಗೆ ಪೂಜೆ ಮಾಡಿದರೆ, ನಾಗ ನಮಗೆ ವರ ನೀಡುತ್ತಾನೆ. ಅದರಿಂದ ಒಳ್ಳೆಯದಾಗುತ್ತದೆ. ಆದರೆ, ಇವತ್ತು ನಾವು ಎಲ್ಲಿದ್ದೇವೆ. ನಾವು ಸೋತು, ಸೋತು ಗೆದ್ದವರು. ಅವರನ್ನು ಬೈದರೆ ಏನಾಗುತ್ತದೆ? ಆದುದರಿಂದ

ನಾಗಪುರ ಎನ್ನುವುದು ಹಾವಿನಪುರ ಅಲ್ಲಿನಿಂದಲೆ ಬಂದಂತಹವರು. ಅಲ್ಲಿನಿಂದಲೆ ಆಶೀರ್ವಾದವನ್ನು ಪಡೆದು, ಮುಂದಿನ ದಿನಗಳಲ್ಲಿ ಖಂಡಿತವಾಗಿ ನಾವು ಕೆಲಸವನ್ನು ಮಾಡುತ್ತೇವೆ. ನಾನು ಒಂದೇ ಒಂದು ಮಾತನ್ನು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ. ಒಳ್ಳೆಯ ಪುಸ್ತಕ ಮತ್ತು ಒಳ್ಳೆಯ ವ್ಯಕ್ತಿಗಳು ಅಷ್ಟು ಸುಲಭವಾಗಿ ಅರ್ಥವಾಗುವುದಿಲ್ಲ. ನಾವು ಅದನ್ನು ಪುನಃ ಪುನಃ ಓದಿದರೆ ಮಾತ್ರ ಅರ್ಥವಾಗುತ್ತದೆ. ಅದೇ ರೀತಿ ಈ ಬಜೆಟ್ ಅನ್ನು ಜನರು ಪುನಃ ಪುನಃ ಓದಿದರೆ ಮಾತ್ರ ಅರ್ಥವಾಗುತ್ತದೆ. ಮಾನ್ಯ ಸದಸ್ಯರಾದ ಆಯನೂರು ಮಂಜುನಾಥ್‌ರವರು ಹೇಳಿದಂತೆ, ಕಾಂಗ್ರೆಸ್ ಪಕ್ಷದವರು ರಾಷ್ಟ್ರಧ್ವಜದ ಸಂಪೂರ್ಣ ಹಕ್ಕು ನಮ್ಮದು ಎಂದು ಹೇಳುತ್ತಾರೆ. ಸ್ವಾತಂತ್ರ್ಯದ ಹಕ್ಕು ಅವರದು ಎನ್ನುತ್ತಾರೆ. ಇವತ್ತಿನ ದಿವಸ ಬಿದಿರಿನಿಂದ ಏಣಿಯನ್ನು ಮಾಡುತ್ತೇವೆ, ಚಟ್ಟವನ್ನು ಕಟ್ಟುತ್ತೇವೆ. ಈಗ ನಾವು ಏಣಿ ಹಾಕಿದ್ದೇವೆ. ಆದರೆ, ಅವರು ಏನನ್ನು ಹಾಕುತ್ತಾರೆಂದು ನೋಡಿಕೊಳ್ಳಲಿ. ಆದುದರಿಂದ ಇಂತಹ ಒಂದು ಉತ್ತಮವಾದ ಬಜೆಟ್ ಅನ್ನು ಕೊಟ್ಟಂತಹ ಮಾನ್ಯ ಮುಖ್ಯಮಂತ್ರಿಗಳಿಗೆ, ಮಂತ್ರಿಮಂಡಲಕ್ಕೆ ಮತ್ತು ಇದನ್ನು ತಯಾರಿಸಿದಂತಹ ಎಲ್ಲಾ ಅಧಿಕಾರಿಗಳಿಗೆ ವಂದನೆಯನ್ನು ಸಲ್ಲಿಸಿ, ಇದು ಪುಸ್ತಕ ರೂಪದಲ್ಲಷ್ಟೇ ಇರಬಾರದು, ಕಾರ್ಯರೂಪಕ್ಕೆ ಬರಬೇಕು ಎಂದು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿಯನ್ನು ಮಾಡುತ್ತೇನೆ.

**ವೈಸ್ ಛೇರ್ಮನ್:-** ಮಾನ್ಯ ಸಭಾನಾಯಕರೆ, ಫೆಬ್ರವರಿ 27ಕ್ಕೆ ಕೆಳದಿ ರಾಣಿ ಚೆನ್ನಮ್ಮನ ಜಯಂತಿಯಾಗಿ 350 ವರ್ಷಗಳು ಕಳೆದಿವೆ. ಸುಮಾರು 25 ವರ್ಷಗಳ ಕಾಲ ಸುದೀರ್ಘವಾಗಿ ಆಳ್ವಿಕೆ ಮಾಡಿದಂತಹ ಕೆಳದಿ ರಾಣಿ ಚೆನ್ನಮ್ಮನ ಹೆಸರಿನಲ್ಲಿ ಜಯಂತಿ ಆಚರಣೆ ಇಲ್ಲ. ಕಳೆದ ಬಾರಿ ನಾನು ಈ ವಿಷಯವಾಗಿ ಸರ್ಕಾರದ ಗಮನ ಸೆಳೆದಿದ್ದೆ. ಆದರೆ, ಅದು ಆಗಿಲ್ಲ. ಇವತ್ತು ಕೆಳವರ್ಗದ ಹೆಣ್ಣು ಮಕ್ಕಳು ಶೌರ್ಯವಂತರು ಅವರ ಸಾಮರ್ಥ್ಯವನ್ನು ನೆನಪಿಸುವಂತಹ ರೀತಿಯಲ್ಲಿ ವೀರವನಿತೆ ಒನಕೆ ಓಬವ್ವನವರ ಒಂದು ಉದಾಹರಣೆ ಇರುವುದರಿಂದ, ಅಂತಹ ಮಹನೀಯರ ಪ್ರತಿಮೆಗಳನ್ನು ಸ್ಥಾಪಿಸುವುದು ಮತ್ತು ಅವರ ಜಯಂತಿಗಳನ್ನು ಅರ್ಥಪೂರ್ಣವಾಗಿ ಆಚರಣೆ ಮಾಡಬೇಕು.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, film star ಜಯಂತಿಯವರು ಒಂದು ಫಿಲ್ಮ್ ಮಾಡಿದ್ದಾರೆ.

**ವೈಸ್ ಛೇರ್ಮನ್:-** ಕೇವಲ ಫಿಲ್ಮ್ ಮಾಡಿದರೆ ಆಗುವುದಿಲ್ಲ.

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಮಾತನಾಡಲು ಅವಕಾಶ ನೀಡಿದ್ದಕ್ಕೆ ತಮಗೆ ಧನ್ಯವಾದಗಳು. ಏನು ನಮ್ಮ ರಾಜ್ಯದ ಆಯವ್ಯಯ ಅಂದಾಜು 2022–23ರ ಒಂದು ಪ್ರಸ್ತಾವನೆ ನಮ್ಮ ಮುಂದೆ ಇದೆ, ನಾವು ಆ ಪ್ರಸ್ತಾವನೆಯನ್ನು ನೋಡಿ ಓದಿದಾಗ ಇದರಲ್ಲಿ ಬಹುತೇಕ ಚೆನ್ನಾಗಿದೆ. ಆದರೆ, ಇದಕ್ಕೆ ಪೂರಕವಾಗಿ, ಒಂದು ಲಿಂಕ್ ಡಾಕ್ಯುಮೆಂಟ್ ಎಂದು ಇರುತ್ತದೆ. ಅಂದರೆ, ಎಸ್ಟಿಮೇಟ್ ಮಾಡಿರುತ್ತಾರೆ. ಆ ಎಸ್ಟಿಮೇಟ್‌ಗೂ ಮತ್ತು ನಾವು ಇದನ್ನು ಓದಿರುವುದಕ್ಕೂ ಅಜಗಜಾಂತರವಿದೆ. ಇದನ್ನು ಯಾವರೀತಿ ಸರಿದೂಗಿಸುತ್ತಾರೆ ಎನ್ನುವುದನ್ನು ಇದನ್ನು ಓದಿರುವಂತಹ ಆಧಾರದ ಮೇಲೆ ನಮಗೆ ಇದನ್ನು ತಿಳಿಸಬೇಕು. ಮತ್ತೊಂದು ಹೋದ ವರ್ಷದ revised expenditure ಆಗಿರುವುದು, 2,53,165/- ಕೋಟಿ ರೂಪಾಯಿಗಳು. ಆದರೆ, ಈ ವರ್ಷ ಪ್ರಸ್ತಾವನೆ ಇಟ್ಟಿರುವುದು, 2,65,720/- ಕೋಟಿ ರೂಪಾಯಿಗಳು. ಇದರಲ್ಲಿ ಬಹುತೇಕ ಪಾಲು ಸಾಲ ಮಾಡುವಂಥದ್ದು. ಈ fiscal responsibility Act ಎಂದು ಇಟ್ಟುಕೊಂಡಿದ್ದಾರೆ. ನಮ್ಮ ರಾಜ್ಯದಲ್ಲಿ ಈ ಕಾಯಿದೆ 2002ರಿಂದ ಇದೆ. ಕೇಂದ್ರ ಸರ್ಕಾರ ನಮ್ಮ ರಾಜ್ಯದ ಕಾಯಿದೆಯನ್ನು copy ಮಾಡಿ, ಅದನ್ನು ಅಳವಡಿಸಿಕೊಂಡು 2003ರಲ್ಲಿ ಒಂದು ಕಾಯಿದೆ ಮಾಡಿದರು. ಈ ಕಾಯಿದೆಯನ್ನು ಜಾರಿಗೆ ತಂದಂತಹ ಮೂಲ ಉದ್ದೇಶವೇನೆಂದರೆ, ಈ ನಮ್ಮ expenditure ಇರಬಹುದು, revenue ಇರಬಹುದು. ಇವುಗಳನ್ನು discipline ಆಗಿ ತರಬೇಕು ಎಂದು. ಜಿ.ಡಿ.ಪಿ.ಗೆ ಶೇಕಡಾ 2ಕ್ಕಿಂತ ಕೆಳಗಡೆ ಇರಬೇಕು ಎನ್ನುವ ಉದ್ದೇಶದಿಂದ 2003ರಲ್ಲಿ ಈ ಕಾಯಿದೆಯನ್ನು ತಂದಿರುವುದು. ಆದರೆ, ಇವತ್ತು ಅವರು ಜಿ.ಡಿ.ಪಿ.ಗೆ ಶೇಕಡಾ 3ರವರೆಗೆ ಹೋಗಿರುವುದು ಇದೆ. ಕಳೆದ ವರ್ಷ ಶೇಕಡಾ 3.5ಕ್ಕೆ ತಿದ್ದುಪಡಿ ಮಾಡಿದರು. ಅದನ್ನು ತಿದ್ದುಪಡಿ ಮಾಡಿದ ಉದ್ದೇಶ, ಅವರು ಸಾಲವನ್ನು ಜಾಸ್ತಿ ತೆಗೆದುಕೊಳ್ಳಲಿ ಎಂದು. ಅಂದರೆ, ಸಾಲಗಳನ್ನು ಮಾಡಿ ಎಂದು. ಈಗ ಸಾಲ ಮಾಡುತ್ತಾ, ಮಾಡುತ್ತಾ ಅವರು ಮುಂದೆ ಶೇಕಡಾ 4ಕ್ಕೆ ಹೋಗುತ್ತಾರೆ. ಅದು ಏಕೆ ಹೋಗುತ್ತಿದೆ ಎಂದರೆ, ಕೇಂದ್ರ ಸರ್ಕಾರದವರು ಅನುಮತಿ ನೀಡಿದರು ಎಂಬುದು ಒಂದು ಅಂಶವಾಗಿದೆ. ಕೇಂದ್ರ ಸರ್ಕಾರದವರು ಕಲೆಕ್ಟ್ ಮಾಡಿದ ಜಿ.ಎಸ್.ಟಿ. ಯಲ್ಲಿ ನಮಗೆ ಬರುವಂತಹ ತೆರಿಗೆ ಪಾಲನ್ನು ಕೊಡುವಂಥದ್ದರಲ್ಲಿ ಅವರು ಅಸಮರ್ಥರಾದರು ಎಂದು ನಮಗೆ ಸಾಲ ತೆಗೆದುಕೊಳ್ಳಿ ಎಂದು ಅನುಮತಿ ನೀಡಿದರು. ದೇಶದಲ್ಲಿ ಅವ್ಯವಸ್ಥೆಯ ಒಂದು ಆರ್ಥಿಕ ಪರಿಸ್ಥಿತಿ ಎಷ್ಟರಮಟ್ಟಿಗೆ ನಡೆಯುತ್ತಿದೆ ಎಂಬುದು ಇದರಿಂದ ಸ್ಪಷ್ಟವಾಗುತ್ತಿದೆ. ಆರ್ಥಿಕ ಪರಿಸ್ಥಿತಿ discipline ಆಗಿ ನಡೆಯಲಿ ಎಂದು ಕಾಯಿದೆ ಮಾಡಿರುವುದು.

**(ಮುಂದು...)**

(431) 17.03.2022 04.40 LL-KS **(ವೈಸ್ ಚೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಪಿ.ಆರ್. ರಮೇಶ್(ಮುಂದು)**

ಆ ಕಾಯಿದೆಗೆ ಒಂದು ತಿದ್ದುಪಡಿಯನ್ನು ಮೂಲತಃವಾಗಿ ತರುವಂಥದ್ದೇ indiscipline ಗೆ. indiscipline ಮಾಡತಕ್ಕಂತಹದ್ದೇ ಒಂದು ಕಾಯಿದೆ ತರುತ್ತಾರೆ. ಅಂದರೆ, ಇದರ ಅರ್ಥ ಏನೆಂದರೆ, ಇದು entire ಬಜೆಟ್ indiscipline ಆಗಿರತಕ್ಕಂತಹ ಒಂದು ಬಜೆಟ್ ಆಗುತ್ತದೆ. ಕಾರಣ ಏನೆಂದರೆ, ಒಟ್ಟಾರೆಯಾಗಿ 5,18,366 ರೂಪಾಯಿಗಳು ನಮ್ಮ ರಾಜ್ಯದ ಮೇಲೆ ಸಾಲ ಇರುತ್ತದೆ. ಇವೊತ್ತಿನ ದಿವಸ ನಮ್ಮ ರಾಜ್ಯದಲ್ಲಿ ರೆವೆನ್ಯೂ ಕಲೆಕ್ಷನ್‌ನಲ್ಲಿ ಕೇಂದ್ರ ಇರಬಹುದು, ರಾಜ್ಯ ಇರಬಹುದು, ಅಬಕಾರಿ ಇರಬಹುದು, ಆಮದು ಸುಂಕ ಇರಬಹುದು ಆ ಎಲ್ಲಾ ಮೂಲಗಳಿಂದ ಪ್ರತಿ ವರ್ಷ 3 ಲಕ್ಷ ಕೋಟಿಗಿಂತಲೂ ಹೆಚ್ಚು ಬರುತ್ತಿದೆ. ಅದು ನಮ್ಮ ರಾಜ್ಯದ ಬಜೆಟ್‌ಗಿಂತಲೂ ಜಾಸ್ತಿ ನಮ್ಮ ವರಮಾನ ಇರುತ್ತದೆ. ಆದರೆ, ಈ ವರಮಾನಗಳು ಕೇಂದ್ರ ಸರ್ಕಾರಕ್ಕೆ ಬಹುಪಾಲು ಹೋಗುತ್ತದೆ. ಆದರೆ, ನಮಗಿರುವಂಥದ್ದು ಕೇವಲ 3-4 ವರಮಾನಗಳು ಮಾತ್ರ. ಅಂದರೆ, ಅಬಕಾರಿ ಸುಂಕ ಇರಬಹುದು, stamps and registration ಸುಂಕ ಇರಬಹುದು, ಸಾರಿಗೆ ಸುಂಕ ಮತ್ತು ಪೆಟ್ರೋಲ್ ಮೇಲಿನ ಸುಂಕ ಇರಬಹುದು ಇಷ್ಟನ್ನು ಬಿಟ್ಟರೆ ಎಲ್ಲಾ ವರಮಾನಗಳು ಸಹ ಕೇಂದ್ರ ಸರ್ಕಾರಕ್ಕೆ ಹೋಗುತ್ತದೆ. ಆದರೆ, ಅದರಲ್ಲಿ ನಮಗೆ ಬರತಕ್ಕಂಥದ್ದು ಅಂದರೆ ನಮಗೆ ಜಿ.ಎಸ್.ಟಿ. ಪರಿಹಾರ ಕೊಡುವಂಥದ್ದು ಈ ಜೂನ್ ತಿಂಗಳಿಗೆ ಪೂರ್ಣವಾಗುತ್ತದೆ. ಇದನ್ನು ಕೇಂದ್ರ ಸರ್ಕಾರದವರು ವಿಸ್ತರಣೆ ಮಾಡುತ್ತಾರೋ ಅಥವಾ ಇಲ್ಲವೋ ಅದು ಗೊತ್ತಿರುವುದಿಲ್ಲ.

ಆದರೆ, ಈ ಹಿಂದೆ ಅಂದರೆ, 2019-20 ಮತ್ತು 2020-21ರಲ್ಲಿ ಕೇಂದ್ರ ಸರ್ಕಾರ ನಮಗೆ ಕನಿಷ್ಠವಾಗಿ ಕೊಡಬೇಕಾದಂತಹ ಜಿ.ಎಸ್.ಟಿ. ಪರಿಹಾರ ಹಣವನ್ನೇ ಇದುವರೆವಿಗೂ ಕೊಟ್ಟಿರುವುದಿಲ್ಲ. ಆ ಪರಿಹಾರ ಹಣವನ್ನು ಕೊಡದೇ ಇರತಕ್ಕಂತದ್ದಕ್ಕೆ ತಾವು ಲೋನ್ ಮಾಡಬಹುದೆಂದು ಹೇಳುತ್ತಾರೆ. ಆದರೆ, ಆ ಲೋನ್‌ಗಳ ಮೇಲಿನ ಬಡ್ಡಿಯನ್ನು ಯಾರು ಪಾವತಿ ಮಾಡುತ್ತಾರೆ. ಆ ಬಡ್ಡಿ ಹಣವನ್ನು ನಮ್ಮ ರಾಜ್ಯದ ಜನರು ಕೊಡತಕ್ಕಂತಹ ತೆರಿಗೆ ಹಣದ ಮೂಲಕ ಕೊಡುವಂಥದ್ದು ಆಗುತ್ತಿದೆ. ನಮ್ಮ ಜನ ಎಷ್ಟು ತೆರಿಗೆ ಹಣ ಎಂದು ಕೊಡುತ್ತಾರೆ? ಇವೊತ್ತಿನ ದಿವಸ ನಮ್ಮ ರಾಜ್ಯದಲ್ಲಿ ಯಾವ ರೀತಿಯ

ಸಂಪನ್ಮೂಲಗಳಿವೆ ಅದರಲ್ಲಿ ಬಹಳ ನಿಷ್ಠೆಯಿಂದ ತೆರಿಗೆ ಕಟ್ಟತಕ್ಕಂತಹ ಎಷ್ಟು ಜನ ನಮ್ಮ ರಾಜ್ಯದಲ್ಲಿದ್ದಾರೆ. ನಾವು ಕಟ್ಟತಕ್ಕಂತಹ 1 ಸಾವಿರ ರೂಪಾಯಿ ಇದ್ದರೆ, ಆ ಹಣದಲ್ಲಿ ಹೆಚ್ಚು ಕಡಿಮೆ ಶೇಕಡ 70 ರಿಂದ 75 ರಷ್ಟು ಹಣ ಬೇರೆ ರಾಜ್ಯಗಳಿಗೆ ಹೋಗುತ್ತಿದೆ.

ಉದಾಹರಣೆಗೆ ಹೇಳುವುದಾದರೆ, ಉತ್ತರಪ್ರದೇಶ ಮತ್ತು ಬಿಹಾರ್ ರಾಜ್ಯಗಳನ್ನು ತೆಗೆದುಕೊಂಡರೆ ಅಲ್ಲಿ ಸಣ್ಣ ಪ್ರಮಾಣದ ತೆರಿಗೆಯನ್ನು ಕೊಡುತ್ತಾರೆ. ಆದರೆ, ಆ ರಾಜ್ಯಗಳಿಗೆ ಕೇಂದ್ರ ಸರ್ಕಾರದವರು ಹೆಚ್ಚಿನ ಜಿ.ಎಸ್.ಟಿ. ಪರಿಹಾರ ಹಣವನ್ನು ಕೊಡುತಕ್ಕಂತಹ ಕೆಲಸ ಆಗುತ್ತಿದೆ. ಹಾಗಾಗಿ, ನಮ್ಮ ಫೆಡರಲ್ ಸಿಸ್ಟಮ್‌ನಲ್ಲಿ ನಮ್ಮ ಆರ್ಥಿಕತೆ ಏರುಪೇರಾಗುತ್ತಿರುತ್ತದೆ. ಏಕೆಂದರೆ, ಕೇಂದ್ರ ಸರ್ಕಾರಕ್ಕೆ ಹೆಚ್ಚಿನ ತೆರಿಗೆ ಹಣ ಕೊಡುವುದು ನಮ್ಮ ರಾಜ್ಯದ ಜನ. ಆದರೆ, ಆ ಹಣ ಹೋಗುತ್ತಿರುವುದು ಬೇರೆ ರಾಜ್ಯಗಳಿಗೆ. ಆ ಹಣ ಬೇರೆ ರಾಜ್ಯಗಳಿಗೆ ಹೋದರೂ ಸಹ ಆ ರಾಜ್ಯವಾದರೂ ಅಭಿವೃದ್ಧಿಯಾಗುತ್ತಿದೆಯೇ? ಅದು ಆಗುತ್ತಿಲ್ಲ. ಕಾರಣ ಏನೆಂದರೆ, ನಾವು ಕೊಡತಕ್ಕಂತಹ ಹಣದಲ್ಲಿ ನಮ್ಮ ರಾಜ್ಯದಲ್ಲಿ ಶೇಕಡ 40 ರಷ್ಟು ಕಮೀಷನ್ ಹೊಡೆಯುತ್ತಾರೆ. ಆದರೆ, ಆ ರಾಜ್ಯಗಳಲ್ಲಿ ಶೇಕಡ 90 ರಷ್ಟು ಕಮೀಷನ್ ಹೊಡೆಯುತ್ತಾರೆ. ಈ ರೀತಿ ಒಂದು ವ್ಯವಸ್ಥಿತವಾದಂತಹ ಹಣದ ದುರುಪಯೋಗ ಆಗುತ್ತಿದೆ.

**ಶ್ರೀ ಅಲ್ಲಂ ವೀರಭದ್ರಪ್ಪ(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಪಿ.ಆರ್. ರಮೇಶ್‌ರವರೇ, ಅಂದರೆ, ಕರ್ನಾಟಕ ರಾಜ್ಯವೇ ಉತ್ತಮವೆಂದು ತಾವು ಹೇಳುತ್ತಿದ್ದೀರಾ?

**ಶ್ರೀ ಪಿ.ಆರ್. ರಮೇಶ್(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಹೌದು. ನಮ್ಮ ರಾಜ್ಯದಲ್ಲಿ ಶೇಕಡ 40 ರಷ್ಟು ಕಮೀಷನ್ ಹೊಡೆಯುತ್ತಾರೆ.

**(ಗೊಂದಲ)**

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೇ, ಅವರು ಉತ್ತರಪ್ರದೇಶಕ್ಕೆ ಹೋಗಿ ನೋಡಲಿ.

**ಶ್ರೀ ಜೆ.ಸಿ. ಮಾಧುಸ್ವಾಮಿ(ಸಣ್ಣ ನೀರಾವರಿ, ಕಾನೂನು, ಸಂಸದೀಯ ವ್ಯವಹಾರ ಹಾಗೂ ಶಾಸನ ರಚನಾ ಸಚಿವರು):–** ಮಾನ್ಯ ಸಭಾಪತಿಯವರೇ, ಎರಡೂ ಕಡೆ ಅಕೌಂಟಿಗ್ ಅವರೇ ಮಾಡುತ್ತಿದ್ದರು ಎನ್ನುವ ರೀತಿಯಲ್ಲಿ ಮಾತನಾಡುತ್ತಿದ್ದಾರೆ.

**ಶ್ರೀ ಪಿ.ಆರ್. ರಮೇಶ್:–** ಮಾನ್ಯ ಸಭಾಪತಿಯವರೇ, ಅದನ್ನು ತಾವೇ ಚೆಕ್ ಮಾಡಿ. ಅಕೌಂಟಿಂಗ್ ಅನ್ನು ನಾವು ಮಾಡುವುದಿಲ್ಲ.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ರಮೇಶ್‌ರವರೇ, ತಾವು ಚಾರ್ಟಡ್ ಅಕೌಂಟೆಂಟ್ ಆಗಿದ್ದೀರಾ?

**ಶ್ರೀ ಪಿ.ಆರ್. ರಮೇಶ್:–** ಮಾನ್ಯ ಸಭಾಪತಿಯವರೇ, ನಾನು ಇರತಕ್ಕಂತಹ ವಾಸ್ತವಾಂಶ ಹಾಗೂ ನಮಗೆ ಸಿಗತಕ್ಕಂತಹ ಮಾಹಿತಿ ಮೇಲೆ ಮಾತನಾಡುತ್ತಿದ್ದೇನೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಅವರ ಹತ್ತಿರವೇ ಬಿಲ್ ಪಾಸ್ ಮಾಡಿ ಅಕೌಂಟ್ಸ್ ಸಲ್ಲಿಸಿದ್ದಾರೆನ್ನುವ ರೀತಿ ಅವರು ಅಧಿಕೃತವಾಗಿ ಮಾತನಾಡುತ್ತಿದ್ದಾರೆ.

**ಶ್ರೀ ಪಿ.ಆರ್. ರಮೇಶ್:–** ಮಾನ್ಯ ಸಭಾಪತಿಯವರೇ, ಗುತ್ತಿಗೆದಾರರ ಸಂಘದ ಒಬ್ಬರು ಅಧ್ಯಕ್ಷರು ಅಂದರೆ, ಒಬ್ಬ ಜವಾಬ್ದಾರಿ ಇರುವಂತಹ ವ್ಯಕ್ತಿ ಆ ಸಂಸ್ಥೆಯ ಪರವಾಗಿ ಈ ದೇಶದ ಪ್ರಧಾನ ಮಂತ್ರಿಯವರಿಗೆ ಒಂದು ಪತ್ರ ಬರೆಯುತ್ತಾರೆಂದರೆ ಅದರ ಅರ್ಥ ಏನು? ಅದು ಇಲ್ಲವೆಂದು ಕೇಂದ್ರ ಸರ್ಕಾರದವರಾಗಲಿ ಅಥವಾ ರಾಜ್ಯ ಸರ್ಕಾರದವರಾಗಲಿ ಹೇಳುತ್ತಿಲ್ಲ.

**(ಗೊಂದಲ)**

**ವೈಸ್ ಚೇರ್ಮನ್:–** ಮಾನ್ಯ ರಮೇಶ್‌ರವರೇ, ಒಂದು ನಿಮಿಷ.

**ಶ್ರೀ ಪಿ.ಆರ್. ರಮೇಶ್:–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡುವುದಕ್ಕೆ ಅವಕಾಶ ನೀಡಿ. ಆಡಳಿತ ಪಕ್ಷದವರು ಏನೆಲ್ಲಾ ಮಾತನಾಡಿದರು. ಅದೇ ರೀತಿ ನಾನು ಮಾತನಾಡುವುದಕ್ಕೆ ಅವಕಾಶ ನೀಡಿ.

**ವೈಸ್ ಚೇರ್ಮನ್:–** ಮಾನ್ಯ ರಮೇಶ್‌ರವರೇ, please listen to me for a minute. ಈಗಾಗಲೇ ಆ ವಿಚಾರದಲ್ಲಿ ಸದನದ ಅತ್ಯಂತ ಅಮೂಲ್ಯ ಸಮಯ ವ್ಯಯ ಆಗಿರುತ್ತದೆ. ಕಳೆದ ಬಾರಿ ಸದನದ ಕಲಾಪ ಯಾವ ರೀತಿ ವ್ಯಯ ಆಗಿದೆ ಎಂಬುದು ತಮಗೆ ಗೊತ್ತಿದೆ. ದಯಮಾಡಿ, you are good speaker. ತಾವು ಸರ್ಕಾರದ ಕಣ್ಣು ತೆರೆಸುವಂತಹ ಉತ್ತಮ ವಾಗ್ಮಿಗಳು. ತಾವು ಆ ನಿಟ್ಟಿನಲ್ಲಿ ಮಾತನಾಡಿ. ಅದಕ್ಕೆ ಬೇರೆ ಸಂದರ್ಭ ಇದೆ. You have already expressed it.

**ಶ್ರೀ ಪಿ.ಆರ್. ರಮೇಶ್:–** ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ, ರಾಜ್ಯದಲ್ಲಿ ಪ್ರತಿ ವರ್ಷ ಏನು ಬಜೆಟ್ ಕೊಡುತ್ತಾರೆ, ಅದು ರಾಜ್ಯದ ಜನತೆಗೆ ಮುಟ್ಟಬೇಕು. ಆದರೆ, ಅದು ಮುಟ್ಟುತ್ತಿಲ್ಲ. ಕಾರಣ ಏನೆಂದರೆ, ಇವೊತ್ತಿನ ದಿವಸ ನಮ್ಮ ರಾಜ್ಯದ ಅಥವಾ ಕೇಂದ್ರ ಸರ್ಕಾರದ ಆರ್ಥಿಕ ಪರಿಸ್ಥಿತಿಯನ್ನು ನೋಡಿದಾಗ, ನಾವು ಜನಗಳ ಮಧ್ಯೆ ಆರ್ಥಿಕ ಸ್ಥಿತಿಯನ್ನು ನೋಡಿದಾಗಲೇ ರಾಜ್ಯ ಸರ್ಕಾರ ಸರಿಯಾದ ದಾರಿಯಲ್ಲಿ ನಡೆಯುತ್ತಿದೆ ಅಂದುಕೊಳ್ಳುವುದು.

ಇವೊತ್ತಿನ ದಿವಸ ಪ್ರತಿ ಮನುಷ್ಯ ಆತನಿಗೆ ಬರತಕ್ಕಂತಹ ವರಮಾನದಲ್ಲಿ ಆತನ ಜೀವನ ನಡೆಸಿ, ಆತನ ಮಕ್ಕಳನ್ನು ಪೋಷಣೆ ಮಾಡಿ, ಆ ಮಕ್ಕಳನ್ನು ಶಾಲೆಗೆ ಕಳುಹಿಸುವಂತಹ ಕೆಲಸ ಮಾಡುವುದು ಬಹಳ ಕಷ್ಟವಿರುತ್ತದೆ. ನಾವು ಇಲ್ಲಿ ಕುಳಿತುಕೊಂಡು ಬೇಕಾದ್ದನ್ನು ಮಾತನಾಡಬಹುದು. ಆದರೆ ಹೊರಗಡೆ ಹೋದಾಗ ಜನಗಳು ಮಾತನಾಡುವಂಥದ್ದು ಮತ್ತು ಅವರ ಕಷ್ಟಗಳು ಸಾಕಷ್ಟು ಇರುತ್ತವೆ. ಇದರಿಂದಾಗಿ, ಬಹಳಷ್ಟು ಜನ ರೈತರು ಅಲ್ಲದೇ, ಉದ್ಯಮಿಗಳು, ಕೈಗಾರಿಕೋದ್ಯಮಿಗಳು, ಹಾಗೂ ವಿವಿಧ ಉದ್ಯಮಗಳಲ್ಲಿ ನಷ್ಟ ಹೊಂದಿದಂತಹ ಬಹಳಷ್ಟು ಜನರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಅಷ್ಟೆ ಅಲ್ಲದೇ, ಇವೊತ್ತಿನ ದಿವಸ ಗುತ್ತಿಗೆದಾರರು ಸಹ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇಂತಹ ಒಂದು ಪರಿಸ್ಥಿತಿ ರಾಜ್ಯ ಮತ್ತು ರಾಷ್ಟ್ರದಲ್ಲಿರುತ್ತದೆ. ನಾವು ಇಲ್ಲಿ ಹೇಳತಕ್ಕಂತಹದ್ದನ್ನು ಕೆಲವು ಅಂಕಿ–ಅಂಶಗಳಿಂದ ಕಾರ್ಯಕ್ರಮಗಳನ್ನು ಕೊಡುತ್ತಿದ್ದೇವೆ ಎಂದು. ಆದರೆ ಆ ಕಾರ್ಯಕ್ರಮಗಳು ಸಾರ್ವಜನಿಕರಿಗೆ ಮುಟ್ಟುತ್ತಿದೆಯೇ ಎನ್ನುವುದು ಇಲ್ಲಿ ಪ್ರಶ್ನೆ ಇರುತ್ತದೆ. ಅದು ಸಾರ್ವಜನಿಕರಿಗೆ ಅದು ಮುಟ್ಟುತ್ತಿದೆ ಎನ್ನುವ ವಿಚಾರ ಬಂದಾಗ, ಹೌದು ರಾಜ್ಯ ಸುಭಿಕ್ಷವಾಗಿದೆ ಎಂದು ಹೇಳಬಹುದು.

ಕಳೆದ 6-7 ವರ್ಷಗಳಿಂದ ರಾಜ್ಯ ಇರಬಹುದು ಅಥವಾ ರಾಷ್ಟ್ರ ಇರಬಹುದು ಬಹುತೇಕ ಆರ್ಥಿಕ ಮುಗ್ಗಟ್ಟಿನಲ್ಲಿ ಇರುತ್ತದೆ. ನಾವು ಸಂಪೂರ್ಣವಾಗಿ ಆರ್ಥಿಕ ಹಿಂಜರಿತದಲ್ಲಿದ್ದೇವೆ. ಇವೊತ್ತಿನ ದಿವಸ ಆರ್ಥಿಕ ಹಿಂಜರಿತ ಖಂಡಿತವಾಗಿಯೂ ಇದೆ. ಅದನ್ನು ನಾವು ಬೇರೆ ಬೇರೆ ವಿಷಯಗಳಿಂದ ಮೇಕಪ್ ಮಾಡುತ್ತಿದ್ದೇವೆ. ಅಂದರೆ, ಬೇರೆ ಬೇರೆ ಭಾವನಾತ್ಮಕ ವಿಷಯಗಳನ್ನು ತಂದು ಅದನ್ನು ಕ್ಲೌಡ್ ಮಾಡುತ್ತಿದ್ದೇವೆ. ಜನಗಳಿಗೆ ಪ್ರತಿದಿನ ಜೀವನ ಮಾಡತಕ್ಕಂಥದ್ದಕ್ಕೆ ಬಹಳ ಕಷ್ಟವಾಗುತ್ತಿದೆ. ಇದು ವಾಸ್ತವಾಂಶ, ಇದು ನಿಜ. ಈ ಬಗ್ಗೆ ಅವರವರ ಕ್ಷೇತ್ರದಲ್ಲಿರತಕ್ಕಂತಹ ಯಾವುದೇ ವ್ಯಕ್ತಿಯನ್ನು/ಮತದಾರರನ್ನು, "ಏನಪ್ಪಾ ನಿನ್ನ ಆರ್ಥಿಕ ಪರಿಸ್ಥಿತಿ ಯಾವ ರೀತಿ ಇದೆ" ಎಂದು ಕೇಳಬಹುದು. ನಮ್ಮ ರಾಜ್ಯದಲ್ಲಿರುವ 224 ಕ್ಷೇತ್ರಗಳಲ್ಲಿ ಕೇಳಬಹುದು. ರೈತರನ್ನು ಕೇಳಬಹುದು.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ತಾವು ಯೀಲ್ಡ್ ಆಗಿ. ಮಾನ್ಯ ರಮೇಶ್‌ರವರು ಈ ಹಿಂದೆ ಕಾರ್ಪೋರೇಷನ್‌ನಲ್ಲಿ ಕರ್ತವ್ಯ ನಿರ್ವಹಿಸಿದ್ದರು. ನಾವು ಈಗಾಗಲೇ ಹೇಳಿರುವುದೇನೆಂದರೆ, ಕೋವಿಡ್-19 ನಿರ್ವಹಣೆಗಾಗಿ ಸುಮಾರು 15 ಸಾವಿರ ಕೋಟಿ ರೂಪಾಯಿ ಹಣವನ್ನು ಅಧಿಕವಾಗಿ ಖರ್ಚು ಮಾಡಿರುತ್ತೇವೆ. ನಮಗೆ ಕಳೆದ ಎರಡು ವರ್ಷ ರೆವೆನ್ಯೂ ಸಂಗ್ರಹವಾಗಿರುವುದಿಲ್ಲ. ಕಳೆದ ಎರಡು ವರ್ಷ ಪ್ರಕೃತಿ ವಿಕೋಪಗಳಿಂದ ಸಂಭವಿಸಿದಂತಹ ಹಾನಿಗೆ ಅಧಿಕ ಹಣ ಕೊಟ್ಟಿದ್ದೇವೆ. ಅಂದರೆ, ಸುಮಾರು 98 ಸಾವಿರ ರೂಪಾಯಿ ಪರಿಹಾರ ಹಣ ಎನ್.ಡಿ.ಆರ್.ಎಫ್. ನಲ್ಲಿ ಇದ್ದರೆ, ನಾವು 5 ಲಕ್ಷ ಪರಿಹಾರ ರೂಪಾಯಿಯವರೆಗೆ ಪ್ರತಿ ಮನೆಗೆ ಹಣ ಕೊಟ್ಟಿರುತ್ತೇವೆ. ಇದರಲ್ಲಿ ಏನೂ ಮುಚ್ಚುಮರೆ ಮಾಡಿರುವುದಿಲ್ಲ. ಇದು ಆಯವ್ಯಯ. ನಮಗೆ ಏನು ಬರುತ್ತಿದೆ, ಬರುವುದಿಲ್ಲ ಎಂದು ನಾವು ಹೇಳಿದ್ದೇವೆ. ಈ ಹಿಂದೆ ಬಹಳ ಸುಭಿಕ್ಷವಾಗಿದ್ದಂತಹ ಕಾಲದಲ್ಲಿ, ಯಾವುದೇ distress ಇಲ್ಲದೇ ಇರುವಾಗ, ಯಾವುದೇ ಪ್ರಕೃತಿ ವಿಕೋಪಗಳು ಆಗದೇ ಇದ್ದಾಗ, 2 ಲಕ್ಷದ 38 ಸಾವಿರ liability ಈ ರಾಜ್ಯಕ್ಕೆ ಇತ್ತು. ಅದರ ಮೇಲೆ ಬಡ್ಡಿಯನ್ನು ಈಗಲೂ ಸಹ ಕಟ್ಟುತ್ತಿದ್ದೇವೆ. Repayment schedule ನಲ್ಲಿ 38 ರಿಂದ 40 ಕೋಟಿ ಹಣ ಕೊಡಬೇಕಾಗಿರುತ್ತದೆ. ಅದನ್ನು ನಾವು ಹೇಳುತ್ತಿದ್ದೇವೆ ಮತ್ತು ಅದನ್ನು ನಾವು ಒಪ್ಪಿಕೊಳ್ಳುತ್ತಿದ್ದೇವೆ. We have inherited such a Government. ಇದು ಏಕಾಏಕಿಯಾಗಿ ಆಗಿರುವುದಲ್ಲ. 2013ರಲ್ಲಿ ಮಾನ್ಯ

ಸಿದ್ಧರಾಮಯ್ಯನವರು ಬರುವಾಗ ಈ ಸಾಲ ಡಬಲ್ ಆಗಿರುತ್ತದೆ. ಅಂದರೆ, 2 ಲಕ್ಷದ 38 ಸಾವಿರ liability ಅವೊತ್ತಿನ ಕಾಲದಲ್ಲಿಯೇ ಸೃಷ್ಟಿಯಾಯಿತು. ಅದರ ಮೇಲೆ ಪ್ರತಿ ವರ್ಷ ಬಡ್ಡಿ ಸೇರಿಕೊಳ್ಳುತ್ತಾ ಬರುತ್ತದೆ. ಅದರ ಜೊತೆಗೆ, ಈ ಜಿ.ಎಸ್.ಟಿ. ಯನ್ನು ನಾವು ಮಾಡಿರುವುದಿಲ್ಲ. Whose baby is GST? ಈ ಬಗ್ಗೆ ಅವರು ಆತ್ಮಸಾಕ್ಷಿಯಿಂದ ಮಾತನಾಡಬೇಕು. GST is your baby. You have spoiled the Taxation System of the Country.

**ಶ್ರೀ ಬಿ.ಕೆ. ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, Yes, GST is our baby.  The way they implemented GST is wrong.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಶ್ರೀ ಅರುಣ್ ಜೇಟ್ಲಿಯವರು ಆರ್ಥಿಕ ಸಚಿವರಾದ ನಂತರ, ಕನಿಷ್ಠ ಪಕ್ಷ ಜಿ.ಎಸ್.ಟಿ. ಪರಿಹಾರ ಹಣವನ್ನು ಕೊಟ್ಟಿರುತ್ತಾರೆ ಹಾಗೂ ಸೆಸ್‌ಗಳ ಮೇಲೆ ಡಿವಿಡೆಂಟ್ ಕೊಟ್ಟರು. ಅದೆಲ್ಲಾ ಇಲ್ಲವೆಂದು ರಾಜ್ಯ ಸರ್ಕಾರಗಳು ತಕರಾರು ಮಾಡಿದ್ದು. GST is your own baby. ಇವೊತ್ತಿನ ದಿವಸ ಫುಡ್ ಸೆಕ್ಯೂರಿಟಿಗೆ ಕೇಂದ್ರ ಸರ್ಕಾರ ದುಡ್ಡ ಕೊಡುತ್ತಿಲ್ಲವೇ ಪ್ರತಿ ಕೆ.ಜಿ. ಅಕ್ಕಿಗೆ 18 ರೂಪಾಯಿ ಸಬ್ಸಿಡಿ ಕೊಡುತ್ತಿಲ್ಲವೇ? ಈ ದೇಶದ ಡಿಫೆನ್ಸ್‌ಗೆ ಕೇಂದ್ರ ಸರ್ಕಾರ ಹಣ ಕೊಡುವುದು ಬೇಡವೇ? ನಮ್ಮ ರಾಜ್ಯದಲ್ಲಿ ಇಷ್ಟು ತೆರಿಗೆ ಹಣ ಬರುತ್ತದೆ, ಅದನ್ನು ರಾಜ್ಯ ಸರ್ಕಾರದವರು ತೆಗೆದುಕೊಂಡು ಹೋಗಿ ಕೇಂದ್ರ ಸರ್ಕಾರಕ್ಕೆ ಕೊಡುತ್ತಾರೆಂದು ಹೇಳಿದರೆ ಏನರ್ಥ? ನಮ್ಮ ರಾಜ್ಯದಲ್ಲಿ ನೀಡುತ್ತಿರುವ ಪಡಿತರದಲ್ಲಿ ಒಂದು ಕೆ.ಜಿ. ಅಕ್ಕಿಗೆ 18 ರೂಪಾಯಿ ಸಬ್ಸಿಡಿ ಹಣವನ್ನು ಕೊಡುತ್ತಿರುವವರು ಯಾರು ಸ್ವಾಮಿ? ನಮ್ಮ ರಾಜ್ಯದಲ್ಲಿನ ರಸ್ತೆ ಮತ್ತು ರೈಲು ಯೋಜನೆಗಳಿಗೆ ಹಣ ಕೊಡುತ್ತಿರುವವರು ಯಾರು ಸ್ವಾಮಿ? ನಮ್ಮ ದೇಶಕ್ಕೆ ರಕ್ಷಣೆ ಕೊಡುತ್ತಿರುವವರು ಯಾರು ಸ್ವಾಮಿ? Our Government is doing this. ಅದೇ ಫೆಡರಲ್ ಸಿಸ್ಟಮ್. ಕೇಂದ್ರ ಸರ್ಕಾರಕ್ಕೆ ಬಂದಂತಹ ರೆವೆನ್ಯೂ ಕಲೆಕ್ಷನ್ ಅನ್ನು ನಮ್ಮ ರಾಜ್ಯಕ್ಕೆ ಒಪ್ಪಿಸಿದರೆ, ಕೇಂದ್ರ ಸರ್ಕಾರದವರು ಹೇಗೆ ಸರ್ಕಾರ ನಡೆಸುತ್ತಾರೆ? Yes, ಒಂದು ರಾಷ್ಟ್ರ ನಡೆಸಬೇಕಾದರೆ, ಹಿಂದುಳಿದಿರುವ ರಾಜ್ಯವನ್ನು ನೋಡಿಕೊಂಡು, ಎಲ್ಲಿ ಅಭಿವೃದ್ಧಿ ಆಗಿದೆ ಎಂಬುದನ್ನು ನೋಡಿಕೊಂಡು ಸಮಗ್ರವಾಗಿ ಅಭಿವೃದ್ಧಿಯಾಗಲಿ ಎಂತಲೇ ಯಾರಾದರೂ ಸರ್ಕಾರ ನಡೆಸುವುದು. ಅದರ ಬದಲಾಗಿ,

ಕಾರ್ಪೋರೇಷನ್ ರೀತಿಯಲ್ಲಿ ನಮ್ಮ ಬಾಕಿ ಕೊಡಿ, ನಮ್ಮ ವಾರ್ಡ್‌ಗೆ ಹಣ ಬಿಡುಗಡೆ ಮಾಡಿ ಎಂದು ಹೇಳಿದರೆ, ಕೇಂದ್ರ ಸರ್ಕಾರ ನಡೆಸುವುದಕ್ಕೆ ಆಗುವುದಿಲ್ಲ. They are running the Government in the interest of the Country.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಮಂತ್ರಿಗಳು, ಜಿ.ಎಸ್.ಟಿ. ನಮ್ಮ ಬೇಬಿ" ಎಂದು ಹೇಳಿದರು. Yes, we are proud of that. It is our baby. The way they implemented GST is disastrous. ನಾವು ಕ್ಯಾಪ್ ಮಾಡಿದ್ದು ಶೇಕಡ 18 ರಷ್ಟು. ಆದರೆ, ಈಗಿನ ಸರ್ಕಾರ ಕ್ಯಾಪ್ ಮಾಡಿರುವುದು ಶೇಕಡ 28 ರಷ್ಟು. ಅದರಿಂದಾಗಿಯೇ ಇಷ್ಟೆಲ್ಲಾ ತಾಪತ್ರಯಗಳು ಆಗುತ್ತಿರುತ್ತವೆ. **(ಗೊಂದಲ)** ಒಂದು ನಿಮಿಷ ನಾನು ಮುಕ್ತಾಯ ಮಾಡುತ್ತೇನೆ. The way they implemented GST is wrong.

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೇ, ತಾವು ನನಗೆ ಮಾತನಾಡುವುದಕ್ಕೆ ಹೆಚ್ಚು ಸಮಯ ಕೊಡಬೇಕು.

**ವೈಸ್ ಚೇರ್ಮನ್:-** ಮಾನ್ಯ ರಮೇಶ್‌ರವರೇ, ಮಾನ್ಯ ಮಂತ್ರಿಗಳು ಹಾಗೂ ವಿರೋಧ ಪಕ್ಷದ ನಾಯಕರು ಮಾತನಾಡಿರುವ ಸಮಯವನ್ನು ತಮಗೆ ಹೆಚ್ಚುವರಿಯಾಗಿ ಕೊಡುತ್ತೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ರಮೇಶ್‌ರವರು ಹೇಳಿದ್ದು ಏನೆಂದರೆ, "ಪ್ರತಿ ವರ್ಷ ಕರ್ನಾಟಕ ರಾಜ್ಯದಿಂದ ಸುಮಾರು 3 ಲಕ್ಷ ಕೋಟಿ ರೂಪಾಯಿಯ ಜಿ.ಎಸ್.ಟಿ. ಹಣವನ್ನು ದೆಹಲಿ ಖಜಾನೆಗೆ ತುಂಬುತ್ತೇವೆ" ಎಂದು ಹೇಳಿದರು. ಆದರೆ, ಮಾನ್ಯ ರಮೇಶ್‌ರವರು, "ನಮ್ಮ ರಾಜ್ಯದ ಖಜಾನೆಗೆ ಹಣ ತುಂಬಿಸುವುದಕ್ಕೆ ಇರುವುದು ಅಬಕಾರಿ ಸುಂಕ, ರೆವಿನ್ಯೂ ಸ್ಟಾಂಪ್ ಮತ್ತು ಪೆಟ್ರೋಲ್ ಮೇಲಿನ ಸುಂಕ ಮಾತ್ರ ಇರುತ್ತದೆ" ಎಂದು ಮತ್ತೊಂದು ವಿಷಯವನ್ನು ಹೇಳಿದರು. ನಮ್ಮಲ್ಲಿರತಕ್ಕಂತಹ ರೆವಿನ್ಯೂ ಅನ್ನು ಕ್ರೋಢೀಕರಿಸಿದರೂ ಸಹ ಆಗುವುದಿಲ್ಲ. ಕೇಂದ್ರ ಸರ್ಕಾರದಿಂದ ನಮ್ಮ ರಾಜ್ಯಕ್ಕೆ ಬರಬೇಕಾದಂತಹ ಜಿ.ಎಸ್.ಟಿ. ಪರಿಹಾರ ಹಣ 1 ಲಕ್ಷದ 46 ಕೋಟಿ ರೂಪಾಯಿಗಳು ಇರುತ್ತದೆ.

(ಮುಂದು….)

(432) 17.03.2022 4.50 ವೈಎಲ್-ಕೆಎಸ್ (ವೈಸ್‌ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಬಿ.ಕೆ.ಹರಿಪ್ರಸಾದ್(ಮುಂದು):-**

ಮಾನ್ಯ ಸಭಾಪತಿಯವರೇ, That is as per the norms. ಬೇಕಾದರೆ ತಾವೇ ದಾಖಲೆಯನ್ನು ತೆಗೆದು ನೋಡಿ. ಆದರೆ, ಕೇವಲ ರೂ.44 ಸಾವಿರ ಕೋಟಿ ಜಿ.ಎಸ್.ಟಿ. ಪರಿಹಾರ ನೀಡುತ್ತಿದ್ದಾರೆ. ಮಾನ್ಯ ಸಚಿವರು ಮಾತನಾಡುವಾಗ "ಕೋವಿಡ್-19 ನಿಂದಾಗಿ ಸಮಸ್ಯೆಯಾಗಿತ್ತು, ಎರಡು ವರ್ಷಗಳ ಕಾಲ ರೆವಿನ್ಯೂ ನಿಂತು ಹೋಗಿತ್ತು" ಎನ್ನುವ ಮಾತನ್ನು ಹೇಳಿದ್ದರು. ಆದರೆ, ರೂ.20 ಲಕ್ಷ ಕೋಟಿಯಲ್ಲಿ PM CARES Fund ನಿಂದ ನಮ್ಮ ರಾಜ್ಯಕ್ಕೆ ಎಷ್ಟು ರೂಪಾಯಿ ಬಂದಿತ್ತು ಎಂಬುದನ್ನು ಯಾರು ಹೇಳಲಿಲ್ಲ. ಮಾನ್ಯ ಪಿ.ಆರ್.ರಮೇಶ್‌ರವರು ಕಾರ್ಪೋರೇಷನ್ ಬಗ್ಗೆ ಮಾತನಾಡುತ್ತಿಲ್ಲ. Bihar and Uttar Pradesh are BIMARU states. ಅದಕ್ಕೆ ಎಲ್ಲರೂ contribute ಮಾಡುತ್ತೇವೆ. ಮಾನ್ಯ ಕಾನೂನು ಸಚಿವರು ಹೇಳಿದರು, that they have inherited the loan ಅಂತ, ಆದರೆ ನಾವು The Karnataka Fiscal Responsibility Act ಪ್ರಕಾರ, ಆ fiscal deficit limits ನಲ್ಲಿಯೇ ಇದ್ದು, ಕೇವಲ ಶೇಕಡ 3 ರಷ್ಟು ಮಾತ್ರ ಸಾಲ ಮಾಡಬಹುದೆಂದು ಮಾಡಿದ್ದೆವು. ಆದರೆ, ಈಗ ಸುಮಾರು ಶೇಕಡ 4 ರಷ್ಟು, ಶೇಕಡ 5 ರಷ್ಟು ಸಾಲ ಮಾಡಲಾಗುತ್ತಿದೆ.

**ಶ್ರೀ ಪಿ.ಆರ್.ರಮೇಶ್ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಶೇಕಡ 3.5 ರಷ್ಟು ಸಾಲ ಮಾಡಿದ್ದಾರೆ.

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ಆಗಿನಿಂದಲೂ ವಿಧಾನಸಭೆಯಲ್ಲಿ ಇದ್ದೇನೆ. Fiscal Responsibility Act ಇಲ್ಲಿಂದ generate ಆಗಿಲ್ಲ. It is an imposition. ನಾವು deficit budget ಗಳನ್ನು ಇಡುತ್ತಾ ಹೋದಾಗ ನಮಗೆ ಬಜೆಟ್‌ನಲ್ಲಿ revenue loss ಆಗಬಾರದೆಂಬ ಉದ್ದೇಶದಿಂದ ಅದನ್ನು

ಮಾಡಲಾಗಿರುತ್ತದೆ. ಶೇಕಡ 2 ರಷ್ಟು ಸಾಲದಿಂದ ಕಾಲಕಾಲಕ್ಕೆ ಪರಿಸ್ಥಿತಿಗೆ ಅನುಗುಣವಾಗಿ ತಿದ್ದುಪಡಿ ಮಾಡಿಕೊಂಡು ಬಂದಿದ್ದು, ಅದರ ದಾಖಲೆಯನ್ನು ಸಹ ಒದಗಿಸುತ್ತೇನೆ. ಈ ಮೊದಲು ಶೇಕಡ 2 ರಷ್ಟು ಸಾಲಕ್ಕೆ ಮಾತ್ರ limit ಆಗಿದ್ದೇವು. ಮಾನ್ಯ ರಮೇಶ್ ರವರು ಇದನ್ನು ಒಪ್ಪಬೇಕು. ನಂತರ ಶೇ. 3 ರಷ್ಟು ಮಾಡಲಾಗಿತ್ತು. ತದನಂತರ ಶೇಕಡ 3.5 ರಷ್ಟು ಆಗಿದ್ದು, ಮತ್ತೆ fiscal deficit limit ನ್ನು ಶೇಕಡ 3.25 ಗೆ confine ಆಗಿದ್ದೇವೆ. Fiscal Responsibility is a self–imposition. ನಾವು discipline ನೊಳಗೆ ಇರಬೇಕೆಂದು ಮಾಡಿರುವುದು. ಆದರೆ, ಈಗ ಅದಕ್ಕೆ ಯಾರು ಜವಾಬ್ದಾರಿ? ಒಂದು ಕಾಲದಲ್ಲಿ ಮೈಸೂರು ಮಹಾರಾಜರು ಸಹ ಬರಗಾಲ ಬಂದು ದಿವಾಳಿಯಾಗಿಬಿಟ್ಟಿದ್ದರು. ರಾಜ್ಯ ಯಾವ ಸ್ಥಿತಿಯಲ್ಲಿತ್ತು, ರೆವಿನ್ಯೂ ಯಾವ ಸ್ಥಿತಿಯಲ್ಲಿತ್ತು ಎಂಬುದನ್ನು ನೋಡಿ, ಅದನ್ನು ಹೇಗೆ ಸರಿಪಡಿಸಬೇಕೆಂಬುದರ ಮೇಲೆ ಚರ್ಚೆ ಮಾಡಿದರೆ ಮಾತ್ರ ಅದು ಬಜೆಟ್ ಮೇಲಿನ ಚರ್ಚೆಯಾಗುತ್ತದೆ. ಅದನ್ನು ಬಿಟ್ಟು ಅದು ಮಾಡಲಿಲ್ಲ, ಇದು ಮಾಡಲಿಲ್ಲವೆಂದು ಚರ್ಚೆ ಮಾಡಿಕೊಂಡು ಕುಳಿತುಕೊಂಡು ಬಿಟ್ಟರೆ ಹೇಗೆ? Will it be a debate on budget?

(ಗೊಂದಲ)

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ನಾನು ಹೇಳುತ್ತಿರುವ ಪಾಯಿಂಟ್ ಬಗ್ಗೆ ಅರ್ಥವಾಗಲಿಲ್ಲ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ನನಗೆ ಅರ್ಥವಾಗಲಿಲ್ಲ. ಆದರೆ, ಅವರಿಗೆ ಅರ್ಥವಾಗುವ ರೀತಿ ನಾನು ಒಂದು ಮಾತನ್ನು ಹೇಳುತ್ತೇನೆ. ಅದೇನೆಂದರೆ, ಜಿ.ಎಸ್.ಟಿ. ಸೆಸ್‌ನಲ್ಲಿ ನೀಡುತ್ತಿರುವ concessions ಅಲ್ಲದೇ ಪ್ರತಿ ವರ್ಷವು ಭಾರತ ಸರ್ಕಾರವು ಸುಮಾರು ರೂ.50 ಸಾವಿರ ಕೋಟಿಯಿಂದ ರೂ.55 ಸಾವಿರ ಕೋಟಿವರೆಗೂ ಹಣ derive ಮಾಡಿ ಕೊಡುತ್ತಿದೆ. ರಾಜ್ಯಕ್ಕೆ ಬೇಕಾದಷ್ಟು ಮಾರ್ಗಗಳಲ್ಲಿ ಹಣ ಬರುತ್ತದೆ. ಅದು ಹೇಗೆ ಎಂಬುದನ್ನು ನಾವು ಚರ್ಚೆಯೇ ಮಾಡುವುದಿಲ್ಲ. ಹಾಗಾದರೆ, ಭಾರತ ಸರ್ಕಾರಕ್ಕೆ ಆ ಹಣ ಉತ್ಪತ್ತಿಯಾಗುತ್ತದೆಯೇ?

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ಅದನ್ನು ವೈಟ್ ಪೇಪರ್‌ನಲ್ಲಿ ಹೇಳಲಿ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಯಾವ ವೈಟ್ ಪೇಪರ್ ಮೇಲಿದೆ? ಅಕ್ಕಿ ಮೇಲೆ ಸಬ್ಸಿಡಿ ಇಲ್ಲವೇ?

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–**ಮಾನ್ಯ ಸಭಾಪತಿಯವರೇ, ಅವರ ಬಜೆಟ್ ಭಾಷಣವೇ ವೈಟ್ ಪೇಪರ್ ನಂತಿದೆ. There is no need for white paper.

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ವೈಟ್ ಪೇಪರ್ ಮೇಲೆ.... ಈ ದೇಶ ಹೇಗೆ develop ಆಗುತ್ತದೆಯೇ? ಈ ದೇಶದ defence expenditure ಎಷ್ಟು ಸಲ ಜಾಸ್ತಿಯಾಗಿದೆ? ಈ ದೇಶವು ಹೇಗೆ ನಡೆಯುತ್ತಿದೆ?

(ಗೊಂದಲ)

**ಶ್ರೀ ಪ್ರಕಾಶ್ ಕೆ.ರಾಥೋಡ್ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, Defence expenditure has to come from Government of India. Government of Karnataka is not responsible for that.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, There was two systems of taxation i.e., CST and KST.

**ವೈಸ್ ಛೇರ್ಮನ್:-** ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರೆ ಪೀಠದ ಕಡೆ ನೋಡಿಕೊಂಡು ಮಾತನಾಡಿ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರೆ ಒಂದು ನಿಮಿಷ ನಾನು ಹೇಳುವುದನ್ನು ದಯವಿಟ್ಟು ಕೇಳಿಸಿಕೊಳ್ಳಿ. CST, KST and Form 'C' were the systems in the taxation. ಈ ಹಿಂದೆ ಸಹ ಜಿ.ಎಸ್.ಟಿ. ಅಸ್ತಿತ್ವದಲ್ಲಿದ್ದು, ಜಿ.ಎಸ್.ಟಿ.ಯನ್ನು ಸಿ.ಎಸ್.ಟಿ. ಎಂದು ಕರೆಯಲಾಗುತ್ತಿತ್ತು. ಹಾಗೆಯೇ ಕೆ.ಎಸ್.ಟಿ. ಮತ್ತು ಸಿ.ಎಸ್.ಟಿ. ಬೇರೆ ಬೇರೆಯಾಗಿತ್ತು. ಸಿ.ಎಸ್.ಟಿ. ಮೇಲೆ ಶೇಕಡ 2–4 ರಷ್ಟು ಸೆಸ್ ಸಹ ಇತ್ತು. ಸೆಸ್ ಎಂದರೆ, ಅದಕ್ಕೆ Form 'C' ಕೊಡಲಿಲ್ಲವೆಂದರೆ ಅದಕ್ಕೆ 2% penalty ಸಹ ಇತ್ತು. ಅಂದಿನ ದಿವಸ ಸಹ ರಾಜ್ಯ ಸರ್ಕಾರವು ಸಿ.ಎಸ್.ಟಿ.ಯನ್ನು ಸಂಗ್ರಹಿಸಿತ್ತು. ನಂತರ amalgamate ಮಾಡಿ ಇಷ್ಟು ಬರುತ್ತಿದೆ ಎಂದು ತೋರಿಸಿತ್ತು. ಅಂದಿನ ದಿವಸವು ಸಹ ಸಿ.ಎಸ್.ಟಿ. ಯನ್ನು ಸಂಗ್ರಹಿಸಿದೇ ಕೇಂದ್ರ ಸರ್ಕಾರವನ್ನು ನಡೆಸಿಲ್ಲ. CST system also existed, and tax was paid to Government of India. ಹಾಗಾದರೆ, ಸಿ.ಎಸ್.ಟಿ. ಇರಲಿಲ್ಲವೇ? ಕರ್ನಾಟಕ ರಾಜ್ಯದ ಸಿ.ಎಸ್.ಟಿ. ಲೆಕ್ಕವನ್ನು ಕೊಡಬೇಕೇ?

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಅದೆಲ್ಲವನ್ನೂ ಮಾಡಿಯೇ ಸಿ.ಎಸ್.ಟಿ.ಯನ್ನು ಕಟ್ಟಿರುವುದು.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಮುಂಚೆ VAT (Value Added Tax) ಇತ್ತು.

**ವೈಸ್ ಛೇರ್ಮನ್:-** ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರೆ ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಆಮೇಲೆ ಜಿ.ಎಸ್.ಟಿ. ಬಂದಿತ್ತು.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, Hon'ble minister is a well–learned person. VAT, CST ಹಾಗೂ ಎಲ್ಲವನ್ನೂ ಒಟ್ಟುಗೂಡಿಸಿ ಒಂದು single window ಎಂದು ಹೇಳಿ ಸಂಪೂರ್ಣವಾಗಿ ಜಿ.ಎಸ್.ಟಿ. ಎಂದು ಮಾಡಿರುವುದು. Everyone knows that.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಜಿ.ಎಸ್.ಟಿ. ಯಿಂದ ರಾಜ್ಯ ಸರ್ಕಾರಕ್ಕಾಗಲಿ ಹಾಗೂ ಕೇಂದ್ರ ಸರ್ಕಾರಕ್ಕಾಗಲಿ ಎಷ್ಟು ಕೊಡಬೇಕೆಂಬುದರ ಕುರಿತು ಕೇಂದ್ರ ಸರ್ಕಾರದಲ್ಲಿ ಒಂದು commission ಇದೆ. ಅವರು ತೀರ್ಮಾನ ಮಾಡುತ್ತಾರೆ. ಆದರೆ, ನನ್ನ ಪಾಯಿಂಟ್ ಏನೆಂದರೆ, ಕೇಂದ್ರ ಸರ್ಕಾರದಿಂದ ಏನು ಅನುದಾನ ಬರುತ್ತದೆ, ಅದನ್ನು ನೀಡದೇ ಇರುವುದರಿಂದ ನಿಮಗೆ Fiscal Responsibility Act ನ್ನು ತಿದ್ದುಪಡಿ ಮಾಡಲು ಕೇಂದ್ರ ಸರ್ಕಾರವು ಅನುಮತಿ ನೀಡುತ್ತಾರೆ. They request to take loan and compensate the….. ಏನು ಕೊಡಬೇಕಾಗಿದೆ. It is a record. ಅದರ ಮಾಹಿತಿಯನ್ನು ತೋರಿಸಲಿ. ಕಳೆದ ಸಲವು ನಾನು ಅದರ ಬಗ್ಗೆ ಮಾತನಾಡಿದ್ದೇನೆ. ಆ ದಾಖಲೆಯ ಆಧಾರದ ಮೇಲೆ ನೀವು Fiscal Responsibility Act ಅನ್ನು ತಿದ್ದುಪಡಿ ಮಾಡಿರುವುದು. ಇಲ್ಲದೇ ಇದ್ದರೆ ಅದನ್ನು ತಿದ್ದುಪಡಿ ಮಾಡುವ ಅವಶ್ಯಕತೆ ಇರಲಿಲ್ಲ. ಕಾರಣವೇನೆಂದರೆ, ಅವರ ಸರ್ಕಾರಕ್ಕೆ ಬರಬೇಕಾದ ಹಣವು ಬಂದಿದ್ದರೆ ಏತಕ್ಕೆ ಅವರು ಲೋನ್ ತೆಗೆದುಕೊಳ್ಳುತ್ತಿದ್ದರು. ಇವತ್ತಿನ ದಿವಸ ರೂ.72 ಸಾವಿರ ಕೋಟಿ ಲೋನ್ ತೆಗೆದುಕೊಳ್ಳಲು ಹೋಗಿದ್ದಾರೆ. ಆ ಲೋನ್ ಅನ್ನು ತೆಗೆದುಕೊಂಡು development activities ಗೆ ಹಾಕುತ್ತೀರಿ, ಆಗ capital assets create ಆಗುತ್ತದೆ, ಒಪ್ಪಿಕೊಳ್ಳುತ್ತದೆ. At the same time the liabilities are also increasing. ಈಗ inevitable ಏತಕ್ಕೆ ಆಯಿತು. ಏಕೆಂದರೆ, ಕೇಂದ್ರ ಸರ್ಕಾರದಿಂದ ಬರುವ ಅನುದಾನವು ಕಡಿಮೆಯಾಗಿದೆ. ಅದರ ಅರ್ಥ ಕೇಂದ್ರ ಸರ್ಕಾರವು ಹಣ ನೀಡಲು ಹಿಂದೆಟ್ಟು ಹಾಕಿತ್ತು. That is my point. ಅದು ಬಿಟ್ಟು ಬೇರೆ ಏನು ಹೇಳುತ್ತಿಲ್ಲ. Yes, it is a routine. ಕಳೆದ 75 ವರ್ಷಗಳಿಂದಲೂ ಮಾಡಿಕೊಂಡು ಬರುತ್ತಿದ್ದಾರೆ. ಫುಡ್ ಸೆಕ್ಯೂರಿಟಿ ಆಕ್ಟ್, ಆರ್.ಟಿ.ಐ., ಆರ್.ಟಿ.ಇ. ಎಲ್ಲವನ್ನೂ ಜಾರಿಗೆ ತಂದರು. It was designed for the good of the people.

ಜನರಿಗೆ ಬೇಕಾದಂಥ ಆಕ್ಟ್‌ಗಳನ್ನು ಜಾರಿಗೆ ತಂದಿದ್ದು, ಅದನ್ನು ಮಾಡುತ್ತಿದ್ದಾರೆ. ಅದಕ್ಕೆ ಅನುಗುಣವಾಗಿ ಏನೆಲ್ಲಾ ಸಂಪನ್ಮೂಲಗಳು ಉತ್ಪತ್ತಿ ಆಗಬೇಕು, ಅದು ಆಗುತ್ತದೆ. ಆದರೆ, ನನ್ನ ಪ್ರಶ್ನೆಯೇನೆಂದರೆ, ಇಷ್ಟೊಂದು ಹಣವನ್ನು ನಾವು ತೆರಿಗೆ ರೂಪದಲ್ಲಿ ಕಟ್ಟಿ, ಅದರ ಆಧಾರದ ಮೇಲೆ ಬಜೆಟ್ ಮಾಡಿ, ಆ ಹಣವನ್ನು ಯಾರ ಕೈಗೆ ನೀಡುತ್ತಿದ್ದೇವೆ ಎಂದರೆ, ಎಕ್ಸಿಕ್ಯೂಟಿವ್‌ರವರ ಕೈಗೆ ನೀಡುತ್ತಿದ್ದೇವೆ. ಆ ಎಕ್ಸಿಕ್ಯೂಟಿವ್ ಏನು ಮಾಡುತ್ತಿದ್ದಾನೆ ಎಂದರೆ, ಅವರ ಮನೆಯ ತೊಟ್ಟಿಯಲ್ಲಿ, ಪೈಪ್‌ನಲ್ಲಿ ಅಥವಾ ಮನೆಯಲ್ಲಿ ಇಡುತ್ತಿದ್ದಾರೆ. ಅದಕ್ಕೆ ಯಾರ governance ಇಲ್ಲವೇ ಇಲ್ಲದಂತಾಗಿದೆ. We need good administration to manage this whole financial system. ಆ governance ಇವೊತ್ತಿನ ದಿವಸ ಹೊರಟು ಹೋಗಿದೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ, ಪ್ರತಿ ದಿವಸ ನ್ಯಾಯಾಲಯದ ಮುಂದೆ ಪ್ರಕರಣ ಹೋಗುತ್ತಿದೆ. ಪ್ರತಿ ದಿವಸ ಎ.ಸಿ.ಬಿ. ದಾಳಿಯ 4 ಪ್ರಕರಣಗಳು ಬರುತ್ತಿದೆ. ಪ್ರತಿ ದಿನವು ಪತ್ರಿಕೆಯಲ್ಲಿ, ಅಧಿಕಾರಿಗಳ ಮನೆಯ ತೊಟ್ಟಿಯಲ್ಲಿ ದುಡ್ಡು ಸಿಕ್ಕಿದೆ, ಪೈಪ್‌ನಲ್ಲಿ ದುಡ್ಡು ಸಿಕ್ಕಿದೆ ಎಂದು ಯಾರಾದರೂ ಒಬ್ಬರ ಫೋಟೋ ಬರುತ್ತಿದೆ. ನಾವು ಪ್ರತಿ ವರ್ಷ, ಇಂತಹ ಅಧಿಕಾರಿಗಳ ಮನೆಯ ಪೈಪ್‌ನಲ್ಲಿ, ತೊಟ್ಟಿಯಲ್ಲಿ ಹಣವನ್ನು ಸೇರಿಸುವುದಕ್ಕೆ ಬಜೆಟ್ ಮಾಡುತ್ತಿದ್ದೇವೆ. ಅದರ ಜೊತೆಗೆ, ಸಾಲ ಮಾಡುವುದು ಮತ್ತು ಅದಕ್ಕಾಗಿಯೇ ಸಾರ್ವಜನಿಕರು ಕಂದಾಯ ಕಟ್ಟುತ್ತಿರುವುದು, ತೆರಿಗೆ ಕಟ್ಟುತ್ತಿರುವುದು. ಇದು ಯಾವ ನ್ಯಾಯ? This is my point. ಹಾಗಾಗಿ ಇವತ್ತು ಏನಾಗುತ್ತಿದೆ ಅದನ್ನು ನಾವು ಸಹಿಸಲು ಸಾಧ್ಯವಾಗದೇ ಇರುವಂಥ ಪರಿಸ್ಥಿತಿ ಬಗ್ಗೆ ಹೊರಗಿನ ಜನರು ಮಾತನಾಡುತ್ತಿದ್ದಾರೆ. ಇವೊತ್ತಿನ ದಿವಸ ಸಾರ್ವಜನಿಕರ ಆರ್ಥಿಕ ಪರಿಸ್ಥಿತಿ ಸರಿಯಿಲ್ಲದಂತಾಗಿದೆ. ಇದರಿಂದಾಗಿ, ಜನರು ತಮ್ಮ ಮಕ್ಕಳ ಶುಲ್ಕವನ್ನು ಭರಿಸದೇ ಇರುವುದರಿಂದ ಆ ಮಕ್ಕಳನ್ನು ಪರೀಕ್ಷೆಗೆ ಕೂರಿಸದೇ ಶಾಲೆಯ ಗೇಟ್‌ನಿಂದ ಹೊರಗೆ ಕೂರಿಸಿದ್ದಾರೆ. ಅದಕ್ಕೆ ಸಂಬಂಧಿಸಿದಂತೆ, ಪತ್ರಿಕೆಗಳಲ್ಲಿ/ಮಾಧ್ಯಮಗಳಲ್ಲಿ ಬಂದಿರುವಂತಹ ಫೋಟೋಗಳನ್ನು ಅವರು ನೋಡಿದ್ದಾರೆಯೇ? ಯಾರು ನೋಡಿಲ್ಲವೆಂದು ಕಾಣುತ್ತಿದೆ. ಇದೆಲ್ಲವನ್ನೂ ಸರ್ಕಾರದವರು ತಿಳಿದುಕೊಳ್ಳಬೇಕು. ಅನೇಕ ಖಾಸಗಿ ಶಾಲೆಗಳಲ್ಲಿ ಮಕ್ಕಳನ್ನು ಪರೀಕ್ಷೆಗೆ ಕೂರಿಸಿರುವುದಿಲ್ಲ. ಆ ಮಕ್ಕಳನ್ನು ಶಾಲೆಯ ಗೇಟ್‌ನ ಹೊರಭಾಗದಲ್ಲಿ ಕೂರಿಸಿರುತ್ತಾರೆ. ಕಾರಣ ಏನೆಂದರೆ, ಆ ಮಕ್ಕಳ

ಪೋಷಕರಿಗೆ ಶಾಲಾ ಶುಲ್ಕ ಕಟ್ಟುವುದಕ್ಕೆ ಹಣ ಇರುವುದಿಲ್ಲ. This is the condition of our economy. ಆ ಮನುಷ್ಯ ಎರಡು ಹೊತ್ತು ಊಟ ಮಾಡಲು ಸಾಧ್ಯವಾಗುತ್ತಿಲ್ಲ.

**ಶ್ರೀ ಎನ್.ನಾಗರಾಜು (ಎಂ.ಟಿ.ಬಿ.) (ಪೌರಾಡಳಿತ ಹಾಗೂ ಸಕ್ಕರೆ ಸಚಿವರು):–** ಮಾನ್ಯ ಸಭಾಪತಿಯವರೇ, ಅವರು ಸಹ ತಮ್ಮ ಸಂಸ್ಥೆಗಳನ್ನು ನಡೆಸಬೇಕು ಅಲ್ಲವೇ?

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಎನ್.ನಾಗರಾಜುರವರೇ ತಾವು ದೊಡ್ಡವರು. ತಮ್ಮ ಸಂಸ್ಥೆಗಳ ಆದಾಯ ಚೆನ್ನಾಗಿ ಇದೆ. ತಾವು ಸುಮ್ಮನೆ ಇರಿ.  ಇವತ್ತು ಬಡವರ ಮನೆಗಳು ಯಾವ ಸ್ಥಿತಿಯಲ್ಲಿದೆ ಎಂಬುದನ್ನು ನೋಡಬೇಕು.  ತಾವು ಶ್ರೀಮಂತರು.

**ವೈಸ್ ಛೇರ್ಮನ್:–** ಮಾನ್ಯ ಪಿ.ಆರ್.ರಮೇಶ್‌ರವರೆ, ಪೀಠದ ಕಡೆ ನೋಡಿಕೊಂಡು ಮಾತನಾಡಿ.

**(ಗೊಂದಲ)**

**ಶ್ರೀ ಎನ್.ನಾಗರಾಜು (ಎಂ.ಟಿ.ಬಿ.):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಆ ರೀತಿ ಹೇಳುವುದು ಬೇಡ.

**ಶ್ರೀ ಪಿ.ಆರ್. ರಮೇಶ್:–** ಮಾನ್ಯ ಸಭಾಪತಿಯವರೇ, ನಾನು ಯಾವರೀತಿ ಮಾತನಾಡಿದರೂ ಸಹ ತಪ್ಪಾಗಿ ಕಾಣುತ್ತದೆ ಅಥವಾ ತಪ್ಪಾಗಿ ತಿಳಿದುಕೊಳ್ಳುತ್ತಾರೆ.

**(ಗೊಂದಲ)**

**ಶ್ರೀ ಎನ್. ನಾಗರಾಜು(ಎಂ.ಟಿ.ಬಿ.):–** ಮಾನ್ಯ ಸಭಾಪತಿಯವರೇ, ದೊಡ್ಡದಾಗಲಿ, ಸಣ್ಣದಾಗಲಿ ಆ ಸಂಸ್ಥೆಗಳು ನಡೆಯಬೇಕಲ್ಲವೇ?  ಕಳೆದ ಎರಡು–ಮೂರು ವರ್ಷಗಳಿಂದ ಕೊರೋನಾ ಬಂದು ಸರ್ಕಾರಿ ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಗಳು ಸರಿಯಾಗಿ ನಡೆಯಲಿಲ್ಲ.  ಆ ಸಂಸ್ಥೆಯಲ್ಲಿರುವ ಶಿಕ್ಷಕರಿಗೆ, ಎಲ್ಲಾ ನೌಕರರಿಗೆ ಸಂಬಳ ನೀಡಬೇಕು.  ಕಳೆದ ಎರಡು–ಮೂರು ವರ್ಷಗಳಿಂದ ಶುಲ್ಕವನ್ನು

ಭರಿಸಲಿಲ್ಲವೆಂದರೆ, ಆ ಸಂಸ್ಥೆ ಹೇಗೆ ನಡೆಯಬೇಕು? ಹಾಗಾಗಿ ಒಂದೆರಡೂ ದಿವಸಗಳ ಮಟ್ಟಿಗೆ punishment ನೀಡಬಹುದೇ ವಿನಃ, ಆ ಮಕ್ಕಳನ್ನು ಕಡ್ಡಾಯವಾಗಿ ಮನೆಗೆ ವಾಪಸ್ಸು ಕಳುಹಿಸುವುದಿಲ್ಲ. ಮತ್ತೆ ಶಾಲೆಗೆ ವಾಪಸ್ಸು ಕರೆಸಿಕೊಳ್ಳುತ್ತಾರೆ. ನನ್ನದು ಶಿಕ್ಷಣ ಸಂಸ್ಥೆ ಇದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಏನು ನಡೆಯುತ್ತಿಲ್ಲ. ಒಂದೇ ಸಲ ಒಟ್ಟಾಗಿ ಶುಲ್ಕವನ್ನು ಕಟ್ಟಲು ಸಾಧ್ಯವಾಗಲಿಲ್ಲವೆಂದರೆ, ಸ್ವಲ್ಪ-ಸ್ವಲ್ಪವೇ ಹತ್ತು ಸಲವಾದರೂ ಶುಲ್ಕವನ್ನು ಭರಿಸಿ ಎಂದು ಹೇಳುತ್ತೇವೆ ವಿನಃ ಬೇರೆ ಏನು ಮಾಡುತ್ತಿಲ್ಲ. ಶಾಲೆಯಿಂದ ಮಕ್ಕಳನ್ನು ಹೊರಗೆ ಕೂರಿಸುತ್ತಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳಿದರು. ಒಂದು ವೇಳೆ ಅವರದೇ ಸಂಸ್ಥೆ ಇದ್ದಿದ್ದರೆ ಅವರು ಸಹ ಹಾಗೆಯೇ ಮಾಡುತ್ತಿದ್ದರು.

**ವೈಸ್ ಛೇರ್ಮನ್:-** ಮಾನ್ಯ ಸಚಿವರೆ ಮಕ್ಕಳಿಗೆ ಆತಂಕವಾಗದೇ ಇರುವಂತಹ ರೀತಿ ನೋಡಿಕೊಳ್ಳಬೇಕು.

**ಶ್ರೀ ಕೆ.ಗೋಪಾಲಯ್ಯ (ಅಬಕಾರಿ ಸಚಿವರು):-** ಮಾನ್ಯ ಸಭಾಪತಿಯವರೇ, ಬಹುಶಃ ಮಾನ್ಯ ಪಿ.ಆರ್.ರಮೇಶ್‌ರವರಿಗೆ ಎಲ್ಲವೂ ಸಂಪೂರ್ಣವಾಗಿ ಗೊತ್ತಿದೆ. ಸ್ವಾತಂತ್ರ್ಯ ಬಂದು 75 ವರ್ಷಗಳು ಕಳೆದರೂ ಬಡತನ ಎನ್ನುವುದು ಇವತ್ತಿಗೂ ಎಲ್ಲಾ ರಾಜ್ಯದಲ್ಲಿ ಇದೆ. ಇವೊತ್ತಿನ ದಿವಸ ಶಿಕ್ಷಣ ವ್ಯವಸ್ಥೆ ಬಗ್ಗೆ ನಾವು ಈ ಸ್ಥಾನದಲ್ಲಿ ಕುಳಿತು ಮಾತನಾಡುತ್ತಿದ್ದೇವೆ. ನಮ್ಮ-ನಮ್ಮ ಕ್ಷೇತ್ರಗಳಲ್ಲಿ ನಾವು ಏನೇನು ಕೆಲಸಗಳನ್ನು ಮಾಡಿದ್ದೇವೆ ಎಂದು ನಾವೇ ಪ್ರಶ್ನೆ ಮಾಡಿಕೊಳ್ಳಬೇಕಾಗಿದೆ. ಉದಾಹರಣೆಗೆ ಹೇಳುವುದಾದರೆ, ಇವತ್ತು ಸುಮಾರು ಐದು ಸಾವಿರದಿಂದ, ಆರು ಸಾವಿರದವರೆಗೂ ಮಕ್ಕಳು... ಈ ಸದನದಲ್ಲಿ ಶ್ರೀ ಸಲೀಂ ಅಹಮದ್‌ರವರು ಸಹ ಇದ್ದಾರೆ. ನನ್ನ ಕ್ಷೇತ್ರದಲ್ಲಿ ನಾನು 3 ಸರ್ಕಾರಿ ಶಾಲೆಯನ್ನು ಮಾಡಿದ್ದೇನೆ. ಇವೊತ್ತಿನ ದಿವಸ ದೆಹಲಿಯಲ್ಲಿದೆ ಎಂದು ಹೇಳುವುದಕ್ಕಿಂತ ಇಲ್ಲಿಯು ಅತ್ಯುತ್ತಮವಾಗಿ ಶಾಲೆಯನ್ನು ಮಾಡಿದರೆ, ಸುಮಾರು 20 ಖಾಸಗಿ ಶಾಲೆಗಳು ಖಾಲಿಯಾಗುತ್ತವೆ. ನಾವು ನಮ್ಮ-ನಮ್ಮ ಕ್ಷೇತ್ರಗಳಲ್ಲಿ 5 ಅತ್ಯುತ್ತಮವಾದ ಶಾಲೆಯನ್ನು ತೆರೆದರೆ, ಸುಮಾರು ಎರಡೂವರೆ ಸಾವಿರದಷ್ಟು ಮಕ್ಕಳು ಸೇರಿದರೆ ಸಾಕು, ನಮ್ಮ ಕಾಲದಲ್ಲಿ ಹಾಗೂ ಅವರ ಕಾಲದಲ್ಲಿ ಸುಮಾರು ಆರು ಸಾವಿರ ಮಕ್ಕಳು ಅಡ್ಮಿಷನ್ ಆಗುತ್ತಾರೆ. ಇದು ಬಹಳ ದಿನಗಳಿಂದ ನಡೆದುಕೊಂಡು ಬಂದಿದ್ದು,

ಬಡವರು ಇವತ್ತು ಒಂದು ಪ್ರತಿಷ್ಠಿತ ಶಾಲೆಗೆ ತಮ್ಮ ಮಕ್ಕಳನ್ನು ಸೇರಿಸಲು ಸಾಧ್ಯವಾಗುತ್ತಿಲ್ಲ. ನಾನು ವಿರೋಧ ಪಕ್ಷದ ಕಡೆಯಿಂದಲೂ ಕರೆಯುತ್ತಿದ್ದೇನೆ ಹಾಗೂ ಆಡಳಿತ ಪಕ್ಷದ ಕಡೆಯಿಂದ ಕರೆಯುತ್ತಿದ್ದೇನೆ.

(ಮುಂದು)

(433) 17.03.2022/5.00/ಎಸ್‌ಕೆ-ಜಿಆರ್ (ವೈಸ್‌ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಕೆ. ಗೋಪಾಲಯ್ಯ (ಮುಂದು):-**

ನಾವು ಯಾವ ಊರಿನಲ್ಲಿ ಹುಟ್ಟಿದ್ದೇವೆ ಮತ್ತು ಯಾವ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದೇವೆಯೋ, ಅಂತಹ ಕಡೆ ಒಳ್ಳೆಯ ಸರ್ಕಾರಿ ಶಾಲೆಗಳನ್ನು ಮಾಡಿದ್ದೇವೆ. ಅಲ್ಲಿರುವಂತಹ ಬಡವರು ಮತ್ತು ಮಧ್ಯಮ ವರ್ಗದ ಜನರಿಗೆ ನ್ಯಾಯ ಕೊಡಬಹುದು. ಇಲ್ಲವೆಂದರೆ, ಇನ್ನೂ ಹತ್ತು ವರ್ಷಗಳು ಕಳೆದರೂ ಆ ಬಡ ಜನರ ಸ್ಥಿತಿ ಹಾಗೆಯೇ ಇರುತ್ತದೆ. ನಾವೆಲ್ಲರೂ ಒಟ್ಟಿಗೆ ಸೇರಿ, ನಮ್ಮ ನಮ್ಮ ಕ್ಷೇತ್ರಗಳಲ್ಲಿ ಈ ಕೆಲಸಗಳನ್ನು ಮಾಡಿದರೆ, ಬಡತನ ಸಮಸ್ಯೆಯನ್ನು ಹೋಗಲಾಡಿಸಬಹುದು. ಇನ್ನೂ ಎರಡು-ಮೂರು ತಿಂಗಳಲ್ಲಿ ನನ್ನ ಕ್ಷೇತ್ರಗಳಲ್ಲಿ ಆಗಿರುವಂತಹ ಬದಲಾವಣೆಯನ್ನು ತಾವು ನೋಡುತ್ತೀರಿ. ನಾನು ಇದನ್ನು ಮಾಡಲೇಬೇಕೆಂಬ ಒಂದು ಒಳ್ಳೆಯ ಉದ್ದೇಶದಿಂದ ಒಂದೊಂದು ಶಾಲೆಗೆ ಬೇರೆ ಬೇರೆ ರೂಪದಲ್ಲಿ ಕೆಲಸ ಮಾಡಬೇಕೆಂದು ಹದಿನೈದು-ಇಪ್ಪತ್ತು ಕೋಟಿ ರೂಪಾಯಿಗಳನ್ನು ತಂದಿದ್ದೇನೆ. ನೆನ್ನೆಯಿಂದ Science Lab ಮಾಡುತ್ತಿದ್ದಾರೆ. ಬೇರೆ ಸಂಸ್ಥೆಗಳಂದ ಹಣವನ್ನು ತರಿಸಿ, ಇದನ್ನು ತಾವೇ ಬಂದು ಈ ಕೆಲಸ ಮಾಡಿಕೊಡಿ ಎನ್ನುವಂತಹದ್ದನ್ನು ನಾನು ಮಾಡಿದ್ದೇನೆ. ಆಸ್ಪತ್ರೆ ಕೂಡ ಮಾಡಿದ್ದೇನೆ. ನಮ್ಮ ಕ್ಷೇತ್ರದಿಂದ ಹೆಣ್ಣು ಮಕ್ಕಳು ಹೆರಿಗೆ ಆಸ್ಪತ್ರೆಗೆ ಹೋಗಬೇಕೆಂದರೆ, ಮಲ್ಲೇಶ್ವರಂ ಮತ್ತು ಜಯನಗರ ಆಸ್ಪತ್ರೆಗೆ ಬರಬೇಕಾಗುತ್ತದೆ. ಹಣ ಇದ್ದಂತಹವರು ಅಲ್ಲಿಗೆ ಬರುತ್ತಾರೆ. ಆಯಾಯ ಕ್ಷೇತ್ರಗಳ ಜವಾಬ್ದಾರಿಯುಳ್ಳ ಪ್ರತಿನಿಧಿಗಳು ಅಲ್ಲಿಗೆ ಅವಶ್ಯವಿರುವಂತಹ ಕೆಲಸಗಳನ್ನು ಮಾಡಿದರೆ, ಬಹುಶಃ ಹತ್ತು-ಹದಿನೈದು ವರ್ಷಗಳಲ್ಲಿ ಇವೆಲ್ಲಾ ಸಮಸ್ಯೆಗಳನ್ನು ಬಗೆಹರಿಸಬಹುದು. ಮಾನ್ಯ ಸದಸ್ಯರೆಲ್ಲರಿಗಿಂತ ಕಾರ್ಪೋರೇಷನ್‌ನಲ್ಲಿ ಮಾನ್ಯ ಪಿ.ಆರ್. ರಮೇಶ್‌ರವರಿಗೆ ಬಹಳಷ್ಟು ಅನುಭವ

ಇದೆ. ನಾವು ಕಾರ್ಪೋರೇಷನ್ ಶಾಲೆಗಳು ಮತ್ತು ಸರ್ಕಾರಿ ಶಾಲೆಗಳನ್ನು ನೋಡಿದ್ದೇವೆ. ಅಲ್ಲಿ ನಾವು ಈ ವ್ಯವಸ್ಥೆಯನ್ನು ಮಾಡಬೇಕಾಗಿದೆ. ಈಗ ವಿರೋಧ ಪಕ್ಷದಲ್ಲಿರುವ ಹಿಂದೆ ಆಡಳಿತ ಪಕ್ಷದಲ್ಲಿದ್ದರು. ಈಗ ನಾವು ಆಡಳಿತ ಪಕ್ಷದಲ್ಲಿದ್ದೇವೆ. ಕೆಲಸ-ಕಾರ್ಯಗಳು ಆಗುತ್ತಿವೆ. ಎರಡು ವರ್ಷ ಕರೋನಾ ಬಂದು, ಎಲ್ಲಾ ಕ್ಷೇತ್ರಗಳ ಮೇಲೆ ದೊಡ್ಡ ಪರಿಣಾಮವನ್ನುಂಟು ಮಾಡಿದೆ. ಈಗ ಹಂತ-ಹಂತವಾಗಿ ಸಮಸ್ಯೆಗಳು ಬಗೆಹರಿಯುತ್ತಿವೆ.

**ವೈಸ್ ಛೇರ್ಮನ್:-** ಇದು ಒಳ್ಳೆಯ ಚಿಂತನೆ ಮತ್ತು ಆಶಯವಾಗಿದೆ. ಎಲ್ಲಾ ಸರ್ಕಾರಿ ಶಾಲೆಗಳು, ಆಸ್ಪತ್ರೆಗಳು  ಸದೃಢವಾದರೆ, ಸರ್ಕಾರಿ ಯೋಜನೆಗಳು ಖಂಡಿತವಾಗಿಯೂ ಬಡ ಜನರಿಗೆ ಮುಟ್ಟುತ್ತವೆ.

**ಶ್ರೀ ಬಿ.ಕೆ. ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಪಿ.ಆರ್. ರಮೇಶ್‌ರವರು ಬಜೆಟ್ ಬಗ್ಗೆ ಲೋಪ-ದೋಷಗಳನ್ನು ಹೇಳುತ್ತಿದ್ದಾರೆ. ಆಡಳಿತ ಪಕ್ಷದವರು ಅವರ ಸರ್ಕಾರ ಬಹಳ ಒಳ್ಳೆಯ ಸರ್ಕಾರ ಎಂದು ಹೇಳಿಕೊಳ್ಳುತ್ತಿದ್ದಾರೆ. ಅವರು ಅದರ ಬಗ್ಗೆ ಹೇಳಿಕೊಳ್ಳಲಿ. ನನ್ನದೇನೂ ಅಭ್ಯಂತರವಿಲ್ಲ. ನಮ್ಮ ಕ್ಷೇತ್ರಕ್ಕೆ ಬಂದು ನೋಡಿ ಎಂದು ಮಾನ್ಯ ಕೆ. ಗೋಪಾಲಯ್ಯನವರು ಹೇಳುತ್ತಾರೆ. ಅವರ ಕ್ಷೇತ್ರದಲ್ಲಿ ನನ್ನ ಒಬ್ಬ ಸ್ನೇಹಿತ ಅವನು Contractor. ಬಿಲ್‌ನ ಮೊತ್ತ  ಬರಲಿಲ್ಲವೆಂದು ಹೇಳಿ, ಸ್ಟೇಡಿಯಂಗೆ ಹೋಗಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡರು. Do you think that we are all fools?

**ಶ್ರೀ ಕೆ. ಗೋಪಾಲಯ್ಯ (ಅಬಕಾರಿ ಸಚಿವರು):-** ಇದರ ಬಗ್ಗೆ ನಾನು ಹೇಳುತ್ತೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಕೆ. ಗೋಪಾಲಯ್ಯನವರೇ, ನನ್ನ ಮಾತನ್ನು ಮುಗಿಸಿಬಿಡುತ್ತೇನೆ.

**ಶ್ರೀ ಕೆ. ಗೋಪಾಲಯ್ಯ:-** ಮಾನ್ಯ ವಿರೋಧ ಪಕ್ಷದ ನಾಯಕರೇ, ನನ್ನ ಮಾತನ್ನು ಸ್ವಲ್ಪ ಕೇಳಿ.

**ವೈಸ್ ಛೇರ್ಮನ್:-** ಮಾನ್ಯ ಸಚಿವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವುದನ್ನು ಮುಗಿಸಲಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಚಿವರೇ, ಇದು ನಮ್ಮ ಕ್ಷೇತ್ರ ಮತ್ತು ನಿಮ್ಮ ಕ್ಷೇತ್ರಕ್ಕೆ ಬಂದು ನೋಡುವ ಪ್ರಶ್ನೆಯಲ್ಲ. ಇಡೀ ರಾಜ್ಯದ ಒಂದು ಬಜೆಟ್ ಮೇಲೆ ಮಾತನಾಡುತ್ತಿದ್ದೇವೆ. ಅದರಲ್ಲಿ ಎಲ್ಲಿ ಲೋಪದೋಷಗಳಿವೆ ಎಂಬ ಬಗ್ಗೆ ಹೇಳುತ್ತೇನೆ. ಬಜೆಟ್ ಎಷ್ಟು ಚೆನ್ನಾಗಿದೆ ಎಂದು ಶ್ರೀಮತಿ ಭಾರತಿ ಶೆಟ್ಟಿಯವರು ಮಾತನಾಡಿದರು. ಆದರೆ ನಮ್ಮದೇನೂ objections ಇಲ್ಲ. ಬಜೆಟ್‌ನ್ನು ಪ್ರಶಂಸೆ ಮಾಡಿ, ಕಾರ್ಯಕ್ರಮವನ್ನು ಮಾಡಿ. ಅದನ್ನು ಬಿಟ್ಟು, ನಮ್ಮ ಸದಸ್ಯರು ಮಾತನಾಡುವಾಗ, ಅವರು ಮಾತನಾಡುತ್ತಿರುವುದು ಸರಿಯಲ್ಲ ಎಂದು ನಮಗೆ ಅನಿಸುತ್ತದೆ.

**ಶ್ರೀ ಕೆ. ಗೋಪಾಲಯ್ಯ:-** ಮಾನ್ಯ ಸದಸ್ಯರು ಮಾತನಾಡುವಾಗ, ಅವರ ಮಧ್ಯೆ ಬಂದು ನಾನು ಮಾತನಾಡಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರುವಂತೆ, Contractor ಸ್ಟೇಡಿಯಂನಲ್ಲಿ ಹೋಗಿ ಆತ್ಮಹತ್ಯೆ ಮಾಡಿಕೊಂಡಿರುವಂತಹದ್ದು ನಿಜ. ಅಲ್ಲಿ ಆ ಘಟನೆ ನಡೆದಿರುವಂತಹದ್ದಲ್ಲ. ಅವರು ಬೆಂಗಳೂರಿನ ಹಲವಾರು ಕಡೆಗಳಲ್ಲಿ ಕೆಲಸ ಮಾಡಿದ್ದಾರೆ. ಅವರು ನಮ್ಮ ಕ್ಷೇತ್ರದಲ್ಲಿ ಕೆಲಸ. ಪ್ರಾರಂಭವಾದಂತಹ ಸಂದರ್ಭದಲ್ಲಿ ಮಾನ್ಯ ಮಂಜುನಾಥ್ ಪ್ರಸಾದ್‌ರವರು ಅವೊತ್ತಿನ ದಿನ ಕಮಿಷನರ್ ಆಗಿದ್ದರು. ಅವರು ಮಾಡಿರುವಂತಹ ಕಟ್ಟಡಕ್ಕೆ ಕೋಟ್ಯಂತರ ರೂಪಾಯಿಗಳ ಹಣ ಖರ್ಚಾಗಿದೆ ಎಂದು ಬಿಲ್ ಕೊಡಬೇಕೆಂದು ಹೇಳಿದ್ದರಿಂದ, ನನ್ನ ಅವಧಿಯಲ್ಲಿ ಅದನ್ನು ಕೊಡಿಸಿದ್ದೇನೆ. ತಾವು ದಾಖಲೆಯನ್ನು ತೆಗೆದು ನೋಡಿ. ಅವರು ಬೇರೆ ಬೇರೆ ಕ್ಷೇತ್ರಗಳಲ್ಲಿ ಕೆಲಸಗಳನ್ನು ಮಾಡಿದ್ದರು. ಅಲ್ಲಿನ ಜನರು ಅಥವಾ ಅಧಿಕಾರಿಗಳು ಸ್ಪಂದಿಸಿಲ್ಲವೋ ಏನೋ ಗೊತ್ತಿಲ್ಲ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಇಲ್ಲಿ ವೈಯಕ್ತಿಕ ಚರ್ಚೆ ಮಾಡುವುದು ಬೇಡ ಬಿಡಿ.

**ಶ್ರೀ ಕೆ. ಗೋಪಾಲಯ್ಯ:-** ನನ್ನ ಕ್ಷೇತ್ರದಲ್ಲಿ ಈ ಘಟನೆಯಾಗಿದ್ದು, ತಾವು ಹೇಳುತ್ತಿದ್ದೀರಾ. ನನ್ನ ಕ್ಷೇತ್ರದಲ್ಲಿ ಕೆಲಸ ಮಾಡಿರುವಂತಹದ್ದಕ್ಕೆ, ನಾನು ಆದ್ಯತೆಯ ಆಧಾರದ ಮೇಲೆ ಬಿಲ್ ಮೊತ್ತವನ್ನು ಅವರಿಗೆ ಕೊಡಿಸಿದ್ದೇನೆ.

**ವೈಸ್ ಛೇರ್ಮನ್:–** ಮಾನ್ಯ ಪಿ.ಆರ್. ರಮೇಶ್‌ರವರು ಮಾತನಾಡುವುದಕ್ಕೆ ತಾವೆಲ್ಲರೂ ಸಹಕರಿಸಿ.

**ಶ್ರೀ ಪಿ.ಆರ್ ರಮೇಶ್:–** ನಾನು ಮಾತನಾಡುವಾಗ, ಈ ತರಹ ಮಧ್ಯೆ ಬಂದುಬಿಟ್ಟರೆ ಕಷ್ಟವಾಗುತ್ತದೆ.

**ವೈಸ್ ಛೇರ್ಮನ್:–** ಮಾನ್ಯ ರಮೇಶ್‌ರವರೇ, ತಾವು ಮಾತನಾಡಿ. ತಾವು ಚೆನ್ನಾಗಿ ಮಾತನಾಡುವುದರಿಂದ ಎಲ್ಲರಿಗೂ ಮಾತನಾಡುವುದಕ್ಕೆ ಉತ್ಸಾಹ ಬರುತ್ತದೆ.

**ಶ್ರೀ ಪಿ.ಆರ್ ರಮೇಶ್ (ನಾಮನಿರ್ದೇಶನವನ್ನು ಹೊಂದಿದವರು):–** ಸಾರ್ವಜನಿಕರು ಮತ್ತು ಅದರಲ್ಲಿ ಹಿರಿಯ ನಾಗರಿಕರ ಇವತ್ತಿನ ಆರ್ಥಿಕತೆಯ ಬದುಕು ಹೇಗಿದೆ ಎಂಬುದು ಬಹಳ ಮುಖ್ಯ. ಸಾಮಾನ್ಯ ಮನುಷ್ಯನ ಬದುಕು ಯಾವ ರೀತಿ ಇದೆ ಎಂಬುದಕ್ಕೆ ಸಂಬಂಧಿಸಿದಂತೆ ನಾನು ಮಾತನಾಡುತ್ತಿದ್ದೇನೆ. ಇವತ್ತು ಬ್ಯಾಂಕ್‌ಗಳಲ್ಲಿ ಠೇವಣಿ ಇಟ್ಟಿರುಂತಹದ್ದಕ್ಕೆ ಬಡ್ಡಿ ದರ ಕೆಳಗೆ ಬಂದಿದೆ. ಅದರ ಜೊತೆಗೆ ಅಂಚೆ ಕಛೇರಿಯಲ್ಲಿ ಹಣ ಇಡುತ್ತಾರಲ್ಲಾ, ಅದು ಪ್ರತಿ ತಿಂಗಳು ಅಥವಾ ಮೂರು ತಿಂಗಳಿಗೊಮ್ಮೆ ಹಣವನ್ನು ಕೊಡುತ್ತಾರೆ. ಈಗ ಅದನ್ನು ನಗದಾಗಿ ಕೊಡುವುದಿಲ್ಲವೆಂದು ಕೇಂದ್ರ ಸರ್ಕಾರದವರು ಹೇಳಿದ್ದಾರೆ. ಪಾಪ, ಅವನಿಗೆ ಯಾವುದೋ ಒಂದು Gratuity ಅಥವಾ ಇನ್ಯಾವುದೋ ಬಂದಿರುತ್ತದೆ. ಅವನು ತೆಗೆದುಕೊಂಡು ಅಂಚೆ ಕಛೇರಿಯಲ್ಲಿ ಇಟ್ಟಿರುತ್ತಾನೆ. ಅವನಿಗೆ ಎರಡು ತಿಂಗಳು ಅಥವಾ ಮೂರು ತಿಂಗಳಿಗೊಮ್ಮೆ ಹಣ ಬರಬೇಕು. ಆ ಹಣ ಬರದೇ ಇರುವಂತಹ ಸಂದರ್ಭದಲ್ಲಿ ಅವನ ಜೀವನ ಹೇಗೆ ನಡೆಸುತ್ತಾನೆ? ಅವನು ಔಷಧಿ ತೆಗೆದುಕೊಳ್ಳಲು ಹಣವನ್ನು ಎಲ್ಲಿಂದ ತೆಗೆದುಕೊಂಡು ಬರುತ್ತಾನೆ? ಅವನಿಗೆ ವಯಸ್ಸಾಗಿದೆ. ಆ ಮನುಷ್ಯನ ಪರಿಸ್ಥಿತಿ ಏನಾಗಬೇಕು? ಅದರ ಜೊತೆಗೆ ಬಸವನಗುಡಿ ಶ್ರೀ ಗುರು ರಾಘವೇಂದ್ರ ಸಹಕಾರ ಸಂಘದ ಜೊತೆ ಮಾನ್ಯ ಯು.ಬಿ. ವೆಂಕಟೇಶ್‌ರವರು ಬಹಳಷ್ಟು ಹೋರಾಟ ಮಾಡಿದರು. ಆ Co-operative Society ನಲ್ಲಿ ಇಟ್ಟಂತಹ ಹಣಕ್ಕೆ ಬಡ್ಡಿ ಇಲ್ಲ ಮತ್ತು ಅಸಲೂ ಇಲ್ಲ. ನಮ್ಮ ನೌಕರರು ಪಿಎಫ್‌ಗೆ ಇಟ್ಟಿದ್ದಾರಲ್ಲ, ಅದಕ್ಕೆ ಕೊಡುತ್ತಿದ್ದ ಶೇಕಡಾ 8.5 ರಂತೆ ಬಡ್ಡಿ ದರವನ್ನು ಈಗ ಶೇಕಡಾ 8.1 ಗೆ ಇಳಿಸಿದ್ದಾರೆ. ಇದರಿಂದ ಏನಾಗುತ್ತದೆ ಎಂದರೆ, ಜನರಿಗೆ ಬರುವಂತಹ ವರಮಾನ ಕಡಿಮೆಯಾಗುತ್ತದೆ. ಇವತ್ತಿನ ದಿವಸ

ದೈನಂದಿನ ವಸ್ತುಗಳ ಬೆಲೆಗಳು ಏರಿಕೆಯಾಗುತ್ತಿವೆ. ಅವನು ಬರುವಂತಹ ವರಮಾನದಲ್ಲಿ ಜೀವನ ಮಾಡಬೇಕೆ? ಸಾಯಲು ವಿಷ ತೆಗೆದುಕೊಳ್ಳುವುದಕ್ಕೆ ಸಹ ಹಣ ಇಲ್ಲದಿರುವ ಪರಿಸ್ಥಿತಿ ಮುಂದಿನ ದಿನಗಳಲ್ಲಿ ಜನರಿಗೆ ಬರಬಹುದು. ಅಂತಹ ಪರಿಸ್ಥಿತಿ ಇಡೀ ರಾಜ್ಯ ಮತ್ತು ರಾಷ್ಟ್ರದಲ್ಲಿ ಇದೆ. ಇದನ್ನು ಸರಿದೂಗಿಸುವಂತಹ ಕೆಲಸವನ್ನು ನಮ್ಮ ಡಬಲ್ ಇಂಜಿನ್ ಸರ್ಕಾರಗಳು ಮಾಡಬೇಕಾಗಿದೆ.

ಮಾನ್ಯ ಸಭಾಪತಿಯವರೇ, ಇವತ್ತು ಸುಮಾರು ಇಪ್ಪತ್ತು ಲಕ್ಷ ಕೋಟಿ ಪ್ಯಾಕೇಜ್ ಕೊಟ್ಟಿದ್ದೇವೆಂದು ಹೇಳುತ್ತಾರೆ. ಇದು ಬಹಳ ಒಳ್ಳೆಯ ಕೆಲಸವೆಂದು ನಾವು ಅಂದುಕೊಂಡಿದ್ದೇವೆ. ಈ ಒಂದು ಆರ್ಥಿಕ ಸ್ಥಿತಿ isolate ಆಗುತ್ತದೆ. ನಮ್ಮ ಜನರಿಗೆ ಆರ್ಥಿಕತೆಯಲ್ಲಿ ಚೇತರಿಕೆ ಉಂಟಾಗುತ್ತದೆ. ನಮ್ಮಲ್ಲಿ Indian economy ಹೇಗೆ ಎಂದರೆ, its flowing and floating economy. ಪ್ರತಿಯೊಬ್ಬರಿಗೂ ಹರಡಬೇಕು. ಆಗಲೇ Indian economy ಸರಿಯಾಗುತ್ತದೆ. ಇವತ್ತು ಏನಾಗುತ್ತದೆ ಎಂದರೆ, ನಮ್ಮ Indian economy ಸಂಪೂರ್ಣವಾಗಿ centralise ಆಗುತ್ತದೆ. ನಮ್ಮ ಹಣವನ್ನು ಯಾರೋ ದೊಡ್ಡ ದೊಡ್ಡ ವ್ಯಕ್ತಿಗಳ ಹತ್ತಿರ ಶೇಖರಣೆ ಮಾಡಿ ಇಡುತ್ತಿದ್ದೇವೆ. ಇಂತಹದ್ದಕ್ಕೆ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದೇವೆ. ಇಂತಹದ್ದಕ್ಕೆ ನಾವು ಹೆಚ್ಚು ಒತ್ತನ್ನು ಕೊಡುತ್ತಿದ್ದೇವೆ. ಯಾವುದರಲ್ಲಿ? ಎಲ್ಲಾ ರೀತಿಯಲ್ಲಿ. ಇಂತಹ ಒಂದು ಪರಿಸ್ಥಿತಿಯಲ್ಲಿ ತಾವು ಏನು ಹೇಳಿದ್ದೀರಾ ಎಂದರೆ '3Es mantra' .

**ವೈಸ್ ಛೇರ್ಮನ್:–** ಮಾನ್ಯ ಪಿ.ಆರ್. ರಮೇಶ್‌ರವರೇ, ತಾವು ನಾಲ್ಕು ಗಂಟೆ ನಲವತ್ತು ನಿಮಿಷಕ್ಕೆ ತಮ್ಮ ಮಾತನ್ನು ಪ್ರಾರಂಭ ಮಾಡಿದಿರಿ.

**ಶ್ರೀ ಪಿ.ಆರ್. ರಮೇಶ್:–** ತಾವು ತಿಳಿದುಕೊಳ್ಳುತ್ತೀರಾ.

**ವೈಸ್ ಛೇರ್ಮನ್:–** ಒಂದು ನಿಮಿಷ. Listen to me.

**ಶ್ರೀ ಪಿ.ಆರ್. ರಮೇಶ್:–**ಮಾನ್ಯ ಸಭಾಪತಿಯವರೇ, ತಾವು ಹೇಳಿ.

**ವೈಸ್ ಛೇರ್ಮನ್:–** ಮಾನ್ಯ ಪಿ.ಆರ್. ರಮೇಶ್‌ರವರೇ, ತಾವು ಈಗಾಗಲೇ ಇಪ್ಪತ್ತು ನಿಮಿಷಗಳ ಕಾಲ ಮಾತನಾಡಿದ್ದು, ಅಂದರೆ, ಒಟ್ಟು ಮೂವತ್ತು ನಿಮಿಷದಲ್ಲಿ ಹತ್ತು ನಿಮಿಷ less

ಮಾಡಿ, ಇಪ್ಪತ್ತು ನಿಮಿಷಗಳ ಸಮಯವನ್ನು ಪ್ರತಿಯೊಬ್ಬ ಸದಸ್ಯರಿಗೂ ನಿಗದಿ ಮಾಡಿದ್ದೇವೆ. ತಾವು ಒಬ್ಬ ಅನುಭವಿಗಳು, ವೇಗವಾಗಿ ಮಾತನಾಡಬೇಕು. ಇಲ್ಲದಿದ್ದರೆ, ಬೇರೆ ಸದಸ್ಯರಿಗೂ ಮಾತನಾಡುವುದಕ್ಕೆ ನಾನು ಹೆಚ್ಚು ಸಮಯವನ್ನು ಕೊಡಬೇಕಾಗುತ್ತದೆ.

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೇ, ನನ್ನ flow ಅನ್ನು ಕಟ್ ಮಾಡುತ್ತಿದ್ದೀರಾ.

**ವೈಸ್ ಛೇರ್ಮನ್:-** ಮಾನ್ಯ ಪಿ.ಆರ್. ರಮೇಶ್‌ರವರೇ, ತಮ್ಮ ಮಾತನ್ನು ಕಟ್ ಮಾಡುವ ಉದ್ದೇಶ ನಮ್ಮದಲ್ಲ. ತಾವು ಮಾತನಾಡುವುದಕ್ಕೆ ಎಷ್ಟು ಸಮಯಾವಕಾಶ ಬೇಕಾಗುತ್ತದೆ ಎಂಬುದು ಹೇಳಿ. ದಯವಿಟ್ಟು, ಪೀಠಕ್ಕೆ ಸಹಕರಿಸಿ.

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಇನ್ನೂ ಹದಿನೈದು ನಿಮಿಷ ಬೇಕಾಗುತ್ತದೆ.

**ವೈಸ್ ಛೇರ್ಮನ್:-** ಮಾನ್ಯ ಪಿ.ಆರ್. ರಮೇಶ್‌ರವರೇ, ತಮ್ಮ ಮಾತನ್ನು ಐದು ನಿಮಿಷದಲ್ಲಿ ಮುಗಿಸಿ. ಮಾನ್ಯ ಅರವಿಂದ ಕುಮಾರ್ ಅರಳಿಯವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕಾಗಿತ್ತು. ಆದರೆ ಮಾನ್ಯ ಮುಖ್ಯ ಸಚೇತಕರು ಹೇಳಿರುವುದರಿಂದ ತಮಗೆ ಅವಕಾಶವನ್ನು ಕೊಡಲಾಗಿದೆ. ದಯವಿಟ್ಟು, ಪೀಠದ ಜೊತೆ ಸಹಕರಿಸಿ.

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೇ, ತಮಗೆ ಧನ್ಯವಾದಗಳು. ನಾನು ಪ್ರಮುಖ ವಿಚಾರಗಳ ಬಗ್ಗೆ ಮಾತ್ರ ಮಾತನಾಡುತ್ತೇನೆ. ಇವತ್ತು '3Es mantra' ಎನ್ನುವ ಮಂತ್ರವನ್ನು ಓದಿದಿರಿ. 3E ಎಂದರೆ ಏನು? Employment, Education and Empowerment ನಮ್ಮ ರಾಜ್ಯದಲ್ಲಿ ಇವತ್ತು 'Employment' ಇದೆಯಾ; ಯಾವ ರೀತಿ ಉತ್ಪತ್ತಿ ಮಾಡಿಕೊಡುತ್ತೀರಿ? ಅದನ್ನು ಸರಿದೂಗಿಸುವಂತಹದ್ದಕ್ಕೆ ಯಾವ ರೀತಿ ಕಾರ್ಯಕ್ರಮಗಳನ್ನು ತರಲಾಗುತ್ತದೆ ಎಂಬುದನ್ನು ಇದರಲ್ಲಿ ಎಲ್ಲಿಯೂ ಹೇಳಿಲ್ಲ. ಈಗ 'Education' ನಲ್ಲಿ ಆಗಿರುವ ಬಗ್ಗೆ, ಉಕ್ರೇನ್‌ನಲ್ಲಿನ ಪರಿಸ್ಥಿತಿಯನ್ನು ನೋಡುತ್ತಿದ್ದೀರಾ. ನಮ್ಮ ರಾಜ್ಯದಲ್ಲಿ ಸುಮಾರು ಎಂಟು ನೂರು

ಜನರು ಈ ಒಂದು ನೀಟ್‌ಗೆ ಅರ್ಹತೆ ಇದ್ದರೂ ಸಹ ಅವರಿಗೆ ಅವಕಾಶ ಕೊಡದೇ ಇರುವಂತಹ ಸ್ಥಿತಿಯಲ್ಲಿದೆ. ಪಿ.ಯು.ಸಿ.ಯಲ್ಲಿ ಶೇಕಡ ೯೭ ರಷ್ಟು ಅಂಕಗಳನ್ನು ತೆಗೆದುಕೊಂಡರೂ ಸಹ ಸೀಟ್ ಸಿಗದೇ ಇರುವ ಕಾರಣಕ್ಕಾಗಿ ವಿದ್ಯಾರ್ಥಿಗಳು ಇವತ್ತು ಉಕ್ರೇನ್‌ಗೆ ಹೋಗಿ ಓದುತ್ತಿರುವಂತಹದ್ದು. ಅಲ್ಲಿಂದ ನಮ್ಮ ರಾಜ್ಯಕ್ಕೆ ಸುಮಾರು ೮೦೦ ಜನ ವಿದ್ಯಾರ್ಥಿಗಳು ವಾಪಸ್ಸು ಬಂದಿದ್ದಾರೆ. ನಮ್ಮ ರಾಜ್ಯದ ಶಿಕ್ಷಣವಿದು, ಈ ಶಿಕ್ಷಣದ ಬಗ್ಗೆ ಹೇಳುತ್ತಾರೆ. ಅದೇ ತರಹ 'Empowerment' . . . .

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):–** ಮೆರಿಟ್ ಇಲ್ಲದೇ ಇರುವಂತಹವರು ಅಲ್ಲಿಗೆ ಓದುವುದಕ್ಕೆ ಹೋದರು. ಅದರಲ್ಲಿ ತಪ್ಪು ಏನಿದೆ?

**(ಗೊಂದಲ)**

**ವೈಸ್ ಛೇರ್ಮನ್:–** ಮಾನ್ಯ ಪಿ.ಆರ್. ರಮೇಶ್‌ರವರೇ, ತಾವು ಪೀಠದ ಕಡೆ ನೋಡಿಕೊಂಡು ಮಾತನಾಡಿ.

**ಶ್ರೀ ಪಿ.ಆರ್. ರಮೇಶ್:–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಸಮಯವನ್ನು ಕೊಟ್ಟಿದ್ದೀರಾ. ನನಗೆ ಮಾತನಾಡಲು ಅವಕಾಶ ಕೊಡಿ. ಇಂತಹ ಪರಿಸ್ಥಿತಿಯಲ್ಲಿ 'Empowerment' ಕೊಡುತ್ತೇವೆಂದು ಹೇಳುತ್ತಿದ್ದೀರಿ. Empowerment ಅನ್ನು ಇವತ್ತು ಯಾವ ಜನರಿಗೂ ಕೊಡುವಂತಹ ರೀತಿಯಾಗುತ್ತಿಲ್ಲ. ಇವತ್ತು Local Bodies ನಲ್ಲಿ ಇರತಕ್ಕಂತಹ Backward Classes ಗೆ ತೆಗೆದುಹಾಕುತ್ತಿದ್ದೀರಿ. ಅದು ನ್ಯಾಯವೇ? ಅದನ್ನು ತೆಗೆದುಹಾಕಿ ಸರಿಯಾದ ರೀತಿಯಲ್ಲಿ ಅದನ್ನು ತರುವಂತಹದ್ದಕ್ಕೆ ವ್ಯವಸ್ಥೆ ಮಾಡಿ. ಈ ವ್ಯವಸ್ಥೆ ಏಕೆ ಮಾಡಬಾರದು? ಇದನ್ನು ನ್ಯಾಯಾಲಯವೇ ಹೇಳುತ್ತಿದೆ. ಹೌದು, ನಿಮಗೆ datas ಇಲ್ಲದಿರಬಹುದು,...

**ಶ್ರೀ ಎಂ.ಕೆ. ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ...

**ಶ್ರೀ ಪಿ.ಆರ್. ರಮೇಶ್:–** ಮಾನ್ಯ ಸಭಾಪತಿಯವರೇ, ದಯವಿಟ್ಟು, ಸ್ವಲ್ಪ ಇರಿ. ನನ್ನ ಮಾತು ಮುಗಿದ ನಂತರ ತಾವು ಮಾತನಾಡಿ.

**ವೈಸ್ ಛೇರ್ಮನ್:–** ಮಾನ್ಯ ಪಿ.ಆರ್. ರಮೇಶ್‌ರವರೇ, ತಾವು ಪೀಠದ ಕಡೆ ನೋಡಿಕೊಂಡು ಮಾತನಾಡಿ. ಇಲ್ಲವಾದರೆ ತಮ್ಮ ಸಮಯ ಕಡಿತವಾಗುತ್ತದೆ. ಮಾನ್ಯ ಸದಸ್ಯರ ಸಮಯವೂ ವ್ಯರ್ಥವಾಗುತ್ತದೆ.

**ಶ್ರೀ ಪಿ.ಆರ್. ರಮೇಶ್:–** ಮಾನ್ಯ ಸಭಾಪತಿಯವರೇ, ಈಗ Empowerment ಮಾಡುವಂತಹದ್ದಕ್ಕೆ, ಈ ಹಿಂದೆ 73rd and 74th Constitutional Amendment ನಲ್ಲಿ ಅವಕಾಶ ಕೊಟ್ಟಿತ್ತು. ಕರ್ನಾಟಕ ರಾಜ್ಯದಲ್ಲಿ ಯಾವುದೇ ಚ್ಯುತಿ ತರದೇ ಇರುವ ರೀತಿಯಲ್ಲಿ ಮಾಡಿ. ಇವತ್ತು ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು ಕೂಡ ಸದನದಲ್ಲಿ ಇದ್ದಾರೆ. ಅವರು ಮನಸ್ಸು ಮಾಡಿದರೆ, ಆದಷ್ಟು ಬೇಗ datas ತರಬಹುದು. ಅದನ್ನು ಏತಕ್ಕೆ ತರುವುದಕ್ಕಾಗುವುದಿಲ್ಲ? ಇದನ್ನು ತರದೇ ಹಾಗೇ ಚುನಾವಣೆ ನಡೆಸಿಕೊಂಡು ಹೋಗುತ್ತೀರಾ? Backward Classes ಗೆ ಎಲ್ಲಿಯವರೆಗೆ empower ಮಾಡುವುದಿಲ್ಲವೋ, ಅಲ್ಲಿಯವರೆಗೆ ಸುಧಾರಣೆ ಆಗುವುದಿಲ್ಲ. ಇದನ್ನು impossible ಎಂದು ಹೇಳುವುದಕ್ಕಾಗುವುದಿಲ್ಲ. You have that power. ಗತ್ತು ಇರಬೇಕು. ಇದರಿಂದ, ದಯವಿಟ್ಟು, ಮತ್ತೆ upset ಮಾಡುತ್ತೀರಾ?

**(ಈ ಹಂತದಲ್ಲಿ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಮಾತನಾಡಲು ಎದ್ದು ನಿಂತರು)**

**ಶ್ರೀ ಲಹರ್‌ಸಿಂಗ್ ಸಿರೋಯಾ:–** ನಾನು ತಮ್ಮ ಹೆಸರನ್ನು ಹೇಳಲಿಲ್ಲ.

**ಶ್ರೀ ಜೆ.ಸಿ. ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು):–** ಮಾನ್ಯ ಪಿ.ಆರ್. ರಮೇಶ್‌ರವರೇ, Law and Parliamentary Affairs Minister ಎಂದರೆ, ನಾನೇ ಎಂದು ತಿಳಿದುಕೊಂಡಿದ್ದೇನೆ.

(ಮುಂದು)

(434) 17-03-2022 5.10 ಟಿಸಿಹೆಚ್-ಜಿಆರ್ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಜೆ.ಸಿ.ಮಾಧುಸ್ವಾಮಿ (ಮುಂದು):-**

ನಾವು ಹಿಂದುಳಿದ ವರ್ಗದವರ ಪರವಾಗಿದ್ದೇವೆ. ಆದರೆ ಶ್ರೀ ಪಿ.ಆರ್.ರಮೇಶ್ ರವರು ನಾವು ವಿರುದ್ಧವಾಗಿದ್ದೇವೆಂದು ಏಕೆ ಭಾಷಣ ಮಾಡುತ್ತಿದ್ದಾರೋ ನನಗೆ ಅರ್ಥವಾಗುತ್ತಿಲ್ಲ. ವಾಸ್ತವವಾಗಿ ಅಲ್ಲಿ What is the relation to the Karnataka? ಆ ಸಂಬಂಧ ಸುಪ್ರೀಂ ಕೋರ್ಟ್ ಜಡ್ಜ್ ಮೆಂಟ್ ಕೂಡ ಆಗಿದೆ. Please, ನಾವು ಅವರ ಮೇಲೆ ಹೆಚ್ಚು ಗೌರವವನ್ನಿಟ್ಟುಕೊಂಡು ಮಾತನಾಡುತ್ತಿದ್ದೇವೆ. Don't misguide the House. ಕೋರ್ಟ್ ಡಿಸಿಷನ್ ಗೂ ನಮಗೂ ಸಂಬಂಧವೇ ಇಲ್ಲ. ನಾವೇನು ಸುಪ್ರೀಂ ಕೋರ್ಟ್ ಮುಂದೆ ಪಾರ್ಟಿ ಇದ್ದೇವೆಯೇ. ಸುಪ್ರೀಂ ಕೋರ್ಟ್ ಮುಂದೆ ಮಹಾರಾಷ್ಟ್ರದವರು ಪಾರ್ಟಿ ಇದ್ದಾರೆ. ಅವರಿಗೆ ಜಡ್ಜಮೆಂಟ್ ಕೊಟ್ಟಿರುವುದು ನಮಗೂ ಅನ್ವಯವಾಗುತ್ತದೆ. ನಾವು ಈಗಾಗಲೇ ಡಾಟಾ ಕಲೆಕ್ಟ್ ಮಾಡಿದ್ದೇವೆ. ಎಲ್ಲೆಲ್ಲಿ ಏನೇನು ಮಾಡಬೇಕೆಂದು ಗೈಡ್‌ಲೈನ್ಸ್ ಮಾಡಿಕೊಂಡು ಈಗಾಗಲೇ 2 ರಿಂದ 3 ಸಿಟ್ಟಿಂಗ್ ಮಾಡಿದ್ದೇವೆ. ಹೇಗಾದರೂ ಸರಿಯೇ ಅದನ್ನು ಮಾಡಿದ ನಂತರವೇ ಎಲೆಕ್ಷನ್‌ಗೆ ಹೋಗಬೇಕೆಂದು ಡಿಸಿಷನ್ ತೆಗೆದುಕೊಂಡವರನ್ನು, ನೀವು ನಮ್ಮನ್ನು 'ವಿರೋಧಿಗಳು' ಎಂದು ಬಿಂಬಿಸುವುದಕ್ಕೆ ಶುರು ಮಾಡಿದರೆ ಹೇಗೆ? ಆ ರೀತಿ ಹೇಳಿದರೆ ನಮಗೂ ಕೂಡ ನೋವಾಗುತ್ತದೆ. Will you go for election without reservation? ಅದು ಆಗಲೇಬೇಕೆಂದು ನಾವು ಕೂಡ ಸುಮಾರು 2 ರಿಂದ 3 ಬಾರಿ ಸಿಟ್ಟಿಂಗ್ ಮಾಡಿದ್ದೇವೆ. ಸುಪ್ರೀಂ ಕೋರ್ಟ್ ಗೈಡ್‌ಲೈನ್ಸ್ ನೋಡಿಕೊಂಡು ಮಾಡುತ್ತೇವೆ, ನಾವು ಮಾಡುವುದಿಲ್ಲ ಎನ್ನುವುದಕ್ಕೆ ಆಗುತ್ತದೆಯೇ?

**ವೈಸ್ ಛೇರ್ಮನ್:-** ಮಾನ್ಯ ಪಿ.ಆರ್.ರಮೇಶ್‌ರವರೇ, ತಾವು 2 ನಿಮಿಷಗಳಲ್ಲಿ ಮುಗಿಸಬೇಕು. ನೀವು ಯೀಲ್ಡ್ ಆದರೆ ಬೇರೆಯವರು ಮಾತನಾಡುತ್ತಾರೆ.

**ಶ್ರೀ ಪಿ.ಆರ್.ರಮೇಶ್ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ನೀವು ಅವರನ್ನು ಅಲೋ ಮಾಡುತ್ತಿದ್ದೀರಿ. ನಾನೇನು ಯೀಲ್ಡ್ ಆಗುವುದಿಲ್ಲ.

**ವೈಸ್ ಚೇರ್ಮನ್:–** ಮಾನ್ಯ ಪಿ.ಆರ್.ರಮೇಶ್‌ರವರೇ, ನೀವು seasoned speaker ಅದಕ್ಕೆ ನೀವು ಸ್ಕೋಪ್ ಕೊಡಬೇಡಿ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಬಹಳ ಮುಖ್ಯವಾದ ವಿಚಾರವೇನೆಂದರೆ, 4ನೇ ಹಣಕಾಸಿನ ಆಯೋಗವು ಸರ್ಕಾರಕ್ಕೆ ಒಂದು ರೆಕಮಂಡೇಷನ್ ಮಾಡಿದೆ. ಅದರಲ್ಲಿ ಲೋಕಲ್ ಬಾಡೀಸ್ ಅಂದರೆ Panchayat Raj Institution ಗೆ ನೀವು ಶೇ.32 ರಿಂದ 35 ಕೊಡಬೇಕೆಂದು ರೆಕಮಂಡೇಷನ್ ಮಾಡಿದ್ದಾರೆ. ಅದರ ಜೊತೆಗೆ U.L.Bs., ಗೆ ಶೇ.10 ರಿಂದ 12 ಕೊಡಬೇಕೆಂದು ರೆಕಮಂಡೇಷನ್ ಮಾಡಿದ್ದಾರೆ. ಈ ಹಿಂದೆ ಸನ್ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದಾಗ ಆಯೋಗವು ತನ್ನ ಶಿಫಾರಸ್ಸನ್ನು 2018–19 ರಿಂದ 2022–23ನೇ ಸಾಲಿನವರೆಗೂ ಐದು ವರ್ಷದ ಅವಧಿಗೆ ಅನ್ವಯವಾಗುವಂತೆ ಸಲ್ಲಿಸಿದೆ. 4ನೇ ಹಣಕಾಸು ಆಯೋಗವು ಈ ಕೆಳಕಂಡ ಅಂಶಗಳನ್ನು ತನ್ನ ವರದಿಯಲ್ಲಿ ಶಿಫಾರಸ್ಸು ಮಾಡಿದೆ. ರಾಜ್ಯದಲ್ಲಿ ಸ್ವಂತ ತೆರಿಗೆಯಲ್ಲಿ ಸ್ಥಳೀಯ ಸಂಸ್ಥೆಗಳ ಪಾಲನ್ನು ರಾಜ್ಯ ಸರ್ಕಾರ ರಾಜ್ಯ ಸಾಲ ರಹಿತ ಸ್ವಂತ ರಾಜಸ್ವ ಸ್ಥಿತಿಯಲ್ಲಿ net revenue receipt ಆಧಾರದ ಮೇಲೆ ನಿರ್ಧರಿಸಲಾಗುತ್ತಿದೆ. ಅದರಂತೆ ಸ್ವಂತ ತೆರಿಗೆಯಲ್ಲಿ ಸ್ಥಳೀಯ ಸಂಸ್ಥೆಗಳ ಪಾಲನ್ನು ಶೇ.42 ರಿಂದ 48ಕ್ಕೆ ಹೆಚ್ಚಿಸಲು ಶಿಫಾರಸ್ಸು ಮಾಡಿದೆ. ಅಂದರೆ ಐದು ವರ್ಷದ ಅವಧಿಗೆ ಪಂಚಾಯತ್ ರಾಜ್ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಒಟ್ಟು ರಾಜಸ್ವ 48 ರಷ್ಟು ಶಿಫಾರಸ್ಸನ್ನು 2018–19 ರಿಂದ 2022–23ರವರೆಗೆ ಐದು ವರ್ಷದ ಅವಧಿಗೆ ಹಂತ ಹಂತವಾಗಿ ಅನುಷ್ಠಾನಗೊಳಿಸಲು ಸರ್ಕಾರ ನಿರ್ಧರಿಸಿತ್ತು. 2018–19 ರಲ್ಲಿ ಸರ್ಕಾರ ಏನು ಒಪ್ಪಿಕೊಂಡಿತ್ತು. ಆದರೆ ಇವತ್ತಿನವರೆಗೆ ಎಲ್ಲಾ ಸೇರಿ ಕೇವಲ ಶೇ.16.5 ರಷ್ಟು ಕೊಟ್ಟಿದ್ದಾರೆ. ಅಂದರೆ you have not fulfilled the recommendation of the State Finance Commission. ಇವತ್ತಿನ ದಿವಸ ನೀವು ಬೆಂಗಳೂರು ಮಹಾನಗರ ಪಾಲಿಕೆಗೆ ಶೇ.1ರಷ್ಟು ಅಡಿಷನಲ್ ಆಗಿ ಕೊಡಬೇಕೆಂದು recommend ಮಾಡಿದೆ. ಇದರ ಜೊತೆಗೆ ಶೇ.12 ಅರ್ಬನ್ ಲೋಕಲ್ ಬಾಡೀಸ್‌ಗೆ ಕೊಡಬೇಕು ಎಂದು ಹೇಳಿದೆ. ಅದನ್ನೂ ಕೂಡ ನೀವು ಕೊಡುತ್ತಿಲ್ಲ. Panchayat Raj Institutions ಗೂ ಕೂಡ ನೀವು ಕೊಡುತ್ತಿಲ್ಲ. ಆ ಆಯೋಗ ಏನು ರೆಕಮಂಡ್ ಮಾಡಿದೆಯೋ ಆ ರೆಕಮಂಡೇಷನ್ ಪ್ರಕಾರ ನೀವು ಯಾವುದೇ ರೀತಿಯಲ್ಲೂ

ಅನುಷ್ಠಾನಕ್ಕೆ ತಂದಿರುವುದಿಲ್ಲ. ಇದನ್ನು ನಾನು ಕೊಟ್ಟಿರುವುದಲ್ಲ, ರೆಕಾರ್ಡ್‌ನಲ್ಲಿ ಇರುವುದನ್ನು ಹೇಳುತ್ತಿದ್ದೇನೆ. ನಾನೇನು ಸ್ವಂತವಾಗಿ ಸೃಷ್ಟಿ ಮಾಡಿ ಹೇಳುತ್ತಿಲ್ಲ. ಇಂತಹ ಒಂದು ಪರಿಸ್ಥಿತಿಯಲ್ಲಿ ನೀವು ಅರ್ಬನ್ ಅಥವಾ ರೂರಲ್ ಲೋಕಲ್ ಬಾಡೀಸ್‌ನ್ನು strengthen ಮಾಡುವುದಕ್ಕೆ ಯಾವ ರೀತಿ ಆಗುತ್ತದೆ. ಕೆಳಭಾಗದಲ್ಲಿ ಕಾರ್ಯಕ್ರಮಗಳನ್ನು ನೀವು percolate ಮಾಡುವುದಕ್ಕೆ ಎಲ್ಲಿ ಸಾಧ್ಯವಾಗುತ್ತದೆ? ನಿಮಗೆ ಒಂದು ಮಾಹಿತಿಗೆ ಹೇಳುವುದಾದರೆ, ನಾನು ನಿನ್ನೆ ಅಥವಾ ಮೊನ್ನೆ ದಿವಸ ಒಂದು ಪ್ರಶ್ನೆ ಕೇಳಿದ್ದೆನು. District Planning Committee ಯನ್ನು ನಿಮ್ಮಲ್ಲಿ ಮಾಡಿದ್ದೀರಾ? In 73rd and 74th Constitutional Amendment it is mandatory. It is a must. ಆದರೆ ಇವತ್ತಿನವರೆಗೂ ಸರ್ಕಾರ ಆ ಸಮಿತಿಯನ್ನು constitute ಮಾಡಿಲ್ಲ. ಒಂದೆರಡು ಕಡೆ ಕಮಿಟಿ constitute ಮಾಡಿದ್ದಾರೆ, ಅಲ್ಲಿ ಒಂದು ಸಭೆ ಕೂಡ ಮಾಡಿಲ್ಲವೆಂದು ನನಗೆ ಉತ್ತರ ಕೊಟ್ಟಿದ್ದಾರೆ. ಇಂತಹ ಒಂದು ಪರಿಸ್ಥಿತಿಯಲ್ಲಿ ನೀವು ಯಾವುದೇ ಯೋಜನಾಬದ್ಧವಾದ ಯೋಜನೆಗಳನ್ನು ಕೊಡುತ್ತಿಲ್ಲ.

**ವೈಸ್ ಛೇರ್ಮನ್:-** ಮಾನ್ಯ ಪಿ.ಆರ್.ರಮೇಶ್‌ರವರೇ, ತಮ್ಮ ಸಮಯ ಮುಗಿಯಿತು.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ದಯವಿಟ್ಟು ನಾನು ಸರ್ಕಾರಕ್ಕೆ ವಿನಂತಿ ಮಾಡುವುದೇನೆಂದರೆ, ವೋಲ್ವೋ ಕಂಪನಿ ಇದೆ. ನನಗೆ ಅನಿಸುವುದೇನೆಂದರೆ, ಇದು ಮಾನ್ಯ ಮುನ್ಸಿಪಾಲಿಟಿ ಮಿನಿಸ್ಟರ್‌ಗೂ ಗೊತ್ತಿದೆ. ಇವತ್ತು ಆ ವೋಲ್ವೋ ಕಂಪನಿಯವರಿಗೆ deferred payment of tax ನ್ನು 1998ರಲ್ಲಿ ಕೊಟ್ಟಿದ್ದೀರಿ. 1998 ರಿಂದ ಸುಮಾರು 18 ವರ್ಷಗಳ ಕಾಲ deferred payment ಗೆ ನೀವು ಅವರಿಗೆ ಒಂದು ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಅದರ ಉದ್ದೇಶವೇನೆಂದರೆ to develop their industries in our State. ಆದರೆ ಆ ಅವಧಿ ಮುಗಿದ ನಂತರ ರೂ.1500 ಕೋಟಿಗಳನ್ನು ಸರ್ಕಾರಕ್ಕೆ ವಾಪಸ್ಸು ಕಟ್ಟಬೇಕು. ಆದರೆ 2018 ರಿಂದ ಇವತ್ತಿನವರೆಗೆ ರೂ.1500 ಕೋಟಿಗಳನ್ನು ನೀವು ವಸೂಲಿ ಮಾಡುತ್ತಿಲ್ಲ. ನೀವು ಹಾಗೆಯೇ ಬಿಟ್ಟುಬಿಟ್ಟಿದ್ದೀರಿ. ಅವರು ಒಂದಲ್ಲ ಒಂದು ರೀತಿಯಲ್ಲಿ ನಿಮ್ಮ ಮೇಲೆ ಒತ್ತಡ ತರುತ್ತಿದ್ದಾರೆ. ಆ ಒತ್ತಡಕ್ಕೆ

ಸರ್ಕಾರ ಯಾವ ರೀತಿ ಮಣಿಯುತ್ತದೋ ಗೊತ್ತಿಲ್ಲ. ಆದರೆ ಇವತ್ತಿನ ದಿವಸ ಆ ಹಣವನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುತ್ತಿಲ್ಲ.

**ವೈಸ್ ಛೇರ್ಮನ್:–** ಶ್ರೀ ಪಿ.ಆರ್.ರಮೇಶ್‌ರವರೇ, ತಾವು co–operate ಮಾಡಲೇಬೇಕು. ಈಗಾಗಲೇ ಸಮಯ ಆಗಿದೆ, ಈ ರೀತಿ ಮಾತನಾಡುತ್ತಾ ಹೋದರೆ ಸದನ ನಡೆಸುವುದು ಕಷ್ಟ ಆಗುತ್ತದೆ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಬೆಂಗಳೂರು ನಗರದ ಸಮಸ್ಯೆ ಬಗ್ಗೆ ಮಾತನಾಡಬೇಕು.

**ವೈಸ್ ಛೇರ್ಮನ್:–** ಶ್ರೀ ಪಿ.ಆರ್.ರಮೇಶ್ ರವರೇ, ನಾನು ಬೇರೆಯವರಿಗೆ ಮಾತನಾಡಲು ಅವಕಾಶ ಕೊಡಬಾರದೇ? ನಿಮಗೆ ಬೇರೆ ಬೇರೆ ಸಂದರ್ಭಗಳಲ್ಲಿ ಮಾತನಾಡುವುದಕ್ಕೆ ಅವಕಾಶ ಸಿಗುತ್ತದೆ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಎರಡು ನಿಮಿಷ ಬೆಂಗಳೂರಿನ ಬಗ್ಗೆ ಹೇಳಬೇಕು.

**ವೈಸ್ ಛೇರ್ಮನ್:–** ಶ್ರೀ ಪಿ.ಆರ್.ರಮೇಶ್ ರವರೇ, ಈಗ ಸಮಯ ಇಲ್ಲ, ನಾನು ನಿಮಗೆ ಮಾತನಾಡಲು ಸಾಕಷ್ಟು ಸಮಯ ಕೊಟ್ಟಿದ್ದೇನೆ. ಮಾನ್ಯ ಪ್ರತಾಪ್ ಸಿಂಹ ನಾಯಕ್.ಕೆ ರವರೇ ತಾವು ಮಾತನಾಡಿ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ನೀವು ಅವರಿಗೆ ಅವಕಾಶ ಕೊಟ್ಟಿದ್ದೀರಿ.

**ವೈಸ್ ಛೇರ್ಮನ್:–** ಮಾನ್ಯ ಪಿ.ಆರ್.ರಮೇಶ್ ರವರೇ, ಈಗ ನಾನು ಅವರ ಹೆಸರನ್ನು ಕರೆದಿದ್ದೇನೆ. ನೀವು ಈ ಪೀಠದ ಜೊತೆ ದೂಷಣೆ ಮಾಡಿದರೆ ಏನು ಮಾಡುವುದಕ್ಕೆ ಆಗುವುದಿಲ್ಲ. ನೀವು ಹಠ ಮಾಡಬೇಡಿ. ತಮ್ಮ ಎದುರುಗಡೆಯೇ ಸದನ ನಡೆಯುತ್ತಿದೆ. ದಯವಿಟ್ಟು ನೀವು ಬೇರೆ ಸಂದರ್ಭದಲ್ಲಿ ಮಾತನಾಡಿ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಈ ವರ್ಷ ಬಜೆಟ್‌ನಲ್ಲಿ ಬೆಂಗಳೂರಿಗೆ ಸರ್ಕಾರ ರೂ.8,600 ಕೋಟಿಗಳನ್ನು ಕೊಟ್ಟಿದೆ. ಕಳೆದ ವರ್ಷ ಸರ್ಕಾರ ರೂ.7795 ಕೋಟಿಗಳನ್ನು ಕೊಟ್ಟಿದ್ದಾರೆ. ಈ ಹಿಂದೆ ಕೊಟ್ಟಂಥ ಹಣದಿಂದ ಯಾವ್ಯಾವ ಕಾರ್ಯಕ್ರಮಗಳಾಗಿದೆ, ಆ ಹಣ ಎಲ್ಲಿಗೆ ಹೋಗಿದೆ ಎಂದು ಗೊತ್ತಿಲ್ಲ, ಅದರ ಬಗ್ಗೆ ಯಾವುದೂ ಅಂಕಿ-ಅಂಶಗಳನ್ನು ಕೊಡುವುದೇ ಇಲ್ಲ. ಆದರೆ ಸರ್ಕಾರ ಈ ವರ್ಷ ರೂ.8600 ಕೋಟಿಗಳನ್ನು ಹೊಸದಾಗಿ ಕೊಡುತ್ತಿದ್ದಾರೆ. ಇಲ್ಲಿ ಏನಾಗುತ್ತದೆಂದರೆ, KUIDFC ಯಿಂದ ತೆಗೆದುಕೊಳ್ಳತಕ್ಕಂಥ ಲೋನ್ ಇರಬಹುದು, ಪಾಲಿಕೆಯಿಂದ ಶೇ.25 ರೂ.200 ಕೋಟಿಗಳನ್ನು ತೆಗೆದುಕೊಳ್ಳುತ್ತೀರಿ. ಇನ್ನು ಮಿಕ್ಕಿದ್ದು ಸರ್ಕಾರದಿಂದ ಕೊಡತಕ್ಕಂಥದ್ದು. ಆದರೆ ಇಲ್ಲಿ ಏನಾಗುತ್ತದೆಂದರೆ, ನೀವು ರೂ.200 ಕೋಟಿಗಳನ್ನು ಇಟ್ಟುಕೊಂಡು ಟೆಂಡರ್ ಕರೆದು ಕೊಟ್ಟುಬಿಡುತ್ತೀರಿ. ಆ ಟೆಂಡರ್ ಕೊಟ್ಟಂಥ ಕಾಂಟ್ರಾಕ್ಟರ್ ಏನು ಮಾಡುತ್ತಾನೆಂದರೆ, ಬರೀ ರೂ.200 ಕೋಟಿಗಳು ಇರತಕ್ಕಂಥ ಹಣದಲ್ಲಿ, ನೀವು ಸಂಪೂರ್ಣವಾಗಿ ರೂ.8,000 ಕೋಟಿಗಳಿಗೆ ಟೆಂಡರ್ ಕರೆಯುತ್ತಾರೆ. ಅವನು ಯಾವಾಗ ಮಾಡುತ್ತಾನೋ ಏನೋ ಗೊತ್ತಿಲ್ಲ. ಆದರೆ ಆ ಒಂದು ಸ್ಕೀಂಗೆ ಹಣ ಬಿಡುಗಡೆ ಮಾಡತಕ್ಕಂಥದ್ದು KUIDFC ಯಿಂದ ಕೊಡತಕ್ಕಂಥ ಲೋನ್ ಮತ್ತು ಸರ್ಕಾರದಿಂದ ಕೊಡತಕ್ಕಂಥ ಲೋನ್. ಅದನ್ನು ಅದೆಷ್ಟು ವರ್ಷ ಕೊಡುತ್ತಾರೋ ಗೊತ್ತಿಲ್ಲ. ಆದರೆ ಈ ಒಂದು ಹಣವನ್ನಿಟ್ಟುಕೊಂಡು ಟೆಂಡರ್ ಕರೆಯುತ್ತಾರೆ. ಹಾಗಾಗಿ, ಬೆಂಗಳೂರಿನಲ್ಲಿ storm water drains ಗೆ ರೂ.1500 ಕೋಟಿಗಳನ್ನು ಕೊಟ್ಟಿದ್ದಾರೆ. ನಾನು ಬಿಬಿಎಂಪಿಯಲ್ಲಿ ಮೇಯರ್ ಇದ್ದಾಗ ರೂ.360 ಕೋಟಿಗಳು re-modelling of storm water drain ಎಷ್ಟಿಮೇಟ್ ಆಯಿತು. ಅವೊತ್ತು ಅಷ್ಟಕ್ಕೆ ಆಗಿತ್ತು. ನೀವು ನರ್ಮ್‌ನಲ್ಲಿ ಸೇರಿಸಿದಾಗ ರೂ. 900 ಕೋಟಿ ರೂಪಾಯಿಗಳಾಯಿತು. ಇವತ್ತಿನ ದಿವಸ ಆ 900 ಕೋಟಿಗಳಲ್ಲಿ ಎಲ್ಲಾ ಮುಗಿದು ಹೋಗಿದೆ. ಅದರ ಜೊತೆಗೆ ಈಗ ಮತ್ತೆ ರೂ. 1500 ಕೋಟಿಗಳನ್ನು ಕೊಟ್ಟಿದ್ದಾರೆ.

**ವೈಸ್ ಚೇರ್ಮನ್:-** ಮಾನ್ಯ ಪಿ.ಆರ್.ರಮೇಶ್ ರವರೇ, ತಾವು ಚಿಕ್ಕ ಮಕ್ಕಳಂತೆ ಹಟ ಮಾಡುವುದಕ್ಕೆ ಆಗುವುದಿಲ್ಲ. ನಾವೆಲ್ಲಾ ಕರ್ತವ್ಯ ಮಾಡಬೇಕಲ್ಲವೇ. ತಾವು ಸಹಕರಿಸದಿದ್ದರೆ ಹೇಗಾಗುತ್ತದೆ?

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ storm water drains ಗೆ ಸಾಕಷ್ಟು ಹಣ ಖರ್ಚು ಮಾಡುವುದಕ್ಕೆ ಸರ್ಕಾರ ಹೊರಟಿದೆ. ಆದರೆ ಇವತ್ತಿಗೂ ಅಲ್ಲಿ ಏನು flood ಆಗತಕ್ಕಂಥದ್ದು ನಿಂತಿಲ್ಲ. ಹಾಗಾಗಿ, ಬೆಂಗಳೂರು ಮಹಾನಗರ ಪಾಲಿಕೆ ಜನ ಕಂದಾಯವನ್ನು ಕಟ್ಟುತ್ತಿದ್ದಾರೆಯೇ ಹೊರತು, ಕ್ರಮಬದ್ಧವಾದ ಯೋಜನಾಬದ್ಧವಾದ ಯಾವುದೇ ಕಾರ್ಯಕ್ರಮಗಳು ನಡೆಯುತ್ತಿಲ್ಲ. ಆಮೇಲೆ 'ಪುಣ್ಯ ಕೋಟಿ' ಎಂದು ಹೇಳಿದ್ದಾರೆ. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಬೀಫ್ ಎಲ್ಲೆಲ್ಲಿಗೆ ಹೋಗುತ್ತಿದೆಯೆಂದರೆ, . .

**ವೈಸ್ ಚೇರ್ಮನ್:–** ಮಾನ್ಯ ಪಿ.ಆರ್.ರಮೇಶ್‌ರವರೇ, ದಯವಿಟ್ಟು ಮಾತನಾಡಿದ್ದು ಸಾಕು. ಮಾನ್ಯ ಪ್ರತಾಪ್ ಸಿಂಹ ನಾಯಕ್.ಕೆ ರವರು ಮಾತನಾಡಿ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ನಾನು ಇರುವ ವಿಚಾರವನ್ನು ಹೇಳುತ್ತಿದ್ದೇನೆ. ನಾನು 'ಬೀಫ್' ಎಂದು ಹೇಳಿದ ತಕ್ಷಣವೇ ಮಾತನಾಡಿದ್ದು ಸಾಕು ಎಂದು ಹೇಳುತ್ತಿದ್ದೀರಿ. ಇವತ್ತಿನ ದಿವಸ ಎಷ್ಟು ಒಳ್ಳೊಳ್ಳೆಯ ಗೋವುಗಳನ್ನು ಸಾಯಿಸುತ್ತಿದ್ದಾರೆ ಗೊತ್ತೇ. ಆ ಗೋವುಗಳನ್ನು ಸಾಯಿಸತಕ್ಕಂಥ ಜನರೇ ಬೇರೆ. ಮುಂಚೆ ಬೇರೆ ಜನ ಇದ್ದರು.

**(ಗೊಂದಲ)**

**ವೈಸ್ ಚೇರ್ಮನ್:–** ಮಾನ್ಯ ಪಿ.ಆರ್.ರಮೇಶ್‌ರವರೇ, ತಾವು ಸರ್ಕಾರದ ಜೊತೆ ಗುದ್ದಾಡುವುದಕ್ಕೆ ತುಂಬಾ ಸಮಯ ಇದೆ. You are capable of it. ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಮಾತನಾಡಬೇಕು.

**(ಗೊಂದಲ)**

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಗೋ ರಕ್ಷಣೆ ಮಾಡುವುದು 'ಪುಣ್ಯಕೋಟಿ' ಎಂದು ಹೇಳುತ್ತಾರೆ. ಆದರೆ ಪುಣ್ಯ ಕೋಟಿ ಎಂದರೆ ಗೋ ರಕ್ಷಣೆ ಅಲ್ಲ. ಇಲ್ಲಿ ಅವುಗಳನ್ನು ಸಾಯಿಸತಕ್ಕಂಥದ್ದೇ ಒಂದು ದೊಡ್ಡ ಕಾರ್ಯಕ್ರಮಗುತ್ತಿದೆ. ಅದರ ಬಗ್ಗೆ ಹೇಳುತ್ತೇನೆ. ನೀವು ಏಕೆ ಸುಮ್ಮನೆ . . .

**ವೈಸ್ ಛೇರ್ಮನ್:-** ಮಾನ್ಯ ವಿರೋಧ ಪಕ್ಷದ ನಾಯಕರು ಈಗ ನಮ್ಮ ನೆರವಿಗೆ ಬರಬೇಕು.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಅದಕ್ಕಾಗಿ ದಯವಿಟ್ಟು ತಾವು ವಿಚಾರಗಳನ್ನು ತಿಳಿದುಕೊಳ್ಳಿ. ನಾನು ಪುಣ್ಯಕೋಟಿ ವಿಷಯದ ಬಗ್ಗೆ ಹೇಳುತ್ತಿದ್ದೇನೆ.

**ವೈಸ್ ಚೇರ್ಮನ್:-** ಮಾನ್ಯ ಪಿ.ಆರ್.ರಮೇಶ್‌ರವರೇ, ಒಂದು ನಿಮಿಷ. ಈಗ ಪ್ರತಿಯೊಬ್ಬ ಸದಸ್ಯರು ಐದೈದು ನಿಮಿಷ ಮಾತನಾಡುತ್ತೇನೆಂದು ಒಂದೊಂದು ಗಂಟೆ ಮಾತನಾಡಿದರೆ ಯಾವ ರೀತಿ ಸಮಯ ಕೊಡಬೇಕೆಂದು ನೀವೇ ಹೇಳಿಬಿಡಿ. ಮಾನ್ಯ ಸಭಾಪತಿಯವರೇ, ರಾತ್ರಿ 10 ಗಂಟೆಯವರೆಗೆ ಸದನ ನಡೆಸಿದರೂ ನಾನು ಕೇಳುವುದಕ್ಕೆ ತಯಾರಿದ್ದೇನೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ನನಗೆ ಸಮಯ ಕೊಟ್ಟಿದ್ದರೆ ಇಷ್ಟು ಹೊತ್ತಿಗೆ ನನ್ನ ಮಾತುಗಳು ಮುಗಿಯುತ್ತಿತ್ತು.

**ವೈಸ್ ಛೇರ್ಮನ್:-** ಮಾನ್ಯ ಪಿ.ಆರ್.ರಮೇಶ್‌ರವರೇ, ನನಗೆ ಏನೂ ಅಭ್ಯಂತರವಿಲ್ಲ. ನಾನು ಕುಳಿತುಕೊಳ್ಳುವುದಕ್ಕೆ ತಯಾರಿದ್ದೇನೆ. ನೀವು ಚರ್ಚೆ ಮಾಡಿ, ಹೇಳಿ. ಈಗ ತಾವು ಸಂಜೆ 4 ಗಂಟೆ 40 ನಿಮಿಷಕ್ಕೆ ತಮ್ಮ ಭಾಷಣ ಪ್ರಾರಂಭಿಸಿದ್ದೀರಿ. ಅದರಲ್ಲಿ ನಾನು 10 ನಮಿಷಗಳು ಲೆಸ್ ಮಾಡಿದ್ದೇನೆ. ಇನ್ಯಾವ ರೀತಿ ಮಾಡಬೇಕು ಹೇಳಿ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಗೋ ಮಾಂಸ ಮಾರಾಟ ಮಾಡುವುದು ಹಾಗೂ ಗೋ ಹತ್ಯೆ ಮಾಡುವುದನ್ನು ನಿಷೇಧ ಮಾಡಿದ್ದೇವೆ. ಆದರೆ ಗೋ ಮಾಂಸ ಬೆಂಗಳೂರಿನಲ್ಲೇ ಜನರಿಗೆ ಸಲೀಸಾಗಿ ಸಿಗುತ್ತಿದೆ ಅಲ್ಲವೇ?

**(ಮುಂದು)**

(435)17.3.2022/5.20/ಎಂ.ಎಂ-ಎಂ.ಡಿ (ವೈಸ್ ಚೇರ್ಮನ್ ಉಪಸ್ಥಿತಿ)

**ಶ್ರೀ ಪಿ.ಆರ್. ರಮೇಶ್ (ಮುಂದು):-**

ಆದರೆ ಎಲ್ಲಿಂದ ಬರುತ್ತಿದೆ ಎಂಬುದು ಗೊತ್ತಿಲ್ಲ. ಅದು ಒಳ್ಳೆಯ ಟೆಂಡರ್ ಇದೆ, ಅಂದರೆ ಬಲಿತಿರುವುದಲ್ಲ. ತಿಂದವರು ಹೇಳುತ್ತಾರೆ. ಇವತ್ತು ಗೋವಾಗೆ ಪ್ರತಿ ದಿನ 2,000 ಕೆ.ಜಿ. ಗೋ ಮಾಂಸಹೋಗುತ್ತಿದೆ. ಕೇರಳ ರಾಜ್ಯಕ್ಕೆ 1,000 ಕೆ.ಜಿ; ಅದು ಎಲ್ಲಿಂದ ಹೋಗುತ್ತಿದೆ? ಯಾರು ಸಾಯಿಸುತ್ತಿದ್ದಾರೆ ಎಂಬುದು ನನಗೆ ಅರ್ಥವಾಗುತ್ತಿಲ್ಲ.

**ವೈಸ್ ಚೇರ್ಮನ್:-** ಏನು ಮಾಡಬೇಕೆಂದು ಹೇಳಿ. ಸರ್ಕಾರಕ್ಕೆ ಏನು ಕಣ್ಣು ತೆರೆಯಬೇಕು ಅದನ್ನು ಹೇಳಿ.

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೇ, ಗೋವಿನ ಹೆಸರಿನಲ್ಲಿ ಮತವನ್ನು ಪಡೆಯುತ್ತಾರೆ. ಪುಣ್ಯಕೋಟಿಗೆ ಕಾರ್ಯಕ್ರಮವನ್ನು ರೂಪಿಸುತ್ತೀರಿ. ಆದರೆ ಗೋ ಹತ್ಯೆ ಮಾತ್ರ ಅಷ್ಟೇ ಆಗುತ್ತಿದೆ. ತಿನ್ನುವವರು ಅಷ್ಟೇ ಆಗುತ್ತಿದ್ದಾರೆ. ಗೋ ಮಾಂಸ ಎಲ್ಲಿಂದ ಬರುತ್ತಿದೆ? ಆಕಾಶದಿಂದ ಬೀಳುತ್ತಿದೆಯೇ? ಇದನ್ನು ತಡೆಯುತ್ತಿರುವವರು ಕೆಲವರು ಮಾತ್ರ.

**ವೈಸ್ ಚೇರ್ಮನ್:-** ಮಾನ್ಯ ರಮೇಶ್‌ರವರೇ, ಇದನ್ನು ಹೇಳಲು ಇನ್ನೊಂದು ಸಂದರ್ಭವನ್ನು ತೆಗೆದುಕೊಳ್ಳಿ. ಮಾನ್ಯ ಪ್ರತಾಪಸಿಂಹ ನಾಯಕರೇ, ತಾವು ಮಾತನಾಡುತ್ತೀರೋ ಅಥವಾ ಬೇರೆಯವರನ್ನು ಕರೆಯಲೇ?

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೇ, ಒಂದೇ ನಿಮಿಷ ಇದು ತುಂಬಾ ಸಿಂಪಲ್. ಇವತ್ತು ಇದನ್ನು ತಡೆಯುತ್ತಿದ್ದವರು ಇನ್ನೊಂದು section ಆಗಿದ್ದಾರೆ. ಮೇಲ್ವರ್ಗದ section ನಲ್ಲಿ ಕಡಿಯುತ್ತಿದ್ದಾರೆ.

**ವೈಸ್ ಚೇರ್ಮನ್:-** ಮಾನ್ಯ ರಮೇಶ್‌ರವರೇ, ಆಯಿತು. ಮಾನ್ಯ ಪ್ರತಾಪಸಿಂಹ ನಾಯಕರೇ, ಮಾತನಾಡಿ.

**ಶ್ರೀ ಪ್ರತಾಪಸಿಂಹ ನಾಯಕ್.ಕೆ:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಪಿ.ಆರ್. ರಮೇಶ್:–** ಮಾನ್ಯ ಸಭಾಪತಿಯವರೇ, ಒಂದೇ ನಿಮಿಷದಲ್ಲಿ ಮುಗಿಸಿಬಿಡುತ್ತೇನೆ.

**ವೈಸ್ ಚೇರ್ಮನ್:–** ಮಾನ್ಯ ರಮೇಶ್‌ರವರೇ, ತಾವು ಚೆನ್ನಾಗಿ ಮಾತನಾಡಿದ್ದೀರಿ. ಸರ್ಕಾರಕ್ಕೆ ಬೇಕಾದಷ್ಟು ಸಮಯ ಸಿಗುತ್ತದೆ. ಕೊನೆಯಲ್ಲಿ ನೀವು ಡಿಬೇಟ್ ಹುಟ್ಟಿ ಹಾಕಿದರೆ ನಾನು ಸಮಯ ಹೊಂದಾಣಿಕೆ ಮಾಡುವುದಕ್ಕೆ ಆಗುವುದಿಲ್ಲ. ಈಗ ಮಾನ್ಯ ಪ್ರತಾಪಸಿಂಹ ನಾಯಕರನ್ನು ಕರೆದಿದ್ದೇನೆ.

**ಶ್ರೀ ಪಿ.ಆರ್. ರಮೇಶ್:–** ಇದು ಕನ್ನಡಿಯೊಳಗಿನ ಗಂಟು ರೀತಿ ಇದೆ. ನಾವು ಕನ್ನಡಿಯಲ್ಲೇ ನೋಡಿಕೊಂಡು ಹೋಗಬೇಕು. ಈಗಿನ ಬಜೆಟ್‌ನಲ್ಲಿ ಹಿಂದುಳಿದವರಿಗೆ ರೂ. ೮೦೦ ಕೋಟಿ ಹಣವನ್ನು ಕೊಟ್ಟಿದ್ದೇವೆ ಎಂದು ಓದುತ್ತಾರೆ. ಅಲ್ಲಿ ನೋಡಿದರೆ 100 ಕೋಟಿ ರೂಪಾಯಿಯೂ ಇಲ್ಲ.

**ವೈಸ್ ಚೇರ್ಮನ್:–** ಸದಸ್ಯರ ಹೆಸರು ಕರೆದಾಗ ಮಾತನಾಡದಿದ್ದರೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ. (**ಗೊಂದಲ**)

**ಶ್ರೀ ಪ್ರತಾಪಸಿಂಹ ನಾಯಕ್. ಕೆ:–** ಮಾನ್ಯ ಸಭಾಪತಿಯವರೇ, . . .

**ವೈಸ್ ಚೇರ್ಮನ್:–** ನೀವು ಮಾತನಾಡಬೇಕು. ಇದೇ ಪ್ರಜಾಪ್ರಭುತ್ವ. (**ಗೊಂದಲ**) ಹೀಗಾದರೆ ನೀವು ಕಳೆದು ಹೋಗುತ್ತೀರಿ. (**ಗೊಂದಲ**)

**ಶ್ರೀ ಪ್ರತಾಪಸಿಂಹ ನಾಯಕ್. ಕೆ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡುವುದಕ್ಕೆ ಬರುವುದಿಲ್ಲ. ಇನ್ನೊಬ್ಬರು ಆ ರೀತಿ ಉಚ್ಚ ಸ್ವರದಲ್ಲಿ ಮಾತನಾಡುತ್ತಿರುವಾಗ ನಾನು ಮಾತನಾಡುವಂತಹ ಉದ್ದೇಶ ಏನು? ಅವಕಾಶಕ್ಕಾಗಿ ಧನ್ಯವಾದಗಳು. ಒಮ್ಮೊಮ್ಮೆ ನನಗೆ ಕಾಣುತ್ತಿದೆ, ಎಲ್ಲರೂ ಮಾತನಾಡುವಾಗ ನಾನು ಮಾತನಾಡಿದರೆ ಮಾತ್ರ ನನಗೆ ಮಾತನಾಡುವುದಕ್ಕೆ ಅವಕಾಶ ಸಿಗುವುದು ಎಂದು ಹೇಳುವಂತಹ ರೀತಿಯಲ್ಲಿ ಈ ಸದನ ನನಗೆ ಅನುಭವ ಕೊಡುತ್ತಿದೆ. ಎಷ್ಟೋ ಬಾರಿ ನನ್ನ ಹೆಸರನ್ನು ಕರೆಯುತ್ತಾರೆ. ಕರೆದ ಮೇಲೆ ಬೇರೆ ಬೇರೆ ಕಾರಣಗಳಿಗೆ; ನನಗೆ ಕೊಟ್ಟಂತಹ

ಸಮಯದಲ್ಲಿ ನಾನು ಕಾನೂನು ಸಚಿವರಿದ್ದಾರೆ ಎನ್ನುವ ಕಾರಣಕ್ಕೋಸ್ಕರ ಹೇಳುತ್ತಿಲ್ಲ. ಇಲ್ಲಿ ಆ ರೀತಿ ಮಾತನಾಡುವ ತುಂಬಾ ಸದಸ್ಯರು ಸದನದಲ್ಲಿ ಇದ್ದಾರೆ. ವಿಷಯದ ಮೇಲೆ ನೇರವಾಗಿ ಪ್ರಸ್ತಾಪ ಮಾಡಿ ಅದನ್ನೇ ಮಾತನಾಡುವಂತಹ ತುಂಬಾ ಹಿರಿಯರು ಈ ಸಭೆಯಲ್ಲಿ ಇದ್ದಾರೆ. ವಿಷಯವನ್ನೇ ನೇರವಾಗಿ ಮಾತನಾಡಿದರೆ ಬಹುಶಃ ಎಲ್ಲರಿಗೂ ಇಲ್ಲಿ ಅವಕಾಶ ಸಿಗುತ್ತದೆ. ಆದರೆ ಎಲ್ಲೋ ಒಂದು ಕಡೆ ಬೇರೆ ಬೇರೆ ವಿಷಯಗಳು ಹೆಚ್ಚಾಗಿ ಚರ್ಚೆಯಾಗುತ್ತಿರುವುದರಿಂದ ಯಾವ ವಿಷಯ ಇಲ್ಲಿ ಹೆಚ್ಚು ಚರ್ಚೆಯಾಗಬೇಕೋ ಅದು ಬಿಟ್ಟು ಬೇರೆ ಎಲ್ಲ ವಿಷಯವೂ ಚರ್ಚೆಯಾಗುತ್ತದೆ ಎನ್ನುವುದು ನನ್ನ ಭಾವನೆ. ನಾನು ಈಗ ಮಾತನಾಡುತ್ತಿರುವುದು ಕೂಡ ಬಜೆಟ್‌ನಿಂದ ಹೊರಗಿನ ವಿಷವೇ ಆಗಿದ್ದರೂ ನಾನು ಒಂದು ಶಾಲೆಯ ವಿದ್ಯಾರ್ಥಿಯ ಹಾಗೆ ಅಥವಾ ಶಾಲೆಯಲ್ಲಿಯೂ ನಾನು ಹೀಗೆ ಕುಳಿತು ಕೇಳಿರಲಿಕ್ಕಿಲ್ಲ. ಆದರೆ ಇಲ್ಲಿ ಮಾತನಾಡಿದ ಎಲ್ಲಾ ಹಿರಿಯರನ್ನು ಮತ್ತು ಎಲ್ಲಾ ಸದಸ್ಯರ ಮಾತುಗಳನ್ನು ನಾನು ಕುಳಿತು ಕೇಳಿದ್ದೇನೆ. ನನ್ನ ಮಾತನ್ನೂ ಸಹ ನೀವು ಕೇಳಬೇಕೆಂಬ ವಿನಂತಿಯನ್ನು ಮಾಡುತ್ತಾ, ಇನ್ನೂ ಯಾರಾದರೂ ಮಾತನಾಡುವವರಿದ್ದರೆ ಮಾನ್ಯ ಅರಳಿಯವರೇ, ನಿಮ್ಮ ಮಾತನ್ನೂ . . .

**ವೈಸ್ ಚೇರ್ಮನ್:-** ಮಾನ್ಯ ಪ್ರತಾಪ್‌ಸಿಂಹ ನಾಯಕರೇ, ತಾವು ಮಾತನಾಡಿ. ತಮ್ಮ ಸಮಯ ವೇಸ್ಟ್ ಆಗುತ್ತಿದೆ. ದಯವಿಟ್ಟು ಮಾತನಾಡಿ.

**ಶ್ರೀ ಪ್ರತಾಪಸಿಂಹ ನಾಯಕ್.ಕೆ:-** ಮಾನ್ಯ ಸಭಾಪತಿಯವರೇ, ಅದಕ್ಕೇ ನಾನು ಹೇಳಿದ್ದು. ನಾನು ಮಾತನಾಡುವ ಶೈಲಿ ಇದೇ ಆಗಿದೆ. ಹಾಗಾಗಿ ನಾನು ನೇರವಾಗಿ ವಿಷಯಕ್ಕೆ ಬರುವುದಿಲ್ಲ. ನೀವು ಕೊಟ್ಟ 15-20 ನಿಮಿಷ ಏನಿದೆ, ನೀವು ಎಷ್ಟು ಸಮಯವೆಂದು ಹೇಳಿ, ಆ ಸಮಯ;

**ವೈಸ್ ಚೇರ್ಮನ್:-** ಪ್ರತಿ ಸದಸ್ಯರಿಗೆ 20 ನಿಮಿಷ ಅವಕಾಶ ಇದೆ. ಅದನ್ನು ಗೌರವಿಸಿದರೆ ಸಂತೋಷ ಪಡುತ್ತೇನೆ.

**ಶ್ರೀ ಪ್ರತಾಪಸಿಂಹ ನಾಯಕ್.ಕೆ:-** ಮಾನ್ಯ ಸಭಾಪತಿಯವರೇ, 20 ನಿಮಿಷದ ನಂತರ ನಾನು ಒಂದು ಸೆಕೆಂಡ್ ಕೂಡ ಮಾತನಾಡುವುದಿಲ್ಲ. ನಾನು ಎಲ್ಲಿ ಮಾತನಾಡುತ್ತಿರುತ್ತೇನೆ, ಅಲ್ಲೇ ನನ್ನ ಮಾತನ್ನು ನಿಲ್ಲಿಸುತ್ತೇನೆ. ನೀವು ಐದು ನಿಮಿಷ ಮೊದಲು ಒಮ್ಮೆ ಬೆಲ್ ಹೊಡೆದರೆ ನಾನು

ನಿಲ್ಲಿಸುತ್ತೇನೆ. ಆದರೆ ಏನು ಮಾತನಾಡಬೇಕೆಂದು ಹೇಳುವಂತಹದ್ದು ನನ್ನ ಮನಸ್ಸಿಗೆ ಬಂದ ಕಳಕಳಿಯ ಭಾವನೆಯನ್ನು ನಾನು ಮಾತನಾಡಲೇಬೇಕು.

**ವೈಸ್ ಚೇರ್ಮನ್:–** ಎರಡು ನಿಮಿಷವನ್ನು ನೀವು ಪ್ರಸ್ತಾವನೆಗೆ ತೆಗೆದುಕೊಂಡರೆ ವೇಸ್ಟ್ ಆಯಿತು ಇನ್ನು ನಿಮ್ಮ ಸಮಯ 18 ನಿಮಿಷವಿದೆ.

**ಶ್ರೀ ಪ್ರತಾಪಸಿಂಹ ನಾಯಕ್.ಕೆ:–** ಮಾನ್ಯ ಸಭಾಪತಿಯವರೇ, ಇಡೀ 20 ನಿಮಿಷವೂ ಪ್ರಸ್ತಾವನೆಯಲ್ಲಿಯೇ ಹೋದರೂ ನನಗೇನು ಬೇಸರವಿಲ್ಲ. ಆದರೆ ಪ್ರಶ್ನೆ ಏನೆಂದು ಕೇಳಿದರೆ ನನ್ನ ಕಳಕಳಿಯನ್ನು ನಾನು ವ್ಯಕ್ತಪಡಿಸುತ್ತಿದ್ದೇನೆ. ನಾನು ಸದನಕ್ಕೆ ಬಂದು ಒಂದೂವರೆ ವರ್ಷವಾಯಿತು. ನನ್ನ ಅನುಭವವನ್ನು ಈ ಸದನದ ಜೊತೆ ಹಂಚಿಕೊಳ್ಳುವುದಕ್ಕೆ ಇದೊಂದು ಅವಕಾಶವೆಂದು ನಾನು ತಿಳಿದುಕೊಳ್ಳುತ್ತೇನೆ. ಈ ರೀತಿ ಮಾತನಾಡುವುದಕ್ಕೆ ಸದಸ್ಯರಿಗೆ ಅವಕಾಶ ಸಿಗುವುದು ವರ್ಷದಲ್ಲಿ ಎರಡು ಬಾರಿ ಎಂದು ಹಿರಿಯರು ಹೇಳುವುದನ್ನು ಕೇಳಿದ್ದೇನೆ. ಮೊದಲನೆಯದಾಗಿ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಸಂದರ್ಭದಲ್ಲಿ. ದೇವರ ದಯೆಯಲ್ಲಿ ನನಗದು ಸಿಗಲಿಲ್ಲ. ಅದು ಹೋಯಿತು. ಅದು ಇನ್ನು ಸಿಗುವುದು ಬರುವ ವರ್ಷ, ಬಹುಶಃ ನಾನಿದ್ದರೆ. ನಾನು ಇರುತ್ತೇನೆ. ಏಕೆಂದರೆ ತುಂಬಾ ಕಡೆ ವ್ಯಕ್ತಪಡಿಸುವಾಗ ಕೆಲವರು ಹೇಳುತ್ತಾರೆ ರಾಜೀನಾಮೆ ಅಥವಾ ನಾನು ಆ ರೀತಿಯಲ್ಲಿ ಮಾಡುವುದಿಲ್ಲ. ದೇವರ ದಯೆಯಲ್ಲಿರುವ ಯಾವುದೋ ಒಂದು ಭಾಗ್ಯದಲ್ಲಿ ಈ ಸಭೆಯ ಸದಸ್ಯನಾಗಿ ಜನಸಾಮಾನ್ಯರ ಸಮಸ್ಯೆಯ ಬಗ್ಗೆ ಮತ್ತು ರಾಜ್ಯದ ಅಭಿವೃದ್ಧಿಯ ದೃಷ್ಟಿಯಿಂದ ಮಾಡುವಂತಹ ಒಂದು ಅವಕಾಶ ಸಿಕ್ಕಿದೆ. ನನ್ನ ಕಳಕಳಿ ಏನೆಂದು ಕೇಳಿದರೆ, ಈ ಸಭೆಯು ಒಳ್ಳೆಯ ರೀತಿಯಲ್ಲಿ ವಿದ್ವತ್ಪೂರ್ಣ; ನಾವು ಹೇಳುವಾಗ ದೊಡ್ಡ ದೊಡ್ಡ ಶಬ್ಧಗಳನ್ನು ಉಪಯೋಗ ಮಾಡುತ್ತೇವೆ. ಅನುಭವ ಮಂಟಪ, ಚಿಂತಕರ ಮಂಟಪ, ಮಾತಿನ ಮಂಟಪ, ಹಿರಿಯರ ಚಾವಡಿ ಎಂದೆಲ್ಲಾ ಹೇಳುತ್ತಾರೆ. ಇದನ್ನು ನಾನು ಟೀಕೆ ಮಾಡುವಂತಹದ್ದಲ್ಲ. ಎಲ್ಲೋ ಒಂದು ಕಡೆ ಇದರ ಬಗ್ಗೆ ಎಲ್ಲರೂ ಒಟ್ಟಾಗಿ ಆಲೋಚನೆ ಮಾಡಬೇಕು. ಇದನ್ನು ಹರಿಕಥೆ ಅಥವಾ ಸತ್ಸಂಗ ಎಂದು ತಿಳಿದುಕೊಂಡರೆ ನಾನೇನು ಅದರ ಬಗ್ಗೆ ಬೇಸರ ಮಾಡಿಕೊಳ್ಳುವುದಿಲ್ಲ. ಏಕೆಂದರೆ, ಇದು ನನ್ನ ಮನಸ್ಸಿಗೆ ಕಾಣುತ್ತಿದೆ. 'ಭಗವದ್ಗೀತೆ'ಯಲ್ಲಿ ಮಾತು ಹೇಗಿರಬೇಕು ಎಂದು ಹೇಳುವುದರ ಬಗ್ಗೆ ಶ್ರೀ ಕೃಷ್ಣನ ಒಂದು ಮಾತಿದೆ. "ಅನುದ್ವೇಗಕರಂ ವಾಕ್ಯಂ ಸತ್ಯಂ ಪ್ರಿಯಹಿತಂ ಚ ಯತ್।
ಸ್ವಾಧ್ಯಾಯಾಭ್ಯಸನಂ ಚೈವ ವಾಙ್ಮಯಂ ತಪ ಉಚ್ಯತೇ॥"

ಬಹುಶಃ ಎಷ್ಟೋ ಬಾರಿ ಇಲ್ಲಿ ಚರ್ಚೆಯಾಗುವಾಗ ಉದ್ವೇಗದ ಕಾರಣಕ್ಕೋಸ್ಕರವೇ ಅಥವಾ ಬೇರೆ ಬೇರೆ ರೀತಿಯಲ್ಲಿ ಸತ್ಯವಲ್ಲದ ರೀತಿಯಲ್ಲಿ ಮಾತನಾಡುವುದರಿಂದಾಗಿ ಈ ರೀತಿಯ ಮಾತುಗಳು ಬರುತ್ತವೆ. ನಮ್ಮ ಮಾತು ಇನ್ನೊಬ್ಬರಿಗೆ ಉದ್ವೇಗ ಉಂಟು ಮಾಡಬಾರದು, ಸತ್ಯವಾಗಿರಬೇಕು, ಪ್ರಿಯವಾಗಿರಬೇಕು, ಹಿತವಾಗಿರಬೇಕು ಮತ್ತು ಸ್ವಾಧ್ಯಾಯ ಮತ್ತು ಅಭ್ಯಾಸದಿಂದ ಕೂಡಿರಬೇಕು ಎಂದು ಹೇಳುತ್ತಾರೆ. ನನಗೆ ಗೊತ್ತಿದೆ. ಇಷ್ಟು ದೊಡ್ಡ ಸಭೆಯಲ್ಲಿ ಇದನ್ನು ಮಾತನಾಡಬೇಕೇ? ಇಲ್ಲಿ ಬಂದವರೆಲ್ಲರಿಗೂ ಅದನ್ನು ಮಾತನಾಡುವುದಕ್ಕೆ ಗೊತ್ತಿಲ್ಲವೇ? ಖಂಡಿತವಾಗಿ ಗೊತ್ತಿದೆ. ಆದರೆ ಇಲ್ಲಿ ಅದು ಆಗುತ್ತಿದೆ ಎಂದು ಹೇಳುವ ಪ್ರಶ್ನೆಯನ್ನು ಆತ್ಮಸಾಕ್ಷಿಗೆ ಮಾಡಿಕೊಳ್ಳಿ ಎಂದು ಹೇಳುತ್ತಾ, ನಾನು ಎರಡು ವಿಷಯಗಳ ಬಗ್ಗೆ; ಮಾನ್ಯ ಸದಸ್ಯರಾದ ಭಾರತಿ ಶೆಟ್ಟಿಯವರು ಏನು ಮಾತನಾಡಿದ್ದಾರೆ, ಅವರ ಅಣ್ಣ ಮತ್ತು ನಾನು ಒಂದೇ ಶಾಲೆಯಲ್ಲಿ ಕಲಿತವರು. ಇಲ್ಲಿ ಎರಡು ವಿಷಯಗಳ ಬಗ್ಗೆ ಬಜೆಟ್‌ನಿಂದ ಹೊರಗೆ ಹೋಗುತ್ತಿದ್ದೇನೆ. ಎಲ್ಲರೂ ಕೂಡ ಕಾಂಗ್ರೆಸ್ ಪಕ್ಷದ ಮಿತ್ರರು ಇರಬಹುದು, ಅವರವರ ಸಾಧನೆಗಳನ್ನು ಹೇಳಿದರು.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಚಿವರಾದ ಎಂ.ಟಿ.ಬಿ. ನಾಗರಾಜು ರವರು ಬೇಸರ ಮಾಡಿಕೊಂಡು ಹೋಗುತ್ತಿದ್ದಾರೆ.

**ವೈಸ್ ಚೇರ್ಮನ್:–** ಮಾನ್ಯ ಪ್ರತಾಪ್ ಸಿಂಹ ನಾಯಕರೇ, ತಾವು ಅರ್ಜುನ ಗುರಿ ಇಟ್ಟ ಹಾಗೆ ಬರೀ ಇಲ್ಲಿ ಮಾತ್ರ ಮಾತನಾಡಬೇಕು. ನಿಮ್ಮ ಸಮಯ ಮುಖ್ಯವಲ್ಲ, ಇಲ್ಲಿ ಮಾತನಾಡಿ.

**ಶ್ರೀ ಪ್ರತಾಪಸಿಂಹ ನಾಯಕ್.ಕೆ:–** ನಾನು ಇಷ್ಟು ಮಾತನಾಡಿದರೂ ಮಾನ್ಯ ಮರಿತಿಬ್ಬೇಗೌಡರು ಕುಳಿತಿರುವುದಕ್ಕೆ ಸಂತೋಷ ಇದೆ.

**ವೈಸ್ ಚೇರ್ಮನ್:–** ಅವರಿಗೆ ನಿಮ್ಮನ್ನು ಲಕ್ಷ್ಯ ಮಾಡುವುದಕ್ಕೆ ಆಗಬಾರದು. ಆ ರೀತಿ ಮಾತನಾಡಿ. ಮಾನ್ಯ ಮರಿತಿಬ್ಬೇಗೌಡರೇ, ಸುಮ್ಮನಿರಿ. ಎಷ್ಟು ಬೇಸರ ಮಾಡಿಕೊಂಡಿದ್ದಾರೆ ನೋಡಿ.

**ಶ್ರೀ ಪ್ರತಾಪಸಿಂಹ ನಾಯಕ್.ಕೆ:–** ಮಾನ್ಯ ಸಭಾಪತಿಯವರೇ, ಸ್ವಾತಂತ್ರ್ಯದ ಅಮೃತ ಮಹೋತ್ಸವದ ವರ್ಷಾಚರಣೆಯ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರಾದ ಬಸವರಾಜ

ಬೊಮ್ಮಾಯಿಯವರು ಕೋವಿಡ್-19ನ ಸಂಕಷ್ಟದಿಂದ ಹೊರ ಬರುತ್ತಿರುವ ಆರ್ಥಿಕತೆಯ ಇತಿಮಿತಿಯೊಳಗೆ ರಾಜ್ಯದ ಸರ್ವತೋಮುಖ ಸುಸ್ಥಿರ ಅಭಿವೃದ್ಧಿಯ ಕಡೆಗೆ ಕೊಂಡುಹೋಗುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದಾರೆ ಎಂದು ಹೇಳುವಂತಹದ್ದನ್ನು ನಾನು ಒಪ್ಪಿಕೊಳ್ಳುತ್ತಾ ನನ್ನ ಸರ್ಕಾರವನ್ನು ನಾನು ಅಭಿನಂದಿಸುತ್ತೇನೆ. ಅವರದೂ ಚೊಚ್ಚಲ ಭಾಷಣ. ವಿರೋಧಪಕ್ಷದ ನಾಯಕರಾದ ಮಾನ್ಯ ಹರಿಪ್ರಸಾದ್‌ರವರು ಈ ಚರ್ಚೆಯ ಪ್ರಾರಂಭವನ್ನು ಮಾಡಿರುವಂತಹವರು. ಅವರು ಪ್ರತಿಪಕ್ಷದ ನಾಯಕರಾಗಿ ಆಯವ್ಯಯದ ಮೇಲೆ ಅವರಿಗೂ ಚೊಚ್ಚಲ ಭಾಷಣ ಎಂದು ನಾನು ತಿಳಿದುಕೊಳ್ಳುತ್ತೇನೆ. ಅವರು 'Opening Batsman' ರಾಷ್ಟ್ರೀಯ ತಂಡದಲ್ಲಿ ಆಡಿದವರು ಇಲ್ಲಿ ರಾಜ್ಯದ ಪ್ರತಿಪಕ್ಷದ ನಾಯಕರಾಗಿ ಚರ್ಚೆಯವನ್ನು ಪ್ರಾರಂಭ ಮಾಡಿದ್ದಾರೆ. ಆದರೆ ಪುನಃ ನಾನು ಹೇಳುತ್ತೇನೆ, ನನ್ನ ಮಾತನ್ನು ಮುಂದುವರೆಸುವ ಮೊದಲು ಬಜೆಟ್ ಬಗ್ಗೆ ಮಾತನಾಡಬೇಕು ಎಂಬ ಆಸೆ ಆಕಾಂಕ್ಷೆ ನನಗಿದ್ದರೂ ಕೂಡ ನಾನೊಬ್ಬ ಸಂಘಟನೆಯಿಂದ ಬಂದಂತಹವನು. ಯಾವ ರೀತಿಯಲ್ಲಿ ನನ್ನ ಮಿತ್ರರು ಕಾಂಗ್ರೆಸ್‌ನಲ್ಲಿ ಸಣ್ಣವರಿದ್ದಾಗಲೇ ಬೆಳೆದು ಕಾಂಗ್ರೆಸ್‌ನ ಜೊತೆ ಜೊತೆಗೇ ಬೆಳೆದಿದ್ದಾರೋ ನಾನು ಕೂಡ ರಾಷ್ಟ್ರೀಯ ಸ್ವಯಂ ಸೇವಕ ಸಂಘ, ಜನಸಂಘದ ಕಾಲದಿಂದ ಅದರ ಜೊತೆ ಜೊತೆಗೇ ಬೆಳೆದು ಬಂದಂತಹವನು.

(ಮುಂದು)

(436) 17-03-2022 KH/MD 5-30 **(ವೈಸ್ ಛೇರ್‌ಮನ್‌ರವರ ಉಪಸ್ಥಿತಿ)**

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ಮುಂದು):-**

ನನಗೆ ಎಲ್ಲೋ ಒಂದು ಕಡೆ ಇದನ್ನು ಯಾರಾದರೂ ಕೇಳಲಿ, ಬಿಡಲಿ, ಯಾರಾದರೂ ಒಪ್ಪಲಿ, ಬಿಡಲಿ. ಕನಿಷ್ಠಪಕ್ಷ ನನ್ನ ಪಕ್ಷ ಮತ್ತು ಸಂಘಟನೆ ಯಾವುದನ್ನು represent ಮಾಡುತ್ತದೆ ಎನ್ನುವಂತಹದ್ದು ದಾಖಲೆಗೆ ಹೋಗಬೇಕೆನ್ನುವ ಆಶಯದ ಜೊತೆಗೆ ನಾನು ಮಾತನಾಡುತ್ತಿದ್ದೇನೆ. ರಾಷ್ಟ್ರೀಯ ಸ್ವಯಂ ಸೇವಕ ಸಂಘಕ್ಕೆ ಮೊದಲ ಬಾರಿ ನಿಷೇಧ ಬಿದ್ದಾಗ ಆಗಿನಿಂದ ನನ್ನ ಕುಟುಂಬ ಈ ಸಂಘಟನೆಯ ಜೊತೆಗೆ ಇದ್ದು ಹೋರಾಟವನ್ನು ಮಾಡಿದೆ. ಗೋವಾದ ಚಳುವಳಿ ಇರಬಹುದು, ಅದರ ನಂತರ

ಬಾಂಗ್ಲಾ ವಿಮೋಚನಾ ಚಳುವಳಿಯ ಸಂದರ್ಭದಲ್ಲಿರಬಹುದು, ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿರಬಹುದು, ಕಾಶ್ಮೀರದ ಹೋರಾಟದ ಸಂದರ್ಭದಲ್ಲಿರಬಹುದು, ಆಯೋಧ್ಯೆಯ ರಾಮ ಮಂದಿರದ ಕಟ್ಟುವ ದೃಷ್ಟಿಯಲ್ಲಿರಬಹುದು. ನಾನು ಈ ಎಲ್ಲಾ ಹೋರಾಟಗಳಲ್ಲಿ ಬೆಳೆದುಕೊಂಡು ಬಂದಂತಹವನು. ಸಂಘ ಎಂದರೆ ಏನು? ಆರ್‌ಎಸ್‌ಎಸ್ ಎಂದರೆ ಏನು? ಜನಸಂಘ ಯಾವುದನ್ನು represent ಮಾಡುತ್ತದೆ, ಭಾರತೀಯ ಜನತಾ ಪಕ್ಷ ಏನನ್ನು ಹೇಳುತ್ತದೆ ಎನ್ನುವಂತಹದ್ದಾಗಿದೆ. ಇದಕ್ಕೋಸ್ಕರ ಬೇರೆ ಸಂದರ್ಭದಲ್ಲಿ ಚರ್ಚೆಗೆ ಇಟ್ಟುಕೊಳ್ಳೋಣ ಎಂದು ಇವರು ಆಗಲೇ ಹೇಳಿದ್ದಾರೆ. ಆದರೆ, ನನ್ನ ಮನಸ್ಸಿನಲ್ಲಿ ಇದನ್ನು ಚರ್ಚೆಗೆ ಯಾವಾಗ ತೆಗೆದುಕೊಳ್ಳುತ್ತಾರೆ ಎಂಬುದು ಗೊತ್ತಿಲ್ಲದ ಕಾರಣ ಇವತ್ತು ದಾಖಲೆಗೆ ಹೋಗಲಿ ಎನ್ನುವ ಕಾರಣಕ್ಕೆ ನಾನು ಮಾತನಾಡುತ್ತಿದ್ದೇನೆ. ನಾನು ಮಾತನಾಡುವುದರಿಂದ ಯಾರು ನಮ್ಮ ಕಡೆಗೆ ಬರುವುದಿಲ್ಲ ಮತ್ತು ಅವರು ನನ್ನ ಬಗ್ಗೆ ಮಾತನಾಡಿದರೂ ಅಥವಾ ನಮ್ಮ ಸಂಘಟನೆಯ ಬಗ್ಗೆ ಹೇಳಿದರೂ ಎನ್ನುವ ಕಾರಣಕ್ಕೆ ನಾನು ಅವರ ಕಡೆಗೆ ಹೋಗುವುದಿಲ್ಲ. ನಮ್ಮ ನಮ್ಮ ವಿಚಾರಗಳ ಬಗ್ಗೆ, ನಮ್ಮ ನಮ್ಮ ನಂಬಿಕೆ ಶ್ರದ್ಧೆಯನ್ನಿಟ್ಟುಕೊಂಡು ನಾವು ಕೆಲಸ ಮಾಡುತ್ತಾ ಬಂದಂತಹವರು. ಆ ದೃಷ್ಟಿಯಲ್ಲಿ ಆರ್‌ಎಸ್‌ಎಸ್ ಏಕೆ ಪ್ರಾರಂಭವಾಯಿತು? ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮವರು ಯಾರಿದ್ದರು ಹೇಳಿ ಎಂದು ಕಾಂಗ್ರೆಸ್ ಮಿತ್ರರು ಹೇಳುತ್ತಾರೆ. ಇಲ್ಲಿ ಕುಳಿತ ತುಂಬಾ ಹಿರಿಯರ ಪೈಕಿ ಬಹುಶಃ ಮಾನ್ಯ ಸದಸ್ಯರಾದ ಸಿ.ಎಂ.ಲಿಂಗಪ್ಪನವರನ್ನು ಹೊರತುಪಡಿಸಿದರೆ, ಇಲ್ಲಿ ಕುಳಿತಿರುವಂತಹ ಬೇರೆಯವರೆಲ್ಲಾ ಸ್ವಾತಂತ್ರ್ಯ ಬಂದ ನಂತರ ಹುಟ್ಟಿದವರೇ. ಆದರೆ, ಮಾನ್ಯ ಸದಸ್ಯರಾದ ಸಿ.ಎಂ.ಲಿಂಗಪ್ಪನವರು ಕಾಂಗ್ರೆಸ್ ಪಕ್ಷದಲ್ಲಿ ಇದ್ದಾರೆ ಎಂದು ಹೊರತುಪಡಿಸಿದರೆ, ಬೇರೆನೂ ಇಲ್ಲ. 1857ರಲ್ಲಿ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವಾಯಿತು. ಇದನ್ನು **"ಸಿಪಾಯಿ ದಂಗೆ"** ಎಂದು ಕರೆದರು. ಪ್ರಥಮ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಕಾಂಗ್ರೆಸ್‌ನವರು ಇರಲಿಲ್ಲ ಎನ್ನುವುದು ಎಷ್ಟು ಸಮಂಜಸವಾಗುತ್ತದೆ ಎಂದು ಹೇಳುತ್ತಾ, 1950 ರ ನಂತರ ಭಾರತೀಯ ಜನತಾ ಪಾರ್ಟಿ ಅಥವಾ ಭಾರತೀಯ ಜನಸಂಘದ ಉದಯವಾಗಿದೆ. ಯಾವ ರೀತಿಯಲ್ಲಿ ಸ್ವಾತಂತ್ರ್ಯ ಬರುವುದಕ್ಕೆ ಕಾಂಗ್ರೆಸ್ ಒಂದು ಚಳುವಳಿಯಾಗಿತ್ತು. ಅದೊಂದು ಪಕ್ಷವಾಗಿರಲಿಲ್ಲ. ಈ ದೇಶದ ಎಲ್ಲರೂ ಆ ಚಳುವಳಿಯಲ್ಲಿ ಭಾಗಿಯಾಗಿದ್ದರು. ಕಾಂಗ್ರೆಸ್ ಪಕ್ಷ ಮಾತ್ರವಲ್ಲ. ಅದರ ಜೊತೆಗೆ ಬೇರೆಯವರು ಸಹ ತುಂಬಾ ಜನರು ಸೇರಿದ್ದರು ಎಂದು ಹೇಳುತ್ತಾ,

ಭಾರತೀಯ ಜನಸಂಘ ಅಥವಾ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಏಕೆ ಪ್ರಾರಂಭವಾಯಿತು ಎಂದು ಕೇಳಿದರೆ, ಇಲ್ಲಿ ಸ್ವಾತಂತ್ರ್ಯ ಬರುತ್ತದೆ, ದೇಶದಲ್ಲಿ ಆ ವೇಗ ಹೋಗಿದೆ. ಆದರೆ, ಆ ವೇಗ ತೆಗೆದುಕೊಂಡಿದೆ. ಸ್ವಾತಂತ್ರ್ಯ ನಂತರ ಈ ದೇಶ ಯಾವ ದಿಕ್ಕಿನಲ್ಲಿ ಹೋಗಬೇಕೆನ್ನುವುದನ್ನು ಒಬ್ಬರು ದಾರ್ಶನಿಕರಾಗಿ, ಸಂಘದ ಸಂಸ್ಥಾಪಕರು ಆಲೋಚನೆ ಮಾಡಿದ್ದರು. ಅವರಿಗೆ ಇದು ಕಂಡಿತು. ಈ ದೇಶ ಪರತಂತ್ರ ಏಕೆ ಆಯಿತು ಎಂದು ಕೇಳಿದರೆ, ಈ ದೇಶದಲ್ಲಿ ಒಗ್ಗಟಿನ ಕೊರತೆ ಕಂಡಿತು. ಜನರನ್ನು ಒಗ್ಗಟ್ಟು ಮಾಡಬೇಕೆನ್ನುವ ದೃಷ್ಟಿಯಲ್ಲಿ, ಈ ದಿಕ್ಕಿನಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಪ್ರಾರಂಭವಾಯಿತು. ಅದು ರಾಜಕೀಯದ ಸಂಘಟನೆ ಅಲ್ಲ, voluntary organization. ಇಲ್ಲಿ ಮತ್ತೆ ಮತ್ತೆ ಆ ಹೆಸರು ಪ್ರಸ್ತಾಪ ಮಾಡುತ್ತಿರುವುದರಿಂದ, ನಾನು ಈ ಮಾತನ್ನು ಹೇಳುತ್ತಿದ್ದೇನೆ. ಇದು voluntary organization. ಅಲ್ಲಿ ಕೆಲಸ ಏನೆಂದರೆ, ಈ ದೇಶವನ್ನು ಪ್ರೀತಿಸುವಂತಹದ್ದು ಮತ್ತು ವ್ಯಕ್ತಿ ನಿರ್ಮಾಣ ಮಾಡುವಂತಹದ್ದು ಆಗಿದೆ. ಈ ಎರಡು ಜವಾಬ್ದಾರಿಗಳ ಹಿನ್ನೆಲೆಯಲ್ಲಿ ಮಾಡಿರುವಂತಹದ್ದಾಗಿದೆ. ಸ್ವಾತಂತ್ರ್ಯದ ನಂತರ ಬೇರೆ ಬೇರೆ ಕಾರಣಕ್ಕೋಸ್ಕರ 1948ರ ಹೊತ್ತಿಗೆ ban ಆಯಿತು. ಇದು ban ಆದಂತಹ ಸಂದರ್ಭದಲ್ಲಿ ಅದರ ಮೇಲೆ ಬೇರೆ ಬೇರೆ ರೀತಿಯ ಆರೋಪಗಳು ಬಂದಿತು. ಆ ಸಂದರ್ಭದಲ್ಲಿ ಅಥವಾ ಅದರ ನಂತರದ ಬೆಳವಣಿಗೆಯ ಸಂದರ್ಭದಲ್ಲಿ ಕೇಂದ್ರ ಸರ್ಕಾರದಲ್ಲಿ ಮಾನ್ಯ ಶ್ಯಾಮ ಪ್ರಸಾದ್ ಮುಖರ್ಜಿಯವರು ಮಂತ್ರಿಯಾಗಿದ್ದರು. ಇವರು ಏಕೆ ಹೊರಗೆ ಬಂದರು ಎಂದು ಕೇಳಿದರೆ ಈ ದೇಶದ ವಿಭಜನೆ. ಈ ವಿಭಜನೆಯ ಸಂದರ್ಭದಲ್ಲಿ ನಡೆದಂತಹ ಸಂಗತಿಗಳು, ಇವೆಲ್ಲಾ ಕಾರಣಕ್ಕೋಸ್ಕರ ಅವರಿಗೆ ನಾನು ಒಂದು ಬೇರೆ ಪಕ್ಷವನ್ನು ಕಟ್ಟಬೇಕೆಂದು ಕಂಡಿತು. ಅವರು ಸಂಘದ ಸಂಸ್ಥಾಪಕರಾಗಿ ಅಥವಾ ಆಗಿನ ಸರಸಂಘ ಚಾಲಕರಲ್ಲಿ ಬಂದಾಗ ನಾವು ರಾಜಕೀಯದಲ್ಲಿ ಬರುವುದಿಲ್ಲ. ತಾವು ಪಕ್ಷವನ್ನು ಕಟ್ಟುತ್ತೇವೆ ಎಂದಾದರೆ ನಾವು ಸಹಾಯವನ್ನು ಕೊಡುತ್ತೇನೆ ಎಂದು ಅವರು ಸ್ಪಷ್ಟವಾಗಿ ಹೇಳಿದ್ದರು. ಆ ದೃಷ್ಟಿಯಲ್ಲಿ ಮಾಜಿ ಪ್ರಧಾನಮಂತ್ರಿಯವರಾದ ದಿವಂಗತ ಅಟಲ್ ಬಿಹಾರಿ ವಾಜಪೇಯಿರವರು, ದಿವಂಗತ ನಾನಾಜಿ ದೇಶಮುಖ್‌ರವರು ಮತ್ತು ದಿವಂಗತ ಪಂಡಿತ್ ದೀನ್‌ದಯಾಳ್ ಉಪಾಧ್ಯಾಯರವರು ಭಾರತೀಯ ಜನಸಂಗದಲ್ಲಿ ಕೆಲಸ ಮಾಡಿದ್ದರು. ಅಲ್ಲಿಂದ ಪ್ರಾರಂಭವಾದಂತಹ ಸಂಘಟನೆ ಭಾರತೀಯ ಜನತಾ ಪಕ್ಷದ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಮೇಲಿನ ನಂಬಿಕೆಯನ್ನು ತುಂಬಾ ಬಾರಿ ಪ್ರಶ್ನೆ ಮಾಡುತ್ತಾರೆ. 5 ಪಂಚನಿಷ್ಠೆಗಳು

ಯಾವುವೆಂದರೆ, ಮೊದಲನೆಯದು ರಾಷ್ಟ್ರದ ಏಕತೆ ಮತ್ತು ಸಮಗ್ರತೆಯ ಬಗ್ಗೆ ನಮಗೆ ನಂಬಿಕೆ. ಎರಡನೆಯದು, ಪ್ರಜಾಪ್ರಭುತ್ವದಲ್ಲಿ ನಂಬಿಕೆ, ಮೂರನೆಯದು, ಸರ್ವಧರ್ಮ ಸಮನ್ವಯ, ನಾಲ್ಕನೆಯದು, ಗಾಂಧಿ ಪ್ರಣೀತ ಸಮಾಜವಾದ, ಐದನೆಯದು, ಮೌಲ್ಯಾಧರಿತ ರಾಜಕಾರಣ, ಈ 5 ಸಂಗತಿಗಳನ್ನು ಒಪ್ಪಿಕೊಂಡು "ಏಕಾತ್ಮ ಮಾನವ ದರ್ಶನ" ಎಂದು ದಿವಂಗತ ಪಂಡಿತ್ ದೀನ್‌ದಯಾಳ್ ಉಪಾಧ್ಯಾಯರವರು ಕೊಟ್ಟಂತಹ ಏನು ದರ್ಶನ ಇದೆ? ಸಿದ್ಧಾಂತ ಇದೆ, "ಏಕಾತ್ಮ ಮಾನವ ದರ್ಶನ" ಎಂದರೆ, ಎಲ್ಲರಲ್ಲಿಯೂ ಏಕಾತ್ಮತೆಯನ್ನು ಕಾಣು ಎಂದು ಹೇಳುವಂತಹದ್ದು. ಈ ಹಿನ್ನೆಲೆಯಲ್ಲಿ ನಾವು ಬೆಳದುಬಂದಂತಹವರು. ಹಾಗಾಗಿ ಕಾಂಗ್ರೆಸ್ ಪಕ್ಷದವರಿಗೆ ಅವರದೇ ಆದಂತಹ ಸ್ವಾತಂತ್ರ್ಯ ಇದೆ. ಅವರದೇ ರೀತಿಯಲ್ಲಿ ಆಲೋಚನೆ ಮಾಡಬಹುದು. ಆದರೆ, ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. "ಡಬಲ್ ಇಂಜಿನ್ ಸರ್ಕಾರ" ಎಂದು ಈಗಾಗಲೇ ತುಂಬಾ ಜನರು ಹೇಳಿದರು. 1975ರ ನಂತರ ಪ್ರಥಮ ಬಾರಿಗೆ ಕಾಂಗ್ರೆಸೇತರ ಸರ್ಕಾರ ಕೇಂದ್ರ ಸರ್ಕಾರದಲ್ಲಿ ಬಂದಿತು. 1975ರವರೆಗೆ double ಅಲ್ಲ, tribble ಅಲ್ಲ, ನಾಲ್ಕು ಪಟ್ಟು ಅಲ್ಲ, ಎಷ್ಟು ಪಟ್ಟು ಹಾಕಿದ್ದರೂ ಇಡೀ ದೇಶದಲ್ಲಿ ತಾವೇ ಇದ್ದಿದ್ದು, ಇವತ್ತು ಈ ಸ್ಥಿತಿಗೆ ಬರಬೇಕೆಂದರೆ ಎಲ್ಲೋ ಒಂದು ಕಡೆ ತಾವು ಆತ್ಮವಲೋಕನ ಮಾಡಿಕೊಳ್ಳಬೇಕೆಂಬ ಅಗತ್ಯ ಇದೆ ಎಂದು ನಾನು ತಿಳಿದುಕೊಳ್ಳುತ್ತೇನೆ. ಏಕೆ ಜನ ತಮ್ಮನ್ನು ಬಿಟ್ಟು ಹೊರಗೆ ಹೋಗುತ್ತಿದ್ದಾರೆ, ಏಕೆ ಬದಲಿ ಪಕ್ಷವನ್ನು ಹುಡುಕುತ್ತಿದ್ದಾರೆ, ಮೊನ್ನೆ ದಿವಸ ಆದ ಚುನಾವಣೆಯನ್ನು ನೋಡಿದರೆ ಗೊತ್ತಾಗುತ್ತದೆ. West Bengal ಇರಬಹುದು, ಇಲ್ಲಿ ನಾವೆಲ್ಲಾ ಮಾತನಾಡಿದ ಹಾಗೆ ಆ ರಾಜ್ಯದ ಜನರು ಆಲೋಚನೆ ಮಾಡುತ್ತಿದ್ದಾರೆ ಎನ್ನುವಂತಹದ್ದು ಫಲಿತಾಂಶದಲ್ಲಿ ಸೂಚಿಸುತ್ತದೆ. ಮಾನ್ಯ ಸದಸ್ಯರಾದ ಆಯನೂರು ಮಂಜುನಾಥ್‌ರವರು ಹೇಳಿದಂತಹ ಮಾತನ್ನು ಒಪ್ಪುತ್ತೇನೆ. ಪ್ರಾದೇಶಿಕ ಆಸೆ-ಅಕಾಂಕ್ಷೆಗಳು ಇದ್ದೇ ಇರುತ್ತದೆ. ಇದರ ಜೊತೆಗೆ ಸಹಜವಾಗಿ ಒಬ್ಬ ರಾಷ್ಟ್ರೀಯವಾದಿಯಾಗಿ ಆಲೋಚನೆ ಮಾಡುವಂತಹ ಒಂದು ಪಕ್ಷ ಬೇಕು. ಆ ಕಾರಣಕ್ಕೆ ಇಡೀ ದೇಶದಲ್ಲಿ ಕಾಂಗ್ರೆಸ್ ಪಕ್ಷ ರಾಷ್ಟ್ರೀಯವಾದಿಯಾಗಿ ಆಲೋಚನೆ ಮಾಡುವಂತಹ ಬದಲಿ ರಾಷ್ಟ್ರೀಯ ಪಕ್ಷ. ಹಾಗಾಗಿ "ಕಾಂಗ್ರೆಸ್ ಮುಕ್ತ" ಎಂದು ರಾಜಕೀಯವಾಗಿ ಮಾತನಾಡುತ್ತೇವೆ. ನಾವು ಏಕೆ ಮಾತನಾಡುತ್ತೇವೆ ಎಂದು ಕೇಳಿದರೆ, ಇವತ್ತಿನ ದಿವಸ ಕಾಂಗ್ರೆಸ್ ಇರುವಂತಹ ಸ್ಥಿತಿಗೆ ತಾವು ಆತ್ಮವಲೋಕನ ಮಾಡಿ ಬದಲಾವಣೆಗಳನ್ನು

ತರಬೇಕಾದಂತಹ ಅಗತ್ಯ ಇದೆ. ನಾವು ಪ್ರಜಾಪ್ರಭುತ್ವದ ಆಶಯಗಳು ಏನೆಂದು ಹೇಳುತ್ತೇವೆಯೋ, ಹಾಗೆಯೇ ಜನಸಾಮಾನ್ಯರು ಸಹ ಯಾವುದೇ ಸ್ಥಾನಕ್ಕೆ ಹೋಗಬಹುದಾದಂತಹ ರೀತಿಯ ವ್ಯವಸ್ಥೆಯಲ್ಲಿ ತಾವು ಇಲ್ಲ ಎಂದು ಹೇಳುವಂತಹದ್ದು.

**ಡಾ॥ ಕೆ.ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ತಾವು ಮಾನ್ಯ ಸದಸ್ಯರಾದ ಕೆ.ವಿ.ನಾರಾಯಣಸ್ವಾಮಿಯವರ ಕಡೆ address ಮಾಡಿ ಹೇಳುತ್ತಿದ್ದೀರಾ. ಅದಕ್ಕೆ ನಾನು ಹೇಳಿದೆ.

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ನಾನು ಆ ರೀತಿ ಹೇಳುತ್ತಿಲ್ಲ.

**ವೈಸ್ ಛೇರ್‌ಮನ್:–** ಮಾನ್ಯ ಸದಸ್ಯರಾದ ಕೆ.ವಿ.ನಾರಾಯಣಸ್ವಾಮಿಯವರಿಗೆ ತಮಗೆ ಆ ರೀತಿ ಅನಿಸಿದೆಯೇ?

**ಶ್ರೀ ಕೆ.ವಿ.ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ನನಗೆ ಆ ರೀತಿ ಅನಿಸಿಲ್ಲ.

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ:–** ಮಾನ್ಯ ಗೋವಿಂದರಾಜ್ ರವರೇ, ನಾನು ಕೇವಲ ಮಾನ್ಯ ಸಭಾಪತಿಯವರನ್ನು ನೋಡಿ ಮಾತನಾಡಿದರೆ, ಯಾರಿಗೆ ಹೇಳಬೇಕೋ, ಅವರ ಮುಖದಿಂದ ಯಾವ ರೀತಿಯ ಪ್ರತಿಕ್ರಿಯೆ ಬರುತ್ತದೆ ಎಂಬುದು ನನಗೆ ಗೊತ್ತಾಗುವುದಿಲ್ಲವಲ್ಲವೇ? ಅದಕ್ಕೋಸ್ಕರ ನಾನು ಅವರ ಮುಖವನ್ನು ನೋಡುತ್ತಾ ಮಾತನಾಡುತ್ತಿದ್ದೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಪ್ರತಾಪ್ ಸಿಂಹ ನಾಯಕ್‌ರವರೇ, ನಾವು ಮಧ್ಯೆ ಮಾತನಾಡುವುದಿಲ್ಲ. ತಮಗೆ ಏನು ಬೇಕೋ ಅದನ್ನು ಮಾತನಾಡಿ. ತಾವು ಬಜೆಟ್ ಮೇಲೆ ಮಾತನಾಡಿದರೆ ನಮಗೂ ಸ್ವಲ್ಪ ಬುದ್ಧಿ ವಿಕಾಸವಾಗುತ್ತದೆ.

**ವೈಸ್ ಛೇರ್‌ಮನ್:–** ಮಾನ್ಯ ಪ್ರತಾಪ್ ಸಿಂಹ ನಾಯಕ್‌ರವರೇ, ಪಂಚನಿಷ್ಠೆಗಳಿಗೆ ಪಂಚಸೂತ್ರಗಳ ಬಜೆಟ್ ಉಲ್ಲೇಖ ಮಾಡಿದ್ದರಲ್ಲವೇ, ಅದರ ಬಗ್ಗೆ ಒಂದು ಸ್ವಲ್ಪ . . .

**ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ (ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಆರ್.ಎಸ್.ಎಸ್., ಎಂದರೆ, ಯಾವಾಗಲೂ ಗಲಾಟೆ ಮಾಡುವ ನಾವು ಇವತ್ತು ಸುಮ್ಮನಿದ್ದೇವೆ ಎಂದರೆ ಮಾನ್ಯ ಪ್ರತಾಪ್ ಸಿಂಹ ನಾಯಕ್‌ರವರ ಮೇಲೆ ಎಷ್ಟು ಪ್ರೀತಿ ಇದೆ ಎಂದು ಅವರೇ ತಿಳಿದುಕೊಳ್ಳಲಿ.

**ವೈಸ್ ಛೇರ್‌ಮನ್:–** ಮಾನ್ಯ ಸದಸ್ಯರಾದ ಮೋಹನ್ ಕುಮಾರ್ ಕೊಂಡಜ್ಜಿಯವರೇ, ತಾವು ಗಲಾಟೆ ಎಲ್ಲಾ ಮಾಡಿ ಕೋಟಾ ಮುಗಿಸಿದ್ದೀರಾ, ತಾವೇನು ಬಿಟ್ಟಿಲ್ಲ.

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.:–** ಮಾನ್ಯ ಸಭಾಪತಿಯವರೇ, ಇವತ್ತಿನ ಈ ಭಾಷಣದ ನಂತರ ನಾನು ಇನ್ನು ಮುಂದೆ ಈ ವಿಷಯದ ಬಗ್ಗೆ ಮಾತನಾಡುವುದಿಲ್ಲ. ಮುಂದಿನ ಬಜೆಟ್‌ನ ಭಾಷಣದಲ್ಲಿ ಬಜೆಟ್‌ನ ಬಗ್ಗೆ ಮಾತ್ರ ಮಾತನಾಡುತ್ತೇನೆ. ಏಕೆಂದರೆ, ನಾನು ಇಲ್ಲಿ ಕುಳಿತರೆ ಆರ್.ಎಸ್.ಎಸ್., ಬಗ್ಗೆ, ಬಿ.ಜೆ.ಪಿ.,ಯ ಬಗ್ಗೆ, ರಾಷ್ಟ್ರೀಯ ಬದ್ಧತೆಯ ಬಗ್ಗೆ, ನಮ್ಮ ನಾಯಕರುಗಳ ಬಗ್ಗೆ ಮಾತನಾಡಿದ್ದನ್ನು ಕೇಳಿ ಕೇಳಿ ಮನಸ್ಸಿಗೆ ನೋವಾಗಿದೆ. ನನ್ನ ಮನಸ್ಸಿಗೆ ನೋವಾಗಿದೆ ಎಂದು ತಾವು ಮಾತನಾಡಿದಾಗ ಒಂದು ಅಕ್ಷರ ಅದರ ವಿರುದ್ಧ ಮಾತನಾಡಲಿಲ್ಲ. ಏಕೆಂದರೆ, ತಮ್ಮ ಅಭಿಪ್ರಾಯ ತಾವು ಇಟ್ಟುಕೊಳ್ಳುವುದಕ್ಕೆ ಸ್ವತಂತ್ರರು. ಆ ರೀತಿಯಾಗಿ ನನ್ನ ಅಭಿಪ್ರಾಯವನ್ನು ಕೂಡ . . .

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈಗ ಕಾಂಗ್ರೆಸ್ ಕಟ್ಟುವಂತಹ ಕೆಲಸ ತಾವು ಉಳಿಸಿಕೊಂಡಿದ್ದೀರಿ.

**ವೈಸ್ ಛೇರ್‌ಮನ್:–** ಮಾನ್ಯ ಸದಸ್ಯರಾದ ಮರಿತಿಬ್ಬೇಗೌಡರವರೇ, ತಮಗೆ ಮಾತನಾಡುವುದಕ್ಕೆ ಸಮಯ ಇಲ್ಲ. ಮಾನ್ಯ ಸದಸ್ಯರಾದ ಪ್ರತಾಪ್ ಸಿಂಹ ನಾಯಕ್‌ರವರು ಮಾತ್ರ ಮಾತನಾಡಬೇಕು.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸದಸ್ಯರಾದ ಪ್ರತಾಪ್ ಸಿಂಹ ನಾಯಕ್‌ರವರೇ, ತಾವು ಕಾಂಗ್ರೆಸಿಗರೆಲ್ಲರನ್ನೂ ಒಂದು ಮಾಡುತ್ತಿದ್ದೀರಿ. ನಾಳೆ ಒಳ್ಳೆಯ ಕೆಲಸವಾದರೆ ತಾವು ಪಂಚೆಯನ್ನು ಬಿಟ್ಟು, ಪಂಚೇದ್ರಿಯ ಕಡೆಗೆ ಬರುತ್ತೀರಿ.

**ವೈಸ್ ಛೇರ್‌ಮನ್:-** ಮಾನ್ಯ ಪ್ರತಾಪ್ ಸಿಂಹ ನಾಯಕ್‌ರವರೇ, ತಾವು yield ಆಗಿದ್ದೀರಾ. ತಾವು ಇಲ್ಲಿ ನೋಡಿಕೊಂಡು ಮಾತನಾಡಿ.

(ಮುಂದು)

(437)/17-3-2022/5-40/ಎಲ್‌ಎಂ/ಎಕೆ

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಗಳೆ, ಗುಂಡಿಕ್ಕಿ ಮಹಾತ್ಮಾಗಾಂಧೀಜಿಯವರನ್ನು ಕೊಂದಿರುವ ನೋವು ನಮಗೆ ನಾವು ಸಾಯುವವರೆಗೆ ಇರುತ್ತದೆ.

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ**(ವಿಧಾನಸಭೆಯಿಂದ ಚುನಾಯಿತರಾದವರು)**:-** ಮಾನ್ಯ ಸಭಾಪತಿಗಳೆ, ಮಹಾತ್ಮಾ ಗಾಂಧಿಯವರನ್ನು ಕೊಂದ ನಂತರ ಅದರ ಬಗ್ಗೆ ಕೇಸ್ ಆಗಿ, ನ್ಯಾಯಾಲಯದಿಂದ ತೀರ್ಪು ಬಂದನಂತರವು ನಿಮಗೆ ನೋವಿದೆ. 1962 ರಲ್ಲಿ ಚೈನಾ ಯುದ್ಧವಾದ ಸಂದರ್ಭದಲ್ಲಿ ರಾಷ್ಟ್ರೀಯ ಸ್ವಯಂ ಸೇವಕರ ಪಾತ್ರವನ್ನು ನೋಡಿ, 1963ನೇ ಸಾಲಿನ ಗಣರಾಜ್ಯೋತ್ಸವದ parade ನಲ್ಲಿ ಆಗಿನ ಪ್ರಧಾನ ಮಂತ್ರಿಗಳಾಗಿದ್ದ ಮಾನ್ಯ ಪಂಡಿತ ಜವಾಹರ ಲಾಲ್ ರಾಷ್ಟ್ರೀಯ ಸ್ವಯಂ ಸೇವಕರನ್ನು ಆ parade ನಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಟ್ಟರು.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಗಳೆ, ಶ್ರೀ ಬಲರಾಜ್ ಮದೋಕ್ ಎಂದು ಭಾರತೀಯ ಜನತಾ ಪಾರ್ಟಿಯ ಜನಸಂಘ ಅಥವಾ ಆರ್‌ಎಸ್‌ಎಸ್ ನ ಬಹಳ ಪ್ರಮುಖ ನಾಯಕರು. ಅವರು ತಮ್ಮ ಜೀವನ ಚರಿತ್ರೆಯನ್ನು ಮೂರು volume ಗಳಲ್ಲಿ ಬರೆದಿದ್ದಾರೆ. ಪುಸ್ತಕದಲ್ಲಿ ಅವರು ಮಾನ್ಯ ದೀನದಯಾಳ ಉಪಾಧ್ಯಾಯರವರು ಯಾವ ರೀತಿ ಸತ್ತರು ಎನ್ನುವುದನ್ನು ಬರೆದಿದ್ದಾರೆ. ಅದರ ಬಗ್ಗೆ ತಾವು ಸ್ವಲ್ಪ ಹೇಳಿದರೆ ಸಂತೋಷ.

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ:–** ಮಾನ್ಯ ಸಭಾಪತಿಗಳೆ, ನಾನು ಎಲ್ಲವನ್ನು ಓದಿ ತಿಳಿದುಕೊಂಡಿದ್ದೇನೆ. ಇನ್ನೊಬ್ಬರಿಗೆ ನಿಮ್ಮ ಬಗ್ಗೆ ಗೊತ್ತಿರುವುದಿಲ್ಲ. ಪಾಪ ಅವರು ನೀನ್ನ ಮೇಲೆ ಟೀಕೆ ಮಾಡುತ್ತಾರೆ, ಆಗ ನೀನು ಏಸು ಕ್ರಿಸ್ತನ ಹಾಗೆ ಇರು ಎಂದು ನಮ್ಮ ಹಿರಿಯರು ನಮಗೆ ಹೇಳುತ್ತಾರೆ.

ನಿಜವಾಗಿ ಹೇಳಬೇಕು ಎಂದರೆ, ನಾವು ಬಿಜೆಪಿ ಯವರು ಇವತ್ತು ಇಷ್ಟು ಬೆಳೆಯಲು ಕಾರಣರು ಎಂದರೆ ಕಾಂಗ್ರೆಸ್‌ನವರು. ಏಕೆಂದರೆ ನಮ್ಮ ಬಗ್ಗೆ ಹೆಚ್ಚು ಮಾತನಾಡುವವರು ಕಾಂಗ್ರೆಸ್‌ನವರು.

**ಶ್ರೀ ಬಿ.ಕೆ.ಹರಿಪ್ರಸಾದ್:–** ಸ್ವಲ್ಪ ಮಟ್ಟಗೆ ಅಲ್ಲ ಪೂರ್ತಿಯಾಗಿ ಬಿಜೆಪಿ ಯವರು ಬೆಳೆಯಲು ನಾವು ಕಾಂಗ್ರೆಸ್‌ನವರೆ ಕಾರಣ.

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ:–** ಮಾನ್ಯ ಸಭಾಪತಿಗಳೆ, ಮಾನ್ಯ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಜಿಯವರ ಹೆಸರನ್ನು ನಾವು ಹೇಳುವುದಕ್ಕಿಂತ ಹೆಚ್ಚಾಗಿ ಹೇಳುವವರು ಎಂದರೆ ಕಾಂಗ್ರೆಸ್‌ನವರು. ಮಾನ್ಯ ನರೇಂದ್ರ ಮೋದಿಜಿಯವರ ಹೆಸರನ್ನು ಬಿಟ್ಟು ಮಾನ್ಯ ದೇವೇಗೌಡರ ಹೆಸರನ್ನು ಹೇಳಿದರೆ...

**ವೈಸ್ ಛೇರ್ಮನ್:–** ಮಾನ್ಯ ಪ್ರತಾಪ್ ಸಿಂಹ ನಾಯಕ್ ಕೆ ರವರೆ ತಾವು ಮಾತನಾಡಲು ಪ್ರಾರಂಭ ಮಾಡಿ 20 ನಿಮಿಷಗಳಾಯಿತು. ತಾವು ಐದು ನಿಮಿಷ ಹೆಚ್ಚಿಗೆ ಕೇಳಿದ್ದೀರಿ, ಐದು ನಿಮಿಷ ಹೆಚ್ಚಿನ ಸಮಯವನ್ನು ಕೊಟ್ಟಿದ್ದೇನೆ.

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ:–** ಮಾನ್ಯ ಸಭಾಪತಿಗಳೆ, ತಾವು ಬೆಲ್ ಹೊಡೆದ ಮೇಲೆ 5 ನಿಮಿಷ ಹೆಚ್ಚಿಗೆ ಕೊಡಿ ಎಂದು ಕೇಳಿದ್ದೇನೆ. ಇನ್ನು ತಾವು ಬೆಲ್ ಹೊಡೆದಿರುವುದಿಲ್ಲ. ಆದರೆ ತಾವು ಮುಕ್ತಾಯ ಮಾಡಿ ಎಂದರೆ ಈಗಲೇ ನಾನು ಮುಗಿಸಿಬಿಡುತ್ತೇನೆ.

**ವೈಸ್ ಛೇರ್ಮನ್:–** ನಾನು ಮಾತನಾಡಲು ಬಿಡುತ್ತಲೇ ಇಲ್ಲ ತಾವು. ಪ್ರಾರಂಭದಲ್ಲಿ ತಾವು ಬಹಳ ನೋವಿನಿಂದ, ಬೇಸರದಿಂದ ಮಾತನಾಡಿದ್ದಿರಿ. ಈ ಮನೆಯನ್ನು ಹಿರಿಯರ ಮನೆ ಎಂದು ಹೇಳಲಾಗುತ್ತದೆ. ಇಲ್ಲಿ ವಿವಿದ ವರ್ಗಗಳಿಂದ ಬಂದವರು ಇರುತ್ತೇವೆ. ತಾವು ಚೆನ್ನಾಗಿ

ಮಾತನಾಡಿದ್ದೀರಿ. ಇನ್ನು ನಾಲ್ಕು ನಿಮಿಷಗಳ grace ಸಮಯವನ್ನು ಕೊಡುತ್ತೇನೆ. ದಯಮಾಡಿ 5-45ಕ್ಕೆ ತಾವು ಮಾತನಾಡಿ ಮುಕ್ತಾಯಗೊಳಿಸಿ.

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ:-** ಮಾನ್ಯ ಸಭಾಪತಿಗಳೆ, ಇನ್ನೊಂದು ವಿಚಾರವನ್ನು ಹೇಳಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ. ಕಾಂಗ್ರೆಸ್‌ನವರಿಗೆ ಈಗ ಯಾವ ಭಾವನೆ ಬಂದಿದೆ ಎಂದರೆ, 50-60 ವರ್ಷಗಳಿಂದ ನಾವು ಆಡಳಿತ ಮಾಡಿ, ನಾವೇ ಆಡಳಿತ ಮಾಡುವವರು ಬೇರೆ ಯಾರು ಆಡಳಿತ ಮಾಡಲು ಸಾಧ್ಯವೇ ಇಲ್ಲ, land ಹೋಗಿದೆ, ಆದರೆ lord ಗಳು ನಾವೇ ಎನ್ನುವ ಮನಸ್ಥಿತಿಯಲ್ಲಿದ್ದಾರೆ. ನಮ್ಮ ಊರಿನಲ್ಲಿ ಒಬ್ಬರು ಇದ್ದಾರೆ, ನಾನು ಅವರ ಹೆಸರನ್ನು ಹೇಳುವುದಿಲ್ಲ ಮತ್ತು ಅವರನ್ನು ಸಣ್ಣವರನ್ನಾಗಿ ಮಾಡಬೇಕು ಎನ್ನುವ ಭಾವನೆ ನನಗೆ ಇಲ್ಲ. ಅವರು ನಾಲ್ಕೈದು ಬಾರಿ ಶಾಸಕರಾಗಿದ್ದರು. ನಂತರ ಅವರು ಸೋತರು ಕೂಡ, ಊರಿನಲ್ಲಿ ಯಾವುದೇ ಕಾರ್ಯಕ್ರಮವಾಗಲಿ ಅವರ ಹೆಸರನ್ನು ಕರೆಯದಿದ್ದರೂ ಇವರೆ ಟೇಪ್ ಕತ್ತರಿಸಲು ಎದ್ದು ಹೋಗುತ್ತಾರೆ. ಏಕೆಂದರೆ ಅವರು ಇನ್ನು ಹಳೆಯ ಗುಂಗಿನಲ್ಲಿಯೇ ಇದ್ದಾರೆ.

ಇವತ್ತಿನ ಕಾಂಗ್ರೆಸ್ ಸ್ಥಿತಿ ಯಾವ ರೀತಿ ಇದೆ ಎಂದು ಹೇಳಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ. ಸಮುದ್ರ ಮಂಥನ ಸಂದರ್ಭದಲ್ಲಿ ಅನೇಕ ದೊಡ್ಡ-ದೊಡ್ಡ ಸಂಗತಿಗಳೂ ಜರುಗಿದ್ದವು. ಅದರಲ್ಲಿ ಶಂಖದ ಒಂದು ಭಾಗ ಬರುತ್ತದೆ. ಮಹಾಲಕ್ಷ್ಮಿ ನನ್ನ ಅಕ್ಕ, ಕಾಮಧೇನು ಕಲ್ಪವೃಕ್ಷ ಎಲ್ಲಾ ನನ್ನ ಸಂಬಂಧಿಗಳು ಎಂದು ಶಂಖ ಹೇಳುತ್ತಿತ್ತು. ಆದರೆ ಶಂಕಕ್ಕೆ ಈಗ ನೀನು ಏನು ಎಂದು ಕೇಳಿದಾಗ, ನಾನು ಈಗ ಏನು ಇಲ್ಲ ಶಂಖ ಊದಿಕೊಂಡು ಮನೆ-ಮನೆಗೆ ಹೋಗುತ್ತೇನೆ. ಹಾಗೆ ಕಾಂಗ್ರೆಸ್‌ನವರು ದೊಡ್ಡವರು ಸರಿ, ಆಗಿನ ಕಾಲದಲ್ಲಿ ದೊಡ್ಡ-ದೊಡ್ಡ ಸಾಧನೆಗಳನ್ನು ಮಾಡಿದ್ದಾರೆ. ಆದರೆ ಈಗ ಏನು? ಈಗ ಕಾಂಗ್ರೆಸ್‌ನವರಿಗೆ ಶಂಖದ ಸ್ಥಿತಿ ಬಂದಿದೆ.

ಕಾಂಗ್ರೆಸ್‌ನವರು ಎಲ್ಲಿ ತಪ್ಪಿದರು, ಜಿ-23 ಎಂದು ಮಾನ್ಯ ಸದಸ್ಯರು ಮಾತನಾಡಿದರು. ಕಾಂಗ್ರೆಸ್‌ನ ಒಳಗೆ ಪಕ್ಷಕ್ಕಾಗಿ ದುಡಿದವರು 23 ಜನರು. ಅವರು ಒಟ್ಟು ವ್ಯವಸ್ಥೆಯ ಬಗ್ಗೆ ಚಿಂತನ ಮಾಡಿ ಎಂದು ಪದೇ ಪದೇ ಹೇಳಿದರೂ ಚಿಂತನೆ ಮಾಡಲಿಲ್ಲ. ಅವರು ಚಿಂತನೆ ಮಾಡದೆ ಇರುವುದು ನಮಗೆ ಸಂತೋಷವೇ. ಬೇರೆ ಮಾರ್ಗವನ್ನು ಚಿಂತನೆ ಮಾಡದೆ ಒಂದೇ ಕುಟುಂಬದ ಹಿಂದೆ

ಹೋಗುತ್ತಿದ್ದಾರೆ. ಈಗಲೂ ಅದನ್ನೆ ಮುಂದುವರೆಸಿದರೆ ಅದರ ಪರಿಸ್ಥಿತಿ ಏನು ಆಗುತ್ತದೆ ಎನ್ನುವುದು ಅವರಿಗೆ ಬಿಟ್ಟಿರುವುದು. ಅದು ಅವರ ಪಾರ್ಟಿಯ ಒಳಗಿನ ವಿಷಯ.

**ವೈಸ್ ಛೇರ್ಮನ್:-** ಮಾನ್ಯ ಹರಿಪ್ರಸಾದರವರನ್ನು ಪಂಥ್ಯಾವಾಹನಕ್ಕೆ ಕರೆಯಲೇ ಬೇಕು ಎಂದು ತಾವು ನಿರ್ಧಾರ ಮಾಡಿದ್ದೀರಿ.

**ಶ್ರೀ ಬಿ.ಕೆ.ಹರಿಪ್ರಸಾದ:-** ನಮ್ಮದು ಜಿ-23, ಆದರೆ ಇವರದು ಮಾರ್ಗದರ್ಶಕ ಫಂಡಲ್‌ನಲ್ಲಿ ಯಾರು-ಯಾರು ಇದ್ದಾರೆ ಎನ್ನುವುದನ್ನು ಯೋಚನೆ ಮಾಡಲಿ.

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ:-** ಮಾನ್ಯ ಸಭಾಪತಿಗಳೆ, "ಸಬ್‌ಕಾ ಸಾತ್, ಸಬ್‌ಕಾ ವಿಕಾಸ್" ಎನ್ನುವುದು ನಮ್ಮ ಮಂತ್ರವಾಗಿದೆ. ಉತ್ತರ ಪ್ರದೇಶದ ಚುನಾವಣೆಗಿಂತ ಮೊದಲು ಕೇಂದ್ರದ ಬಜೆಟ್ ಮಂಡನೆಯಾಯಿತು, ಆಗ ತಜ್ಞರು, ಪಂಡಿತರು, ಪತ್ರಿಕೆಯವರು, ಉತ್ತರ ಪ್ರದೇಶದ ಚುನಾವಣೆ ಇರುವುದರಿಂದ ಆ ರಾಜ್ಯಕ್ಕೆ ಬಜೆಟ್‌ನಲ್ಲಿ ದೊಡ್ಡ ಕಾರ್ಯಕ್ರಮಗಳನ್ನು ಘೋಷಣೆ ಮಾಡುತ್ತಾರೆ ಎಂದು ಹೇಳುತ್ತಿದ್ದರು. ಆದರೆ ಬಜೆಟ್‌ನಲ್ಲಿ ಏನು ಕೊಡಲಿಲ್ಲ ಮತ್ತು ಆ ರಾಜ್ಯದ ಹೆಸರನ್ನು ತೆಗೆಯಲಿಲ್ಲ. ಆದರೂ ಉತ್ತರ ಪ್ರದೇಶದ ಚುನಾವಣೆಯಲ್ಲಿ ನಾವು ಗೆದ್ದೆವು. ಏಕೆಂದರೆ ನಾವು ಜನರ ಮಧ್ಯೆದಲ್ಲದ್ದೇವೆ. ಪರೀಕ್ಷೆ ಬರೆಯುವವನ ವರ್ಷಪೂರ್ತಿ ಓದಿದರೆ ಸಾಕು, ಪರೀಕ್ಷೆ ಸಮಯಲ್ಲಿ ಓದುವ ಅವಶ್ಯಕತೆ ಇಲ್ಲ. ನಮಗೆ ವಿಶ್ವಾಸವಿತ್ತು, ನಾವು ಜನರ ಮಧ್ಯೆ ಇದ್ದೇವೆ, ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದೇವೆ, ಜನರು ನಮ್ಮ ಅಭಿವೃದ್ಧಿಯನ್ನು ಗುರುತಿಸಿದ್ದಾರೆ. ಅಭಿವೃದ್ಧಿಯೇ ನಮ್ಮ ಮಂತ್ರ ಅದರಲ್ಲಿ ಬೇರೆ ಆಲೋಚನೆಗಳೆ ಇಲ್ಲ. ಅಭಿವೃದ್ಧಿ ಆಧಾರದ ಮೇಲೆ ನಾವು ಜನರ ಮಧ್ಯೆ ಇದ್ದು, ನಮ್ಮ ಕಾರ್ಯಕ್ರಮಗಳ ಆಧಾರದಲ್ಲಿಯೇ ನಾವು ಗೆದ್ದಿದ್ದೇವೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಗಳೆ, 8 ವರ್ಷಗಳಲ್ಲಿ ಏನೇನು ಮಾಡಿದ್ದೀರಿ ಹೇಳಿ.

**ವೈಸ್ ಛೇರ್ಮನ್:-** ಮಾನ್ಯ ಮರಿತಿಬ್ಬೇಗೌಡರೆ ಮಧ್ಯೆ ತಾವು ಮಾತನಾಡಬೇಡಿ. ಇನ್ನು ತುಂಬಾ ಸದಸ್ಯರು ಮಾತನಾಡುವವರಿದ್ದಾರೆ.

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ:-** ಮಾನ್ಯ ಸಭಾಪತಿಗಳೆ, ಅಮೃತ ಎಂದರೆ, ಈ ದೇಶಕ್ಕೆ 75 ವರ್ಷವಾಗಿರುವುದು ಅಲ್ಲವೆ ಎಂದು ಹೇಳುತ್ತಾರೆ. ಈ ದೇಶ ಇನ್ನು 25 ವರ್ಷ ಹೀಗೆ ಹೋಗಬೇಕು ಎಂದು ಹೇಳಿದ್ದರೆ... ಉಕ್ರೇನ್‌ನಿಂದ ನಮ್ಮ ದೇಶದ ಜನರನ್ನು ಕರೆದುಕೊಂಡು ಬರಲು ಭಾರತ ಸರ್ಕಾರ ಆಪರೇಷನ್ ಗಂಗಾ ಮೂಲಕ ಸಾವಿರಾರು ವಿದ್ಯಾರ್ಥಿಗಳನ್ನು ರಕ್ಷಿಸಿತು, ಆದರೆ ಗಂಗೆಯ ಹೆಸರನ್ನು ಇಟ್ಟರು ತಪ್ಪು. ಕಾಂಗ್ರೆಸ್‌ನವರಿಗೆ ಗಂಗಾ ಎಂದು ಹೆಸರಿಟ್ಟಿರುವುದೇ ತಪ್ಪಾಗಿ ಕಾಣಿಸುತ್ತಿದೆ. ಯಾವುದು ಒಳ್ಳೆಯದಾಗಿ ಕಾಣುವುದಿಲ್ಲ ಎಲ್ಲದರಲ್ಲೂ ಏನೋ ಒಂದು ಪ್ರಶ್ನೆಯನ್ನು ಕೇಳುತ್ತಾರೆ. ಆದರೆ ನಮಗೆ ವಿಶ್ವಾಸವಿದೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ತಂದಿರುವ ಈ ಬಜೆಟ್ ಸರ್ವವ್ಯಾಪಿ, ಸರ್ವಸ್ಪರ್ಶಿ, ಅಭಿವೃದ್ಧಿ ಪರವಾದ ಬಜೆಟ್ ಆಗಿದೆ. ಇದನ್ನು ಜನರ ಹತ್ತಿರ ತೆಗೆದುಕೊಂಡು ಹೋಗಿ ಅನುಷ್ಠಾನಕ್ಕೆ ತರಲಾಗುತ್ತದೆ. ಬಿಜೆಪಿ ಯವರು ಮೆಜಾರಿಟಿಯಲ್ಲಿ ಬರಲ್ಲ ಎಂದು ಕಾಂಗ್ರೆಸ್‌ನವರು ಹೇಳುತ್ತಿರುತ್ತಾರೆ. ಈ ಸಾರಿ ಮೆಜಾರಿಟ್‌ಯೊಂದಿಗೆ ಈ ಸದನಕ್ಕೆ ಬರುತ್ತೇವೆ ಎನ್ನುವ ವಿಶ್ವಾಸದಿಂದ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ವೈಸ್ ಛೇರ್ಮನ್:-** ಮಾನ್ಯ ಸಭಾನಾಯಕರೆ, ಚೆನ್ನಾಗಿ ಮಾತನಾಡುವವರಿಗೆ ಇನ್ನು ಹೆಚ್ಚಿನ ಸಮಯವನ್ನು ನಿಗದಿ ಮಾಡಿ. ಮಾನ್ಯ ಅರವಿಂದ ಕುಮಾರ್ ಅರಳಿಯವರೆ ಈಗ ನೀವು ಮಾತನಾಡಿ. ಆದರೆ ನಿಮ್ಮ ಹತ್ತಿರ ಕೇಳಿಕೊಳ್ಳಲು ನನಗೆ ಆತ್ಮೀಯತೆ ಇದೆ, 15 ನಿಮಿಷದಲ್ಲಿ ಚೆನ್ನಾಗಿ ಭಾಷಣ ಮಾಡಿ ಮುಕ್ತಾಯಗೊಳಿಸಿಬಿಡಿ.

**ಶ್ರೀ ಅರವಿಂದ ಕುಮಾರ್ ಅರಳಿ(ವಿಧಾನಸಭೆಯಿಂದ ಚುನಾಯಿತರಾದವರು**):- ಮಾನ್ಯ ಸಭಾಪತಿಗಳೆ. 2022-23ನೇ ಸಾಲಿನಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿಯವರು ಮಂಡಿಸಿರುವ ಬಜೆಟ್ ಮೇಲೆ ಮಾತನಾಡಲು ಅವಕಾಶ ಕೊಟ್ಟಿದಕ್ಕಾಗಿ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳ ಹಿನ್ನೆಲೆಯನ್ನು ನಾನು ಹೇಳಬಯಸುತ್ತೇನೆ. **ಇವನಾರವ, ಇವನಾರವ ಇವರಾರವನೆಂದೆನಿಸದಿರಯ್ಯ, ಇವ ನಮ್ಮವ, ಇವ ನಮ್ಮವ, ಇವನಮ್ಮವನೆಂದೆನಿಸಯ್ಯ ಕೂಡಲಸಂಗಮದೇವಯ್ಯ ನಿಮ್ಮ ಮನೆಯ ಮಗನೆಂದೆನಿಸಯ್ಯ,** ಎಂದು ಬಸವಣ್ಣನವರ ವಚನ ಏನು ಇದೆ. ಅದೇ ರೀತಿಯ ಕುಟುಂಬದಿಂದ ಅಂದರೆ ಮಾನ್ಯ

ಎಸ್.ಆರ್.ಬೊಮ್ಮಾಯಿಯವರ ಕುಟುಂಬದಿಂದ ಬಂದಂತವರು ಮಾನ್ಯ ಬಸವರಾಜ ಬೊಮ್ಮಾಯಿಯವರು. ಅದರಲ್ಲಿಯು ನಮ್ಮ ಉತ್ತರ ಕರ್ನಾಟಕದ ಭಾಗದವರು. ಹಿಂದಿನ ಬಜೆಟ್‌ಗಿಂತ ಭಿನ್ನವಾದ ಬಜೆಟ್ ಬರುತ್ತದೆ ಎನ್ನುವ ಆಸೆಯನ್ನು ನಾವು ಇಟ್ಟುಕೊಂಡಿದ್ದೆವು. ಆದರೆ ಈ ಬಜೆಟ್ ಪುಸ್ತಕವನ್ನು ಓದಿದ ಮೇಲೆ ನನ್ನಗನ್ನಿಸಿದ್ದು, ಮಾನ್ಯ ಮುಖ್ಯಮಂತ್ರಿಗಳು ಗಾಳಿಯಲ್ಲಿ ಗೋಪುರ ಕಟ್ಟಿದ್ದಾರೆ ಎಂದು. ಹಿಂದೆ ನಾವು ಚಿಕ್ಕವರಿದ್ದಾಗ ನಮ್ಮ ಅಜ್ಜ-ಅಜ್ಜಿ ಚಂದಾಮಾಮನ ಕಥೆ ಹೇಳುತ್ತಿದ್ದರು. ಹಾಗೆ ಇದೆ ಈ ಬಜೆಟ್. 2021-22ನೇ ಸಾಲಿನಲ್ಲಿ ಮಂಡಿಸಿರುವ ಬಜೆಟ್‌ನ್ನು ಯಾವ ರೀತಿ ಖರ್ಚು ಮಾಡಿದರು, ಯಾವ ಕೆಲಸಕ್ಕೆ ಖರ್ಚು ಮಾಡಿದ್ದಾರೆ ಎನ್ನುವುದು ಇದುವರೆಗೂ ನನಗೆ ಅರ್ಥವಾಗುತ್ತಿಲ್ಲ.

(ಮುಂದು)

(438)17-03-2022(05-50)bsd-ak

**ಶ್ರೀ ಅರವಿಂದ ಕುಮಾರ್ ಅರಳಿ (ಮುಂದು)**

ಯಾವರೀತಿ ಖರ್ಚು ಮಾಡಿದ್ದಾರೆ ಎಂದು ನನಗಂತೂ ತಿಳಿದಿಲ್ಲ, ಆಡಳಿತ ಪಕ್ಷದವರಿಗೆ ಎಷ್ಟರಮಟ್ಟಿಗೆ ತಿಳಿದಿದೆಯೋ, ನನಗಂತೂ ಅರ್ಥವಾಗಿಲ್ಲ. ಆಡಳಿತ ಪಕ್ಷದವರು ಒಳ್ಳೆಯದು ಎಂದು ಹೇಳುತ್ತಾರೆ, ಅವರು ಅದೇರೀತಿ ಹೇಳಬೇಕಾಗುತ್ತದೆ, ಏಕೆಂದರೆ ಅವರಿಗೆ ಅನಿವಾರ್ಯತೆ ಇದೆ. ಕೋವಿಡ್-19 ರೋಗವನ್ನು ಯಾರು ತಂದಿದ್ದಲ್ಲ, ಯಾರು ತರಿಸಿದ್ದಲ್ಲ. ಅದನ್ನು ತಡೆಯುವ ವ್ಯವಸ್ಥೆ ಮಾಡಬೇಕಾಗಿದ್ದು, ಆ ವ್ಯವಸ್ಥೆಯನ್ನು ಮಾಡುವುದರಲ್ಲಿ ಸರ್ಕಾರವು ವಿಫಲವಾಗಿದೆ. ಕೋವಿಡ್-19 ಬಂದಮೇಲೆ ಜನರಿಗೆ ಯಾವರೀತಿ ಸ್ಪಂದನೆ ಮಾಡಿ ಸಹಕಾರ ಕೊಡಬೇಕು ಎಂಬುದರಲ್ಲಿಯೂ ಹಾದಿ ತಪ್ಪಿದರು. ಕೇವಲ ಹಣ ಮಾಡುವುದರಲ್ಲಿ ಕೆಲಸ ಮಾಡಿದರೇ ಹೊರತು ಇನ್ನೇನೂ ಮಾಡಿಲ್ಲ. ಆದರೆ ಅಂಕಿ ಸಂಖ್ಯೆಗಳನ್ನು ಬಹಳ correct ಆಗಿ ತೋರಿಸಿದ್ದಾರೆ. ಯಾದಗಿರಿ ಮತ್ತು ಬೀದರ್ ಜಿಲ್ಲೆಗಳಲ್ಲಿ ಎಷ್ಟು ಜನ ಸತ್ತರು, ಎಷ್ಟು ಜನರಿಗೆ vaccine ಕೊಟ್ಟರು ಎಂಬ ಬಗ್ಗೆ ಹೇಳಿದ್ದೇನೆ. ಸತ್ತವರಿಗೂ vaccine ಕೊಟ್ಟಿದ್ದಾರೆ. ಇನ್ನೂ ಕೆಲವು message ಬರುತ್ತಿರುವ ಬಗ್ಗೆ ನಾನು ಸಭೆಯಲ್ಲಿ ತೋರಿಸಿದ್ದೇನೆ. ಆದರೂ ಕೂಡ budget ನಲ್ಲಿ ಒಳ್ಳೆಯ ಕೆಲಸ ಮಾಡಿರುವ ಬಗ್ಗೆ ಹೇಳಿದ್ದಾರೆ. ಹಲವು

ಸದಸ್ಯರು ಮಾತನಾಡುತ್ತಾ ಹೇಳಿದಂತೆ, Central Government ಆಗಲೀ, State Government ಆಗಲೀ ಕೋವಿಡ್-19 ನಿವಾರಣೆಗೆ ಎಷ್ಟು ಹಣವನ್ನು ಖರ್ಚು ಮಾಡಿದೆ? ಎಷ್ಟು ಜಮಾ ಆಗಿದೆ ಎಂದು ಶ್ವೇತ ಪತ್ರ ಹೊರಡಿಸುವಂತೆ demand ಮಾಡಿದ್ದೇವೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡುವಾಗ ಅಥವಾ ಮೊದಲು ಶ್ವೇತಪತ್ರ ಹೊರಡಿಸಬೇಕು ಎಂದು ಆಗ್ರಹ ಮಾಡುತ್ತೇನೆ. ಮಾಜಿ ಮುಖ್ಯಮುಖ್ಯಮಂತ್ರಿಗಳಾದ ಮಾನ್ಯ ಯಡಿಯೂರಪ್ಪನವರು ರೂ.2,00,47 ಲಕ್ಷ ಕೋಟಿ budget ಮಂಡಿಸಿದ್ದು, ಈಗ ರೂ.2,00,65 ಲಕ್ಷ ಕೋಟಿ ಮಂಡಿಸಿದ್ದಾರೆ. ಆದರೆ ಈ budget ನಲ್ಲಿ ಏನು ಕೊಟ್ಟಿದ್ದಾರೆ ಮತ್ತು ಯಾವುದಕ್ಕೆ ಕೊಟ್ಟಿದ್ದಾರೆ ಎಂದು ವಿಸ್ತಾರವಾಗಿ ಹೇಳಲು ಹೋಗುವುದಿಲ್ಲ, ಏಕೆಂದರೆ ನಮ್ಮ ಹಿರಿಯ ಸದಸ್ಯರು ಎಲ್ಲವನ್ನೂ ಮಾತನಾಡಿದ್ದಾರೆ. ನಾನು ಕಲ್ಯಾಣ ಕರ್ನಾಟಕಕ್ಕೆ ಸೀಮಿತವಾಗಿ ಮಾತನಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ಕಲ್ಯಾಣ ಕರ್ನಾಟಕದ ಬಗ್ಗೆ ಮಾತನಾಡುವಾಗ ಮಾನ್ಯ ಅಕ್ಕಮಹಾದೇವಿಯವರ "ಕಲ್ಯಾಣ ಕೈಲಾಸವಾಯಿತೆಂಬ ನುಡಿ ಹಸನಾಯಿತು, ಎಂಬ ಒಂದು ಮಾತನ್ನು ಹೇಳುತ್ತಾ, budget ಭಾಷಣ ಮುಂದುವರೆಸಿದರು. ಆ budget ನಲ್ಲಿ ನಮ್ಮ ಕಲ್ಯಾಣ ಕರ್ನಾಟಕಕ್ಕೆ ರೂ.3 ಸಾವಿರ ಕೋಟಿ ಅನುದಾನವನ್ನು ಘೋಷಣೆ ಮಾಡಲಾಗಿದ್ದು, ಹಿಂದೆ ರೂ.1,500 ಕೋಟಿ ಇತ್ತು. ಇದನ್ನು ಹೆಚ್ಚು ಮಾಡಿರುವುದಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ಆದರೆ ಈ ಅನುದಾನವು ಅಲ್ಲಿಗೆ ಬಂದು ತಲುಪುತ್ತದೆಯೇ? ಬೇರೆ ಬೇರೆ ಅಭಿವೃದ್ಧಿ ಕಾರ್ಯಗಳಿಗೆ ಹಣ ಇಟ್ಟಿದ್ದಾರೆ. ನಮ್ಮಲ್ಲಿ ಒಂದು ಹೊಸ university ಯನ್ನು ಘೋಷಣೆ ಮಾಡಿದ್ದು, ಆ university ಯನ್ನು ಇದೇ fund ನಲ್ಲಿ ಕಟ್ಟಬೇಕು. ನವಿಲೆ ನೀರಾವರಿ balancing reservoir ಅನ್ನು ಇದರಲ್ಲಿಯೇ ಮಾಡಬೇಕು. ಇವೆಲ್ಲಕ್ಕೂ ಖರ್ಚು ಮಾಡಿದ ಮೇಲೆ ಹಣ ಎಲ್ಲಿಂದ ಉಳಿಯುತ್ತದೆ? ನಮಗೆ ಹಣ ಸಿಗುವುದೇ ಇಲ್ಲ. ಬಿಜೆಪಿ ರವರ ಒಂದು ಕಲೆ ಇದೆ. ಎಲ್ಲರನ್ನು ಸರಿಯಾಗಿ ಮಾತನಾಡಿ ಮನಸ್ಸು ಕರಗಿಸಿಬಿಡುತ್ತಾರೆ. ಆದರೆ ಮುಂದೆ ಏನು ಮಾಡುತ್ತಾರೆ ಎಂದು ಯಾರಿಗೂ ಗೊತ್ತಾಗುವುದಿಲ್ಲ. ಅದು ಆದ ಮೇಲೆ ವ್ಯಥೆ ಪಡುತ್ತಾರೆ.

**ವೈಸ್ ಚೇರ್ಮನ್:-** ಆ ಕಲೆಯನ್ನು ತಮ್ಮಿಂದ ಕಲಿತಿರುವುದೇ?

**ಶ್ರೀ ಅರವಿಂದ ಕುಮಾರ್ ಅರಳಿ:–** ಮಾನ್ಯ ಸಭಾಪತಿಯವರೇ, ಇಲ್ಲ, ಇಂತಹ ಕಲೆ ನಮ್ಮ ಹತ್ತಿರ ಇಲ್ಲ. ನಾವು ನೇರವಾಗಿ ನಡೆಯುವವರು, ಆದರೆ ಅವರು ನುಡಿದಂತೆ ನಡೆಯುವುದಿಲ್ಲ, ಕೇವಲ ಮಾತನಾಡುತ್ತಾರಷ್ಟೇ. ಕಲ್ಯಾಣ ಕರ್ನಾಟಕ ಭಾಗಕ್ಕೆ ರೂ.3 ಸಾವಿರ ಕೋಟಿಗಳನ್ನು ಕೊಟ್ಟಿದ್ದು, ಆ ಹಣದಲ್ಲಿ ರಾಯಚೂರು ವಿಮಾನ ನಿಲ್ದಾಣ, ಬಳ್ಳಾರಿ university, ಬೀದರ್‌ಗೆ ಒಂದು university ಯನ್ನು ಕೊಟ್ಟಿದ್ದಾರೆ. ಆದರೆ ಈಗ ಬೀದರ್ ಬಗ್ಗೆ 2–3 ದಿವಸಗಳ ಹಿಂದೆ ಪ್ರಸ್ತಾಪ ಮಾಡಿದ್ದೆನು. ನಮ್ಮ ಜಿಲ್ಲೆಯಲ್ಲಿ ಅವರ ಖಾತೆಗೆ ಸಂಬಂಧಪಟ್ಟಂತೆ ಒಂದು ಪಶು ವಿಶ್ವವಿದ್ಯಾಲಯ ಇದೆ. ಅಲ್ಲಿ ಸುಮಾರು 1,050 post ಗಳು ಖಾಲಿ ಇದ್ದು, ಇಂತಹದ್ದನ್ನು ಸರಿಮಾಡುವ ಬದಲು ಹೊಸ university ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ನಮಗೆ ಹೆಚ್ಚಿನ ಸಂಖ್ಯೆ ಬೇಡ, ಇರುವುದನ್ನೆ ಸರಿ ಮಾಡಬೇಕು. ಸರಿ ಮಾಡುವುದಕ್ಕೆ ಆಗಲಿಲ್ಲ ಎಂದರೆ ಹೇಳಿಕೆ ಕೊಡುವುದು ಏಕೆ ಮತ್ತು ಹೊಸದಾಗಿ ಮಾಡುವುದು ಏಕೆ ಎಂಬುದು ನನ್ನ ಅಭಿಪ್ರಾಯವಾಗಿದೆ. ನಾನು ಸುಮಾರು ವರ್ಷಗಳಿಂದ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಕೃಷಿ ಸಚಿವರಿಗೆ ಪತ್ರ ಬರೆದು ನಮ್ಮಲ್ಲಿ ಕೃಷಿ college ಮಾಡಿ, ನಮ್ಮಲ್ಲಿರುವ ಕೃಷಿ diploma college ಅನ್ನು upgrade ಮಾಡಿ ಎಂದು ಹೇಳಿದ್ದೇನೆ. ಆದರೆ ಬಳ್ಳಾರಿ ಜಿಲ್ಲೆಗೆ ಕೊಟ್ಟಿದ್ದಾರೆ. ಅಲ್ಲಿ ಕೊಟ್ಟರೂ ಸಂತೋಷ, ಆದರೆ ನಮ್ಮ ಜಿಲ್ಲೆಗೆ ಒಂದು ಕೊಡಿ ಎಂದು ಹೇಳಿದರೂ neglect ಮಾಡಿದ್ದಾರೆ. ಅದೇರೀತಿ diploma college ಅನ್ನು upgrade ಮಾಡಿ ಕೃಷಿ college ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಕಲ್ಯಾಣ ಕರ್ನಾಟಕಕ್ಕೆ ರೂ.3 ಸಾವಿರ ಕೋಟಿ ಕೊಟ್ಟು ಒಂದು ಕಡೆ ಕೊಟ್ಟು ಮತ್ತೊಂದು ಕಡೆ ಕಸಿದುಕೊಳ್ಳುತ್ತಾರೆ. ಇಂತಹ ಹುನ್ನಾರ ಮಾಡುತ್ತಾರೆ. ರೂ. 3 ಸಾವಿರ ಕೋಟಿ ಸದುಪಯೋಗವಾಗಬೇಕಾಗಿದ್ದು, ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ಖಾಲಿಯಿರುವ ಸುಮಾರು 34 ಸಾವಿರ ಹುದ್ದೆಗಳನ್ನು ತುಂಬಬೇಕು. ಆಗ ಮಾತ್ರ ಕೊಟ್ಟ ಹಣ ಉಪಯೋಗವಾಗುತ್ತದೆ. ಹಿಂದೆ ಕೊಟ್ಟ ರೂ.1,500 ಕೋಟಿಗಳಲ್ಲಿ ಹೆಚ್ಚಿನ ಹಣ ಖರ್ಚಾಗದ ಪರಿಸ್ಥಿತಿ ಉಂಟಾಯಿತು. ಆದರೆ ಹೇಳುವುದು ಒಂದು ಮಾಡುವುದು ಒಂದು ಬೇಡ, ಹಣವನ್ನು ಖರ್ಚು ಮಾಡುವ ನಿಯತ್ತಿನ ಕೆಲಸ ಮಾಡಬೇಕೆಂದು ಒತ್ತಾಯಿಸುತ್ತೇನೆ.

ಇನ್ನು ನಾನು ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡುವಾಗ ನಮ್ಮ ಜಿಲ್ಲೆಯಲ್ಲಿ ದೊಡ್ಡ ನೀರಾವರಿ ಯೋಜನೆಗಳು ಇಲ್ಲದೇ, ಚಿಕ್ಕದಾದ ಕಾರಂಜಾ ಯೋಜನೆ ಇದ್ದು, ಈ ಯೋಜನೆಯು 60ರ ದಶಕದಲ್ಲಿ ರೂ.9 ಕೋಟಿಗೆ ಪ್ರಾರಂಭವಾಯಿತು. ಇವತ್ತು ರೂ.600 ಕೋಟಿಗಳು ಖರ್ಚಾದರೂ ಇದುವರೆಗೂ complete ಆಗಿಲ್ಲ. ಅದಕ್ಕೂ ಹಣ ಇಟ್ಟಿಲ್ಲ. ಈ ಯೋಜನೆಯನ್ನು complete ಮಾಡಲು ಹಣ ಇಡಬೇಕೆಂದು ಒತ್ತಾಯಿಸುತ್ತೇನೆ. ಅವರು ಮಾತೆತ್ತಿದರೆ ರೈತರ ಪರವಾಗಿ ಇದ್ದೇವೆ, ಅದು ಮಾಡಿದ್ದೇವೆ, ಇದು ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ. ಆದರೆ ರೈತರ ಪರವಾಗಿ ಏನು ಮಾಡಿದ್ದಾರೆ? ನಮ್ಮಲ್ಲಿ BSSK Sugar Factory ಇದ್ದು, ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಚುನಾವಣೆಗೆ ಮೊದಲು ಪ್ರಚಾರಕ್ಕೆ ಬಂದ ಸಂದರ್ಭದಲ್ಲಿ ನಡೆದ ಒಂದು ಸಭೆಯಲ್ಲಿ ಅಧಿಕಾರಕ್ಕೆ ಬಂದ 24 ಗಂಟೆಗಳಲ್ಲಿ ನೂರು ಕೋಟಿ ರೂಪಾಯಿಗಳನ್ನು ಕೊಡುವ ಬಗ್ಗೆ ಹೇಳಿದ್ದರು. ಇಂದಿಗೆ ಎಷ್ಟು ದಿವಸಗಳು ಕಳೆದಿವೆ? ಆದ್ದರಿಂದ ಮುಚ್ಚಿದ್ದ ಹಾಗೂ ಬಿಜೆಪಿ ರವರು ಒತ್ತಾಯ ಮಾಡಿ ಚಾಲೂ ಮಾಡಿರುವ ಆ ಕಾರ್ಖಾನೆಯಲ್ಲಿ crush ಆಗುತ್ತಿದ್ದರೂ recovery ಸರಿಯಾಗಿ ಬರುತ್ತಿಲ್ಲ. ಕೇವಲ 6% ಮಾತ್ರ ಬರುತ್ತಿದ್ದು, recovery 8–9% minimum ಬರಬೇಕು. ಮಾನ್ಯ ಸವದಿ ರವರ ಭಾಗದಲ್ಲಿ 9% ಕ್ಕಿಂತ ಕಡಿಮೆ ಬಂದಿರುವುದನ್ನು ನಾನು ನೋಡಿಲ್ಲ. At least ನಮ್ಮಲ್ಲಿ 9% ಆದರೂ ಬರಬೇಕಲ್ಲವೇ? ಇದಕ್ಕೆ ಕಾರಣವೇನೆಂದರೆ, ಅಲ್ಲಿ regular ಆದ M.D (Managing Director) ಯವರು ಇಲ್ಲ, ಆಡಳಿತಕ್ಕೆ ಬಂದವರು retire ಆದ ವ್ಯಕ್ತಿಯನ್ನು M.D ಎಂದು ಇಟ್ಟುಕೊಳ್ಳುತ್ತಾರೆ. ಅವರು ಹೇಳಿದಂತೆ ಬರೆದು recovery ತೋರಿಸಿಬಿಡುತ್ತಾರೆ. ಇದರಿಂದ ರೈತರಿಗೆ ಮೋಸವಾಗುತ್ತಿದ್ದು, ಈ ಬಗ್ಗೆ ಒಳ್ಳೆಯ ನಿರ್ಧಾರ ತೆಗೆದುಕೊಂಡು ರೂ.100 ಕೋಟಿಗಳನ್ನು ಕೊಟ್ಟು ಜೀರ್ಣೋದ್ಧಾರ ಮಾಡಬೇಕು. ಸರ್ಕಾರದ employee ಒಬ್ಬರನ್ನು M.D ಆಗಿ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

(ಮುಂದು)

(439) 17.03.2022 6.00 hv.rn

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ(ವಿಧಾಸಭೆಯಿಂದ ಚುನಾಯಿತರಾದವರು):–** ಸನ್ಮಾನ್ಯ ಸಭಾಪತಿಯವರೇ, ಸಕ್ಕರೆ ಕಾರ್ಖಾನೆಗಳು ರಿಕವರಿಗೆ ಬರುವುದು ಆ ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರ ಮೇಲೆ ಅವಲಂಬಿಸಿರುವುದಿಲ್ಲ. ಭೂಮಿ, ನೀರು ಮತ್ತು ಹವಾಮಾನಗಳ ಮೇಲೆ ರಿಕವರಿ ಅವಲಂಬಿಸಿರುತ್ತದೆ. ಕೃಷ್ಣಾ ಅಚ್ಚುಕಟ್ಟು ಪ್ರದೇಶದಲ್ಲಿ ಪ್ರಾರಂಭದಲ್ಲಿ ಮಹಾರಾಷ್ಟ್ರದ ಗಡಿಯಲ್ಲಿ 13 ರಿಂದ 13.5ರಷ್ಟು ರಿಕವರಿ ಬರುತ್ತದೆ. ಅದೇ ಕೊಲ್ಹಾಪುರದಲ್ಲಿ 12 ರಿಂದ 12.5ರಷ್ಟು ರಿಕವರಿ ಬರುತ್ತದೆ. ಸಾಂಗ್ಲಿ ಪ್ರದೇಶ ದಾಟಿ ಮಹಾರಾಷ್ಟ್ರಕ್ಕೆ ಬಂದಾಗ ರಿಕವರಿ ದರ 12 ರಿಂದ 11.5ರಷ್ಟು ಬರುತ್ತದೆ. ಕೃಷ್ಣಾ ಅಚ್ಚುಕಟ್ಟು ಪ್ರದೇಶದಿಂದ ಕೆಳಗೆ ಹೋದಂತೆ ರಿಕವರಿ ದರ 10.5 ರಿಂದ 12ರಷ್ಟು ರಿಕವರಿ ಆಗುತ್ತದೆ. ಇದಕ್ಕೆ ಮುಖ್ಯ ಕಾರಣವೇನೆಂದರೆ, ನೀರು, ಮಣ್ಣು, ಹವಾಮಾನ ಮತ್ತು ಕಬ್ಬಿನ ತಳಿಯ ಆಧಾರದ ಮೇಲೆ ರಿಕವರಿ ಬರುತ್ತದೆಯೇ ಹೊರತು ಅಲ್ಲಿರುವ ವ್ಯವಸ್ಥಾಪಕ ನಿರ್ದೇಶಕರುಗಳಿಂದ ಅಲ್ಲ.

**ವೈಸ್ ಛೇರ್ಮನ್:–** ಮಾನ್ಯ ಅರವಿಂದಕುಮಾರ್ ಅರಳಿಯವರೇ, ಬಹಳ ಚೆನ್ನಾಗಿ ಪರಿಣಾಮಕಾರಿಯಾಗಿ ಮಾತನಾಡುತ್ತಿದ್ದೀರಿ, ಇನ್ನೊಂದು ಐದು ನಿಮಿಷಗಳಲ್ಲಿ ತಮ್ಮ ಮಾತುಗಳನ್ನು ಮುಕ್ತಾಯಗೊಳಿಸಿ.

**ಶ್ರೀ ಅರವಿಂದ ಕುಮಾರ್ ಅರಳಿ:–** ಸನ್ಮಾನ್ಯ ಸಭಾಪತಿಯವರೇ, ರಿಕವರಿ ಎನ್ನುವುದು ಅಲ್ಲಿನ ವ್ಯವಸ್ಥಾಪಕ ನಿರ್ದೇಶಕರ ಮೇಲೆ ಅವಲಂಬಿಸಿಲ್ಲ ಮತ್ತು ಸ್ಥಳೀಯವಾಗಿರುವ ನೀರು, ಮಣ್ಣು ಮತ್ತು ಹವಾಗುಣದ ಮೇಲೆ ಅವಲಂಬಿಸಿದೆ ಎಂದು ಮಾನ್ಯ ಲಕ್ಷ್ಮಣ ಸವದಿಯವರು ಹೇಳುತ್ತಿರುವ ಮಾತನ್ನು ನಾನು ಒಪ್ಪಿಕೊಳ್ಳುತ್ತಿದ್ದೇನೆ. ಕಳೆದ 5–6 ವರ್ಷಗಳ ಹಿಂದೆ ಅದೇ ಮಣ್ಣು, ಅದೇ ಗಾಳಿ, ಅದೇ ಕಾರ್ಮಿಕರು ಅದೇ ಹವಾಮಾನವಿತ್ತು. ಆಗ ರಿಕವರಿಯ ದರ 9 ಕ್ಕಿಂತ ಕಡಿಮೆ ಆಗಿಲ್ಲ. ಆದರೆ, ಇತ್ತೀಚೆಗೆ ರಿಕವರಿಯ ಪ್ರಮಾಣ ಕಡಿಮೆಯಾಗುತ್ತಿದೆ. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ, ವ್ಯವಸ್ಥಾಪಕ ನಿರ್ದೇಶಕರನ್ನು ಸರ್ಕಾರದ ವತಿಯಿಂದ ನೇಮಕಾತಿ ಮಾಡಿದರೆ, ಅವರು ಶಿಸ್ತಿನಿಂದ ಇರುತ್ತಾರೆ. ಏನಾದರು ಲೋಪದೋಷಗಳಾದರೆ, ಅದನ್ನು ಕೇಳುವಂತಹ ಜವಾಬ್ದಾರಿ ಅವರಿಗಿರುತ್ತದೆ. ಆ ಕಾರಣಕ್ಕೋಸ್ಕರ ನಾನು ಈ ಮಾತನ್ನು ಹೇಳುತ್ತಿದ್ದೇನೆಯೇ ಹೊರತು ಬೇರೆ ಉದ್ದೇಶವೇನೂ ಇಲ್ಲ.

ರಿಕವರಿಯನ್ನು ಯಾವ ರೀತಿ ಹೆಚ್ಚು ಮಾಡುವುದಕ್ಕೆ ಸಾಧ್ಯವಿದೆ ಎನ್ನುವುದನ್ನು ನೋಡಿಕೊಂಡು ಸರ್ಕಾರ ಆ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕಾಗಿದೆ.

ಸನ್ಮಾನ್ಯ ಸಭಾಪತಿಯವರೇ, ನಾವೆಲ್ಲರೂ ಬಹಳ ದಿನಗಳಿಂದ ಹೋರಾಟ ಮಾಡಿ ನಮ್ಮ ಭಾಗಕ್ಕೊಂದು ವಿಮಾನ ನಿಲ್ದಾಣವನ್ನು ಮಂಜೂರು ಮಾಡಿಸಿಕೊಂಡಿದ್ದೆವು. ಡಿಫೆನ್ಸ್‌ನವರು ನಮಗೆ ಅನುಮತಿ ಕೊಡದೇ ಇದ್ದ ಕಾರಣ ಅದು ಪೆಂಡಿಂಗ್‌ನಲ್ಲಿತ್ತು. ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಅಧಿಕಾರಕ್ಕೆ ಬಂದಂತಹ ಸಂದರ್ಭದಲ್ಲಿ ಫೆಬ್ರವರಿಯಲ್ಲಿ ಉದ್ಘಾಟನೆ ಮಾಡಲಾಯಿತು. ಅಲ್ಲಿಂದ ಒಂದು ವರ್ಷದ ನಂತರ ಪುನಃ ಬಂದ್ ಮಾಡಲಾಗಿದೆ. ನಮಗೆ ವಿಮಾನ ಯಾನಕ್ಕೆ ಈಗ ಯಾವುದೇ ಸೌಲಭ್ಯಗಳಿಲ್ಲ. ನಾವು ವಿಮಾನದಲ್ಲಿ ಹೋಗಬೇಕಾದರೆ, ಗುಲ್ಬರ್ಗಾಕ್ಕೆ ಹೋಗಬೇಕಾಗುತ್ತದೆ. ಇಲ್ಲದಿದ್ದರೆ, ಪಕ್ಕದ ಹೈದ್ರಾಬಾದ್‌ಗೆ ಹೋಗಬೇಕಾಗುತ್ತದೆ. ನಮ್ಮಲ್ಲಿನ ವಿಮಾನ ನಿಲ್ದಾಣವನ್ನು ಉದ್ಘಾಟನೆ ಮಾಡುವಂತಹ ಸಂದರ್ಭದಲ್ಲಿ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಭರವಸೆ ನೀಡಿದ ರೀತಿಯಲ್ಲಿ ಇದನ್ನು ಪುನಃ ಆರಂಭಿಸಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಈ ಆಯವ್ಯಯದಲ್ಲಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಬಾಬ್ತಿಗಾಗಿ 28 ಸಾವಿರ ಕೋಟಿ ರೂಪಾಯಿಗಳನ್ನು ಮೀಸಲಿಡಲಾಗಿದೆ. ಈ ಮೊತ್ತ ಯಾವುದಕ್ಕೂ ಸಾಕಾಗುವುದಿಲ್ಲ. ಸುಮಾರು 35 ರಿಂದ 40 ಸಾವಿರ ಕೋಟಿ ರೂಪಾಯಿಗಳನ್ನಾದರೂ ಈ ಬಾಬ್ತಿಗೆ ಮೀಸಲಿಡಬೇಕೆನ್ನುವುದು ನನ್ನ ಒತ್ತಾಯವಾಗಿದೆ. ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಹಣ ಸ್ಥಳೀಯವಾಗಿರುವ ನಾಯಕರುಗಳಿಗೆ ಒಂದು ಖಜಾನೆಯ ರೀತಿ ಆಗಿದೆ. ನನ್ನ ಮಾತುಗಳ ಬಗ್ಗೆ ಮಾನ್ಯ ಸಭಾನಾಯಕರು ತಪ್ಪು ತಿಳಿದುಕೊಳ್ಳಬಾರದು. ಎಸ್.ಸಿ.ಎಸ್.ಪಿ/ಟಿ.ಎಸ್.ಪಿ. ಆಯವ್ಯಯಕ್ಕೆ ಅಲ್ಲಿನ ಸಿಬ್ಬಂದಿ ಸಹಿ ಮಾಡಿ ಕೊಡುತ್ತಾರೆ. ಇದು ಸರಿಯಾದುದಲ್ಲ. ಶಾಸಕರು ಅ ಆಯವ್ಯಯವನ್ನು ಅನುಮೋದಿಸಿದರೆ ಸರಿಯಾದ ರೀತಿಯಲ್ಲಿ ಉಪಯೋಗವಾಗುತ್ತದೆ ಎನ್ನುವುದು ನನ್ನ ಭಾವನೆಯಾಗಿದೆ. ಇಲ್ಲದಿದ್ದರೆ, ಕಾರ್ಯಕರ್ತರು ಇಂಜಿನ್ ಮುಂತಾದವುಗಳನ್ನು ಮಾರಾಟ ಮಾಡಿಕೊಳ್ಳುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗಾಗಿ ವಿನಿಯೋಗ ಮಾಡುವಂತಹ ಹಣವನ್ನು ವಿನಿಯೋಗ ಮಾಡುವುದಕ್ಕೆ ಯಾರುಯಾರೋ ಪಟ್ಟಿ ಕೊಡುವುದು ಬೇಡವೆಂದು ನಾನು ಈಗಾಗಲೇ ಹೇಳಿದ್ದೇನೆ. ಕಳೆದ ಎರಡು ವರ್ಷಗಳಿಂದ ಯಾವ ಕ್ಷೇತ್ರಕ್ಕೆ ಎಷ್ಟು ಹಣವನ್ನು ಬಿಡುಗಡೆ ಮಾಡಬೇಕು ಎನ್ನುವುದರ ಬಗ್ಗೆ ಶಾಸಕರಿಂದ ಪಟ್ಟಿಯನ್ನು ತೆಗೆದುಕೊಂಡು ಅದನ್ನು ಜಿಲ್ಲಾಧಿಕಾರಿಗಳ ಮೂಲಕ ಬಿಡುಗಡೆ ಮಾಡಲಾಗುತ್ತಿದೆ. ಇದರಲ್ಲಿ ಯಾವುದೇ ಗೊಂದಲಗಳಿಲ್ಲ.

ಶ್ರೀ ಅರವಿಂದ ಕುಮಾರ್ ಅರಳಿ:- ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಈಗ ಏನು ಮಾತುಗಳನ್ನು ಹೇಳಿದ್ದಾರೆ, ಅದನ್ನೇ ಕಳೆದ ಬಾರಿಯೂ ಹೇಳಿದ್ದರು. ಆಯವ್ಯಯಕ್ಕೆ ಶಾಸಕರಿಂದ ಪ್ರಪೋಸಲ್ ತೆಗೆದುಕೊಂಡು ಹಣ ಬಿಡುಗಡೆ ಮಾಡಲಾಗುತ್ತದೆ ಎನ್ನುವ ಮಾತನ್ನು ಹೇಳಿದ್ದರು. ನಾನು ಆರೋಪ ಮಾಡುತ್ತಿರುವುದು ಮತ್ತು ಮಾನ್ಯ ಸಭಾನಾಯಕರ ಗಮನಕ್ಕೆ ತರುತ್ತಿರುವ ವಿಚಾರವೇನೆಂದರೇ, ಅಧಿಕಾರಿಗಳು 20 ಪರ್ಸೆಂಟ್ ಅಥವಾ 15 ಪರ್ಸೆಂಟ್ ಕೊಟ್ಟು by name NOC ಯನ್ನು ಬಿಡುಗಡೆ ಮಾಡುತ್ತಾರೆ. ಅವರು ಏನು ಕೆಲಸ ಮಾಡುತ್ತಾರೆನ್ನುವುದು ಯಾರಿಗೂ ಗೊತ್ತಿಲ್ಲ. ಯಾರಿಂದ ಪ್ರಪೋಸಲ್ ತೆಗೆದುಕೊಳ್ಳುತ್ತಾರೆನ್ನುವುದೂ ಗೊತ್ತಾಗುವುದಿಲ್ಲ. ಈ ರೀತಿ ಆಗಬಾರದೆನ್ನುವುದು ನನ್ನ ಭಾವನೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಭಾನಾಯಕರ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೂ ಸಹ ಒಂದು ಪ್ರಕರಣವನ್ನು ತಮ್ಮ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಅಧಿವೇಶನ ಮುಗಿಸಿಕೊಂಡು ನಾನು ನನ್ನ ಕೊಠಡಿಯಲ್ಲಿದ್ದೆ. ನನ್ನ ಆಪ್ತ ಕಾರ್ಯದರ್ಶಿ ಮಾನ್ಯ ಸಭಾನಾಯಕರ ಆಪ್ತ ಕಾರ್ಯದರ್ಶಿಯವರ ಬಳಿ ಹೋಗಿದ್ದಾಗ, ಆತ "ನಿಮ್ಮ ಶಾಸಕರು ನಮ್ಮ ಮಂತ್ರಿಗಳ ಮೇಲೆ ಆರೋಪ ಮಾಡಿದ್ದಾರೆ. ಲಿಸ್ಟ್ ಇದ್ದರೆ ತೋರಿಸಲಿ" ಎನ್ನುವ ಮಾತನ್ನು ಹೇಳಿದ್ದಾನೆ. ನಾನು ಆ ಲಿಸ್ಟ್ ತಂದಿದ್ದೇನೆ, ಅದನ್ನು ಮಾನ್ಯ ಸಭಾನಾಯಕರಿಗೆ ಕಳುಹಿಸಿಕೊಡುತ್ತಿದ್ದೇನೆ. ಆ ಲಿಸ್ಟ್ ಪ್ರಕಾರ ಇವರ ಎಂ.ಡಿ., 25 ಕಾರುಗಳನ್ನು ಬಿಡುಗಡೆ ಮಾಡಿದ್ದಾರೆ. ಇದರ ಬಗ್ಗೆ ಮಾನ್ಯ

ಸಭಾನಾಯಕರೊಂದಿಗೆ ಮಾತನಾಡಿದಂತಹ ಸಂದರ್ಭದಲ್ಲಿ ನಾನು ಬಿಡುಗಡೆ ಮಾಡಿಲ್ಲ. ಎಂ.ಡಿ. ಮಾಡಿದ್ದಾರೆ. ಎಂದು ಹೇಳಿದರು. ಎಂ.ಡಿ. ಇವರ ಆಧೀನದಲ್ಲಿ ಬರುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೇ, ದೇವರಾಜ ಅರಸು ಅಭಿವೃದ್ಧಿ ನಿಗಮ ಮತ್ತು ಡಾ॥ ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮಗಳಿವೆ. ಈ ನಿಗಮಗಳ ವ್ಯಾಪ್ತಿಯಲ್ಲಿಯೇ ಎಲ್ಲವನ್ನು ಹಂಚಿಕೆ ಮಾಡಲಾಗುತ್ತದೆ. ಶಾಸಕರ ಹತ್ತಿರ ಪಟ್ಟಿ ತೆಗೆದುಕೊಳ್ಳುತ್ತಾರೆ, ಗ್ರಾಮಸಭೆಯಲ್ಲಿ ಫಲಾನುಭವಿಗಳ ಆಯ್ಕೆ ಆಗಬೇಕೆಂದು ಇದೆ. ಅದೆಲ್ಲ ಪ್ರಕ್ರಿಯೆಗಳು ಮುಗಿದಿರುತ್ತದೆ. ಎಲ್ಲಿಯಾದರೂ ಲೋಪವಾಗಿದೆ. ಅಧಿಕಾರಿಗಳ ಮಟ್ಟದಲ್ಲಿ ಸ್ವೇಚ್ಛಾಚಾರವಾಗಿದೆ. ಎನ್ನುವುದು ಅವರಿಗೆ ಕಂಡು ಬಂದಿದ್ದರೆ, ಆ ಪಟ್ಟಿಯನ್ನು ನನಗೆ ನೀಡಿದರೆ, ಯಾವುದೇ ಅಧಿಕಾರಿಯಾಗಿದ್ದರೂ ಸಹ ಅವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳಲಾಗುತ್ತದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ.

**ಶ್ರೀ ಆರ್.ಬಿ.ತಿಮ್ಮಾಪೂರ(ವಿಧಾನಸಭೆಯಿಂದ ಚುನಾಯಿತರಾದವರು):–** ಸನ್ಮಾನ್ಯ ಸಭಾಪತಿಯವರೇ, ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಹಣ ಸರಿಯಾದ ಕ್ರಮದಲ್ಲಿ ವ್ಯಯವಾಗುತ್ತಿಲ್ಲ ಎನ್ನುವುದು ಎಲ್ಲರಿಗೂ ತಿಳಿದಿರುವ ವಿಚಾರವಾಗಿದೆ. ಈ ಹಣ ಎಸ್.ಸಿ., ಎಸ್.ಟಿ.ಗಳಿಗೆ ತಲುಪುತ್ತಿದೆಯೋ ಇಲ್ಲವೋ, ಹಣ ದುರುಪಯೋಗವಾಗುತ್ತಿದೆಯೇ ಇಲ್ಲವೇ ಎನ್ನುವುದು ಆ ಜನರಿಗೆ ಗೊತ್ತಾಗಬೇಕಾದರೆ, ಈ ಹಣ ಸರಿಯಾದ ರೀತಿಯಲ್ಲಿ ವೆಚ್ಚವಾಗಬೇಕಾದರೆ, ಸ್ಥಳೀಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಯುವಕರನ್ನು ಒಳಗೊಂಡ ಒಂದು ಸಮಿತಿಯನ್ನು ರಾಜ್ಯ ಮಟ್ಟದಲ್ಲಿ ರಚನೆ ಮಾಡಿ, ಅದಕ್ಕೆ ಎಂ.ಎಲ್.ಎ.ಗಳನ್ನು ಅಧ್ಯಕ್ಷರನ್ನಾಗಿ ಮಾಡಿದರೆ, ಇಂತಹ ದುರುಪಯೋಗ ಪ್ರಕರಣಗಳನ್ನು ತಡೆಗಟ್ಟಬಹುದು. ಮತ್ತು ಯಾರೋ ದುರುಪಯೋಗ ಮಾಡಿದ್ದಾರೆಂದು ತನಿಖೆ ಮಾಡುವುದಕ್ಕೆ ಒಂದು ಸಮಿತಿ ರಚನೆ ಮಾಡುವುದು ಇವೆಲ್ಲವೂ ತಪ್ಪುತ್ತದೆ. ಆದ್ದರಿಂದ ಸ್ಥಳೀಯ ಯುವಕರನ್ನೊಳಗೊಂಡ ಒಂದು ಸಮಿತಿಯನ್ನು ರಚನೆ ಮಾಡಿದರೆ ಉತ್ತಮ ಎನ್ನುವುದು ನನ್ನ ಅನಿಸಿಕೆಯಾಗಿದೆ.

**ಶ್ರೀ ಅರವಿಂದ ಕುಮಾರ್ ಅರಳಿ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಕೇಳಿರುವ ಪಟ್ಟಿಯನ್ನು ನನ್ನ ಬಳಿ ಇದೆ. ಸಭೆ ಮುಗಿಯುವುದರೊಳಗಾಗಿ ಅದನ್ನು ಅವರಿಗೆ ಕಳುಹಿಸಿಕೊಡುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ಈ ಆಯವ್ಯಯದಲ್ಲಿ, ಪತ್ರಿಕೋದ್ಯಮವನ್ನು ಉತ್ತೇಜಿಸಲು ನಿಯಮಿತವಾಗಿ 8 ಪುಟಗಳಲ್ಲಿ ಪ್ರಕಟಗೊಳ್ಳುವ ಪ್ರಾದೇಶಿಕ ಪತ್ರಿಕೆಗಳಿಗೆ ಪ್ರೋತ್ಸಾಹ ನೀಡಲಾಗುವುದು. 20 ಸಾವಿರಕ್ಕೂ ಹೆಚ್ಚು ಪ್ರಸಾರ ಹೊಂದಿದ ವರ್ಣ ಪುಟಗಳಲ್ಲಿ ಪ್ರಕಟಗೊಳ್ಳುವ ಪ್ರಾದೇಶಿಕ ಪತ್ರಿಕೆಗಳನ್ನು ಸಧೃಡಗೊಳಿಸಲು ಹೊಸ ಯೋಜನೆಯನ್ನು ರೂಪಿಸಲಾಗುವುದು" ಎಂದು ಹೇಳಿದ್ದಾರೆ. ಜಿಲ್ಲಾ ಮಟ್ಟದಲ್ಲಿರುವ ಪತ್ರಿಕೆಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಮತ್ತು ಅವರು ಸಹ ತಮ್ಮ ಜೀವನವನ್ನು ಕಟ್ಟಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕಾಗಿದೆ. ಯಾವ ರೀತಿಯಲ್ಲಿ ಪ್ರಾದೇಶಿಕ ಪತ್ರಿಕೆಗಳನ್ನು ಸದೃಢಗೊಳಿಸುವಂತಹ ಯೋಜನೆಯನ್ನು ರೂಪಿಸಲಾಗಿದೆಯೋ ಅದೇ ರೀತಿಯಲ್ಲಿ ಜಿಲ್ಲಾ ಮಟ್ಟದ ಪತ್ರಿಕೆಗಳಿಗೂ ಪ್ರೋತ್ಸಾಹ ನೀಡಬೇಕೆನ್ನುವುದು ನನ್ನ ಒತ್ತಾಯವಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವ ಆಯವ್ಯಯದಲ್ಲಿ; "ದೇವಾಲಯಗಳನ್ನು ಸರ್ಕಾರದ ನಿಯಂತ್ರಣದಿಂದ ಮುಕ್ತಗೊಳಿಸಬೇಕೆಂಬ ಬೇಡಿಕೆ ಬಹುಕಾಲದಿಂದ ಕೇಳಿ ಬರುತ್ತಿದೆ. ಭಕ್ತಾದಿಗಳ ಈ ಬೇಡಿಕೆಯನ್ನು ಪರಿಗಣಿಸಿ, ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಯಲ್ಲಿರುವ ದೇವಾಲಯಗಳಿಗೆ ಸ್ವಾಯತ್ತತೆ ನೀಡಿ, ಅಭಿವೃದ್ಧಿ ಕಾಮಗಾರಿಗಳ ವಿವೇಚನೆಯನ್ನು ದೇವಾಲಯಗಳಿಗೆ ಪ್ರತ್ಯಾಯೋಜಿಸಲು ಕಾನೂನು ಕ್ರಮ ಕೈಗೊಳ್ಳಲಾಗುವುದು" ಎಂದು ಹೇಳಲಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಸರ್ಕಾರದ ನಿಯಂತ್ರಣದಿಂದ ದೇವಾಲಯಗಳನ್ನು ಬಿಡುಗಡೆಗೊಳಿಸಿದರೆ, ಕೆಳವರ್ಗದ ಜನರಿಗೆ ದೇವಸ್ಥಾನ ಪ್ರವೇಶಕ್ಕೆ ಅವಕಾಶ ಸಿಗುವುದಿಲ್ಲ. ಹಿಂದಿನ ಕಾಲದಲ್ಲಿರುವ ಪದ್ಧತಿಯೇ ಮುಂದೆಯೂ ಬರಬಹುದು. ಕೆಳವರ್ಗದವರು ದೇವಸ್ಥಾನದಿಂದ ಹೊರಗಡೆ ಇರಬೇಕಾಗುತ್ತದೆ. ಆದ್ದರಿಂದ ಸರ್ಕಾರ ಇದನ್ನು ಕೈಬಿಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಎನ್.ರವಿಕುಮಾರ್:-** ಸನ್ಮಾನ್ಯ ಸಭಾಪತಿಯವರೇ, ದೇವಾಲಯದಿಂದ ಹೊರಗೆ ಇರುವುದು ಹೇಗೆ ಸಾಧ್ಯ?

**ಶ್ರೀ ಅರವಿಂದ ಕುಮಾರ್ ಅರಳಿ:-** ಸನ್ಮಾನ್ಯ ಸಭಾಪತಿಯವರೇ, ಹಿಂದುಳಿದ ವರ್ಗದವರಿಗೆ ಮತ್ತು ಎಸ್.ಸಿ./ಎಸ್.ಟಿ.ಯವರಿಗೆ ಇವತ್ತಿಗೂ ಕೆಲವು ದೇವಸ್ಥಾನದೊಳಗೆ ಪ್ರವೇಶವನ್ನು ನೀಡುತ್ತಿಲ್ಲ.

(ಮುಂದುವರಿದಿದೆ)

(440) 17.3.2022 6.10 ಪಿಕೆ:ಆರ್‌ಎನ್

**ಶ್ರೀ ಅರವಿಂದ ಕುಮಾರ್ ಅರಳಿ**(ಮುಂದು)

ಮತ್ತೆ ಆ ಜನ ಹೊರಗಡೆ ಇರುವ ಹಾಗೆ ಆಗುತ್ತದೆ ಎಂದು ನನಗನಿಸುತ್ತಿದೆ. ಆ ದೃಷ್ಟಿಯಿಂದ ಸರ್ಕಾರ ಇದನ್ನು ಕೈ ಬಿಡಬೇಕು ಎಂದು ಕೇಳಿಕೊಳ್ಳುತ್ತೇನೆ.

**ಶ್ರೀ ಎನ್.ರವಿಕುಮಾರ್:-** ಅವರು ದೇವಾಲಯದಿಂದ ಹೊರಗಡೆ ಹೇಗೆ ಇರುತ್ತಾರೆ?

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಗಳೆ, ಹಿಂದುಳಿದ ವರ್ಗದವರಿಗೆ, ಎಸ್‌ಸಿ/ಎಸ್‌ಟಿ ಗಳಿಗೆ ಒಳಗೆ ಹೋಗಲು ಅವಕಾಶ ಸಿಗುವುದಿಲ್ಲ. ಪರಿಸ್ಥಿತಿ ಈಗಲೂ ಕೂಡ ಹಾಗೆಯೇ ಇದೆ. ತಹಸೀಲ್ದಾರರ ವ್ಯಾಪ್ತಿಯೊಳಗಿರುವ ದೇವಸ್ಥಾನಗಳಿಗೆ ಈ ಜನ ಹೋಗುತ್ತಾರೆ. ಬೇರೆ ಕಡೆ ಹೋಗುವುದಿಲ್ಲ. ಮಾನ್ಯ ರವಿಕುಮಾರ್‌ರವರ ಭಾಗದಲ್ಲಿ ಪದ್ಧತಿ ಹೇಗಿದೆಯೋ ನನಗೆ ಗೊತ್ತಿಲ್ಲ. ನಮ್ಮ ಕಡೆಯಂತೂ ಆ ಪದ್ಧತಿ ಇನ್ನೂ ಹಾಗೆಯೇ ಇದೆ. ನಾನು ಬೇಕಾದರೆ ನಿಮಗೆ ತೋರಿಸುತ್ತೇನೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಗಳೆ, ಈಗ ಕಾಲ ಬದಲಾಗಿದೆ. ಇಂಥದ್ದನ್ನು ನಿಭಾಯಿಸುವುದು ಸಾಮಾಜಿಕ ಜವಾಬ್ದಾರಿ ಕೂಡ ಆಗಿದೆ.

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಗಳೆ, ಈ ಜನರಿಗೆ ಬಾಡಿಗೆ ಮನೆ ಸಿಗುವುದಿಲ್ಲ. ಅವರು ಮಂತ್ರಿಯೇ ಆಗಿರಬಹುದು ಅಥವಾ ಐಎಎಸ್ ಅಧಿಕಾರಿಯೇ ಆಗಿರಬಹುದು. ಆ ಮಾನಸಿಕತೆಯಿಂದ ಯಾರೂ ಹೊರಗೆ ಬಂದಿಲ್ಲ.

**ಶ್ರೀ ಅರವಿಂದ ಕುಮಾರ್ ಅರಳಿ:–** ಮಾನ್ಯ ರವಿಕುಮಾರ್‌ರವರ ಕಡೆ ಆ ರೀತಿ ಇರಬಹುದು. ಆದರೆ ನಮ್ಮ ಕಡೆ ಆ ರೀತಿ ಇಲ್ಲ. ಮಾನ್ಯ ರವಿಕುಮಾರ್‌ರವರು ಹೇಳಿದ ಹಾಗೆ ಇಡೀ ರಾಜ್ಯದಲ್ಲಿ ಎಲ್ಲೂ ಕೂಡ ನನಗೆ ಕಂಡು ಬಂದಿಲ್ಲ.

**ವೈಸ್ ಚೇರ್ಮನ್:–** ಅಸ್ಪೃಶ್ಯತೆ ನಿವಾರಣೆ ಮತ್ತು ಮುಖ್ಯ ವಾಹಿನಿಗೆ ದೀನ–ದಲಿತರನ್ನು ತರಬೇಕಾದ ಜವಾಬ್ದಾರಿ ಕೇವಲ ಸರ್ಕಾರದ ಮೇಲಿದೆ ಎಂದುಕೊಳ್ಳುತ್ತೀರಾ? ಆ ಜವಾಬ್ದಾರಿ ಇಡೀ ಸಮಾಜದ ಮೇಲಿದೆ. ಅದನ್ನು ಎಲ್ಲರೂ ಒಗ್ಗಟ್ಟಾಗಿ ಸೇರಿ ನಿಭಾಯಿಸಬೇಕು ಎನ್ನುವುದು ಪೀಠದ ಆಶಯವಾಗಿದೆ. ಲೋಪ–ದೋಷಗಳ ಬಗ್ಗೆ ಬೆಳಕು ಚೆಲ್ಲುವುದಕ್ಕೆ ನಿಮಗೆ ಅವಕಾಶ ಇದೆ. ಆದರೆ, ಆ ಜವಾಬ್ದಾರಿ ಕೇವಲ ಸರ್ಕಾರದ್ದಲ್ಲ. ಮಾನ್ಯ ರವಿಕುಮಾರ್‌ರವರ ಮಾತನ್ನು ನಾನು ಸಮರ್ಥಿಸುತ್ತೇನೆ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಅರಳಿಯವರು ತಮ್ಮ ಅಭಿಪ್ರಾಯಗಳನ್ನು ಹೇಳಲಿ, ಇನ್ನೂ ಐದು ನಿಮಿಷ ಕಾಲ ತೆಗೆದುಕೊಳ್ಳಲಿ. ಆದರೆ ದೇವಸ್ಥಾನಗಳಿಗೆ ಸ್ವಾತಂತ್ರ್ಯ ಕೊಟ್ಟ ತಕ್ಷಣ, ಹಿಂದೆ ಇದ್ದಂತೆ ಎಲ್ಲವೂ ಅಸ್ಪೃಶ್ಯತೆ ಕಾಲದಂತೆ ಆಗಿಬಿಡುತ್ತದೆ ಎಂದು ಅರ್ಥವಲ್ಲ. ಹಿಂದುಳಿದವರನ್ನು, ಎಸ್‌ಸಿ/ಎಸ್‌ಟಿಗಳನ್ನು ದೇವಸ್ಥಾನದಿಂದ ಹೊರಗಡೆ ಇಟ್ಟುಬಿಡುತ್ತಾರೆ ಎಂದು ಹೇಳುವುದು ಸೂಕ್ತವಾದುದಲ್ಲ.

**ವೈಸ್ ಚೇರ್ಮನ್:–** ಮಾನ್ಯ ಅರಳಿಯವರೇ ಈ ವಿಷಯವನ್ನು ಕೊನೆಗೆ ತೆಗೆದುಕೊಂಡಿದ್ದೀರಿ. ಆದರೆ ನಿಮ್ಮ ಸಮಯ ಮುಗಿದಿದೆ. ನಾನು ಈಗ ಮಾನ್ಯ ಸಂಕನೂರರವರನ್ನು ಮಾತನಾಡಲು ಕರೆದಿದ್ದೇನೆ.

**ಶ್ರೀ ಅರವಿಂದ ಕುಮಾರ್ ಅರಳಿ:–** ಮಾನ್ಯ ಸಭಾಪತಿಗಳೆ, ನಾನು ಇನ್ನೂ ಎರಡು ನಿಮಿಷ ಮಾತನಾಡುತ್ತೇನೆ ಅಷ್ಟೆ.

**ವೈಸ್ ಚೇರ್ಮನ್:-** ದಯವಿಟ್ಟು ನಾನು ಹೇಳುವುದನ್ನು ಕೇಳಿ. ನಾವು ಈಗಾಗಲೇ ಎರಡೂ ಕಡೆಯವರ ಜೊತೆ ಸಮಾಲೋಚನೆ ಮಾಡಿ 6.30 ಗಂಟೆಗೆ ಸದನವನ್ನು ಮುಗಿಸಬೇಕು ಎಂದು ತೀರ್ಮಾನ ಮಾಡಿದ್ದೇವೆ. ಈಗ ನಾನು ಮಾನ್ಯ ಸಂಕನೂರರವರ ಹೆಸರನ್ನು ಕರೆದಿದ್ದೇನೆ. ಅವರು ಮಾತನಾಡುವುದಕ್ಕೆ ಪ್ರಾರಂಭಿಸಿದರೆ 20 ನಿಮಿಷ ಕೂಡ ಸಿಗುವುದಿಲ್ಲ. ಹೀಗಾದರೆ ತಪ್ಪಾಗುತ್ತದೆ. ಆದ್ದರಿಂದ ಈಗ ಮಾನ್ಯ ಸಂಕನೂರರವರು ಮಾತನಾಡುತ್ತಾರೆ.

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಗಳೆ, ಮಾನ್ಯ ರವಿಕುಮಾರ್‌ರವರು ಮಾತನಾಡಿದ್ದರಿಂದ ಐದು ನಿಮಿಷ ಕಳೆದು ಹೋಯಿತು.

**ವೈಸ್ ಚೇರ್ಮನ್:-** ನಿಮಗೆ ಮಾತನಾಡಲು ಸಾಕಷ್ಟು ಸಮಯ ಕೊಟ್ಟಿದ್ದೇನೆ. ನೀವು ಚೆನ್ನಾಗಿ ಕೂಡ ಮಾತನಾಡಿದ್ದೀರಿ. ಆದರೆ ಕೊನೆಯಲ್ಲಿ ಈ ರೀತಿ ಪ್ರಚೋದನಕಾರಿ ವಿಚಾರವನ್ನು ಎತ್ತಿಕೊಂಡಿದ್ದೀರಿ.

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಗಳೆ, ನಾನು ದೇವಸ್ಥಾನಗಳ ಬಗ್ಗೆ ಮಾತನಾಡುತ್ತಿದ್ದೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಅವರು ಪ್ರಚೋದನಕಾರಿ ವಿಚಾರವನ್ನು ಹೇಳುತ್ತಿಲ್ಲ. ಆ ನೋವು ಅವರಿಗೆಯೇ ಗೊತ್ತು. ಅವರು ಮಾತನಾಡುತ್ತಿರುವುದು ಪ್ರಚೋದನಕಾರಿಯಲ್ಲ.

**ವೈಸ್ ಚೇರ್ಮನ್:-** ಸರ್ಕಾರ ಯಾವುದೇ ಯೋಜನೆಗಳಿಗೆ ಕಾನೂನಿನ ನೆರವು ಇರುತ್ತದೆ. ಕಾರ್ಯಸಾಧು ಮಾಡುವಂಥದ್ದು ಕೇವಲ ಸರ್ಕಾರಕ್ಕೆ ಸಂಬಂಧಪಟ್ಟಿದ್ದಲ್ಲ. ಎಲ್ಲರದೂ ಜವಾಬ್ದಾರಿ ಇರುತ್ತದೆ. ನೀವು ಈ ಕುರಿತು ಗಮನ ಸೆಳೆದಿರುವುದನ್ನು ನಾನು ಪ್ರಶಂಸೆ ಮಾಡುತ್ತೇನೆ. ಆದರೆ ಇಂತಹ ಜವಾಬ್ದಾರಿ ಎಲ್ಲರ ಮೇಲೂ ಇರುತ್ತದೆ ಎಂದು ನೆನಪು ಮಾಡಿದೆ ಅಷ್ಟೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಗಳೆ, ಈಗಲೂ ಬೇಕಾದರೆ ಹೋಗಿ ನೋಡೋಣ. ಪಂಕ್ತಿ ಭೋಜನದಲ್ಲಿ ನಮ್ಮನ್ನು ಕೂರಿಸುತ್ತಾರೋ ಇಲ್ಲವೋ ಗೊತ್ತಾಗುತ್ತದೆ.

**ವೈಸ್ ಚೇರ್ಮನ್:–** ಆ ರೀತಿ ಪದ್ಧತಿ ತಪ್ಪು. ಇಂಥದ್ದನ್ನು ನಿವಾರಣೆ ಮಾಡುವುದಕ್ಕೆ ನಾವು ಶ್ರಮಿಸಬೇಕಿದೆ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಇಂತಹ ಪದ್ಧತಿ ಇನ್ನೂ ಜೀವಂತವಾಗಿದೆ. ನಮ್ಮನೇ ಬಿಡುವುದಿಲ್ಲ; ಇನ್ನು ಅವರನ್ನು ಬಿಡುತ್ತಾರೆಯೇ? ನಮ್ಮಂಥ ಕಾಯಕ ಸಮಾಜದವರನ್ನು ಮತ್ತು ದಲಿತರನ್ನು ಪಂಕ್ತಿ ಭೋಜನದಲ್ಲೂ ಕೂರಿಸಿಕೊಳ್ಳುವುದಿಲ್ಲ. ಬಟ್ಟೆ ತೆಗೆಯಿರಿ, ನೋಡುತ್ತೇವೆ ಎಂದು ಹೇಳುತ್ತಾರೆ. ಇದೊಂದು ಸಾಮಾಜಿಕ ಪಿಡುಗು.

**ವೈಸ್ ಚೇರ್ಮನ್:–** ಇಂತಹ ಪದ್ಧತಿಯನ್ನು ಸಮಾಜದಿಂದ ದೂರ ಮಾಡಲು ನಿಮ್ಮಂಥವರು ನೇತೃತ್ವ ವಹಿಸಬೇಕು.

**ಶ್ರೀ ಅರವಿಂದ ಕುಮಾರ್ ಅರಳಿ:–** ಮಾನ್ಯ ಸಭಾಪತಿಗಳೆ, ನೀವು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಈ ಕೆಲಸವನ್ನು ಸರ್ಕಾರ ಮಾತ್ರವಲ್ಲ ಸಮಾಜ ಕೂಡ ಮಾಡಬೇಕಾಗುತ್ತದೆ.

**ವೈಸ್ ಚೇರ್ಮನ್:–** ಮಾನ್ಯ ಅರಳಿಯವರೇ ನಿಮ್ಮ ಮಾತನ್ನು ಮುಗಿಸಿ. ನಾನು ಮಾನ್ಯ ಸಂಕನೂರ ಅವರನ್ನು ಕರೆದಿದ್ದೇನೆ. ತಮಗೆ ಮಾತನಾಡಲು ನಾನು ಸಾಕಷ್ಟು ಸಮಯ ಕೊಟ್ಟಿದ್ದೇನೆ. ಸುಮ್ಮನೆ ಸತಾಯಿಸಬೇಡಿ.

**ಶ್ರೀ ಅರವಿಂದ ಕುಮಾರ್ ಅರಳಿ:–** ಐದು ನಿಮಿಷದಲ್ಲಿ ಕನ್‌ಕ್ಲೂಡ್ ಮಾಡುತ್ತೇನೆ.

**ವೈಸ್ ಚೇರ್ಮನ್:–** ನೀವು ಐದು ನಿಮಿಷ ತೆಗೆದುಕೊಂಡರೆ ಮಾನ್ಯ ಸಂಕನೂರ ಅವರಿಗೆ ಕಾಲಾವಕಾಶ ಕಡಿಮೆ ಆಗುತ್ತದೆ. ಅವರಿಗೆ ಈಗಲೇ ಮಾತನಾಡಲು ಅವಕಾಶ ಮಾಡಿಕೊಟ್ಟರೆ ಅವರು ತಮ್ಮ ವಿಷಯಗಳನ್ನು ಮಂಡಿಸಬಹುದು. ಎಲ್ಲರಿಗೂ ಮಾತನಾಡಲು ಅವಕಾಶ ಮಾಡಿಕೊಡಬೇಕು ಅಲ್ಲವೇ? ಪೀಠದಲ್ಲಿ ನೀವು ಕುಳಿತುಕೊಂಡಿದ್ದರೆ ಏನು ಮಾಡುತ್ತಿದ್ದೀರಿ?

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಗಳೆ, ನಾನು ನನ್ನ ಭಾಷಣವನ್ನು ಪ್ರಾರಂಭ ಮಾಡುವುದಕ್ಕೆ ಮುಂಚೆಯೇ, ನನಗೆ ಸಮಯ ಸಾಕಾಗುವುದಿಲ್ಲ ಎನ್ನುವ ಮಾತನ್ನು ಹೇಳಿದ್ದೆ.

**ವೈಸ್ ಚೇರ್ಮನ್:-** ನಿಮಗೆ ಮಾತನಾಡಲು ಸಾಕಷ್ಟು ಸಮಯ ಕೊಟ್ಟಿದ್ದೇನೆ. ಸಮಯ ಕೊಟ್ಟಿದ್ದರೂ, ಕೊಡಲಿಲ್ಲ ಎಂದು ಹೇಳಿದರೆ ತಪ್ಪಾಗುತ್ತದೆ.

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಗಳೆ, ಇದೊಂದು ವಿಷಯವನ್ನು ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ. ಪೀಠದಿಂದ ತಾವು, ಈ ಪಿಡುಗನ್ನು ಹೋಗಲಾಡಿಸಬೇಕಾದರೆ ಸರ್ಕಾರ ಮತ್ತು ಜನಪ್ರತಿನಿಧಿಗಳು ಸೇರಿಕೊಂಡು ಮಾಡಬೇಕು ಎಂದು ಹೇಳಿದಿರಿ. ಈಗೇನು ಸರ್ಕಾರದ ಅಧೀನದಲ್ಲಿವೆಯೋ ಆ ದೇವಸ್ಥಾನಗಳ ಒಳಗೆ ಸರಳವಾಗಿ ದಲಿತರು, ಹಿಂದುಳಿದವರು ಒಳಗೆ ಹೋಗಬಹುದು. ಆದರೆ, ಈ ದೇವಸ್ಥಾನಗಳಿಗೆ ಸ್ವಾತಂತ್ರ್ಯ ಕೊಟ್ಟರೆ, ಖಾಸಗಿಯನ್ನಾಗಿ ಮಾಡಿಕೊಂಡು ಅವರ ದಬ್ದಬಾ ಹೆಚ್ಚಾಗುತ್ತದೆ; ಒಳಗೆ ಯಾರನ್ನೂ ಬಿಡುವುದಿಲ್ಲ. ಚುನಾವಣೆಯ ಸಮಯದಲ್ಲಿ ನಾವು ಹಳ್ಳಿಗಳಿಗೆ ಹೋದಾಗ, ಅಲ್ಲಿನ ಗುಡಿಗಳಲ್ಲೇ ಪ್ರಚಾರ ಮಾಡುವ ಸಂದರ್ಭದಲ್ಲಿ, ಸ್ವಲ್ಪ ಚೆನ್ನಾಗಿದ್ದರೆ ನಮ್ಮನ್ನು ಮೇಲಕ್ಕೆ ಕರೆಯುತ್ತಾರೆ. ಆದರೆ ಆ ಊರಿನ ಜನ ಮೇಲಕ್ಕೆ ಬರುವುದೇ ಇಲ್ಲ. ಏಕೆ ಬರುವುದಿಲ್ಲ? ನೀವು ಭಾಷಣ ಮಾಡುವುದಕ್ಕೆ ಬಂದಾಗ ನಾವು ಊರಿನಲ್ಲಿ ಇರಬೇಕು; ನಂತರ ನಮಗೆ ಕಷ್ಟ ಕೊಡುತ್ತಾರೆ ಎನ್ನುವ ಮಾತನ್ನು ಅವರು ನಮಗೆ ಹೇಳುತ್ತಾರೆ.

**ವೈಸ್ ಚೇರ್ಮನ್:-** ಇದರ ನಿವಾರಣೆಗೆ ಏನು ಮಾಡಬೇಕು ಎನ್ನುವುದರ ಬಗ್ಗೆ ಸಲಹೆ ಕೊಡಿ.

**ಶ್ರೀ ಅರವಿಂದ ಕುಮಾರ್ ಅರಳಿ:-** ಈ ದೇವಸ್ಥಾನಗಳನ್ನು ಸರ್ಕಾರ ತನ್ನ ಅಧೀನದಲ್ಲಿ ಇಟ್ಟುಕೊಳ್ಳಬೇಕು. ಅವುಗಳಿಗೆ ಸ್ವಾಯತ್ತತೆ ಕೊಡುವುದು ಬೇಡ ಎನ್ನುವುದು ನನ್ನ ಅಭಿಪ್ರಾಯವಾಗಿದೆ.

**ವೈಸ್ ಚೇರ್ಮನ್:-** ಮಾನ್ಯ ಸದಸ್ಯರ ಸಂವೇದನೆ ಮತ್ತು ಅವರ ಆತಂಕವನ್ನು ಸರ್ಕಾರ ಗಮನಿಸಬೇಕು.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಗಳೆ, ಮಾನ್ಯ ಸಂಕನೂರ ಅವರನ್ನು ನಾಳೆ ಮಾತನಾಡುವುದಕ್ಕೆ ಅವಕಾಶ ಕೊಡಿ. ಈಗ ಸಮಯ ಆಗಿದೆ.

**ವೈಸ್ ಚೇರ್ಮನ್:-** ಅವರ ಹೆಸರು ಕರೆದಾಗಿದೆ. ನೀವು ಹಿರಿಯ ಸದಸ್ಯರು, ದಯವಿಟ್ಟು ಸಹಕರಿಸಬೇಕು.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಗಳೆ, ಮಾನ್ಯ ಸಂಕನೂರರವರು ಬಹಳ ಚೆನ್ನಾಗಿ ಮಾತನಾಡುತ್ತಾರೆ. ನಾವೆಲ್ಲರೂ ಅವರ ಭಾಷಣವನ್ನು ಕೇಳಬೇಕಿದೆ. ಆದ್ದರಿಂದ ನಾಳೆ ಬೆಳಗ್ಗೆ ಅವರಿಗೆ ಅವಕಾಶ ಮಾಡಿ ಕೊಡಿ.

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಮುಖ್ಯ ಮಂತ್ರಿಗಳಾಗಿರುವ ಮಾನ್ಯ ಬಸವರಾಜ ಬೊಮ್ಮಾಯಿಯವರು 2022-23ನೇ ಸಾಲಿನ ಆಯವ್ಯಯವನ್ನು ಮಂಡಿಸಿದ್ದಾರೆ. ಈ ಕುರಿತು ವಿರೋಧ ಪಕ್ಷದ ಮತ್ತು ಆಡಳಿತ ಪಕ್ಷದ ಗೌರವಾನ್ವಿತ ಸದಸ್ಯರು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಬಹಳಷ್ಟು ಸದಸ್ಯರು ಈ ಒಂದು ಬಜೆಟ್ಟನ್ನು ಸ್ವಾಗತಿಸಿ ಮಾತನಾಡಿದ್ದಾರೆ; ಕೆಲವು ಸದಸ್ಯರು ಇದರ ಬಗ್ಗೆ ಟೀಕೆ-ಟಿಪ್ಪಣಿಗಳನ್ನು ಮಾಡಿ, ಅದರ ಜೊತೆಗೆ ಸಲಹೆ-ಮಾರ್ಗದರ್ಶಗಳನ್ನೂ ಕೊಟ್ಟಿದ್ದಾರೆ. ಮಾನ್ಯ ಬಸವರಾಜ ಬೊಮ್ಮಾಯಿಯವರು "ಸಬ್ ಕಾ ಸಾಥ್; ಸಬ್ ಕಾ ವಿಕಾಸ್", "ಸರ್ವರಿಗೂ ಸಮಪಾಲು; ಸರ್ವರಿಗೂ ಸಮಬಾಳು" ಈ ಒಂದು ತತ್ವ ಸಿದ್ಧಾಂತದ ಅಡಿಯಲ್ಲಿ ಈ ಆಯವ್ಯವನ್ನು ಸಿದ್ಧಪಡಿಸಿರುವುದರ ಹಿನ್ನೆಲೆಯಲ್ಲಿ ನಾನು ಹೃತ್ಪೂರ್ವಕವಾಗಿ ಸ್ವಾಗತ ಮಾಡಿ ನನ್ನ ವಿಚಾರಗಳನ್ನು ವ್ಯಕ್ತಪಡಿಸಬಯಸುತ್ತೇನೆ.

ಮಾನ್ಯ ಸಭಾಪತಿಗಳೆ, ಮಾನ್ಯ ಬಸವರಾಜ ಬೊಮ್ಮಾಯಿಯವರು ಬಜೆಟ್ ಮಂಡನೆ ಮಾಡಿದ ನಂತರ, ಇದಕ್ಕೆ ಸಾರ್ವಜನಿಕರು, ರೈತರು, ಮಹಿಳೆಯರು, ಯುವಕರು, ಅರ್ಥಶಾಸ್ತ್ರಜ್ಞರು ತಮ್ಮ ತಮ್ಮ ಪ್ರತಿಕ್ರಿಯೆಗಳನ್ನು ಕೊಟ್ಟಿದ್ದಾರೆ. ಅದನ್ನು ನಾನು ಕಾತುರದಿಂದ ನೋಡುತ್ತಿದ್ದೆ. ಬಹಳ ಸಂತೋಷದ ಸಂಗತಿ ಏನೆಂದರೆ, ಮರು ದಿನದ ಪತ್ರಿಕೆಗಳಲ್ಲಿ ಈ ಬಜೆಟ್ಟಗೆ ಸಂಬಂಧಪಟ್ಟಂತೆ ಮೆಚ್ಚುಗೆ ವ್ಯಕ್ತಪಡಿಸಿ

ಸ್ವಾಗತ ಮಾಡಿದ್ದರು. ಇದನ್ನು ನಾವೂ ನೋಡಿದ್ದೇವೆ ಮತ್ತು ಟಿವಿ ಮಾಧ್ಯಮಗಳಲ್ಲಿ ನೋಡಿಯೂ ಕೂಡ ಇದ್ದೇವೆ. ಸಾರ್ವಜನಿಕರು, ರೈತರು, ಅರ್ಥಶಾಸ್ತ್ರಜ್ಞರು ಯಾವರೀತಿ ಪ್ರತಿಕ್ರಿಯೆ ನೀಡಿದ್ದಾರೆ, ಈ ಬಜೆಟನ್ನು ಯಾವರೀತಿ ವಿಶ್ಲೇಷಣೆ ಮಾಡಿದ್ದಾರೆ ಎನ್ನುವುದರ ಬಗ್ಗೆ ಈ ಸದನದ ಗಮನಕ್ಕೆ ತರಬಯಸುತ್ತೇನೆ. ಈ ಒಂದು ಬಜೆಟ್ ಸಂಬಂಧಪಟ್ಟಂತೆ "ಜನಪ್ರಿಯ, ಪ್ರಗತಿಪರ, ಸಮತೋಲನ ಬಜೆಟ್" ಎಂದೂ, "ಸಮಗ್ರ ಅಭಿವೃದ್ಧಿಗೆ ಸುಸ್ಥಿರ ಬಜೆಟ್" ಎಂದು, "ಸರ್ವಸ್ಪರ್ಶಿ, ದೂರದರ್ಶಿ ಬಜೆಟ್", "ತೆರಿಗೆ ಹೆಚ್ಚಳವಿಲ್ಲದ, ಬೆಲೆ ಏರಿಕೆ ಬರೆ ಬೀಳದ ಜಜೆಟ್", "ಅಸಮಾನತೆ ನಿವಾರಣೆಗೆ ಪೂರಕ ಬಜೆಟ್", "ಸರ್ವರಿಗೂ ಸಮಪಾಲು, ಬಜೆಟ್‌ನಲ್ಲಿ ಬೊಮ್ಮಾಯಿ ವಿಶ್ವರೂಪ", " ಅನ್ನದಾತರಿಗೆ ಶಕ್ತಿ ತುಂಬುವ ಬಜೆಟ್", "ಗ್ರಾಮೀಣ ಅಭಿವೃದ್ಧಿಗೆ ಪೂರಕವಾದ ಬಜೆಟ್", "ಕೃಷಿ, ಶಿಕ್ಷಣ, ಆರೋಗ್ಯಕ್ಕೆ ಒತ್ತು ನೀಡಿದ ಬಜೆಟ್", "ನೀರಾವರಿಗಾಗಿ ಪ್ರಾಶಸ್ತ್ಯ ನೀಡಿದ ಬಜೆಟ್" ಎಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ, ಸ್ವಾಗತ ಮಾಡಿದ್ದಾರೆ, ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಎಲ್ಲರಿಗೂ ಮೆಚ್ಚುಗೆಯಾಗಿರುವಂತಹ ಮತ್ತು ಎಲ್ಲರ ವಿಶ್ವಾಸಕ್ಕೆ ಪಾತ್ರವಾದ ಬಜೆಟ್ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಸಭಾಪತಿಗಳೆ, ಈ ಬಜೆಟ್‌ನಲ್ಲಿ, ವಿವಿಧ ಇಲಾಖೆಗಳಿಗೆ, ವಿವಿಧ ವರ್ಗಗಳಿಗೆ ಮತ್ತು ಬೇರೆ ಬೇರೆ ಪ್ರದೇಶಗಳಿಗೆ, ಕೋವಿಡ್‌ನಂತಹ ಸಂಕಷ್ಟದ ಸಂದರ್ಭದಲ್ಲೂ ಸರಿಯಾಗಿ ಅನುದಾನವನ್ನು ಹಂಚಿಕೆ ಮಾಡುವುದು, ಹಣವನ್ನು ಹಂಚಿಕೆ ಮಾಡುವುದು ಕಷ್ಟದ ಕೆಲಸ.

(ಮುಂದು . .)

(441) ಎಸ್‌ಪಿಆರ್/ವಿಕೆ/6:20/17/03/2022 (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಎಸ್.ವ್ಹಿ.ಸಂಕನೂರ(ಮುಂದು):-**

ಆದರೂ ಸಹ ಮಾನ್ಯ ಮುಖ್ಯಮಂತ್ರಿಗಳು ಅಳೆದು, ತೂಗಿ, ಆರ್ಥಿಕ ಶಿಸ್ತನ್ನು ಕಾಪಾಡಿಕೊಂಡು 36 ಇಲಾಖೆಗಳಿಗೆ, ಬೇರೆ ಬೇರೆ ವರ್ಗದ ಜನರಿಗೆ, ಬೇರೆ ಬೇರೆ ಪ್ರದೇಶ-ಭಾಗಗಳಿಗೆ ಸರಿಯಾಗಿ ಅನುದಾನವನ್ನು ಹಂಚಿಕೆ ಮಾಡಿದ್ದಾರೆ ಎಂದು ನಾನು ಹೇಳಬಯಸುತ್ತೇನೆ.

ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಮುಖ್ಯಮಂತ್ರಿಗಳು ಕೃಷಿ ಕೇತ್ರಕ್ಕೆ 33,700 ಕೋಟಿ ರೂಪಾಯಿಗಳನ್ನು; ಶಿಕ್ಷಣ ಕ್ಷೇತ್ರಕ್ಕೆ 31,980 ಕೋಟಿ ರೂಪಾಯಿಗಳನ್ನು; ಜಲ ಸಂಪನ್ಮೂಲ

ವಿಭಾಗದಲ್ಲಿ 20,106 ಕೋಟಿ ರೂಪಾಯಿಗಳನ್ನು; ರಾಜ್ಯ ಹೆದ್ದಾರಿಗಳಿಗೆ 35 ಸಾವಿರ ಕೋಟಿ ರೂಪಾಯಿಗಳನ್ನು; ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಡಗದವರ ಅಭಿವೃದ್ಧಿಗಾಗಿ 28,234 ಕೋಟಿ ರೂಪಾಯಿಗಳನ್ನು; ರಾಜ್ಯದಲ್ಲಿ 5 ಲಕ್ಷ ಹೊಸ ಮನೆಗಳನ್ನು ನಿರ್ಮಿಸಲು 6,612 ಕೋಟಿ ರೂಪಾಯಿಗಳನ್ನು ಮೀಸಲಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ತಾವು ಮಂಡಿಸಿರುವ ಆಯವ್ಯಯದಲ್ಲಿ ಈ ರೀತಿಯಾಗಿ ವೈಜ್ಞಾನಿಕವಾಗಿ ಹಣವನ್ನು ಹಂಚಿಕೆ ಮಾಡಿರುವುದು ಬಹಳ ಸ್ವಾಗತಾರ್ಹ ಸಂಗತಿಯಾಗಿದೆ. ಹಾಲಿ ಮಂಡಿಸಿರುವ ಆಯವ್ಯಯದಲ್ಲಿ ವಿಶೇಷವಾಗಿ ಬಡ ನೌಕರ ವರ್ಗಕ್ಕೆ, ಆಶಾ ಕಾರ್ಯಕರ್ತರಿಗೆ, ಅಂಗನವಾಡಿ ಕಾರ್ಯಕರ್ತರಿಗೆ, ಅಕ್ಷರ ದಾಸೋಹ ಯೋಜನೆಯಡಿ ಕೆಲಸ ಮಾಡುವ ಬಿಸಿಯೂಟ ತಯಾರಕರಿಗೆ ಇಂತಹ ನೌಕರ ವರ್ಗದವರಿಗೆಲ್ಲರಿಗೂ ಮಾಸಿಕ ಗೌರವ ಧನವನ್ನು ಹೆಚ್ಚಿಸಿದ್ದಾರೆ. ಈ ಮೂಲಕ ಬಡವರ ಬಗ್ಗೆ ಸರ್ಕಾರಕ್ಕಿರುವ ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆಂದು ನಾನು ಹೇಳಬಯಸುತ್ತೇನೆ. ಅದೇ ರೀತಿಯಾಗಿ ಅವಿವಾಹಿತ, ವಿಚ್ಛೇದಿತ ಮಹಿಳೆಯರಿಗೆ ಮತ್ತು ಆಸಿಡ್ ದಾಳಿಗೆ ಒಳಗಾದ ಮಹಿಳೆಯರಿಗೂ ಸಹ ಮಾಸಿಕ ಪಿಂಚಣಿಯನ್ನು ಹೆಚ್ಚಿಸಿದ್ದಾರೆ.

ಪ್ರಸ್ತುತ ಆಯವ್ಯಯದಲ್ಲಿ ಬಹಳ ವಿಶೇಷವಾಗಿ ನಾನು ಎರಡು ಅಂಶಗಳನ್ನು ಗಮನಿಸಿದ್ದೇನೆ. ಮೊದಲನೆಯದು, ಗ್ರಾಮಾಂತರ ಪ್ರದೇಶದ ಬಡ ಮಕ್ಕಳಲ್ಲಿ ಪ್ರತಿಭೆ; ಓದುವ ಇಚ್ಛಾಶಕ್ತಿಯು ಇರುತ್ತದೆ. ಆದರೆ, ಅವರಿಗೆ ಸರಿಯಾದ ತರಬೇತಿ ಸಿಗದ ಕಾರಣ ಎಂ.ಬಿ.ಬಿ.ಎಸ್.ನಂತಹ ವೃತ್ತಿಪರ ಶಿಕ್ಷಣದ ಸೀಟುಗಳು ದೊರೆಯುತ್ತಿಲ್ಲ. ಹೀಗಾಗಿ ಮುಖ್ಯಮಂತ್ರಿಗಳು ಸರ್ಕಾರದ ವತಿಯಿಂದ ರಾಜ್ಯದ ಪ್ರತಿಯೊಂದು ತಾಲ್ಲೂಕು ಮಟ್ಟದಲ್ಲಿ ನೀಟ್ ಪರೀಕ್ಷೆಗಾಗಿ ತರಬೇತಿ ಕೇಂದ್ರಗಳನ್ನು ಘೋಷಿಸಿದ್ದು ಬಹಳ ಸ್ವಾಗತಾರ್ಹ ಸಂಗತಿಯಾಗಿದೆ. ಇದರ ಜೊತೆಗೆ, ನಾವು ಶಾಸಕರುಗಳು ಗಮನಿಸುವಂತೆ ಓದಲು ಬರುವ ಬಹಳಷ್ಟು ಮಕ್ಕಳಿಗೆ ಹಾಸ್ಟೆಲ್‌ಗಳ ಸೀಟುಗಳು ಲಭ್ಯವಾಗುತ್ತಿಲ್ಲ. ಹಾಸ್ಟೆಲ್ ಸೀಟುಗಳ ಕೊರತೆಯು ಬಹಳಷ್ಟು ಇದೆ. ಈ ಕಾರಣದಿಂದಾಗಿ ಪ್ರಸ್ತುತ ಆಯವ್ಯಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಸುಮಾರು 100 ಅಂಬೇಡ್ಕರ್ ವಿದ್ಯಾರ್ಥಿ ನಿಲಯಗಳನ್ನು ಮತ್ತು ಹಿಂದುಳಿದ ವರ್ಗಕ್ಕೆ 50 ಕನಕದಾಸ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಿರುವುದು ಬಹಳಷ್ಟು ಸಂತೋಷದ ಸಂಗತಿಯಾಗಿದೆ. ನಮಗೆಲ್ಲಾ ತಿಳಿದಿರುವಂತೆ ಇವತ್ತಿನ ದಿಸವ ಶಿಕ್ಷಣಕ್ಕೆ ಬಹಳಷ್ಟು ಮಹತ್ವವಿದೆ. ಆದ್ದರಿಂದ ಈ ಸಾಲಿನ ಆಯವ್ಯಯದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ಹಲವಾರು ಯೋಜನೆಗಳನ್ನು ರೂಪಿಸಲಾಗಿದೆ. ಅದರಲ್ಲೂ ಪ್ರಮುಖವಾಗಿ ಶಿಕ್ಷಣದ ಗುಣಮಟ್ಟವನ್ನು

ಹೆಚ್ಚಿಸುವುದಕ್ಕಾಗಿ ಮತ್ತು ಇದರ ಜೊತೆಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು, ಅವಶ್ಯಕವಾದ ಪೀಠೋಪಕರಗಳನ್ನು ಖರೀದಿಸಲು 600 ಕೋಟಿ ರೂಪಾಯಿಗಳನ್ನು ಪ್ರಸ್ತುತ ಆಯವ್ಯಯದಲ್ಲಿ ಮೀಡಲಿಟ್ಟಿರುವುದು ಶ್ಲಾಘನೀಯವಾದ ಸಂಗತಿಯಾಗಿದೆ. ಬಹಳ ಮಹತ್ವದ ವಿಚಾರವೇನೆಂದರೆ, ನೂತನ ರಾಷ್ಟ್ರೀಯ ಶಿಕ್ಷಣ ನೀತಿ – 2020 ನ್ನು ಪೂರ್ವ ಪ್ರಾಥಮಿಕ, ಪ್ರಾಥಮಿಕ ಮತ್ತು ಪ್ರೌಢ ಶಾಲೆಯ ಹಂತಗಳಲ್ಲಿ ಜಾರಿಗೊಳಸಲು ಪ್ರಾರಂಭಿಸಲಾಗಿದೆ. ಇದರನ್ವಯ ಸರ್ಕಾರವು ಪಠ್ಯಕ್ರಮವನ್ನು ರಚಿಸಲು ನಿರ್ಧರಿಸಿದೆ. ಬಹಳ ಮುಖ್ಯವಾಗಿ ಇದರ ಜೊತೆಗೆ ಪೂರ್ವ ಪ್ರಾಥಮಿಕ ಹಂತ ಎಂದರೆ, ಅಂಗನವಾಡಿ, ನರ್ಸರಿ, ಅರುಣ ವರ್ಗ, ಉದಯ ವರ್ಗ, 1 ಮತ್ತು 2 ನೇ ತರಗತಿಗಳು ಇವುಗಳೆಲ್ಲವನ್ನೂ ಒಟ್ಟಿಗೆ ಸೇರಿಸಲಾಗಿದೆ. ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ವಯ, ಕಲಿಕೆಯ ಮೊದಲ 5 ವರ್ಷಗಳ 'ಫೌಂಡೇಷನ್ ಕೋರ್ಸ್'ನ್ನು ಮಾಡಿದ್ದಾರೆ. ಇದಕ್ಕೂ ಸಹ ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಸುಮಾರು 20 ಸಾವಿರ ಅಂಗನವಾಡಿಗಳನ್ನು ಶಾಲಾ ಆವರಣದಡಿ ತರುವುದಕ್ಕೆ ಸರ್ಕಾರವು ನಿರ್ಧರಿಸಿದೆ. ಅದಕ್ಕೂ ಸಹ ಹೊಸ ಪಠ್ಯಕ್ರಮವನ್ನು ಸಿದ್ಧಪಡಿಸಲು ಇವತ್ತಿನ ದಿವಸ ಸರ್ಕಾರವು ಮುಂದಾಗಿರುವುದೂ ಸಹ ಸಂತೋಷದ ಸಂಗತಿಯಾಗಿದೆ. ಈ ಹಿಂದೆ ಪದವಿ ಪೂರ್ವ ಕಾಲೇಜುಗಳನ್ನು ಸರಿಯಾಗಿ ಮೇಲುಸ್ತುವಾರಿ ಮಾಡುವ ವ್ಯವಸ್ಥೆಯು ಇರಲಿಲ್ಲ. ಹೀಗಾಗಿ ಇವತ್ತಿನ ದಿವಸ ಪದವಿ ಕಾಲೇಜುಗಳಲ್ಲಿ ಗುಣಮಟ್ಟದ ಶಿಕ್ಷಣವನ್ನು ನೀಡಬೇಕು ಹಾಗೂ ಅವುಗಳ ಮೇಲುಸ್ತವಾರಿಯು ಸಮರ್ಪಕವಾಗಿ ಆಗಬೇಕೆನ್ನುವ ದೃಷ್ಟಿಯಿಂದ ನೂತನವಾಗಿ 7 ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲು ಸರ್ಕಾರವು ನಿರ್ಣಯಿಸಿದೆ. ಇದರ ಜೊತೆಗೆ ಸರ್ಕಾರಿ ಇಂಜನಿಯರಿಂಗ್ ಕಾಲೇಜುಗಳಲ್ಲಿಯೂ ಸಹ ಗುಣಮಟ್ಟದ ಶಿಕ್ಷಣವನ್ನು ನೀಡಬೇಕು ಎನ್ನುವ ದೃಷ್ಟಿಯಿಂದ 7 ಇಂಜಿನಿಯರಿಂಗ್ ಕಾಲೇಜುಗಳನ್ನು ಉನ್ನತೀಕರಿಸುವ ಬಗ್ಗೆ ಸರ್ಕಾರವು ನಿರ್ಧಾರ ತೆಗೆದುಕೊಂಡಿರುವುದೂ ಸಹ ಸ್ವಾಗತಾರ್ಹವಾದ ಸಂಗತಿಯಾಗಿದೆ.

ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ನಾನು ಪ್ರತಿನಿಧಿಸುವ ಗದಗ ಜಿಲ್ಲೆಗೆ ಯಾವ ರೀತಿಯಾದ ಅನುದಾನ ಬಿಡುಗಡೆ ಮಾಡಿದ್ದಾರೆ ಎನ್ನುವುದನ್ನು ನೋಡಿದಾಗ ಬಹಳ ಸಂತೋಷವಾಯಿತು. ಗದಗ ಜಿಲ್ಲೆಯ ಅದರಲ್ಲೂ ವಿಶೇಷವಾಗಿ ನರಗುಂದ, ನವಲಗುಂದ, ರೋಣ ಇತ್ಯಾದಿ ಭಾಗದ ರೈತರು ಬಹಳ ವರ್ಷದ ಬೇಡಿಕೆಯಾಗಿತ್ತು. ಅದೇನೆಂದರೆ, ಅಲ್ಲಿನ ಕಳಸಾ–ಬಂಡೂರಿ ನಾಲೆಯ ತಿರುವಿನ ಯೋಜನೆಯು ಪ್ರಾರಂಭವಾಗಬೇಕೆಂದು ಸುಮಾರು ವರ್ಷಗಳಿಂದ ಹೋರಾಟಗಳನ್ನು ಮಾಡುತ್ತಿದ್ದರು. ಪ್ರಸ್ತುತ ಆಯವ್ಯಯದಲ್ಲಿ ಕಳಸಾ–ಬಂಡೂರಿ ನಾಲೆಯ ತಿರುವಿನ ಯೋಜನೆಗೆ ಒಂದು ಸಾವಿರ

ಕೋಟಿ ರೂಪಾಯಿಗಳ ಅನುದಾನವನ್ನು ಮೀಸಲಿಟ್ಟಿದ್ದಾರೆ. ಗದಗ ನಗರದಲ್ಲಿರುವ ಪಾಲಾ-ಬಾದಾಮಿ ರಸ್ತೆಯಲ್ಲಿ ಬಹಳಷ್ಟು ಸಂಚಾರ ದಟ್ಟಣೆ ಇದೆ. ಇಂತಹ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲು, ಗದಗ ಜಿಲ್ಲೆಗೆ ಹೊಸದಾಗಿ ರಿಂಗ್ ರಸ್ತೆಯನ್ನು ನಿರ್ಮಿಸಲು ಸರ್ಕಾರವು ಮುಂದಾಗಿದೆ. ಗದಗ – ಎಲವಗಿ ರೈಲ್ವೆ ಲೈನ್ ಬೇಕೆಂದು ಬಹಳ ವರ್ಷಗಳ ಮತ್ತೊಂದು ಹೋರಾಟವನ್ನು ಮಾಡಲಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ಗದಗ-ಎಲವಗಿ ರೈಲ್ವೆ ಲೈನ್‌ನ್ನು ಪ್ರಾರಂಭಿಸಲು ಅವಶ್ಯಕವಾದ ಭೂ ಸ್ವಾಧೀನ ಪಡಿಸಿಕೊಳ್ಳಲು ಆಯವ್ಯಯದಲ್ಲಿ ಹಣ ನಿಗದಿಪಡಿಸಲಾಗಿದೆ. ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನಲ್ಲಿ ಜಾಲವಾಡಗಿ ಏತ ನೀರಾವರಿ ಯೋಜನೆಯ ಕಾಮಗಾರಿಗಳು ಆಗಬೇಕೆಂದು ಆ ಭಾಗದ ರೈತರು ಬಹಳಷ್ಟು ವರ್ಷಗಳಿಂದ ಹೋರಾಟ ಮಾಡುತ್ತಿದ್ದರು. ಅದಕ್ಕೂ ಸಹ ಆಯವ್ಯಯದಲ್ಲಿ ಹಣವನ್ನು ಮೀಸಲಿಟ್ಟಿರುವುದು ಬಹಳ ಸಂತೋಷದ ಸಂಗತಿಯಾಗಿದೆ. ಒಟ್ಟಾರೆ ಹೇಳುವುದಾದರೆ, ಇವತ್ತಿನ ದಿವಸ ಗದಗ ಜಿಲ್ಲೆಗೆ ಬಹಳಷ್ಟು ಉತ್ತಮವಾದ ಕೊಡುಗೆಯನ್ನು ಅಂದರೆ 'ಬಂಪರ್ ಕೊಡುಗೆ'ಯನ್ನು ಮುಖ್ಯಮಂತ್ರಿಗಳು ನೀಡಿರುವುದು ಬಹಳ ಸಂತೋಷದಿಂದ ಸ್ವಾಗತಿಸುತ್ತೇನೆ.

ಪ್ರಸ್ತುತ ಸದನದಲ್ಲಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಉಪಸ್ಥಿತರಿದ್ದಾರೆ. ಈ ಸಚಿವರ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಕೆಲವೊಂದು ಅಂಶಗಳನ್ನು ತಿಳಿಸ ಬಯಸುತ್ತೇನೆ. ಈ ಹಿಂದಿನ ಮುಖ್ಯಮಂತ್ರಿಗಳಾದ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ತಮ್ಮ ಅಧಿಕಾರಾವಧಿಯಲ್ಲಿ ಗದಗ ಜಿಲ್ಲೆಗೆ ಕೆಲವೊಂದು ಯೋಜನೆಗಳನ್ನು ಮಂಜೂರು ಮಾಡಿದ್ದರು. ಅವುಗಳ ಕಾಮಗಾರಿಗಳೂ ಸಹ ಪ್ರಾರಂಭವಾಗಿದ್ದವು. ಆದರೆ ಸದರಿ ಯೋಜನೆಗಳು ಪ್ರಸ್ತುತ ಅಪೂರ್ಣವಾಗಿ ನಿಂತುಕೊಂಡಿವೆ. ಉದಾಹರಣೆಗೆ ನಾನು ಕೆಲವೊಂದನ್ನು ಇಲ್ಲಿ ಉಲ್ಲೇಖಿಸಬಯಸುತ್ತೇನೆ. ಈ ಹಿಂದೆ ಗದಗ ಜಿಲ್ಲೆಗೆ ರಂಗ ಮಂದಿರವಿರಲಿಲ್ಲ. ಈ ಹಿಂದೆ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ 2013-14 ನೇ ಸಾಲಿನಲ್ಲಿ ಸುಮಾರು 3 ಕೋಟಿ ರೂಪಾಯಿಗಳ ಅನುದಾನವನ್ನು ರಂಗ ಮಂದಿರಕ್ಕಾಗಿ ಮಂಜೂರು ಮಾಡಿದ್ದರು. ಆ ಕಟ್ಟಡ ಪ್ರಾರಂಭವಾಗಿ ಈಗ್ಗೆ 9 ವರ್ಷಗಳಾಗಿದ್ದು, ಕಾಮಗಾರಿಯು ಅಪೂರ್ಣಗೊಂಡಿದೆ. ಆ ಕಟ್ಟಡದ ಸುತ್ತಲೂ ಪ್ರಸ್ತುತ ಜಾಲಿ ಗಿಡಗಳೆಲ್ಲವೂ ಸಹ ಬೆಳೆದುಬಿಟ್ಟಿವೆ. ಇದನ್ನು ನೋಡಿದರೆ, ನಿಜವಾಗಿಯೂ ಸಹ ಬಹಳ ಬೇಜಾರು ಮತ್ತು ನೋವುಗಳಾಗುತ್ತದೆ. ಈ ಹಿಂದಿನ ಮುಖ್ಯಮಂತ್ರಿಗಳ ಕಾಲದಲ್ಲಿ ಮಂಜೂರಾದ ಯೋಜನೆಯು ಅಪೂರ್ಣಗೊಂಡಿದ್ದು, ಈಗ್ಗೆ 9 ವರ್ಷಗಳಾಗಿವೆ. ಅರ್ಧಂಬರ್ಧ ನಿರ್ಮಾಣಗೊಂಡಿರುವ ಕಟ್ಟಡವನ್ನು ಪೂರ್ಣಗೊಳಿಸುವ ಜವಾಬ್ದಾರಿಯು ಇವತ್ತಿನ ಮುಖ್ಯಮಂತ್ರಿಗಳ

ಮೇಲಿದೆ. ಅದಕ್ಕೆ ಹೆಚ್ಚು ಹಣದ ಅವಶ್ಯಕತೆ ಇಲ್ಲ. ನನಗೆ ಬಂದ ಮಾಹಿತಿಯ ಪ್ರಕಾರ ಇನ್ನೂ 1 ಕೋಟಿ 64 ಲಕ್ಷ ರೂಪಾಯಿಗಳನ್ನು ಸರ್ಕಾರವು ಮಂಜೂರು ಮಾಡಿದರೆ, ಕಟ್ಟಡವು ಪೂರ್ಣಗೊಳ್ಳುತ್ತದೆ. ಮುಂದುವರೆದು, ನಮಗೆಲ್ಲಾ ತಿಳಿದಿರುವಂತೆ ಪುಟ್ಟರಾಜು ಗವಾಯಿ ರವರು ಸಂಗೀತ ಕ್ಷೇತ್ರಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ. ಇವರ ಸ್ಮಾರಕ ಕಾಮಗಾರಿಯು ಸ್ಥಗಿತಗೊಂಡಿದ್ದು, ಕೆಲಸವು ಅಪೂರ್ಣಗೊಂಡಿದೆ. ಇದಕ್ಕೂ ಸಹ ಅನುದಾನದ ಕೊರತೆಯೇ ಕಾರಣವಾಗಿದೆ. ಇದು ಒಟ್ಟಾರೆ 10 ಕೋಟಿ ರೂಪಾಯಿಗಳ ಯೋಜನೆಯಾಗಿದೆ. ಆ ಪೈಕಿ ಈಗಾಗಲೇ 5 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದು, ಹೀಗಾಗಿ ಸ್ಮಾರಕದ ಕೆಲಸವು ಅಪೂರ್ಣಗೊಂಡಿದೆ. ಇದನ್ನು ನೋಡಿದ ಸ್ಥಳೀಯರು ನಮ್ಮ ಸರ್ಕಾರವನ್ನು ಟೀಕಿಸುತ್ತಿದ್ದಾರೆ. ಈ ಹಿಂದೆ ಮಾನ್ಯ ಬಿ.ಎಸ್.ಯಡಿಯೂರಪ್ಪನವರ ಅಧಿಕಾರಾವಧಿಯಲ್ಲಿ ಮಂಜೂರಾದ ಕಾಮಗಾರಿಗಳು ಅರ್ಧಕ್ಕೆ ಸ್ಥಗಿತಗೊಂಡಿವೆ. ಹೀಗಾಗಿ ಇದಕ್ಕೆ ಅವಶ್ಯಕವಾದ ಇನ್ನೂ 5 ಕೋಟಿ ರೂಪಾಯಿಗಳನ್ನು ಸರ್ಕಾರವು ಬಿಡುಗಡೆಗೊಳಸಬೇಕೆಂದು ಕೇಳಿಕೊಳ್ಳುತ್ತೇನೆ.

ಕರ್ನಾಟಕ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಪದವಿಯ ಕೇಂದ್ರವು ಗದಗ ಜಿಲ್ಲೆಯಲ್ಲಿ ಪ್ರಾರಂಭವಾಗಿ ಈಗ್ಗೆ 20 ವರ್ಷಗಳಾಗಿವೆ. ಇಷ್ಟು ಸುದೀರ್ಘ ಅವಧಿಯಾದರೂ ಸಹ ಅಲ್ಲಿನ ಕೇಂದ್ರಕ್ಕೆ ತನ್ನದೇ ಆದ ಸ್ವಂತ ಕಟ್ಟಡವಿಲ್ಲ. ಕೇಂದ್ರವು ಪ್ರಾರಂಭವಾಗಿ ಬಹಳಷ್ಟು ವರ್ಷಗಳ ನಂತರ 30 ಕೋಟಿ ರೂಪಾಯಿಗಳ ಯೋಜನೆಯನ್ನು ಪ್ರಾರಂಭಿಸಿದ್ದಾರೆ. ಇದಕ್ಕೆ ಸರ್ಕಾರದಿಂದ ಒಂದು ಪೈಸೆಯನ್ನೂ ಸಹ ನೀಡಿರುವುದಿಲ್ಲ; ಆದರೆ ಇದಕ್ಕೆ 30 ಕೋಟಿ ರೂಪಾಯಿಗಳ ಯೋಜನೆಯನ್ನು ಅನುಮೋದಿಸಿದ್ದಾರೆ. ಕರ್ನಾಟಕ ವಿಶ್ವವಿದ್ಯಾನಿಲಯದವರು ತಮ್ಮ ಆಂತರಿಕ ಹಣವನ್ನು ಉಳಿಸಿ ಈ ಯೋಜನೆಗೆ ಹಣ ನೀಡಿದ್ದಾರೆ. ಇದಕ್ಕೆ ಕೇಂದ್ರದ ರೂಸಾದಿಂದಲೂ ಸಹ ಸ್ವಲ್ಪ ಪ್ರಮಾಣದ ಹಣ ಬಿಡುಗಡೆಯಾಗಿತ್ತು. ಈಗಾಗಲೇ ವಿಶ್ವವಿದ್ಯಾನಿಲಯದವರು 9 ಕೋಟಿ ರೂಪಾಯಿಗಳಷ್ಟು ಹಣ ನೀಡಿ, ಕಟ್ಟಡ ಕಾಮಗಾರಿಯನ್ನು ಪ್ರಾರಂಭಿಸಿದ್ದು, ಅದು ಅಪೂರ್ಣಗೊಂಡಿದೆ. ಪ್ರಸ್ತುತ ಸುಮಾರು 21 ಕೋಟಿ ರೂಪಾಯಿಗಳಷ್ಟು ಹಣದ ಅವಶ್ಯಕತೆ ಇದೆ. ಇದು ಬಹಳ ಮಹತ್ವದ ಯೋಜನೆಯಾಗಿದೆ. ಗದಗ ಜಿಲ್ಲೆಯ ಬಡ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಅಲ್ಲಿಗೆ ಸ್ನಾತಕೋತ್ತರ ಪದವಿ ಕೇಂದ್ರವನ್ನು ಮಂಜೂರು ಮಾಡಿದ್ದಾರೆ. ಇಷ್ಟೆಲ್ಲಾ ಯೋಜನೆಯ ಕಾಮಗಾರಿಗಳು ಈಗಾಗಲೇ ಬಾಕಿ ಉಳಿದಿರುವುದರಿಂದ ನಾವು ಯಾವುದೇ ಹೊಸ ಬೇಡಿಕೆಯನ್ನು ಇಡುವ ಪ್ರಮೇಯವೇ ಉದ್ಭವಿಸುವುದಿಲ್ಲ.

442/17-3-2022/6-30/bkp-vk (ವೈಸ್ ಛೇರ್ಮನ್‌ರವರು ಪೀಠದಲ್ಲಿದ್ದರು)

**ಶ್ರೀ ಎಸ್‌ವ್ಹಿ. ಸಂಕನೂರ (ಮುಂದು):-**

ಸರ್ಕಾರ ಎಲ್ಲಾ ಕಾಮಗಾರಿಗಳಿಗೆ ಹಣವನ್ನು ಬಿಡುಗಡೆ ಮಾಡಬೇಕೆಂದು ವಿನಂತಿ ಪೂರ್ವಕವಾದ ಒತ್ತಾಯವನ್ನು ಮಾಡುತ್ತೇನೆ. ನಾಳೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ನೀಡುವವರಿದ್ದಾರೆ. ದಯವಿಟ್ಟು ಇವುಗಳನ್ನೆಲ್ಲಾ ಘೋಷಣೆ ಮಾಡಬೇಕು. ಏಕೆಂದರೆ, ನಾವು ಯಾವುದೇ ಹೊಸದರ ಬಗ್ಗೆ ಬೇಡಿಕೆಗಳನ್ನು ಇಟ್ಟಿಲ್ಲ. ಏನು ಹಳೆ ಕಾಮಗಾರಿಗಳು ಮಂಜೂರಾಗಿದೆ, ಅವುಗಳನ್ನು ಪೂರ್ಣಗೊಳಿಸುವಂತಹ ಕೆಲಸವನ್ನು ಮಾನ್ಯ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿಯವರು ಮಾಡಬೇಕೆಂದು ಒತ್ತಾಯವನ್ನು ಮಾಡುತ್ತೇನೆ.

**ವೈಸ್ ಛೇರ್ಮನ್:-** ಮಾನ್ಯ ಎಸ್.ವ್ಹಿ.ಸಂಕನೂರರವರೆ, ತಾವು ಈಗಾಗಲೇ 15 ನಿಮಿಷ ಮಾತನಾಡಿದ್ದೀರಿ. ತಾವು ಮಾತನಾಡುವುದಕ್ಕೆ ಇನ್ನು ಎಷ್ಟು ನಿಮಿಷ ಬೇಕಾಗುತ್ತದೆ?

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ನಾನು ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುವುದಿಲ್ಲ.

**ವೈಸ್ ಛೇರ್ಮನ್:-** ಈಗ ಮಾತನಾಡಲು ಅಧಿಕೃತವಾಗಿ ಇರುವ ಸಮಯ ಕೇವಲ ಐದು ನಿಮಿಷ ಮಾತ್ರ. ಏಕೆಂದರೆ, ನಾನು ಇದಕ್ಕೆ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ನಾನು ಯಾರನ್ನು ಸಹ ಕೇಳುವಂತಹ ಭಾವನೆಯಲ್ಲಿ ಇಲ್ಲ. ಗದಗ ಜಿಲ್ಲೆಗೆ ಏನಾಗಬೇಕೆಂದು ಬಹಳ ಒತ್ತಾಯಪೂರ್ವಕವಾಗಿ ಹೇಳಿದ್ದೇನೆ. ನಾನು ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಐದು ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ. ಮಾನ್ಯ ಸದಸ್ಯರು ದಯವಿಟ್ಟು ಎಲ್ಲವನ್ನು ಸಹ ಕೇಳಿಸಿಕೊಳ್ಳಲಿ.

**ವೈಸ್ ಛೇರ್ಮನ್:-** ಇದಕ್ಕೆ ಮಾನ್ಯ ಮರಿತಿಬ್ಬೇಗೌಡರು ಶಿಫಾರಸು ಮಾಡುತ್ತಿದ್ದಾರೆ. ಈಗ ಕೇಳಿಸಿಕೊಳ್ಳುವುದಕ್ಕೆ ಏನು, ಏಕೆಂದರೆ, ಸಮಯ ಕೊಡಬೇಕಾದವರು ಅವರಲ್ಲ.

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ಹಾಗೆಯೇ ಇನ್ನೊಂದು ಬಹಳ ಮಹತ್ವದ ವಿಚಾರವೇನೆಂದರೆ, ಗದಗದಿಂದ ಲಕ್ಷ್ಮೇಶ್ವರ ರಸ್ತೆ ಎಷ್ಟು ಕೆಟ್ಟದಾಗಿ ಹಾಳಾಗಿದೆ ಎಂದರೆ, ಅದನ್ನು ನಾನು ಹೇಳಬಾರದು, ಏಕೆಂದರೆ, ನಮ್ಮವರೇ ಆದಂತಹ ಲೋಕೋಪಯೋಗಿ ಸಚಿವರು ಇದ್ದಾರೆ. ನಾನು ಅವರಿಗೂ ಕೂಡ ವಿನಂತಿಯನ್ನು ಮಾಡಿಕೊಂಡಿದ್ದೇನೆ. ಇದರಿಂದ ಇಡೀ ನಮ್ಮ ಬಿಜೆಪಿ ಸರ್ಕಾರದ ಹೆಸರು ಕೆಟ್ಟುಹೋಗಿದೆ. ಆ ರಸ್ತೆ ಎಷ್ಟು ಕೆಟ್ಟದಾಗಿದೆ ಎಂದು ಮಾನ್ಯ ಸಲೀಂ ಅಹಮದ್‌ರವರಿಗೂ ಸಹ ಗೊತ್ತಿದೆ.

**ಶ್ರೀ ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ರೀತಿಯಾದರೆ ಮುಂದೆ ಮುಂದೆ ಆ ರಸ್ತೆಯಲ್ಲಿ ಗಾಡಿಗಳಲ್ಲೂ ಸಹ ಹೋಗುವುದಕ್ಕೆ ಆಗುವುದಿಲ್ಲ. ನಾವು ಕುದುರೆಗಳ ಮೇಲೆ ಹೋಗಬೇಕಾಗುತ್ತದೆ. ಅಲ್ಲಿನ ರಸ್ತೆಗಳು ಆ ರೀತಿಯಾಗಿವೆ. ಮಾನ್ಯ ಎಸ್.ವ್ಹಿ.ಸಂಕನೂರರವರು ಹೇಳುತ್ತಿರುವುದು ಸರಿಯಿದೆ.

**ವೈಸ್ ಛೇರ್ಮನ್:–** ಕುದುರೆ not allowed, public transport ಗೆ. ಏಕೆಂದರೆ, ಅವರು ಕುದುರೆಗಳನ್ನು ಸಾಕುವುದಕ್ಕೆ ಆಗುವುದಿಲ್ಲ.

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ನಾನು ಪದವೀಧರರ ಕ್ಷೇತ್ರದಿಂದ ಆಯ್ಕೆಯಾಗಿರುವ ವಿಧಾನ ಪರಿಷತ್ತಿನ ಸದಸ್ಯನಾಗಿರುವುದರಿಂದ, ಈ ಬಜೆಟ್‌ನಲ್ಲಿ ನನ್ನದೇ ಆದಂತಹ ಕೆಲವು ನಿರೀಕ್ಷೆಗಳನ್ನು ಇಟ್ಟುಕೊಂಡಿದ್ದೆ. ಸರ್ಕಾರದ 38 ಇಲಾಖೆಗಳಲ್ಲಿ ಸುಮಾರು 2,58,000 ಹುದ್ದೆಗಳು ನಿವೃತ್ತಿಯಿಂದ ಖಾಲಿಯಾಗಿವೆ. ಇವತ್ತಿನ ಕೆಲಸದ ಒತ್ತಡ ನೋಡಿದರೆ, ಹುದ್ದೆಗಳನ್ನು ಜಾಸ್ತಿ ಮಾಡಬೇಕು. ಈಗ ಆ ಪ್ರಶ್ನೆ ಬೇಡ. ಆದರೆ, ಏನು ನಿವೃತ್ತಿಯಿಂದ 2,58,000 ಹುದ್ದೆಗಳು ಖಾಲಿಯಾಗಿವೆ, ಈ ಹುದ್ದೆಗಳಲ್ಲಿ ಕೆಲವೊಂದು ಹುದ್ದೆಗಳನ್ನಾದರೂ ತುಂಬುವುದಕ್ಕೆ ಬಜೆಟ್‌ನಲ್ಲಿ ಘೋಷಣೆ ಮಾಡುತ್ತಾರೆಂದು ನನಗೆ ನಿರೀಕ್ಷೆಯಿತ್ತು. ಅದರಂತೆ ಘೋಷಣೆ ಮಾಡಿದ್ದಾರೆ. ಪ್ರಾಥಮಿಕ ಶಾಲೆಯ 6 ರಿಂದ 8ನೇ ತರಗತಿಗಳಿಗೆ ಸುಮಾರು 15 ಸಾವಿರ ಶಿಕ್ಷಕರು ಹಾಗೂ 400 ಪಶುವೈದ್ಯರನ್ನು ನೇಮಕ ಮಾಡುತ್ತೇವೆಂದು ಘೋಷಣೆ ಮಾಡಿದ್ದಾರೆ. ಈ ಎರಡು ನೇಮಕಾತಿಗಳನ್ನು ಬಿಟ್ಟರೆ, ಉಳಿದವುಗಳು ಏನೂ ಘೋಷಣೆಯಾಗಿಲ್ಲ. ನಾನು ಪ್ರತಿನಿಧಿಸುವಂಥದ್ದು ಪದವೀಧರರ ಕ್ಷೇತ್ರ.

ಇವತ್ತು ನಮ್ಮ ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆ ಬಹಳ ಇದೆ. ಆ ಕಾರಣಕ್ಕಾಗಿ, ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಈಗ ನಿವೃತ್ತಿಯಿಂದ ಏನು ಹುದ್ದೆಗಳು ಖಾಲಿಯಾಗಿವೆ, ಆ ಹುದ್ದೆಗಳನ್ನು ತುಂಬುವುದಕ್ಕೆ ಸರ್ಕಾರ ಮುಂದಾಗಬೇಕು ಎನ್ನುವಂತಹ ವಿನಂತಿಯನ್ನು ಮಾಡುತ್ತೇನೆ. ಇದರ ಜೊತೆಗೆ ಶಿಕ್ಷಣ ಇಲಾಖೆಯಲ್ಲಿ ಕೂಡ ನಿವೃತ್ತಿಯಿಂದ ಸಾಕಷ್ಟು ಹುದ್ದೆಗಳು ಖಾಲಿಯಿವೆ. ಅವುಗಳಿಗೂ ಕೂಡ ನೇಮಕಾತಿಗೆ ಅನುಮತಿ ನೀಡುತ್ತಾರೆ ಎಂಬ ಭಾವನೆ ಇತ್ತು. ರಾಜ್ಯದಲ್ಲಿರುವಂತಹ ಬೆಂಗಳೂರು ವಿಶ್ವವಿದ್ಯಾಲಯ, ಮಂಗಳೂರು ವಿಶ್ವವಿದ್ಯಾಲಯ, ಶಿವಮೊಗ್ಗ ವಿಶ್ವವಿದ್ಯಾಲಯ, ಕರ್ನಾಟಕ ವಿಶ್ವವಿದ್ಯಾಲಯ ಇರಬಹುದು. ಈ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಶೇಕಡಾ ೫೦ಕ್ಕಿಂತ ಹೆಚ್ಚು ಹುದ್ದೆಗಳು ಖಾಲಿಯಿವೆ. ಇದರ ಜೊತೆಗೆ ಅನುದಾನಿತ ಶಿಕ್ಷಣ ಸಂಸ್ಥೆಗಳು, ಪ್ರೌಢ ಶಾಲೆಗಳು, ಪದವಿ ಪೂರ್ವ ಕಾಲೇಜುಗಳೂ ಮತ್ತು ಪದವಿ ಕಾಲೇಜುಗಳು ಇವುಗಳಲ್ಲಿ ನನಗೆ ಗೊತ್ತಿರುವಂತೆ ಸುಮಾರು ೩,೫೦೦ ದಿಂದ ೪,೦೦೦ ಹುದ್ದೆಗಳು ಖಾಲಿಯಿವೆ. ಇವುಗಳೆಲ್ಲವೂ ಸಹ ನಿವೃತ್ತಿಯಿಂದ ತೆರವಾದಂತಹ ಹುದ್ದೆಗಳು. ನಿನ್ನೆಯ ದಿವಸ ಹಿರಿಯ ಸದಸ್ಯರಾದ ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈ ಹಿಂದೆ ನಿವೃತ್ತಿ ಹುದ್ದೆಗಳನ್ನು ತಕ್ಷಣ ತುಂಬಿಕೊಳ್ಳುವುದಕ್ಕೆ ಅವಕಾಶವಿತ್ತು. ನಿವೃತ್ತಿ ಹುದ್ದೆಗಳು ಇದ್ದರೂ ಕೂಡ, ಆರ್ಥಿಕ ಇಲಾಖೆಯ...

**ವೈಸ್ ಛೇರ್ಮನ್:-** ಮಾನ್ಯ ಸದಸ್ಯರೇ, ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಮಾತನಾಡಿರುವ ವಿಷಯವನ್ನು skip ಮಾಡಬಹುದು.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ನಾನು ಅದನ್ನು ಸಹ ಹೇಳಿಬಿಡುತ್ತೇನೆ. ಏಕೆಂದರೆ, ಇದರ ಪರಿಸ್ಥಿತಿ ಎಷ್ಟು ಕೆಟ್ಟದಾಗಿದೆ ಎಂದು ಹೇಳಬೇಕಾಗಿದೆ. ಮೊನ್ನೆ ಶನಿವಾರದ ದಿವಸ ಕಾರವಾರದಲ್ಲಿ ರಾಜ್ಯಮಟ್ಟದ ಒಂದು ಸಮ್ಮೇಳನ ನಡೆದಾಗ ಮಾನ್ಯ ಶಿಕ್ಷಣ ಸಚಿವರಾದ ಶ್ರಿ ಬಿ.ಸಿ.ನಾಗೇಶ್‌ರವರನ್ನು ಕರೆದು ಒಂದು ಕಾರ್ಯಕ್ರಮ ಮಾಡಿದ್ದೆವು. ಆ ಸಮ್ಮೇಳನಕ್ಕೆ ಬಹಳ ಜನ ಶಿಕ್ಷಕರು ಬಂದಿದ್ದರು. ನೂತನ ಶಿಕ್ಷಣ ನೀತಿ ಕುರಿತು ಕಾರ್ಯಕ್ರಮವಾಯಿತು. ಕಾರ್ಯಕ್ರಮ ಮುಗಿದ ಮೇಲೆ ಪಿ.ಯು.ಕಾಲೇಜು ಮತ್ತು ಹೈಸ್ಕೂಲ್ ಶಿಕ್ಷಕರು ಬಂದು ಮಾನ್ಯ ಬಿ.ಸಿ.ನಾಗೇಶ್‌ರವರ ಕಾಲನ್ನು ಹಿಡಿದುಕೊಂಡರು. ಅವರು ಏಕೆ ಕಾಲು ಹಿಡಿದುಕೊಂಡರು ಎಂದರೆ, ಆ

ಶಿಕ್ಷಕರು ಏಳೆಂಟು ವರ್ಷಗಳಿಂದ ನಿವೃತ್ತಿಯಾದಂತಹ ಖಾಲಿ ಹುದ್ದೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಅಂದರೆ, ಮುಂದೆ ಏನಾದರೂ ನೇಮಕಾತಿಯಾಗಿ, ಹುದ್ದೆ ಖಾಯಂ ಆಗುತ್ತದೆ ಎಂದು ಅವರು ನಿರೀಕ್ಷಿಸುತ್ತಿದ್ದಾರೆ. ಇದು ಏನು economy ban ತಂದು ಹುದ್ದೆಗಳನ್ನು ತುಂಬುವುದಕ್ಕೆ ನಿರ್ಬಂಧ ಹೇರಿದ್ದಾರೆ. ಅದಕ್ಕೆ ದಯವಿಟ್ಟು ಅದನ್ನು lift ಮಾಡಿ, ಆ ಹುದ್ದೆಗಳನ್ನು ತುಂಬುವುದಕ್ಕೆ ಅವಕಾಶ ನೀಡಿ ಎಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಪರಿಸ್ಥಿತಿ ಇದೆ ಎಂದರೆ, ಮಾನ್ಯ ಮಂತ್ರಿಗಳು ಅದನ್ನು ಪರಿಶೀಲನೆ ಮಾಡುತ್ತೇನೆಂದರು. ಆಗ ಅಲ್ಲಿದ್ದ ಹುಡುಗ ಏನೆಂದು ಹೇಳಿದ ಎಂದರೆ, ಸಂಕನೂರ್ ಸರ್ ನಾನು ಬಹಳ ತಪ್ಪು ಮಾಡಿಬಿಟ್ಟಿದ್ದೇನೆ. ನನ್ನದು ಎಂ.ಎಸ್ಸಿ. distinction; ಇಲ್ಲಿಗೆ ಇವತ್ತು ಇಲ್ಲ ನಾಳೆ ಖಾಯಂ ಆಗುತ್ತದೆ ಎಂದು ನಾನು ಬಂದಿದ್ದೇನೆ. ಇವತ್ತು ನಾನು ದಿನಗೂಲಿ ಮಾಡಿದ್ದರೆ ಬಹಳ ಚೆನ್ನಾಗಿತ್ತು. ದಿನಗೂಲಿಗೆ ಹೋಗಿದ್ದರೆ ದಿನಕ್ಕೆ 250 ರಿಂದ 300 ಪಗಾರ ಸಿಗುತ್ತಿತ್ತು. ಆಗ ತಿಂಗಳಿಗೆ ಎಂಟರಿಂದ ಒಂಬತ್ತು ಸಾವಿರ ಪಗಾರ ಬರುತ್ತಿತ್ತು. ನಾನು ಇಲ್ಲಿ ಏನು ಈಗ ಖಾಯಂ ಆಗುತ್ತದೆ ಎಂದು ದುಡಿಯುತ್ತಿದ್ದೇನೆ; ಆದರೆ, ಇಲ್ಲಿ ನಾಲ್ಕರಿಂದ ಐದು ಸಾವಿರ ರೂಪಾಯಿಗಳನ್ನು ಸಹ ಕೊಡುತ್ತಿಲ್ಲ. ಇನ್ನು ಒಂದರಿಂದ ಎರಡು ವರ್ಷ ಹೋದರೆ, ನನ್ನ ವಯೋಮಿತಿ ಮೀರುತ್ತದೆ. ಆಗ ನನ್ನ ಜೀವನ ಹೇಗೆ ಎಂದು ಆ ಹುಡುಗ ಕಣ್ಣೀರು ಹಾಕಿದ. ನಾನು ಈ ವಿಷಯವನ್ನು ಏಕೆ ಪ್ರಸ್ತಾಪ ಮಾಡುತ್ತೇನೆಂದರೆ, ಇದು ಕಳೆದ ಒಂದು ವಾರದಲ್ಲಿ ನಡೆದ ಘಟನೆ. ಅದಕ್ಕೆ ನಾನು ತಮ್ಮ ಮೂಲಕ ಸರ್ಕಾರಕ್ಕೆ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ. ಏನು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ 2015ರ ಪೂರ್ವದಲ್ಲಿ ಅನುಮತಿ ನೀಡಿದ್ದೇವೆಂದು ಹೇಳಿದರು, ಆ ನಂತರ ಅದಕ್ಕೆ ತಡೆಯಾಜ್ಞೆ ನೀಡಿದ್ದಾರೆ. ಇದು ಊಟಕ್ಕೆ ತಾಟು ಕೊಟ್ಟು ಮತ್ತೆ ಅದನ್ನು ವಾಪಸ್ಸು ಕಸಿದುಕೊಂಡಡಂತಾಗಿದೆ. ಆದುದರಿಂದ ಇವತ್ತು ಬಹಳ ಕೆಟ್ಟ ಪರಿಸ್ಥಿತಿ ಇದೆ.

**ವೈಸ್ ಛೇರ್ಮನ್:-** ಮಾನ್ಯ ಎಸ್.ವ್ಹಿ.ಸಂಕನೂರರವರೆ, "ಆಚಾರ್ಯ ದೇವೋಭವ" ಎಂದು ಹೇಳುವುದು ಮಾತ್ರವಲ್ಲ, ಗುರುವಿನ ಕಾಲನ್ನು ವಿದ್ಯಾರ್ಥಿಗಳು ಹಿಡಿಬೇಕು; ಆದರೆ, ಗುರುಗಳೇ ಕಾಲು ಹಿಡಿಯುವಂತಹ ಪರಿಸ್ಥಿತಿ ಬರಬಾರದು. ಅವರಿಗೆ ಸಹಾಯ ಮಾಡುವಂತಹ ನಿಟ್ಟಿನಲ್ಲಿ ತಮ್ಮ ಪ್ರಯತ್ನವನ್ನು ಮುಂದುವರೆಸಿ. ತಮ್ಮ ಮಾತನ್ನು ಇನ್ನು ಮೂರು ನಿಮಿಷದಲ್ಲಿ ಮುಗಿಸುತ್ತೀರಾ?

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ನಾನು ಐದು ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ. ಪದವಿ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸುವುದರಲ್ಲಿ ತಾರತಮ್ಯವಾಗಿದೆ. ಈಗ ಏನಾಗಿದೆ ಎಂದರೆ, ಗ್ರಾಂಟ್‌ಗೆ ಅಡ್ಮಿಟ್ ಮಾಡಬೇಕು ಎಂದು ಬಂದರೆ, ಪ್ರಾಥಮಿಕ ಶಾಲೆ, ಪ್ರೌಢ ಶಾಲೆ, ಪಿ.ಯು. ಕಾಲೇಜು ಮತ್ತು ಪದವಿ ಕಾಲೇಜುಗಳನ್ನು ಸಹ ಮಾಡುತ್ತಿದ್ದರು. ಉದಾಹರಣೆಗೆ: 1986 ರಿಂದ 1995ರವರೆಗೆ ಕಾಲೇಜುಗಳನ್ನು ಗ್ರಾಂಟ್‌ಗೆ ಅಡ್ಮಿಟ್ ಮಾಡಿದರು. 1986 ರಿಂದ 1995ರವರೆಗೆ ಏನು ಶಾಲಾ–ಕಾಲೇಜುಗಳು ಪ್ರಾರಂಭವಾಗಿವೆ, ಅವುಗಳಲ್ಲಿ ಪ್ರಾಥಮಿಕ ಶಾಲೆ, ಪ್ರೌಢ ಶಾಲೆ ಮತ್ತು ಪಿ.ಯು. ಕಾಲೇಜುಗಳನ್ನು ಗ್ರಾಂಟ್‌ಗೆ ಅಡ್ಮಿಟ್ ಮಾಡಿದರು. ಆದರೆ, 1986 ರಿಂದ 1995ರವರೆಗೆ ರಾಜ್ಯದಲ್ಲಿ ಏನು ಡಿಗ್ರಿ ಕಾಲೇಜುಗಳು ಪ್ರಾರಂಭವಾಗಿವೆ, ಅವುಗಳನ್ನು ಗ್ರಾಂಟ್‌ಗೆ ಅಡ್ಮಿಟ್ ಮಾಡಲಿಲ್ಲ. ಆದುದರಿಂದ ಇದರಲ್ಲಿ ತಾರತಮ್ಯವಾಗಿದೆ. ಹಾಗಾಗಿ ನಾನು ಏನು ಒತ್ತಾಯ ಮಾಡುತ್ತೇನೆಂದರೆ, ಡಿಗ್ರಿ ಕಾಲೇಜುಗಳು ಹೆಚ್ಚಿಗೆ ಇಲ್ಲದಿರುವುದರಿಂದ ಅವುಗಳನ್ನು ಸಹ ಗ್ರಾಂಟ್‌ಗೆ ಅಡ್ಮಿಟ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ತಪ್ಪು ಮಾಹಿತಿ ಹೋಗುವುದು ಬೇಡ. 1995ರವರೆಗೆ ಕೇವಲ ಪ್ರಥಮ ದರ್ಜೆ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸಿದ್ದಾರೆ. ಅಂದರೆ, ಕೇವಲ ಪರಿಶಿಷ್ಟ ಜಾತಿಗೆ ಸೇರಿದಂತಹ ಕಾಲೇಜುಗಳನ್ನು ಮಾತ್ರ ಅನುದಾನಕ್ಕೆ ಒಳಪಡಿಸಿದ್ದಾರೆ. ಆದರೆ, ಹಿಂದುಳಿದ ವರ್ಗ ಮತ್ತು ಸಾಮಾನ್ಯ ವರ್ಗದವರ ಡಿಗ್ರಿ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸಲಿಲ್ಲ.

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ನಾನು ಅದನ್ನೆ ಹೇಳುವುದಕ್ಕೆ ಹೊರಟ್ಟಿದ್ದೆ. ಹಿಂದೆ ಸಾಮಾನ್ಯ ವರ್ಗ ಮತ್ತು ಎಸ್.ಸಿ/ಎಸ್.ಟಿ ಎಂದು difference ಇರಲಿಲ್ಲ. ಡಿಗ್ರಿ ಕಾಲೇಜುಗಳಿಗೆ ಮಾತ್ರ ಅನುದಾನಕ್ಕೆ ಒಳಪಡಿಸಲಿಲ್ಲ, 1986 ರಿಂದ 1995ರವರೆಗೆ ಏನು ಸಾಮಾನ್ಯ ವರ್ಗದ ಆಡಳಿತ ಮಂಡಳಿಯಿಂದ ಪ್ರಾರಂಭವಾಗಿವೆ, ಆ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸಿಲ್ಲ. ಕೇವಲ ಎಸ್.ಸಿ./ಎಸ್.ಟಿ. ವರ್ಗದವರಿಗೆ ಸೇರಿದಂತಹ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸಿದರು. ಆದರೆ, ಹಿಂದೆ ಈ ರೀತಿಯ ತಾರತಮ್ಯವಾಗುತ್ತಿರಲಿಲ್ಲ. ಅನುದಾನಕ್ಕೆ

ಒಳಪಡಿಸುವಾಗ ಎಲ್ಲಾ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸುತ್ತಿದ್ದರು. ಹಾಗಾಗಿ ನಾನು ಸರ್ಕಾರಕ್ಕೆ ಆಗ್ರಹಿಸುವುದೇನೆಂದರೆ, ಈಗ 1986 ರಿಂದ 1995ರವರೆಗೆ ಪ್ರಾರಂಭವಾದ ಡಿಗ್ರಿ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸದೆ ಏನು ಬಿಟ್ಟಿದ್ದಾರೆ, ಅವುಗಳನ್ನು ಸಹ ಅನುದಾನಕ್ಕೆ ಒಳಪಡಿಸಬೇಕೆಂದು ಒತ್ತಾಯ ಮಾಡುತ್ತೇನೆ. ಬಹಳಷ್ಟು ನೋವಿನ ಸಂಗತಿ ಏನೆಂದರೆ, 1995ರ ನಂತರ ಪ್ರಾರಂಭವಾದ ಸಂಸ್ಥೆಗಳನ್ನು ಅನುದಾನಕ್ಕೆ ಒಳಪಡಿಸಿಲ್ಲ. ಆ ಸಂಸ್ಥೆಯವರು ಹೋರಾಟ ಮಾಡಿ ಮಾಡಿ ಅವರ ದೇಹದಲ್ಲಿ ಒಂದು ಹನಿ ರಕ್ತ ಉಳಿದಿಲ್ಲ. ಈ ಬಜೆಟ್‌ನಲ್ಲಿ 1995 ರಿಂದ 2000ನೇ ಇಸವಿಯವರೆಗೆ ಅನುದಾನಕ್ಕೆ ಒಳಪಡಿಸುತ್ತಾರೆಂದು ಒಂದು ನಿರೀಕ್ಷೆ ಇತ್ತು. ಈ ಹಿಂದೆ ಮಾನ್ಯ ಎಸ್.ಸುರೇಶ್ ಕುಮಾರ್‌ರವರು ಶಿಕ್ಷಣ ಮಂತ್ರಿಗಳಾಗಿದ್ದಾಗ ಐದೈದು ವರ್ಷದಂತೆ 1995 ರಿಂದ 2000 ಮತ್ತು 2000 ದಿಂದ 2005 ಎಂದು ಈ ರೀತಿ ಅನುದಾನಕ್ಕೆ ಒಳಪಡಿಸುವಂತಹ ವ್ಯವಸ್ಥೆಯನ್ನು ಮಾಡಿದ್ದಾರೆ. ಅಂದರೆ, ಸರ್ಕಾರಕ್ಕೆ ಆರ್ಥಿಕ ಹೊರೆ ಬೀಳುತ್ತದೆ ಎಂದು ಈ ರೀತಿ ಮಾಡಲಾಗಿದ್ದು, ಇದು ಬಹಳ ಅವಶ್ಯವಿದೆ. ನಾವು ಎಂ.ಎಲ್.ಸಿ.ಗಳು ಅಲ್ಲಿಗೆ ಹೋಗಿ ಅಳುವಂತೆ ಆಗಿದೆ.

**(ಮುಂದು.)**

**(443) 17.03.2022 06.40 ಎಸ್‌ವಿ-ಬಿಎನ್‌ಎಸ್ (ವೈಸ್‌ಛೇರ್‌ಮನ್‌ರವರ ಉಪಸ್ಥಿತಿ)**

**ಶ್ರೀ ಎಸ್.ವ್ಹಿ.ಸಂಕನೂರ (ಮುಂದು):-**

ನಮಗಂತೂ ಶಿಕ್ಷಕರ ಕ್ಷೇತ್ರ ಮತ್ತು ಪದವೀಧರ ಕ್ಷೇತ್ರದ ವಿಧಾನ ಪರಿಷತ್ ಸದಸ್ಯರಿಗೆ ಅಳುವ ಪರಿಸ್ಥಿತಿಯಾಗಿದೆ. ಅಷ್ಟೊಂದು ಕೆಟ್ಟ ಪರಿಸ್ಥಿತಿ ಇಂದು ನಿರ್ಮಾಣವಾಗಿದೆ. ಹಾಗಾಗಿ, 1995ರಿಂದ 2000ದವರೆಗೆ ರಾಜ್ಯದಲ್ಲಿ ಪ್ರಾರಂಭವಾಗಿರುವ ಶಾಲಾ ಕಾಲೇಜುಗಳು ಅವುಗಳಿಗೆ ಗ್ರಾಂಟ್ ಕೊಡುವಂತಹ ನಿರ್ಣಯವನ್ನು ಸರ್ಕಾರ ತೆಗೆದುಕೊಳ್ಳಬೇಕು. ಏಕೆಂದರೆ ಅವು ಪ್ರಾರಂಭವಾಗಿ 27 ವರ್ಷಗಳಾಗಿವೆ. Unaided Institutions ಪ್ರಾರಂಭವಾಗಿ 27 ವರ್ಷಗಳಾಗಿದ್ದು, ಬಹಳ ಜನ

---

grant ಗೆ admit ಆಗದೆ ಹಾಗೆಯೇ ನಿವೃತ್ತಿಯಾಗುತ್ತಾರೆ. ಬಹಳ ಕೆಟ್ಟ ಪರಿಸ್ಥಿತಿ ಇದೆ. 1995ರ ನಂತರ ಪ್ರಾರಂಭವಾದ ಶಾಲೆಗಳನ್ನು grant ಗೆ admit ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಎಲ್ಲರೂ ನನ್ನ ಮಾತನ್ನು ಮುಗಿಸುವಂತೆ ಹೇಳುತ್ತಿದ್ದಾರೆ. ರಾಜ್ಯ ಸರ್ಕಾರಿ ನೌಕರರ ಒಂದು ಬೇಡಿಕೆಯಿತ್ತು. ಕೇಂದ್ರ ಸರ್ಕಾರಿ ನೌಕರರು ಪಡೆದುಕೊಳ್ಳುವ ವೇತನಕ್ಕೆ ಸಮಾನಾಂತರವಾಗಿ ನಮಗೂ ಕೊಡಿ ಎನ್ನುವುದು ಅವರ ಬಹು ದೊಡ್ಡ ಬೇಡಿಕೆಯಾಗಿತ್ತು. ಮಾನ್ಯ ಮುಖ್ಯಮಂತ್ರಿಗಳು ನಿನ್ನೆ ಕೆಳಮನೆಯಲ್ಲಿ ಏಳನೇ ವೇತನ ಆಯೋಗ ರಚನೆಯ ಘೋಷಣೆಯನ್ನು ಮಾಡಿದ್ದಾರೆ. ಇದಕ್ಕಾಗಿ ನಾನು ಸರ್ಕಾರಕ್ಕೆ ತುಂಬು ಹೃದಯದ ಅಭಿನಂದನೆಗಳನ್ನು ಸಲ್ಲಿಸಬಯಸುತ್ತೇನೆ.

ಒಟ್ಟಾರೆ ಈ ಬಜೆಟ್ ಪ್ರಗತಿಪರವಾಗಿದ್ದು, ಬಹುಜನ ಹಿತ ಕಾಪಾಡುವ ಬಜೆಟ್ ಆಗಿದ್ದು, ಸಮತೋಲನ ಕಾಯ್ದುಕೊಂಡಿರುವುದರಿಂದ ನಾನು ಈ ಬಜೆಟ್ ಅನ್ನು ಸಂಪೂರ್ಣವಾಗಿ ಸ್ವಾಗತ ಮಾಡಿ, ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಸಭಾಪತಿಯವರು:–** ಸದನವನ್ನು ನಾಳೆ ಬೆಳಗ್ಗೆ 10 ಗಂಟೆಯವರೆಗೆ ಮುಂದೂಡಲಾಗಿದೆ.

**(ಸಂಜೆ 06 ಗಂಟೆ 42 ನಿಮಿಷಗಳಿಗೆ ಮುಂದೂಡಲ್ಪಟ್ಟ ಸದನವು ಪುನಃ ದಿನಾಂಕ 18ನೇ ಮಾರ್ಚ್ ಮಾಹೆ 2022ರ ಶುಕ್ರವಾರದಂದು ಬೆಳಗ್ಗೆ 10 ಗಂಟೆಗೆ ಸೇರಲು ನಿಶ್ಚಯಿಸಿತು)**

<><><>